THE BOOK WAS DRENCHED

UNIVERSAL LIBRARY

OU_202260

UNIVERSAL LIBRARY

ಮನೋಹರ ಗ್ರಂಥಮಾಲೆಯ ಹನ್ನೆರಡನೆಯ ಕುಸುಮ

ಕೋಲ್ಮಿಂಚು

(ಎಂಟು ಏಕಾಂಕನಾಟಕಗಳ ಸಂಗ್ರಹ)

ಸಂಪಾದಕರು:

ಜಿ. ಬಿ. ಜೋಶಿ

ಜೂನ ೧೯೪೫]　　　　[ಬೆಲೆ ೧ ರೂ.

ಪ್ರಕಾಶಕರು;—

ಗೋವಿಂದ ಭೀಮಾಚಾರ್ಯ ಜೋಶಿ
ಮನೋಹರ ಗ್ರಂಥಮಾಲಾ ಕಾರ್ಯಾಲಯ
ಸಾಧನಕೇರಿ- ಧಾರವಾಡ

ಈ ಸಂಗ್ರಹದಲ್ಲಿಯ ಏಕಾಂಕ ನಾಟಕಗಳನ್ನು ಭಾಷಾಂತರಿಸುವ,
ಆಡಿತೋರಿಸುವ, ಮೊದಲಾದ ಎಲ್ಲ ಒಡೆತನವೂ
ಆ ಆ ನಾಟಕಗಳನ್ನು ಬರೆದವರಿಗೇ ಸೇರಿದೆ.

ಮುದ್ರಕರು:—

ಬಳವಂತ ನಾರಾಯಣ ಭಾಗ[illegible]
ಮೋಹನ ಮುದ್ರಣಾಲಯ
ಧಾರವಾಡ

ನಮ್ಮ ಮಾತು

ಈ 'ಕೋಲ್ಮಿಂಚು' ನಮ್ಮ ಮಾಲೆಯ ಎರಡನೆಯ ವರುಷದ ಕೊನೆಯ ಕುಸುಮ. ಅದೆಷ್ಟೋ ಆರ್ಥಿಕ ತೊಂದರೆಗಳೊಳಗಿಂದ ಪಾರಾಗಿ ಎರಡನೆಯ ವರುಷವನ್ನಂತೂ ಮುಗಿಸಿದಂತಾಯಿತು. ಅಂದರೆ ನಮ್ಮ ಆರ್ಥಿಕ ತೊಂದರೆಗಳೇ ಹೋದವೆಂತಲ್ಲ. ಮೊದಲಿಗಿಂತಲೂ ಹೆಚ್ಚಾಗುತ್ತಲಿವೆ. ಈ ವರುಷ ನಾವು ಕೊಡಬೇಕಾಗಿದ್ದ ಪುಟಗಳಿಗಿಂತ ೧೩೬ ಪುಟಗಳನ್ನು ಹೆಚ್ಚು ಕೊಡಬೇಕಾಗಿ ಬಂದಿದ್ದರಿಂದಲೂ, ಕನ್ನಡಿಗರಿಂದ ಸಾಕಷ್ಟು ಪ್ರೋತ್ಸಾಹವು ದೊರಕದ್ದರಿಂದಲೂ, ಮಾಲೆಯ ಮೇಲೆ ಈಗ ೩೦೦ ರೂಪಾಯಿಗಳ ಸಾಲದ ಹೊರೆಯೊಂದು ಹೆಚ್ಚಾಗಿದೆ. ಇಷ್ಟಿದ್ದರೂ ಯಾವುದೊ ಒಂದು ಧೈರ್ಯದಿಂದ ನಾವು ಈ ಭಾರವನ್ನೆಲ್ಲ ಹೊತ್ತು ಮುಂದೆ ಸಾಗಿಸುವ ಸಾಹಸ ಮಾಡಿದ್ದೇವೆ. ನಮ್ಮ ಸಾಹಸಕ್ಕೆ ಉದಾರ ಕನ್ನಡಿಗರ ಕೊಡುಗೈ ನೆರವೊಂದು ಅನುವಾದರೆ, ನಾವು ಇದಕ್ಕೂ ಹೆಚ್ಚು ಉತ್ಸಾಹದಿಂದ ಕೆಲಸ ಮಾಡಲು ಸಮರ್ಥರಾಗುತ್ತೇವೆ. ಇಲ್ಲಿಯ ವರೆಗೆ ನಾವು ಹೊರಡಿಸಿದ ಎಲ್ಲ ಪುಸ್ತಕಗಳೂ ಸಾಹಿತ್ಯದ ಒಂದು ಮೇಲ್ಮಟ್ಟಿನಲ್ಲಿವೆಯೆಂದು ನುರಿತ ವಿಮರ್ಶಕರೆಲ್ಲರೂ ಅಭಿಪ್ರಾಯಪಡುತ್ತಿದ್ದಾರೆ. ಇಂತಹ ಆರು ಪುಸ್ತಕಗಳನ್ನು ಕೇವಲ ೩-೮-೦ಗೆ ಒದಗಿಸಿಕೊಡುವದು ಸಾಹಸದ ಮಾತೆಂಬುದು ನಮಗೆ ಗೊತ್ತಿಲ್ಲದೆ ಇಲ್ಲ. ಆದರೆ ಮುಂದೆ ಕನ್ನಡಿಗರು ಸಹಾಯ ಮಾಡಿಯೇ ಮಾಡುವರೆಂಬ ನಂಬಿಕೆಯೇ ನಮ್ಮನ್ನು ಮುಂದೂಡುತ್ತಲಿದೆ. ಕನ್ನಡಿಗರು ಕೈ ಮುಂದೆ ಮಾಡಬೇಕು. ಪ್ರೋತ್ಸಾಹವನ್ನು ಕೊಡಬೇಕು.

ಏಕಾಂಕನಾಟಕಗಳ ಸಂಗ್ರಹವೊಂದನ್ನು ನಮ್ಮ ಮಾಲೆಯಿಂದ ಕೊಡಬೇಕೆಂದು ಬಹಳ ದಿನಗಳಿಂದ ನಮ್ಮ ಆಶೆಯಿತ್ತು. ಅದು ಈಗ ಕೈಗೂಡಿತೆಂದು ತಿಳಿಸಲು ಸಂತೋಷವಾಗುತ್ತದೆ. ಈ ಸಂಗ್ರಹವು ಹೊರಟಿದ್ದ ಶ್ರೇಯಸ್ಸಿನ ಬಹುಭಾಗವು ಏಕಾಂಕದೃಶ್ಯಗಳನ್ನು ಬರೆದುಕೊಟ್ಟ ಬರೆಹಗಾರರಿಗೇ ಸಲ್ಲುತ್ತದೆ. ನಾವು ನಿಮಿತ್ತ ಮಾತ್ರರು. ಆದಕ್ಕೆ ಶ್ರೀಯುತರಾದ

ದ. ರಾ. ಬೇಂದ್ರೆ, ವಿ. ಕೃ. ಗೋಕಾಕ, ಕಡೆಂಗೊಡ್ಲು ಶಂಕರಭಟ್ಟರು, ಆರ್. ವ್ಹಿ. ಜಹಗೀರದಾರ, ಶಿವರಾಮ ಕಾರಂತ, ಅ. ನ. ಕೃಷ್ಣರಾಯರು, ಕೆ. ಗೋಪಾಲಕೃಷ್ಣರಾಯರು,ರಂ. ಶ್ರೀ. ಮುಗುಳಿ ಇವರು ತಮ್ಮ ಕೃತಿಗಳನ್ನು ಕೊಟ್ಟು ಸಂಗ್ರಹದ ಗೌರವವನ್ನು ಹೆಚ್ಚಿಸಿದ್ದಕ್ಕೆ ನಾವು ಅವರಿಗೆ ಅತ್ಯಂತ ಕೃತಜ್ಞರಾಗಿದ್ದೇವೆ. ನಮ್ಮ ಆಶೆ ಆಕಾಶದಷ್ಟು; ಆದರೆ ನಮ್ಮ ಇರವು ಇರಿವೆಯಷ್ಟು. ಅದಕ್ಕೆಂದೇ ನಾವು ಮೊದಲು ತಿಳಿಪಡಿಸಿದ ಎಲ್ಲ ಜನರ ಕೃತಿಗಳನ್ನೂ ಈ ಸಂಗ್ರಹದಲ್ಲಿ ಕೊಡಲಾಗಲಿಲ್ಲ. ಆದರೆ ಇನ್ನೊಂದು ಏಕಾಂಕನಾಟಕ ಸಂಗ್ರಹ ಮಾಡಿ ಅದರಲ್ಲಿ ಇನ್ನೂ ಅನೇಕರ ಕೃತಿಗಳನ್ನು ಕೊಟ್ಟು ನಮ್ಮ ನಿಮ್ಮ ಈ ಅತೃಪ್ತ ಆಶೆಯನ್ನು ತೃಪ್ತಪಡಿಸಬೇಕೆಂದು ನಮ್ಮ ಹವಣಿಕೆಯಿದೆ. ಆ ವೇಳೆಯು ಬೇಗನೆ ಬರಲೆಂದು ಹಾರೈಸುತ್ತೇವೆ.

ಈ ಸಂಗ್ರಹಕ್ಕೆ ಹೆಸರೇನಿಡಬೇಕೆಂದು ನಾವು ವಿಚಾರಿಸುತ್ತಿದ್ದಾಗ ಶ್ರೀ. ಬೇಂದ್ರೆಯವರು 'ಕೋಲ್ಮಿಂಚು' ಎಂದಿಡಬಹುದೆಂದು ಸೂಚಿಸಿದರು. ಅದೇ ಈ ಸಂಗ್ರಹಕ್ಕೆ ಸರಿಯಾದದ್ದೆಂದು ತೋಚಿತು. ಅದನ್ನೇ ಇಟ್ಟಿದ್ದೇವೆ. ಈ ಹೆಸರು, ಇಡಿ ಏಕಾಂಕನಾಟಕಗಳ ಸಂಗ್ರಹದ ಮೇಲೆಯೆ ಹೊಸದೊಂದು ಬೆಳಕನ್ನು ಹೇಗೆ ಹಾಕುತ್ತದೆಂಬದನ್ನು ಮುನ್ನುಡಿಯಲ್ಲಿ ಪ್ರೊ. ವಿ. ಕೃ. ಗೋಕಾಕರವರು ತೋರಿಸಿದ್ದಾರೆ. ಅವರ ಮುನ್ನುಡಿಯೂ ಈ ಸಂಗ್ರಹಕ್ಕೊಂದು ಬೆಲೆಯನ್ನು ತಂದುಕೊಟ್ಟಿದೆ. ಅದಕ್ಕಾಗಿ ನಾವುಪ್ರೊ. ವಿ. ಕೃ ಗೋಕಾಕ ಅವರಿಗೆ ಅತ್ಯಂತ ಕೃತಜ್ಞರಾಗಿದ್ದೇವೆ.

ನಮ್ಮ ಮಾಲೆಗೆ ಈ ವರುಷವೂ ಪೋಷಕರಾಗಿ, ಸಹಾಯಕರಾಗಿ, ನಮ್ಮನ್ನು ಪ್ರೋತ್ಸಾಹಿಸಿದ ಮಹನೀಯರೆಲ್ಲರಿಗೂ ನಾವು ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಹೊಸ ವರುಷದಿಂದ ಮನೋಹರ ಗ್ರಂಥಮಾಲೆಗೆ 'ಸಾಹಿತ್ಯ ವಿಷಯದಲ್ಲಿ ಸಲಹೆಗಾರ'ರಾಗಲು ಶ್ರೀ. ದ. ರಾ. ಬೇಂದ್ರೆ ಎಂ. ಎ. ಶ್ರೀ. ವಿ. ಕೃ. ಗೋಕಾಕ ಎಂ. ಎ, ರಂ. ಶ್ರೀ. ಮುಗುಳಿ. ಎಂ. ಎ. ಬಿ. ಟಿ. ಈ ಮೂವರು ಒಪ್ಪಿದ್ದಾರೆಂದು ತಿಳಿಸಲು ನಮಗೆ ಅತ್ಯಂತ ಆನಂದವಾಗ

ತ್ತದೆ. ಮಾಲೆಯ ಸಾಹಿತ್ಯ ವಿಷಯಿಕ ಬಹುಭಾಗ ಕಾರ್ಯವೆಲ್ಲ ಇವರಿಂದಲೇ ನಿರ್ವಹಿಸಲ್ಪಡುತ್ತದೆ. ಆದ್ದರಿಂದ ಇನ್ನು ಮುಂದೆ ಮಾಲೆಯು ಇವರು ಕನ್ನಡ ಸಾಹಿತ್ಯದಲ್ಲಿ ಪಡೆದ ಸಿದ್ಧಿಯ ಪುಣ್ಯಬಲದಿಂದ ಹೆಚ್ಚು ಹೆಚ್ಚು ಶ್ರೇಯಸ್ಸನ್ನೂ ತೇಜಸ್ಸನ್ನೂ ಗಳಿಸುವುದೆಂದು ನಮ್ಮ ಆತ್ಮವಿಶ್ವಾಸವಿದೆ.

ಚಂದಾದಾರರಲ್ಲಿ ಬೇಡಿಕೆ

ನಾವು ಚಂದಾದಾರರಿಗೆ ಒಂದು ವರ್ಷದಲ್ಲಿ ೧೫೦ ಪುಟಗಳುಳ್ಳ ಆರು ಪುಸ್ತಕಗಳನ್ನು (ಅಂದರೆ ೯೦೦ ಪುಟಗಳನ್ನು) ಸಲ್ಲಿಸಬೇಕಾಗಿತ್ತು. ಆದರೆ ನಾವೀಗ, ಎರಡನೆಯ ವರ್ಷದಲ್ಲಿ, ಅವರಿಗೆ ಅದೇ ೩-೮-೦ ಯಲ್ಲಿ ಒಟ್ಟು ೧೦೩೬ ಪುಟಗಳನ್ನು ಕೊಟ್ಟಿದ್ದೇವೆ; ಅಂದರೆ ೧೩೬ ಪುಟಗಳನ್ನು (ಒಂದು ಪುಸ್ತಕದಷ್ಟು) ಹೆಚ್ಚಿಗೆ ಕೊಟ್ಟಂತಾಗಿದೆ. ಇಷ್ಟೆಲ್ಲ ನಾವು ಸಾಹಸ ಮಾಡಿದರೂ ನಮ್ಮ ಆರ್ಥಿಕಸ್ಥಿತಿಯು ಇದ್ದುದಿದ್ದ ಹಾಗೆಯೇ ಇದೆ. ನಿರಾಶೆಯು ನಮ್ಮನ್ನು ಮೇಲಿಂದ ಮೇಲೆ ಮುತ್ತುತ್ತಲಿದೆ. ಅದಕ್ಕಾಗಿ ನಾವು ಬೇಡುವದಿಷ್ಟೆ: ಪ್ರತಿಯೊಬ್ಬ ಚಂದಾದಾರೂ ಕನಿಷ್ಟಕ್ಕೆ ಒಬ್ಬನನ್ನಾದರೂ ಚಂದಾದಾರನನ್ನಾಗಿ ಮಾಡಿಕೊಡಬೇಕೆಂದು ನಮ್ಮ ಪ್ರಾರ್ಥನೆ.

ವಿ. ಸೂ:— ಚಂದಾಹಣದ ಅವಧಿಯು ಮುಗಿದವರು ದಯವಿಟ್ಟು ಹೊಸವರ್ಷದ ತಮ್ಮ ಚಂದಾಹಣವನ್ನು ಅಗಸ್ಟ ೧ನೇ ತಾರೀಖಿನೊಳಗಾಗಿ ಮನಿಯಾರ್ಡರಿಂದ ಕಳಿಸಬೇಕು. ಇಲ್ಲದಿದ್ದರೆ ಆಗ ಹೊರಡುವ ಪುಸ್ತಕವನ್ನು ಚಂದಾಹಣಕ್ಕೆ ವ್ಹಿ. ಪಿ. ಮಾಡಲಾಗುವದು. ಅದನ್ನು ದಯವಿಟ್ಟು ಸ್ವೀಕರಿಸಬೇಕು. ಒಂದು ವೇಳೆ ಸ್ವೀಕರಿಸಲು ಸಾಧ್ಯವಾಗದಹಾಗಿದ್ದರೆ ಮೊದಲೇ (**ಅಂದರೆ ಜುಲೈ ೨೦ನೇ ತಾರೀಖಿನೊಳಗಾಗಿ**) ಹಾಗೆ ತಿಳಿಸಬೇಕು. ಅಂದರೆ ವ್ಹಿ. ಪಿ. ಯ ವೆಚ್ಚವನ್ನಾದರೂ ಉಳಿಸಿದ ಉಪಕಾರವನ್ನು ಮಾಡಿದಂತಾಗುವದು.

ಜಿ. ಬಿ. ಜೋಶಿ.

ಸಂಪಾದಕ

ಪರಿವಿಡಿ

		ಪುಟ
ಮುನ್ನುಡಿ	ಪ್ರೊ. ವಿ. ಕೃ. ಗೋಕಾಕ ಎಂ. ಎ.	
೧. ಜಾತ್ರೆ	ಶ್ರೀ. ದ. ರಾ. ಬೇಂದ್ರೆ ಎಂ. ಎ.	೧
೨. ತುಳಸಿ	ಪ್ರೊ. ವಿ. ಕೃ. ಗೋಕಾಕ ಎಂ. ಎ.	೧೩
೩. ವಿರಾಮ	ಶ್ರೀ. ಕಡೆಂಗೋಡ್ಲು ಶಂಕರಭಟ್ಟರು	೨೯
೪. ನಿರುತ್ತರ–ಕುಮಾರ	ಪ್ರೊ. ಆರ್. ವಿ. ಜಾಗೀರದಾರ ಎಂ. ಎ. (ಲಂಡನ್)	೫೨
೫. ಬದುಕಬಹುದು	ಶ್ರೀ. ಶಿವರಾಮ ಕಾರಂತ	೯೦
೬. ಪಾಲು	ಶ್ರೀ ಅ. ನ. ಕೃಷ್ಣರಾಯರು	೧೧೪
೭. ಕನ್ಯಾರ್ಥಿ	ಶ್ರೀ. ಕೆ. ಗೋಪಾಲಕೃಷ್ಣರಾಯರು ಬಿ. ಎ.	೧೩೯
೮. ಅತಿಥಿದೇವರು	ಪ್ರೊ. ರಂ. ಶ್ರೀ. ಮುಗಳಿ ಎಂ. ಎ. ಬಿ. ಟಿ.	೧೬೫

ಮೂಗಿನಕಿಂತ ಮೂಗುತಿಯೇ ಭಾರವಾಗಿರಬಾರದೆಂಬ ಮಾತನ್ನು ನಾವು ವಿಶೇಷತಃ ಏಕಾಂಕದೃಶ್ಯದ ಹಿನ್ನೆಳಲಿನ (back ground) ವಿಷಯದಲ್ಲಿ ಲಕ್ಷ್ಯವಿಡಬೇಕು. ಅದು ಇದೆಯೆಂಬ ಧ್ವನಿ ಬಂದರೆ ಸಾಕು. ಸಂಭಾಷಣೆಯ ವಿಷಯಕ್ಕೆ ಇಲ್ಲಿ ಕೆಲವು ಮಾತುಗಳನ್ನು ಸಂಗ್ರಹಿಸಿ ಬರೆದಿದೆ. (೧) ಎಲ್ಲ ಪಾತ್ರಗಳ ಭಾಷಣಗಳು ವಾಡಿಕೆಯಾಗಿ ಸಣ್ಣವಾಗಿರುತ್ತವೆ. ಇದರಿಂದ ದೃಶ್ಯಕ್ಕೆ ಒಂದು ಬಗೆಯ ಚಾಪಲ್ಯವು ಬರುತ್ತದೆ. ಪುನಃ ಪುನಃ ಪ್ರಶ್ನೋತ್ತರಗಳಾಗುವದರಿಂದ ಜೀವಕಳೆಯು ಹೆಚ್ಚುತ್ತದೆ. ಸಂಭಾಷಣೆಯು ಸುಲಭವಿದ್ದು, ಹೊನಲಂತೆ ಹರಿದು, ಸಹಜವಾಗಿ ಪ್ರೇಕ್ಷಕನ ಲಕ್ಷ್ಯವನ್ನು ನಾಟಕದ ಜೀವಾಳದೆಡೆಗೆ ಎಳೆಯಬೇಕು. (೨) ಅದು ಹಿಂದಾದುದನ್ನು ತಿರುಗಿ ನುಡಿಯಬಹುದು, ಮುಂದಕ್ಕೆ ಹಾರಬಹುದು, ಮಹತ್ವದ ವಿಚಾರಗಳನ್ನು ಅಲಂಕಾರಿಕವಾಗಿ ಹೇಳಬಹುದು. ದೃಶ್ಯದ ರೀತಿಯಿಂದ ಅವಶ್ಯಕವಿರದಿದ್ದರೂ ರಸಪೋಷಣೆಮಾಡುವ ವಿಚಾರಗಳನ್ನು ಸಂಭಾಷಣೆಯಲ್ಲಿ ಸೇರಿಸಬಹುದು. (೩) ಪ್ರತಿಯೊಂದು ಭಾಷಣವು ಮಾತಾಡುವ ವ್ಯಕ್ತಿಯ ಸ್ವಭಾವಕ್ಕೆ ಅನುರೂಪವಾಗಿದ್ದರೆ ಚೆನ್ನು. ಅದರಲ್ಲಿ ವಾಸ್ತವಿಕತೆ ಇರಬೇಕು. ಆದರೆ ಪ್ರತ್ಯಕ್ಷವಾಗಿ ಜನರು ಮಾತನಾಡುವ ಬಗೆಯನ್ನೇ ಕಾಗದದ ಮೇಲೆ ಇಳಿಸಿಬಿಡಬಾರದು. ತೀರ ಗ್ರಾಮ್ಯವಾದ ಶಬ್ದಗಳನ್ನು ವಿಪುಲವಾಗಿ ಉಪಯೋಗಿಸಕೂಡದು. (೪) ಸಂಭಾಷಣೆಯ ಸೌಂದರ್ಯವು ಶೈಲಿಯ ಸೊಬಗನ್ನು ಕೂಡಿದೆ. ಪ್ರತಿಯೊಂದು ಶಬ್ದವನ್ನು ತೂಕವಿಟ್ಟು ಉಪಯೋಗಿಸುವದಲ್ಲದೆ ಎಲ್ಲವೂ ಹೊಂದಿಕೊಳ್ಳುವಂತೆ ಮಾಡಬೇಕು. (೫) ಕೆಲವು ಶಬ್ದಗಳನ್ನು ಪುನಃ ಪುನಃ ದೃಶ್ಯದ ಸಂಭಾಷಣೆಯಲ್ಲಿ ಸೇರಿಸುವದರಿಂದ ಇಡಿಯ ಕೃತಿಗೆ ಒಂದು ಬಣ್ಣ ಬರುವದು. ಏಕಾಂಕ ದೃಶ್ಯದ ಜೀವಾಳವಾದ ವ್ಯಂಗ್ಯೋಕ್ತಿಗೆ ಪುನರುಕ್ತಿಯಿಂದ ಅನೇಕಸಲ ಸಿಗುವ ಬೆಂಬಲವು ಅಸಾಮಾನ್ಯವಾದುದು.

ಕಥೆಯು ಯಾವರೀತಿಯದೇ ಇರಲಿ; ಒಂದೇ ಒಂದು ಸನ್ನಿವೇಶಕ್ಕೆ ಮಾತ್ರ ಏಕಾಂಕ ದೃಶ್ಯದಲ್ಲಿ ಸ್ಥಾನವಿದೆ. ಅದರಲ್ಲಿ ಅರಳಬೇಕಾದುದು ಸಹ ಒಂದೇ ಒಂದು ಚಿತ್ರ, ದೃಷ್ಟಿ, ಇಲ್ಲವೆ ಸಂದೇಶವೆಂಬುದು ನಿಶ್ಚಿತವಾಗಿದೆ.

ಮುನ್ನುಡಿಯ ಮೂರನೆಯ ಭಾಗದಲ್ಲಿ ಇಲ್ಲಿಯ ವರೆಗೆ ಹೇಳಿದ ಮಾತುಗಳು (Wild, Hampden) ಮೊದಲಾದ ವಿಮರ್ಶಕರಿಂದ ಸಂಗ್ರಹಿಸಲ್ಪಟ್ಟಿವೆ. ಇಂಥ ಮಾತುಗಳೆಲ್ಲ ವಿಮರ್ಶೆಯ ಚರಟ ಇಲ್ಲವೆ ಗೊರಟ ವಿದ್ದಂತೆ. ಅವಿಲ್ಲದಿದ್ದರೆ ಮೂಲವಸ್ತುವಿಗೆ ಭಂಗಬರುವದು. ಆದರೆ ಮೂಲ ವಸ್ತುವು ಬೇರೆಯೆಂಬುದನ್ನು ನಾವು ಮರೆಯುವಂತಿಲ್ಲ.

೪

ಇದೆಲ್ಲ ವಿಷಯವನ್ನು ನಾವು ಪಾಶ್ಚಾತ್ಯರಿಂದ ಎತ್ತಿಕೊಂಡಿದ್ದರೂ ಆರ್ಯಾವರ್ತದಲ್ಲಿ ಈ ಜ್ಞಾನದ ಪ್ರಚಾರವಿದ್ದಿಲ್ಲವೆಂದು ತಿಳಿಯಲಾಗದು. ಭರತಖಂಡದ ಸಂಸ್ಕೃತಿಯನ್ನೇ ಗ್ರೀಸ್, ರೋಮ ದೇಶಗಳು ಎತ್ತಿಕೊಂಡಿರಬಹುದು. ಈ ದೇಶಗಳಲ್ಲಿ ಸಂಚಿತವಾದ ಜ್ಞಾನವೇ ಯುರೋಪದಲ್ಲೆಲ್ಲ ಹರಡಿತು. ಬುತ್ತಿಯ ಗಂಟಿನಂತೆ ನಮ್ಮ ಜ್ಞಾನವನ್ನು ನಾವು ಇಟ್ಟುಕೊಂಡೆವು; ಅದು ಹಳಸಿ ಹೋಯಿತು. ಯುರೋಪದಲ್ಲಿ ಜ್ಞಾನವು ನಾಣ್ಯದಂತೆ ಮನೆಯಿಂದ ಮನೆಗೆ ನಡೆಯಿತು. ಅಲ್ಲಿಯ ವಿದ್ವಾಂಸರು ಪೂರ್ವಾರ್ಜಿತಕ್ಕೆ ಸ್ವಾರ್ಜಿತವನ್ನು ಕೂಡಿಸುತ್ತ ಬಂದರು. ಇಂದು ನಮ್ಮ ನಾಟ್ಯಕಲೆಗೆ ಪುಟ ಸಿಕ್ಕಿರುವುದು ಆಂಗ್ಲರ ಮೇಲ್ಪಂಕ್ತಿಯಿಂದ. ಆದರೆ ಮೇಲೆ ಏಕಾಂಕದೃಶ್ಯದ ವಿಷಯದಲ್ಲಿ ಹೇಳಿದ ಮಾತುಗಳನ್ನೇ ಭರತಮುನಿಯು 'ನಾಟ್ಯಶಾಸ್ತ್ರ' ದಲ್ಲಿ ಚರ್ಚಿಸಿರುವನೆಂದರೆ ನಮಗೆ ಆಶ್ಚರ್ಯವಾಗದಿರದು.

ಅಂಕಿನ ವಿಷಯವನ್ನೂ ಎತ್ತಿ ನಾವು ಮೇಲೆ ಬರೆದಿದ್ದೇವೆ. ಕೆಳಗೆ ಕೊಟ್ಟ ಶ್ಲೋಕಗಳು ಭರತಮುನಿಯ ಅಭಿಪ್ರಾಯವನ್ನು ಆ ವಿಷಯದಲ್ಲಿ ವ್ಯಕ್ತಪಡಿಸುತ್ತವೆ.

"ಅಂಕ ಇತಿ ರೂಢಿಶಬ್ದೋ ಭಾವೈಶ್ಚ ರಸೈಶ್ಚ ರೋಹಯತ್ಯರ್ಥಾನ್ ।
ನಾನಾವಿಧಾನಯುಕ್ತೋ ಯಸ್ಮಾತ್ತಸ್ಮಾದ್ಭವೇದಂಕಃ ॥
ಯತ್ರಾರ್ಥಸ್ಯ ಸಮಾಪ್ತಿರ್ಯತ್ರ ಚ ಬೀಜಸ್ಯ ಭವತಿ ಸಂಹಾರಃ ।
ಕಿಂಚಿದವಲಗ್ನಬಿಂದುಃ ಸೋಽಂಕ ಇತಿ ಸದಾವಗಂತವ್ಯಃ ॥
ಯೇ ನಾಯಕಾ ನಿಗದಿತಾಸ್ತೇಷಾಂ ಪ್ರತ್ಯಕ್ಷಚರಿತ ಸಂಯೋಗಃ ।

ನಾನಾವಸ್ಥಾಂತರಿತಃ ಕಾರ್ಯಸ್ತ್ವಂಕೊ ವಿಕೃಷ್ಟಸ್ತು ॥
ನಾಯಕದೇವೀ ಪರಿಜನಪುರೋಹಿತಾಮಾತ್ಯಸಾರ್ಥವಾಹಾನಾಮ್ ।
ನೈಕರಸಾಂತರ ವಿಹಿತೋ ಹ್ಯಂಕ ಇತಿ ಸ ವೇದಿತವ್ಯಸ್ತು ॥
* * * *
ಏಕಾಂಕೇನ ಕದಾಚಿದ್ಬಹೂನಿ ಕಾರ್ಯಾಣಿ ಯೋಜಯೇದ್ಧೀಮಾನ್ ।
ಆವಶ್ಯಕಾವರೋಧೇ ಸ ತತ್ರ ಕಾರ್ಯಾಣಿ ಕಾರ್ಯಾಣಿ ॥ ''

ಅಂಕು ಅರ್ಥವನ್ನು ಭಾವರಸಗಳಿಂದ ಪೋಷಿಸಬೇಕು. ಅದರಲ್ಲಿ ಎತ್ತಿದ ಅರ್ಥವು ಅದರಲ್ಲಿಯೇ ಪೂರ್ಣವಾಗಬೇಕು. ನಾಟಕದ ಇತಿವೃತ್ತದ ಬೀಜವನ್ನು ಅದು ಸಂವರ್ಧಿಸಬೇಕು. ಕಥಾನಾಯಕನ ಅವಸ್ಥಾಂತರವನ್ನು ಪ್ರತ್ಯಕ್ಷವಾಗಿ ತೋರಿಸಬೇಕು. ಉಳಿದ ಪಾತ್ರಗಳ ಚರಿತ್ರೆಯೂ ಅನೇಕ ರಸಗಳಿಂದ ಕೂಡಿದೆಯೆಂಬುದನ್ನು ಚಿತ್ರಿಸಬೇಕು.

ಇದು ಅಂಕಿನ ವಿಷಯವಾಯಿತು. ಇನ್ನು ಒಂದಂಕಿನ ನಾಟಕದ ಮಾತು ಇದಕ್ಕೂ ಬೇರೆಯಾಗಿದೆ. ಅದನ್ನು ಭರತಮುನಿಯು 'ವ್ಯಾಯೋಗ' ವೆಂದು ಕರೆದಿದ್ದಾನೆ. ಅಲ್ಲಿ ಬೀಜದ ಪೋಷಣೆಯಾಗುವದಲ್ಲದೆ ನಿರ್ವಹಣವೂ ಆಗಬೇಕು. ಕಥೆಯು ತನ್ನ ತುದಿ-ಮೊದಲನ್ನೆಲ್ಲ ಆ ದೃಶ್ಯದಲ್ಲಿಯೇ ಕಾಣಬೇಕು. ಭರತಮುನಿಯು ಏಕಾಂಕದೃಶ್ಯದ ವಿಷಯಕ್ಕೆ ಹೇಳಿದ ಕೆಲವು ಮಾತುಗಳನ್ನು ನಾವು ಐತಿಹಾಸಿಕ ದೃಷ್ಟಿಯಿಂದ ತಿಳಿಯಬೇಕಾಗಿದೆ. ಇಲ್ಲಿಯ ನಾಯಕನು ದಿವ್ಯವಾಗಲಿ, ಮಾನವೀಯವಾಗಲಿ, ರಾಜರ್ಷಿಯಾಗಲಿ ಇರಬೇಕೆಂದೂ - ಮಾನವನಿದ್ದರೆ ಪ್ರಖ್ಯಾತನಿರಬೇಕೆಂದೂ – ಆತನು ಹೇಳುತ್ತಾನೆ. ಅಂದಿನ ಉದಾಹರಣೆಗಳನ್ನು ನೋಡಿ ಭರತಮುನಿಯು ಈ ನಿಯಮಗಳನ್ನು ಮಂಡಿಸಿರಬಹುದು. ನಾಯಕನು ಮೊದಲಿನಿಂದ ಪ್ರಖ್ಯಾತನಿರಬೇಕೆಂಬುದು ಅವಶ್ಯವಿಲ್ಲ. ಅವನು ಹಿಂದಿನಿಂದ ಪ್ರಖ್ಯಾತನಾಗಬಹುದು! ಐತಿಹಾಸಿಕ ಇಲ್ಲವೆ ಪೌರಾಣಿಕ ಪಾತ್ರಗಳನ್ನು ನೆನೆಸಿ ಭರತಮುನಿಯು ಇದನ್ನು ಬರೆದಿರಬೇಕು. ಇಲ್ಲದೆ ಹೋದರೆ ಕವಿಯು ಅದೇ ಕಲ್ಪಿಸಿದ ಪಾತ್ರಕ್ಕೆ ಮೊದಲಿನಿಂದ ಪ್ರಖ್ಯಾತಿಯು ಬರುವದೆಂತು? ನಾಯಕ-ನಾಯಕಿಯರು ಸಮಾಜದ ಕೀಳು ವರ್ಗದಿಂದ

ಸಹ ಬಂದಿರಬಹುದು. ಜನರ ಮನಸ್ಸನ್ನು ಆಕರ್ಷಿಸುವಂತೆ, ಕಥಾಜೀವನನ್ನು ಪ್ರಕಾಶಕ್ಕೆ ತರುವಂತೆ ನಾಟಕಕಾರನು ಅವರನ್ನು ರೂಪಿಸಿದ್ದರೆ ತೀರಿತು.

ಏಕಾಂಕದೃಶ್ಯದಲ್ಲಿ ಸ್ತ್ರೀಪಾತ್ರಗಳು ಕಡಿಮೆ; ವಾಡಿಕೆಯಾಗಿ ಒಂದೇ ಪಾತ್ರವಿದ್ದರೂ ಇರಬಹುದೆಂದು ಭರತಮುನಿಯು ಹೇಳುತ್ತಾನೆ. ಇಲ್ಲಿ ಪ್ರಾಯಶಃ ಸ್ತ್ರೀಯರದಷ್ಟೇ ಅಲ್ಲ, ಎಲ್ಲ ಪಾತ್ರಗಳ ಸಂಖ್ಯೆಯೂ ಕಡಿಮೆಯಿರಬೇಕೆಂಬುದು ನಮ್ಮ ಅನುಭವದ ಮಾತಾಗಿದೆ. ಸ್ತ್ರೀಯರದಂತೂ ಸರಿಯೇ ಸರಿ. ಅವರ ಸೂಕ್ಷ್ಮಸ್ವಭಾವವನ್ನು ನಿರೂಪಿಸಲು ವಿಸ್ತಾರವಾದ ಭೂಮಿಕೆಯು ಬೇಕು. ಒಂದೆರಡು ಮುಖ್ಯ ಪಾತ್ರಗಳು ಹಾಗು ಹಲಕೆಲವು ಆನುಷಂಗಿಕ ಪಾತ್ರಗಳನ್ನು ಮಾತ್ರ ಏಕಾಂಕನಾಟಕಕಾರನು ನಿರ್ಮಿಸಬಹುದು.

ಇಲ್ಲಿ ಅನೇಕ ಪುರುಷರ ನಡುವೆ ಕಲಹವಾಗಬೇಕು; ಶಸ್ತ್ರಯುದ್ಧ-ಬಾಹುಯುದ್ಧ ಮೊದಲಾದ ಪ್ರಕಾರಗಳಿಗೆ ಆಸ್ಪದವಿರಬೇಕೆಂಬುದೂ ಭರತಮುನಿಯ ಅಭಿಪ್ರಾಯವಾಗಿದೆ. ಈ ಮಾತು ಸಹ ಕೆಲವೊಂದು ತರಹದ ಏಕಾಂಕ ದೃಶ್ಯಗಳಿಗೆ ಮಾತ್ರ ಅನ್ವಯಿಸುವದು. 'ಜಾತ್ರೆ', 'ನಿರುತ್ತರ-ಕುಮಾರ,' 'ಪಾಲು' ಮೊದಲಾದ ದೃಶ್ಯಗಳಲ್ಲಿ ಇದು ಕಂಡುಬರುವದು. 'ನಿರುತ್ತರ-ಕುಮಾರ'ದ ನಾಯಕನು 'ಪ್ರಖ್ಯಾತ' ನಿದ್ದಾನೆ. ಉಳಿದ ದೃಶ್ಯಗಳಲ್ಲಿಯ ಹೊಳಹು ಬೇರೆಯಿದೆ. ಹೀಗೆ ಅನೇಕ ವಿಧಾನಗಳಿರುವದುಂಟು. ಇಲ್ಲಿಯ ಮೂಲ ಮಾತು ಇಷ್ಟೇ: ಕಥಾವಸ್ತುವಿನಲ್ಲಿ ಮುಖ್ಯವಾಗಿ ಬಳ ತೋರಿಯಿರಬೇಕು. ಅದಿಲ್ಲದೆ ಕಥಾರಚನೆಯೇ ಅಶಕ್ಯವಾಗುವದು. ಭೌತಿಕ ಇಲ್ಲವೆ ಮಾನಸಿಕ ಕಲಹವಿದ್ದರೆ ಮಾತ್ರ ನಾಟಕದ ಸಮಸ್ಯೆಯು ಅಸ್ತಿತ್ವದಲ್ಲಿ ಬರುವದು.

ಏಕಾಂಕ ದೃಶ್ಯವನ್ನು ಅಭಿನಯಿಸಲು ಇಂತಿಷ್ಟೇ ವೇಳೆಯ ನಿರ್ಬಂಧವಿಲ್ಲೆಂದು ಭರತಮುನಿಯು ಹೇಳುತ್ತಾನೆ. ಈ ಮಾತು ಇಂದಿಗೂ ಅರ್ಥಪೂರ್ಣವಾಗಿದೆ. ದೃಶ್ಯವು ಚಿಕ್ಕದಿರಬೇಕೆಂಬ ಮಾತು ನಿಜ. ಅದು ವಾಡಿಕೆಯಾಗಿ ೩೦-೪೦ ಪುಟಗಳನ್ನು ಮೀರಬಾರದು. ಆದರೆ ಹೆಚ್ಚು ಹೆಚ್ಚು

ಚಿಕ್ಕದಿದ್ದ ಹಾಗೆ ಅದು ಚೊಕ್ಕಾದುದೆಂದು ಹೇಳಲು ನಮಗೆ ಬರುವಂತಿಲ್ಲ. ಏಕಾಂಕ ದೃಶ್ಯದ ವಿಶಿಷ್ಟ ರಚನಾಕ್ರಮದಲ್ಲಿ ಕುಂದಿಲ್ಲದಿರುವದೇ ಅದರ ನಿಜವಾದ ಯಶಸ್ಸಾಗಿದೆ.

"ಏವಂ ವಿಧಸ್ತು ಕಾರ್ಯೋ ವ್ಯಾಯೋಗೋ ದೀಪ್ತಕಾವ್ಯ ರಸ ಯೋನಿಃ"— ಏಕಾಂಕದೃಶ್ಯವು ಉಜ್ವಲ ಕಾವ್ಯರಸದಿಂದ ಪರಿಪೂರ್ಣ ವಾಗಿರಬೇಕೆಂಬುದು ಭರತಮುನಿಯ ಕೋನೆಯ ಅಭಿಪ್ರಾಯವಾಗಿದೆ. ಇದೂ ಬಹಳ ಮಹತ್ವವಾದದ್ದು. ಕಿರಿದಾದರೂ ದೃಶ್ಯದಲ್ಲಿ ಹಿರಿಯ ಬೆಳಕಿರಬೇಕು. ಕಾವ್ಯದ ಆತ್ಮವೆಂದು ಹೇಳುವ ಧ್ವನಿಯು ಇಲ್ಲಿ ಪೂರ್ಣವಾಗಿ ಧ್ವನಿತವಾಗ ಬೇಕು. ಸಣ್ಣದಿದ್ದರೂ ದೃಶ್ಯವು ತನ್ನನ್ನು ಬಣ್ಣಬಣ್ಣಗಳಿಂದ ಸಿಂಗರಿಸಿ ಕೊಂಡಿರಬೇಕು. ಆಂಗ್ಲ ವಿಮರ್ಶಕರೂ ಇದೇ ಮಾತನ್ನು ಒತ್ತಿ ಹೇಳು ತ್ತಾರೆ.

ನಾಟಕದ- ಏಕಾಂಕದೃಶ್ಯದ–ರಚನಾಕ್ರಮದಲ್ಲಿ ಮುಖ (ಪೀಠಿಕೆ– Exposition), ಪ್ರತಿಮುಖ (ಪ್ರಾದುರ್ಭಾವ- Development), ಗರ್ಭ (ಶಿಖರ–Crisis), ವಿಮರ್ಷ (Falling action) ಮತ್ತು ನಿರ್ವಹಣ (ವಿಮೋ ಚನೆ–Resolution, Denoument) ಎಂಬ ಐದು ಭಾಗಗಳನ್ನು ಆಂಗ್ಲ ವಿಮ ರ್ಶಕರು ಸೂಚಿಸುವರೆಂದು ಹಿಂದೆ ಹೇಳಿದೆ. ಈ ಭಾಗಗಳಿಗೂ ಭರತಮುನಿಯು ಸೂಚಿಸುವ ಐದು ಸಂಧಿಗಳಿಗೂ ತೀರ ಸಾಮ್ಯವಿದೆ. ಮುಖ, ಪ್ರತಿಮುಖ ಗರ್ಭ, ವಿಮರ್ಷ ಮತ್ತು ನಿರ್ವಹಣವೆಂಬ ಐದು ಸಂಧಿಗಳು ಹೆಚ್ಚುಕಡಿಮೆ ಮೇಲಿನ ಐದು ಭಾಗಗಳಂತೆಯೇ ಇರುತ್ತವೆ. ಹೀಗೆ ಹೋಲಿಕೆಯಿರುವದು ಸಹಜವಾಗಿದೆ. ಎಲ್ಲಿ ಹೋದರೂ ಈ ಕ್ರಮಾನುಸಾರವನ್ನು ಹಿಡಿದು ಬೆಳೆ ಯುವದು ನಾಟಕದ ನಿಸರ್ಗನಿಯಮವಾಗಿದೆ. ಈ ಬಗೆಯ ವಿಮರ್ಶೆ ಯನ್ನು ನಮ್ಮ ಪರಂಪರೆಯೂ ಸಮರ್ಥಿಸುವದೆಂಬುದೇ ನಾವು ಇಲ್ಲಿ ತಿಳಿಯ ಬೇಕಾದ ಮಾತಾಗಿದೆ.

ಏಕಾಂಕ ದೃಶ್ಯದಲ್ಲಿ 'ಗರ್ಭ' ಮತ್ತು 'ವಿಮರ್ಷ'ಗಳು ಇರುವದಿಲ್ಲ ವೆಂದು ಭರತಮುನಿಯು ಹೇಳುತ್ತಾನೆ. ಇದರ ಕಾರಣವಿಷ್ಟೇ: ಏಕಾಂಕ ದೃಶ್ಯದ ಹಿಡಿತಕ್ಕೆ ಅನೇಕ ಸಲ ಈ ಸಂಧಿಗಳೆರಡು ಸಾಲದೆ ಹೋಗುವವು.

ಕೆಲವು ದೃಶ್ಯಗಳಲ್ಲಿ ಇವು ಸೂಚ್ಯವಾಗಿರುವವು. ಇನ್ನುಳಿದವುಗಳಲ್ಲಿ ಐದು ಸಂಧಿಗಳಿಗೂ ಆಸ್ಪದವು ದೊರೆಯುಬಹುದು. ಆಂಗ್ಲ ವಿಮರ್ಶಕರು ಹೇಳು ವಂತೆ ಈ ಐದು ಸಂಧಿಗಳನ್ನು ಸಾಮಾನ್ಯವಾಗಿ ನಾವು ಯಾವ ವ್ಯಾಯೋಗ (ಏಕಾಂಕ ದೃಶ್ಯ)ದಲ್ಲಿಯೂ ಕಾಣಬಹುದು. ಒಟ್ಟಾರೆ ರಚನಾಕ್ರಮವು ಇಲ್ಲಿ ಅಷ್ಟೊಂದು ವಿಸ್ತಾರವಾಗಿರಬಾರದೆಂಬುದಿಷ್ಟೇ ಭರತಮುನಿಯ ಮಾತಿನ ಅಭಿಪ್ರಾಯವಾಗಿದೆ.

೫

ಕನ್ನಡದಲ್ಲಿ ಈಗ ೧೫-೨೦ ವರ್ಷಗಳಿಂದ ಏಕಾಂಕದೃಶ್ಯಗಳು ಬೆಳಕಿಗೆ ಬರಹತ್ತಿವೆ. ಶಾಂತಾ, ಸಾವಿತ್ರಿ, ಉಷಾ, ಯಮನ ಸೋಲು ಮೊದ ಲಾದ ದೃಶ್ಯಗಳಲ್ಲಿ ಕಾವ್ಯಮಯತೆಯಿದೆ. ಪದ್ಯ, ಸರಳ ರಗಳೆ, ಪದ್ಯಾತ್ಮಕ ಗದ್ಯ ಮೊದಲಾದ ಅನೇಕ ಮಾದರಿಗಳನ್ನು ಈ ದೃಶ್ಯಗಳಲ್ಲಿ ಉಪಯೋಗಿಸಿದೆ. ಗದ್ಯದಲ್ಲಿದ್ದರೂ 'ಉಷಾ'ದೃಶ್ಯದಂತೆ ಕೆಲವು ಸೊಂಪಾದ ಗೀತಗಳನ್ನು ಒಳ-ಕೊಂಡಿವೆ. 'ಜಲಗಾರ'ದಂಥ ಉದ್ದಿಶ್ಯಪೂರ್ಣ ದೃಶ್ಯಗಳೂ 'ಗಂಡು ಗೊಡಲಿ'ಯಂಥ ಕೆನ್ನೀರ ರೂಪಗಳೂ ಪದ್ಯದಲ್ಲಿವೆ. 'ಗೋಲು' ಎಂಬ ದೃಶ್ಯ ದಂತೆ ಕೆಲವು ಗದ್ಯದಲ್ಲಿದ್ದೂ ಕಾವ್ಯಮಯವಾಗಿರಬಹುದು. 'ತಿರುಕರ ಪಿಡುಗಿ'ನಂತೆ 'ಭಾಣ' ಹಾಗು 'ವ್ಯಾಯೋಗ' ರೂಪಗಳ ಲಕ್ಷಣಗಳನ್ನು ಸಂಗ್ರಹಿಸಿ ಕೆಲವು ದೃಶ್ಯಗಳು ಹುಟ್ಟಿರಬಹುದು. ಕೈಲಾಸಂರವರ ಸಾಮಾ ಜಿಕ ದೃಶ್ಯಗಳಲ್ಲಿ ಕಲಾಪರಿಪೂರ್ಣತೆಯೂ ಸಮಾಜವಿಮರ್ಶೆಯೂ ಬಳಕೆ ಮಾತಿನ ಬಣ್ಣವನ್ನು ಪಡೆದಿವೆ. ಸುಕುಮಾರ – ಆವಿದ್ಧವೆಂಬ ಎರಡು ಪ್ರಯೋಗಗಳ ಬಗೆಯೂ ಇವರ ಕೃತಿಗಳಲ್ಲಿ ಚೆನ್ನಾಗಿ ಗೋಚರವಾಗು ವದು. ಕಾರಂತ-ಜಾಗಿರದಾರರ ಏಕಾಂಕದೃಶ್ಯಗಳಲ್ಲಿ ಸಹ ಸಮಾಜ ವಿಮರ್ಶೆಯನ್ನೂ ಕಲೆಯನ್ನೂ ತೂಗಿ ನೋಡುವ ಹವಣಿಕೆಯು ಒಡೆದು ಕಾಣುವದು. ಮಿತ್ರಮಂಡಳಿಯವರ ಏಕಾಂಕ ದೃಶ್ಯಗಳಲ್ಲಿದ್ದ ವಿವಿಧ ಬಣ್ಣಗಳನ್ನೂ ಇಲ್ಲಿ ನೆನಪಿಗೆ ತರಬಹುದು.

ಹೀಗೆ ಕನ್ನಡದಲ್ಲಿ ಏಕಾಂಕದೃಶ್ಯವು ಶಾಖೋಪಶಾಖೆಯಾಗಿ ಬೆಳೆಯು ಹತ್ತಿದೆ. ಆನೆಯಂತೆ ಕನ್ನಡದ ಗಂಗಾಜಲದಲ್ಲಿ ಅದು ಕ್ರೀಡಿಸುತ್ತಿದೆ.

‘ ನಿರಂಕುಶರಾದ ನಿರ್ಜರರು ’ ಅದರ ಪ್ರಾವೃತರಾಗಿದ್ದಾರೆ. ಶ್ರೀನಿವಾಸ, ಪುಟ್ಟಪ್ಪ, ರಾಜರತ್ನಂ ಮೊದಲಾದವರು ‘ವ್ಯಾಯೋಗ’ ಕ್ಕೆ ಕಾವ್ಯದ ದೀಕ್ಷೆಯನ್ನು ಕೊಡುತ್ತಲಿದ್ದಾರೆ. ಕೈಲಾಸಂ, ಕಾರಂತ, ಜಾಗೀರದಾರ ಮೊದಲಾದವರು ಅದಕ್ಕೆ ಸಮಾಜ ವಿಮರ್ಶೆಯ ಧರ್ಮವನ್ನು ಕಲಿಸುತ್ತಿದ್ದಾರೆ. ಒಮ್ಮೊಮ್ಮೆ ಕಾರಂತರಂಥ ವಿಡಂಬನಾಕಾರರು ತಮ್ಮಲ್ಲಿ ಬೆಳೆಯುತ್ತಿರುವ ಕಾವ್ಯಜೀವನವನ್ನು ‘ ಮುಕ್ತದ್ವಾರ ’ ಮೊದಲಾದ ದೃಶ್ಯಗಳಲ್ಲಿ ಮುಕ್ತಹಸ್ತರಾಗಿ ಧಾರೆಯೆರೆದರೆ, ಬೇಂದ್ರೆ, ಕಡೆಂಗೋಡ್ಲು, ಮುಗಳಿ, ಕೃಷ್ಣಕುಮಾರ ಮೊದಲಾದ ಕಾವ್ಯಜೀವಿಗಳು ವ್ಯಾಯೋಗದಲ್ಲಿ ಸಮಾಜವಿಮರ್ಶೆಯನ್ನು ತುಂಬುತ್ತಿದ್ದಾರೆ. ನಾಟಕದ ಬಗ್ಗೆ–ಏಕಾಂಕ ದೃಶ್ಯದ ಬಗ್ಗೆ–ಯಾವ ಹಟವನ್ನು ಹಿಡಿಯುವದೂ ಶಕ್ಯವಿಲ್ಲ. ಕವಿಗಳನ್ನೂ ವಿಡಂಬನಾಕಾರರನ್ನೂ ಕೂಡಿಯೇ ನುಂಗಿ ಬಿಟ್ಟು ಮತ್ತೆ “ಹಸಿವೆ ! ಹಸಿವೆ !” ಎಂದು ನಾಟಕವು ಕೂಗುತ್ತಿದೆ !

ಕನ್ನಡದಲ್ಲಿ ಇಂದು ನಡೆದ ಪ್ರಯೋಗಗಳನ್ನು ಮನಸ್ಸಿನಲ್ಲಿಟ್ಟು ಕೊಂಡು ಏಕಾಂಕದೃಶ್ಯಗಳ ಬಗ್ಗೆ ಇಲ್ಲಿ ಇಷ್ಟು ಮಾತುಗಳನ್ನು ಹೇಳುವ ಸಾಹಸಮಾಡಿದ್ದೇನೆ. ಅವುಗಳಲ್ಲಿ ಕೆಲವು ನಾಟಕದ ಎಲ್ಲ ರೂಪಗಳಿಗೂ ಅನ್ವಯಿಸಬಹುದು:—

(೧) ನಾಟಕದ ವಸ್ತುವು ಕೇವಲ ಸಾಮಾಜಿಕವಾಗಲಿ,ಕಾವ್ಯಮಯವಾಗಲಿ ಇರಬೇಕೆಂದು ನಿರ್ಬಂಧಿಸುವದು ಶಕ್ಯವಿಲ್ಲ. ಅಷ್ಟೊಂದು ಕಲಾವಂತಿಕೆಯಿಲ್ಲದಿದ್ದ ಇಂದಿನ ‘ ಕಂಪನಿ ’ ನಾಟಕಗಳಲ್ಲಿ ಎರಡೂ ಮಾದರಿಗಳಿವೆ. ಇಂದು ಹೊಸದಾಗಿ ನಡೆದ ಪ್ರಯೋಗಗಳಲ್ಲಿ ಸಹ ಇವೆರಡೂ ಪ್ರಕಾರಗಳಿವೆ. ಇವುಗಳಲ್ಲಿ ಯಾವುದು ಹೆಚ್ಚು ಜನಪ್ರಿಯವಾಗಿದೆಯೆಂಬುದು ಇನ್ನೂ ನಿರ್ಣಯವಾಗಿಲ್ಲ. ಎರಡೂ ಆಗಬಹುದು. ಯಾವುದೊಂದೇ ಆಗಬಹುದು. ಆಗ ಉಳಿದ ಇನ್ನೊಂದು ಪ್ರಕಾರವು ನಾಟಕವಲ್ಲವೆಂದು ಯಾರಿಗೂ ಹೇಳಲು ಬರುವದಿಲ್ಲ. ಅದನ್ನು ಮನ್ನಿಸುವ ಜನತೆಯೂ ಇದ್ದೇ ಇರುತ್ತದೆ.

(೨) ಎಲ್ಲ ಕಲೋಪಾಸಕರ ದೃಷ್ಟಿಯೂ ಒಂದೇ ಬಗೆಯದೆಂದು

ಕೊನೆಗೆ ಕಂಡುಬರುವದು. ವಿಡಂಬನೆ, ಸಮಾಜವಿಮರ್ಶೆ, ಭಾವನಾಮಯತೆ, ಆಂತರಿಕಜೀವನ ವಿಮರ್ಶೆ – ಇವೆಲ್ಲ ಆ ದೃಷ್ಟಿಯ ಪಾರ್ಶ್ವರ್ಯಗಳು, 'ಪೈಲು' ಗಳು. ಒಂದರ ಹಿಂದೆ ಇನ್ನೊಂದು ಇದ್ದೇ ಇರುತ್ತದೆ. ಅಂತೇ ಈ ಎಲ್ಲ ಮಾದರಿಗಳಿಗೆ ನಾಟಕದಲ್ಲಿ ಸ್ಥಾನವಿದೆ.

(೩) ಇತಿವೃತ್ತವು ಇಂಥದೇ ಇರಬೇಕೆಂದು ನಾಟಕದಲ್ಲಿ ನಿಯಮವಿಲ್ಲ. ಪ್ರಾಚೀನ–ಅರ್ವಾಚೀನ, ಸಾಮಾಜಿಕ–ಐತಿಹಾಸಿಕ, ಪೌರಾಣಿಕ–ಆಧುನಿಕ, ಅಸಾಮಾನ್ಯ–ಸಾಮಾನ್ಯ, ಅದ್ಭುತರಮ್ಯ–ವಾಸ್ತವಿಕ, ರುದ್ರ–ಭದ್ರ, ರೂಪಕಮಯ (Symbolic) – ಯಥಾತ್ಮಿಕ,– ಈ ಎಲ್ಲ ದ್ವಂದ್ವಗಳಿಗೂ ನಾಟಕದಲ್ಲಿ ಅಷ್ಟೇ ಮಹತ್ವವಿದ್ದುದು ಸಾಹಿತ್ಯೇತಿಹಾಸದಿಂದ ಕಂಡು ಬರುವದು. ಸಾಹಿತಿಯ ದೃಷ್ಟಿಯನ್ನು ಕನ್ನಡಿಸಲು ಇವು ವಿವಿಧ ಸಾಧನೆಗಳಾಗಿವೆ.

(೪) ನಾಟಕದ ರಚನಾಕ್ರಮದಲ್ಲಿ ಪೌರ್ವಾತ್ಯ – ಪಾಶ್ಚಿಮಾತ್ಯ, ಪಾಚೀನ–ಅರ್ವಾಚೀನ,– ಎಲ್ಲ ಬಗೆಗಳಿಗೂ ಸ್ಥಾನವಿದೆ. ಇಂದಿನ ಏಕಾಂಕ ದೃಶ್ಯಕ್ಕೆ ಸರಿಯಾಗಿ ಹಿಂದೆ 'ವ್ಯಾಯೋಗ' ವಿದ್ದುದನ್ನು ನಾವು ಕಂಡಿದ್ದೇವೆ. ಸಾಹಿತಿಯು ಅನುಭವವನ್ನು ಸುಂದರತಮವಾಗಿ ಚಿತ್ರಿಸಿ ಅದನ್ನು ಪೂರ್ಣತಮವಾಗಿ ಮನದಟ್ಟಾಗಿಸುವದರಲ್ಲಿಯೇ ನಿಜವಾದ ಯಶಸ್ಸಿದೆ.

(೫) ನಾಟಕದಲ್ಲಿಯ ಪಾತ್ರಗಳು ಯಾವ ಲೋಕ–ದೇಶ–ಜಾತಿ–ವರ್ಗಗಳಿಗೂ ಸೇರಬಹುದು. ತಾವು ಸೇರಿದ ಲೋಕ–ದೇಶ–ಜಾತಿ–ವರ್ಗದವರಂತೆ ಇರಬೇಕು ಮಾತ್ರ. ನಾಟಕಕಾರನ ದೃಷ್ಟಿಯು ಹಾಗು ಕಥೆಯ ಪ್ರಕಾರದ ಮೇಲೆ ಅವನ ಪಾತ್ರಸೃಷ್ಟಿಯಲ್ಲಿರಬೇಕಾದ ರೂಪ–ರೇಷೆಗಳನ್ನು ನಿರ್ಣಯಿಸಬಹುದು. ಆ ರೂಪ–ರೇಷೆಗಳಿಗೆ ಸರಿಯಾಗಿ ಅವನು ಪಾತ್ರಗಳಲ್ಲಿ ಜೀವಕಳೆಯನ್ನು ತುಂಬುವನು.

(೬) ನಾಟಕದ ಹಿನ್ನೆಳಲು ಐತಿಹಾಸಿಕ, ನೈಸರ್ಗಿಕ, ಸಾಮಾಜಿಕ,– ಯಾವುದೂ ಇರಬಹುದು. ಉತ್ತಮ ಕೃತಿಗಳಲ್ಲಿ ಅದು ಯಾವಾಗಲೂ ಕಥೆಗೆ ಅನುರೂಪವಾಗಿ ಇರುವದು.

(೭) ಕಥೆಯಲ್ಲಿದ್ದ ರಸವನ್ನು ಪೋಷಿಸಲು ಮಾತ್ರ ಗೀತ, ಸಂಗೀತ,

ಚರ್ಚೆ, ಕಥನ (narration), ತತ್ವವಿವರಣೆ, ವಿಡಂಬನೆ, ಹಾಸ್ಯ ವಾಕ್ಚಾತುರ್ಯ, ವಾಕ್ಪಟುತ್ವ ಮುಂತಾದ ಯಾವ ಸಾಮಗ್ರಿಗೂ ನಾಟಕದಲ್ಲಿ ಸ್ಥಾನವಿದೆ. ಔಚಿತ್ಯಕ್ಕೆ ಭಂಗಬರದಿದ್ದರಾಯಿತು.

(೮) ನಾಟಕದಲ್ಲಿರಬೇಕಾದ ಸಂಭಾಷಣೆಗಳಲ್ಲಿ ಚಾಪಲ್ಯ, ಗಾಂಭೀರ್ಯ, ಅಲಂಕಾರ, ಪುನರುಕ್ತಿ ಮೊದಲಾದ ಅನೇಕ ಅನುಕ್ರಮಗಳಿಗೆ ದಾರಿಯಿದೆ. ಪ್ರಸಂಗದ ಹೊಳಹನ್ನು ನೋಡಿ ಮಾತ್ರ ಇವುಗಳ ಉಪಯೋಗವಾಗಬೇಕು.

(೯) ಶೈಲಿಯ ಗ್ರಾಮ್ಯತೆಯನ್ನು ನಾವು ಮುಖ್ಯತಃ ಸಾಮಾಜಿಕ ನಾಟಕಗಳಲ್ಲಿ ಕಾಣುತ್ತೇವೆ. ಉಳಿದ ಮಾದರಿಗಳಲ್ಲಿ ಅದು ಬಹುಶಃ ಸುಸಂಸ್ಕೃತವಿರುತ್ತದೆ.ಕಾವ್ಯಮಯ ನಾಟಕಗಳ ಶೈಲಿಯಲ್ಲಿ ಅಲಂಕಾರವು ಸಹಜವಾಗಿ ಹೆಚ್ಚಾಗಿರುವದು. ನಾಟಕವು ಜೀವನದ **ಆಭಾಸ**ವನ್ನು ಉಂಟುಮಾಡುವದು; ಅಲ್ಲದೆ ಉಳಿದ ಸಾಹಿತ್ಯದಂತೆ ನವೀನ ಸೃಷ್ಟಿಯನ್ನು ನಿರ್ಮಿಸುವದು. ಕಾರಣ ಯಾವ ನಾಟಕದಲ್ಲಿಯಾದರೂ ಬಳಕೆಮಾತು, ಸುಸಂಸ್ಕೃತ ಶೈಲಿ, ಮತ್ತು ಅಲಂಕಾರದ ಸಮತೂಕವು ಇದ್ದೇ ಇರಬೇಕಾಗುವದು. ಯಾವುದು ಪ್ರಧಾನವಾಗಿರಬೇಕೆಂಬುದನ್ನು ಆ ನಾಟಕದ ಮಾದರಿಯ ಮೇಲಿಂದ ನಿರ್ಣಯಿಸಬಹುದು.

೧೦. ನಾಟ್ಯಸೃಷ್ಟಿಯ ವಾಹಕ (medium) ವಾವುದಿರಬೇಕು ? ಗದ್ಯ, ಪದ್ಯಾತ್ಮಕಗದ್ಯ, ವಚನಗದ್ಯ, ಸರಳ-ರಗಳೆ ಮೊದಲಾದ ಕ್ರಮಗಳನ್ನೊಳಗೊಂಡ ಪದ್ಯ,- ಹೀಗೆ ಮುಖ್ಯವಾಗಿ ನಾಲ್ಕು ಹಾದಿಗಳಿವೆ. ಸಾಮಾಜಿಕ ದೃಶ್ಯಗಳು ಸರಳ-ರಗಳೆಯಲ್ಲಿದ್ದುದನ್ನೂ ಕಾವ್ಯಮಯ ದೃಶ್ಯಗಳು ಗದ್ಯದಲ್ಲಿದ್ದುದನ್ನೂ ನಾವು ಕಾಣಬಹುದು. ಕಾರಣ ಇಂಥ ವಸ್ತುವಿಗೆ ಇಂಥದೇ ಇರಬೇಕೆಂದು ನಿರ್ಣಯಿಸುವದು ಅಸಾಧ್ಯವಾಗಿದೆ.ಶೇಕ್ಸಪೀಯರನ ಕಾಲದಲ್ಲಿ ಗದ್ಯಕ್ಕಿಂತ ಸರಳ-ರಗಳೆಯೇ ಪ್ರಾಮುಖ್ಯತೆಯನ್ನು ಪಡೆದಿತ್ತು.ಇಂದು ಕನ್ನಡದಲ್ಲಿ ಸಾಮಾಜಿಕ ನಾಟಕಗಳ ಗದ್ಯದಷ್ಟೇ ಪ್ರಮುಖವಾಗಿ ಸರಳರಗಳೆಯು ತಲೆಯೆತ್ತುತ್ತಿದೆ. ಅದರ ಭವಿಷ್ಯವನ್ನು ಯಾರು ಬಲ್ಲರು ? ಇದೊಂದು ವಿಸ್ತಾರವಾದ ಸಮಸ್ಯೆ. ಇಲ್ಲಿ ಚರ್ಚಿಸಲು ಬಾರದು. ಕಥಾವಸ್ತುವು ವಾಸ್ತವಿಕವಿದ್ದರೆ ಗದ್ಯವು ಲೇಸಾದೀತು; ಹೆಚ್ಚು ಭಾವನಾತ್ಮಕವಿದ್ದರೆ ಸರಳ-ರಗಳೆಯು ಚೆನ್ನೆಂದು ಮಾತ್ರ ಇಲ್ಲಿ ಹೇಳಬಹುದು.

೧೧. ನೇಪಥ್ಯವಿಧಾನ, ರಂಗಭೂಮಿಯ ಸನ್ನಾಹ, ಅಭಿನಯದ ರೀತಿ,- ಇವೆಲ್ಲ ಕಥೆಯ ಪ್ರಕಾರದಂತೆ ಮಾರ್ಪಡುತ್ತವೆ. ಇಂದಿನ ಚಲಚ್ಚಿತ್ರಗಳ ಸಾಧನಗಳನ್ನು ಉಪಯೋಗಿಸಿ ನಾವು ಎಂಥ ಅದ್ಭುತ-ರಮ್ಯ ನಾಟಕವನ್ನೂ ಅಭಿನಯಿಸಬಹುದು. ಇಲ್ಲವೆ ಇದ್ದುದನ್ನು ಇದ್ದಂತೆಯೇ ರಂಗಭೂಮಿಯ ಮೇಲೆ ತರಬಹುದು.

೧೨. ಮೇಲೆ ಕಾಣಿಸಿದ ಸೂತ್ರಗಳಲ್ಲಿ ಪ್ರತಿಯೊಂದಕ್ಕೆ ನಾಟಕಕಾರನು ತನ್ನ ಮಾದರಿಯ (Type) ಉತ್ತರವನ್ನಲ್ಲದೆ ಸ್ವಂತದ ಉತ್ತರವನ್ನೂ ಕೊಡಬೇಕಾಗುವದು. ಮಾದರಿಯು ಸಾಮಾಜಿಕವಿರಬಹುದು; ಅದಕ್ಕಿಂತ ತೀರ ಭಿನ್ನವಿರಬಹುದು. ಇದು ಮಹತ್ವದ ವಿಷಯವಲ್ಲ; ಸ್ವಂತದ ಸೇರಿಕೆಯ ವಿಷಯವಾಗಿದೆ. ಸ್ವತಃ ನಾಟಕಕಾರನ ದೃಷ್ಟಿ, ಅನುಭವ, ಇವನ್ನೆಲ್ಲ ಚಿತ್ರಿಸುವ ಕಲಾಪಂತಿಕೆ,- ಇವೇ ಅವನನ್ನು 'ನಿರ್ಜರ' ಸಾಹಿತಿಯನ್ನಾಗಿ ಮಾಡುವವು.

ನಾಟ್ಯಕಲೆಯನ್ನು ಕುರಿತು ಹೇಳಿದ ಈ ಮಾತುಗಳ ಮೇಲಿಂದ ಏಕಾಂಕ ದೃಶ್ಯದ ವೈಶಾಲ್ಯದ ಕಲ್ಪನೆಯು ಬರುವದು. ತಿಳಿದ ಯೋಜಕನೊಬ್ಬನಿದ್ದರೆ ಸಾಕು, ಕಲೆಯ ಯಾವ ಬಗೆಯನ್ನೂ ಅವನು ತನ್ನ ಹಿಡಿತದಲ್ಲಿ ತರುವನು. ಎಂಥ ಅನುಭವವನ್ನೂ ಅದರಲ್ಲಿ ಚಿತ್ರಿಸುವನು. ಜೀವನದ ಯಾವ ಭಾಗವನ್ನೂ ಪ್ರತಿಬಿಂಬಿಸುವನು. ಏಕಾಂಕ ದೃಶ್ಯದ ವಿಶಿಷ್ಟ ರೀತಿಯಲ್ಲಿಯೇ ಅವನು ಇದನ್ನೆಲ್ಲ ಸಾಧಿಸುವನು.

ಇಲ್ಲಿಯ ವರೆಗೆ ಹೇಳಿದುದನ್ನೆಲ್ಲ ಸೋದಾಹರಣವಾಗಿ ವಿಶದಪಡಿಸುವ ಏಕಾಂಕ ದೃಶ್ಯಗಳು ಕೆಲವು ಇಲ್ಲಿ ಸಂಗ್ರಹಿತವಾಗಿವೆ.

ಈ ಸಂಗ್ರಹದಲ್ಲಿ ಸೇರಿಸಿರುವ ಎಲ್ಲ ನಾಟಕಗಳನ್ನು ಕುರಿತು ಒಂದೆರಡು ಮಾತು ಹೇಳುವ ವಿಚಾರವಿತ್ತು. ಆದರೆ ೧೫೦ ಪುಟಗಳಷ್ಟೇ ಇರಬೇಕಾದ ಗ್ರಂಥವು ಈಗ ೨೦೦ನ್ನು ಸಮೀಪಿಸಿದೆಯೆಂದು ಸಂಪಾದಕರು ತಿಳಿಸುತ್ತಾರೆ. ಕಾರಣ ಲೇಖನಿಯನ್ನು ಇಲ್ಲಿಯೇ ನಿಲ್ಲಿಸುವದು ಒಳಿತು.

೧–೭–೩೫
ಪುಣೆ

ವಿ. ಕೃ. ಗೋಕಾಕ

ಕೋಲ್ಮಿಂಚು

ಒಂದು ವರ್ಷದಲ್ಲಿ ೧೫೦ ಪುಟಗಳುಳ್ಳ ಆರು ಸರಸ ಗ್ರಂಥಗಳು !

ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೩-೮-೦ ಮಾತ್ರ

ಮೂರನೆಯ ವರುಷದ ಮೊದಲನೆಯ ಕುಸುಮ

ಮನೋಹರ ಗ್ರಂಥಮಾಲೆಯ ೧೩ನೆಯ ಕುಸುಮ

ಇಜ್ಜೋಡು (ಭಾಗ ೧)

(ಮನಸೆಳೆಯುವ ಸಾಮಾಜಿಕ ಕಾದಂಬರಿ)

ಬರೆದವರು:-

ಪ್ರೊ. ವಿ. ಕೃ. ಗೋಕಾಕ. ಎಂ. ಎ.

ಜಾತ್ರೆ

ಪಾತ್ರಗಳು

ದೇವರು (ಹುಚ್ಚಾಪುರದ ದೊರೆ)
ಕಾರಭಾರಿಗಳು
ಕಾರಕೂನರು
ಡಾಕ್ಟರು
ಆಳುಗಳು
ಡಂಗುರದವ

[ಅರಮನೆಯ ಒಂದು ದಿವಾಣಖಾನೆಯು. ದೊರೆಗಳು ಮಂಚದ ಮೇಲೆ ಅಡ್ಡಾಗಿದ್ದಾರೆ. ಕಾರಭಾರಿಗಳು ಸರಕಾರದ ಡಾಕ್ಟರರೊಡನೆ ಬರುವರು. ಕಾರಕೂನರು ಅವರನ್ನು ಹಿಂಬಾಲಿಸಿಕೊಂಡು ಬರುವರು. ದೊರೆಗಳಿಗೆ ನಮಸ್ಕರಿಸಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುವ ಹೊತ್ತಿಗೆ ದೊರೆಗಳು ಎದ್ದುಕೂಡುವರು.]

ದೇವರು (ದೊರೆಗಳು):— [ಕುಳಿತಲ್ಲಿಂದ ಮುಖ ಹೊರಳಿಸಿ] ಕಾರಭಾರಿಗಳೇ !

ಕಾರಭಾರಿ:— (ಆಸನದಿಂದ ಮೇಲಕ್ಕೆದ್ದು) ದೇವರು.

ದೊರೆ:— ಜಾತ್ರೆಯಾಗಲೇಬೇಕು.

'ಭಾರಿ:— (ತಲೆಬಗ್ಗಿಸಿ ವಿನಯದಿಂದ) ಹಾಗೇ ಆಗಲಿ ದೇವರು.

ದೊರೆ:— ಡಾಕ್ಟರೇ, ಊರಲ್ಲಿ ಪ್ಲೇಗು-ಗೀಗು ಏನೂ ಇಲ್ಲ, ಹೌದಷ್ಟೇ !

ಡಾಕ್ಟರು:— ದೇವರು, ಏನು ಹೇಳಲಿ, ನಿನ್ನೆ ಮೊನ್ನೆ ನಾಲ್ಕು ಜನರು ಗಂಟು ಎದ್ದು ಸತ್ತರು.

ದೊರೆ:— ಔಷಧ ಯಾರು ಕೊಟ್ಟರು ?

ಡಾಕ್ಟರು:— ನಾನು, ದೇವರು.

ದೊರೆ:— ಹಾಗಾದರೆ ಅವರು ಸತ್ತದ್ದು ಗಂಟಿಸಿಂದಲ್ಲ. ಊರಲ್ಲಿಲ್ಲ ಪ್ಲೇಗು; ಅವರೇನು ಗಂಟುಕಟ್ಟಿಕೊಂಡು ಬಂದಿದ್ದರೇ? ಅಂತೂ ಊರೊಳಗೆ ಪ್ಲೇಗಿಲ್ಲ. ಹೌದೇ?

ಡಾಕ್ಟರು:— ಮನೆಮನೆಗಳಲ್ಲಿ ಬೀಳುತ್ತಿರುವ ಇಲಿಗಳು ಪ್ಲೇಗಿನವು ನಿಜ, ದೇವರು.

ದೊರೆ:— ಇಲಿಗಳ ವಿಷಯ ನೀವು ಹೇಳಬೇಡಿರಿ. ಮುಂಬಯಿಂದ ಸರಕಾರೀ ಉತ್ತರ ಬರಲಿ. ಸರಕಾರ ಹೇಳಿದ್ದು ಸತ್ಯ. ಕಾರಭಾರಿಗಳೇ, ಡಂಗುರ ಸಾರಲು ಹೇಳಿರಿ. (ಕಾರಭಾರಿಗಳು ಕಾರಕೂನರಿಗೆ ಸನ್ನೆಮಾಡುವರು. ಕಾರಕೂನರು ಒಳಗೆ ಸನ್ನೆಮಾಡುವರು. ಕೂಡಲೆ ಡಂಗುರದವನು ಸಾರುವದು ಕೇಳ ಬರುವದು. 'ಕೇಳ್ರಿಪೋ ಕೇಳ್ರಿ! ಸರಕಾರದ ಡಂಗುರ. ಊರಾಗ ಪ್ಲೇಗಿಲ್ಲ, ಯಾರೂ ಊರು ಬಿಡಾಕಾಗದೂ! ಜಾತ್ರಿ ಆಗೇ ಆಕ್ಕೈತ್ರಿಪೋ ಆಗೇ ಆಕ್ಕೈತಿ.' ಹಲಗೆಯ ಸಪ್ಪಳ.) 'ಊರಲ್ಲಿ ಪ್ಲೇಗಿಲ್ಲ. ಯಾರೂ ಊರು ಬಿಡಬಾರದು. ಜಾತ್ರೆ ಬಹಳ ವಿಜೃಂಭಣೆಯಿಂದ ಜರಗುವದು. ಪರ ಊರಿಂದ ಜನರು ಬರಬೇಕು.' ಎಂದು ವರ್ತಮಾನ ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿರಿ. ಜನರು ಬರಲು ಅಡ್ಡಿ ಇಲ್ಲವೆಂದು ಇಲ್ಲಿಯ ಸರಕಾರೀ ಡಾಕ್ಟರ ಅಭಿಪ್ರಾಯವಿದೆ ಎಂದೂ ಬರೆದುಬಿಡಿರಿ.

ಡಾಕ್ಟರು:— ನಾನು ಹಾಗೆ ಹೇಳಲಿಲ್ಲ ದೇವರು.

ದೊರೆ:— ಹಾಗೆ ಹೇಳಿದ್ದು ನಾನು. ನೀವಲ್ಲ—ನನಗೆ ಗೊತ್ತು. ನಿಮಗೆ ಬುದ್ಧಿಯಿದ್ದರೆ ನನ್ನಂತೆಯೇ ಹೇಳುತ್ತಿದ್ದಿರಿ; ಜಾತ್ರೆಯಾಗದಿದ್ದರೆ ಸಾವಿರ ಗಟ್ಟಲೆ ರೂಪಾಯಿ ಬರುವದಿಲ್ಲ. ಪೂಜೆಇಲ್ಲದೆ ದೇವರು ಸಾಯಬೇಕು. ಸಂಬಳ ಸಿಗದೆ ದುಡಿಯುವವರು ಸಾಯಬೇಕು. ನಿಮ್ಮಂತೇ ಆಗಲಿ ಡಾಕ್ಟರೇ, ಪ್ಲೇಗು ಇದೆ ಎನ್ನೋಣ. ಎಷ್ಟು ಜನರು ಸಾಯಬಹುದು? ಪ್ಲೇಗು ಇರದಿದ್ದರೂ ಕೆಲವು ಜನರು ಸತ್ತೇ ಸಾಯುತ್ತಿದ್ದಾರೆ; ಆಮೇಲೆ ಕೆಲವು ಮುದಕರು ಸಾಯುವ ರೆನ್ನೋಣ, ಮುದುಕರು ಸತ್ತರೆ ಕಸ ಹೋದಂತೆ; ಆಮೇಲೆ ಕೆಲವು ಹೆಂಗಸರು ಸಾಯಬಹುದು. ಅವರು ಇದ್ದು ಗಳಿಸುವದು ಅಷ್ಟ ರಲ್ಲೇ ಇದೆ. ಕೂಳು ದಂಡ! ಇನ್ನು ಕೆಲವು ಸಣ್ಣಹುಡುಗರು

ಸಾಯಬಹುದು; ಹುಡುಗರು ಸತ್ತರೂ ತೊಟ್ಟಿಲಗಳೇನೂ ತೆರವು ಬೀಳುವದಿಲ್ಲ. ಹಿಂದುಸ್ಥಾನದ ಖಾನೇಸುಮಾರೀ ಕೇಳಿದ್ದೀರೋ ಇಲ್ಲವೋ, ಹತ್ತುವರ್ಷಗಳಲ್ಲಿ ೩೩ ಕೋಟಿ, ೩೫ ಕೋಟಿಯಾಗಿದೆ?

ಡಾಕ್ಟರು:— ಬಡಬಗ್ಗರ ಗತಿಯೇನು ದೇವರು?

ದೊರೆ:— ಬದುಕುವದೇ ಕಷ್ಟವಾದಾಗ ಸಾಯುವದೇ ಸುಖ ಅವರಿಗೆ; ಸತ್ತರೆ ಚಿಂತೆ ಹರಿಯಿತು.

ಡಾಕ್ಟರು:—ಅದಿರಲಿ ದೇವರು, ದುಡ್ಡುಳ್ಳವರು ಯಾರಾದರೂ............

ದೊರೆ:— ಅವರಿಗೆ ಯಾರು ಸತ್ತರೇನು? ದುಡ್ಡು ಇರುವದಲ್ಲ! ಅವರು ಕಳ್ಳರು–ಕಾಕರಿಗೆ ಹೆದರಬೇಕು. ರೋಗದ ಹೆದರಿಕೆಯೇ ಅವರಿಗೆ! ಹಿರಿಯರು ಸತ್ತರೆ ಮಕ್ಕಳಿಗೆ ಪಟ್ಟಬರುವದು; ಮಕ್ಕಳು ಸತ್ತರೆ ಪಾಲಾಗುವದುಳಿಯಿತು.

ಡಾಕ್ಟರು:— ದೇವರು, ಬಹಳ ಕಲ್ಲೆದೆ ಮಾಡಿದ್ದೀರಿ.

ದೊರೆ:— ಡಾಕ್ಟರೇ! ಧರ್ಮ; ಧರ್ಮ ಡಾಕ್ಟರೇ! ಧರ್ಮ ನಿಲ್ಲಬಾರದು. ದೇವರ ಪೂಜೆ, ಉತ್ಸವ ಸಾಗಬೇಕು. ಅಷ್ಟು ವಿಾರಿ ಕೆಲವು ಬೇಕಾದ ಜೀವ ಸಾಯುವವೆನ್ನಿರಿ. ಅದನ್ನು ಸಹಿಸಲಿಕ್ಕೆಬೇಕು. ಜಾತ್ರೆ ನಿಂತರೆ, ಸಂಸ್ಥಾನದ ನಾಡಿಯೇ ನಿಂತಂತೆ. ಯಜಮಾನರ ಸಂಬಳ ನಿಂತರೆ, ಮನೆಯವರು ತಿನ್ನುವದೇನು? ಈಗಲಾದರೂ ತಿಳಿಯಿತೇ? ಪ್ಲೇಗು ಇಲ್ಲ— ಹೌದೇ ಡಾಕ್ಟರೇ?

(ಕಾರಕೂನನು ಕಾರಭಾರಿಗಳ ಕೈಯಲ್ಲಿ ತಂತಿ ಕೊಡುವನು)

ಭಾರಿ:— ಮುಂಬಯಿಯ ತಂತಿ ಬಂದಿದೆ ದೇವರು.

ಡಾಕ್ಟರು:— ಹೊತ್ತಿಗೆ ಬಂದಿತು.

ದೊರೆ:— ಸರಕಾರದ ವೈದ್ಯಶಾಖೆಯವರೇನೆನ್ನುತ್ತಾರೆ?

ಭಾರಿ:— (ಗಾಬರಿಯಿಂದ) ' Rats plague infected ' ಇಲಿಗಳು ಗಂಟು ಬೇನೆಯವಂತೆ, ದೇವರು.

ದೊರೆ:— (ಸಿಟ್ಟಿನಿಂದ) ಹರಿದು ಹಾಕಿರಿ ಆ ಕಾಗದವನ್ನು. (ಕಾರಭಾರಿಗಳು ಚಟ್ಟನೆ ಹಾಗೆ ಮಾಡುವರು) ಇಲ್ಲಿಯ ಇಲಿಯದು ದಿಲ್ಲಿಗೇನು ತಿಳಿಯುವದು?

ಕಾರಭಾರಿಗಳೇ, ಊರ - ಹೊರಗಿನ ಒಡ್ಡರು ಇರುವರೋ, ಎಲ್ಲರೂ ಸತ್ತರೋ ? ಅವರು ದಿನಾಲು ಇಲಿಗಳನ್ನೇ ತಿನ್ನುವರಲ್ಲವೇ ? ಅದೇ ನಿಜವಾದ ಪರೀಕ್ಷೆ. ಮುಂಬಯಿಗೇನು ತಿಳಿಯುತ್ತದೆ ?

ಭಾರಿ:— ದೇವರು, ಅವರಲ್ಲಿ ಯಾರಾದರೂ ಸತ್ತಿದ್ದರೆ ಇಲ್ಲಿಗೆ ಅಳುವು ಕೇಳಿಸುತ್ತಿತ್ತು. ಮತ್ತೇನು ? ಎಲ್ಲರೂ ಸತ್ತಿರುವದರಿಂದ ಯಾರೂ ಅಳುವುದಿಲ್ಲವೊ ? ಇದ್ದವರಲ್ಲವೇ ಸತ್ತವರಿಗಳುವದು ?

ದೊರೆ:— ಆ ಸಂಶಯಬೇಡ. ಹಾಗಾಗಿದ್ದರೆ ಊರಿಗೂರೇ ಬೊಬ್ಬೆ ಕುಟ್ಟುತ್ತಿತ್ತು. ಊರಲ್ಲಿ ಪ್ಲೇಗಿಲ್ಲ. ಇದೇ ನಿಜ. ಜಾತ್ರೆಯಾಗಲೇಬೇಕು ಹೌದೆನ್ನಿರಿ ಡಾಕ್ಟರೇ ! (ಹೊರಗೆ ದೂರದಿಂದ ' ಅಯ್ಯೋ ಮಹಾರಾಯಾ ! ಎಂಬ ದನಿ ಕೇಳಬರುವದು) ಏನೀ ಕೂಗಾಟ ?

ಕಾರಕೂನ:— ಯಾರೋ ಶೂದ್ರರ ಗಂಡಸು ಪ್ಲೇಗಿನಿಂದ ಸತ್ತನಂತೆ !

ದೊರೆ:— ಯಾರೆಂದರು ಪ್ಲೇಗೆಂದು ? ಈ ಅರಮನೆಯಲ್ಲಿ ನನ್ನ ಅಪ್ಪಣೆಯಿಲ್ಲದೆ ಪ್ಲೇಗೂ ಬರಕೂಡದು. ಯಾರೂ ಬರಕೂಡದು. ನಾನು ಪ್ಲೇಗಿದೆ ' ಎನ್ನುವವರೆಗೆ ಯಾರೂ ' ಪ್ಲೇಗು ' ಎಂಬ ಮಾತೂ ಎತ್ತಕೂಡದು. ಕಾರಭಾರಿಗಳೇ, ಏನದು ಗದ್ದಲ ಹೊರಗೆ ?

'ಭಾರಿ:— ಯಾರೋ ಸತ್ತಿರಬೇಕು.

ದೊರೆ:— ಏನಾಗಿತ್ತು ?

'ಭಾರಿ:— ಬರಿ ಪ್ರಾಣ ಹೋಗಿರಬೇಕು ಅಷ್ಟೇ !

ದೊರೆ:— ಗಂಟು ಎದ್ದಿತ್ತೇ ಅವನಿಗೆ ?

'ಭಾರಿ:— ಎದ್ದಿದ್ದರೂ ಅದು ಕುರುವಾಗಲಿ ಹದಗಡಲೆಯಾಗಲಿ ಇರಬೇಕು.

ಡಾಕ್ಟರು:— ಕುರುವು ಹದಗಡಲೆಗಳಿಂದ ಯಾರೂ ಸಾಯುವದಿಲ್ಲ.

ದೊರೆ:— ಭಲೆ ! ದೊಡ್ಡ ಶೋಧಮಾಡಿದಿರಿ ! ಸಾಯಬಾರದೆನ್ನುವವರು ಕುರುವು ಹದಗಡಲೇ ಆಗುವಂತೆ ಮಾಡಿಕೊಂಡರಾಯಿತು ಎನ್ನಿರಿ! ಭಲೆ ಡಾಕ್ಟರೇ ?

ಡಾಕ್ಟರು:— ನಾನು ಹಾಗೆ ಹೇಳಲಿಲ್ಲ ದೇವರು. ಬರಿ ಕುರುವು ಹದಗಡಲೆಯಿಂದ ಯಾರೂ ಸಾಯಲಾರರು ಎಂದೆ.

ದೊರಿ:— ಅದಿರಲಿ. ಯಾತರಿಂದ ಸತ್ತಿರಬೇಕು ಹೇಳಿರಿ ?

ಡಾಕ್ಟರು:— ನೋಡದೇ ಬಿಡದೇ ಹೇಳಲಿಕ್ಕೆ ನಾನೇನು ಜೋತಿಷಿಯೇ ? ದೇವರು.

ದೊರಿ:— ಅದಕ್ಕೆ ಜ್ಯೋತಿಷವೇತಕ್ಕೆ ಬೇಕು ! ಯಾರೋ ಅತ್ತರು ಎಂದ ಮೇಲೆ ಇನ್ನೊಬ್ಬರಾರೋ ಸತ್ತರು. ಈ ತರ್ಕ ಸರಿಯುಷ್ಟೇ ! ಕಾರಣ ವಿಲ್ಲದೇ ಸತ್ತಿರಲಾರರು. ಕಾರಭಾರಿಗಳು ಹೇಳುತ್ತಾರೆ, ಪ್ರಾಣ ಹೋಗಿರಬೇಕೆಂದು. ಅದಕ್ಕಾದರೂ ಕಾರಣವೇನು ?

ಡಾಕ್ಟರು:— ಸರಕಾರದವರು ಪ್ಲೇಗಿಲ್ಲ ಎನ್ನುವಾಗ ತನಗೆಲ್ಲಿಂದ ಗಂಟು ಬಂತೋ ಎಂದು ಹೆದರಿ ಸತ್ತಿರಬೇಕು.

ದೊರಿ:— ಶಹಬ್ಬಾಸ್ ಡಾಕ್ಟರೇ ! ನೀವು ಹೇಳಿದ್ದೇ ಸರಿ. ಊರಲ್ಲಿ ಜನರು ಪ್ಲೇಗಿನ ಹೆದರಿಕೆಯಿಂದ ಸಾಯುತ್ತಿದ್ದಾರೆ–ಪ್ಲೇಗಿನಿಂದಲ್ಲ. ಕಾರ ಭಾರಿಗಳೇ, ಡಂಗುರ ಸಾರಹೇಳಿರಿ. ' ಊರಲ್ಲಿ ಪ್ಲೇಗಿಲ್ಲ. ಪ್ಲೇಗಿಗೆ ಯಾರೂ ಹೆದರಬಾರದು. ಸತ್ತರೂ ಹೆದರಬಾರದು. ಜಾತ್ರೆ ವಿಜೃಂಭಣೆಯಿಂದ ಜರಗುವದು. ' ಎಂದು ಸಾರಲಿ.

'ಭಾರಿ:— ಹಾಗೇ ಆಗಲಿ ದೇವರು. (ಕಾರಕೂನರಿಗೆ ಸನ್ನೆಮಾಡುವರು. ಕಾರಕೂನರು ಒಳಗೆ ಸನ್ನೆಮಾಡುವರು. ಕೂಡಲೇ ಡಂಗುರದವನು ಸಾರುವದು ಕೇಳಬರುವದು. ಹಲಗೆಯು ಸಪ್ಪಳ. "ಕೇಳ್ರಿಪೋ ಕೇಳ್ರಿ, ಸರಕಾರೀ ಡಂಗುರ. ಊರಾಗ ಪ್ಲೇಗು ಇಲ್ಲಾ. ಪ್ಲೇಗ್ಗೆ ಯಾರೂ ಬೆದರಾಕಾಗದೂ. ಸತ್ತರೂ ಬೆದರಾಕಾಗದು. ಜಾತ್ರಿ ಆಗೇ ಆಕ್ಕೈತ್ರಿಪೋ ಆಗೇ ಆಕ್ಕೈತಿ" ಮತ್ತೆ ಹಲಗೆಯ ಸಪ್ಪಳ. ಅದು ನಿಂತಮೇಲೆ ‹‹ ಅಯ್ಯೋ ಮಾರಾಯಾ ! " ಎಂಬ ಅಳುವದನಿ ಕೇಳಬರುವದು.)

ದೊರಿ:— ಮತ್ತೆ ಯಾರು ಸತ್ತರು; ಅತ್ತರೇನು ಸತ್ತವರೇಳುವರೇ ? ಈ ಹುಂಬ ಮಂದಿಗೆ ಏನೂ ತಿಳಿಯುವದಿಲ್ಲ. ಡಾಕ್ಟರೇ ? ಇವನೇಕೆ ಸತ್ತಿರಬೇಕು !

ಡಾಕ್ಟರು:— ಆಗಳೆಯುವನು ಸತ್ತಾಗ ಉಳಿದವರು ಅತ್ತದ್ದನ್ನು ಕೇಳಿ ಇವನು ಎದೆಯೊಡೆದುಕೊಂಡು ಸತ್ತಿರಬೇಕು.

ದೊರಿ:— ವಾಹವ್ವಾ ಡಾಕ್ಟರೇ ! ನೀವು ದೊಡ್ಡ ಗಂಡಾಂತರದಲ್ಲಿ ನನಗೆ

ಬಹಳೇ ಸಹಾಯ್ಯ ಮಾಡುತ್ತಿರುವಿರಿ. ಕಾರಭಾರಿಗಳೇ, ‘ ಯಾರೂ ಸತ್ತರೂ ಯಾರೂ ಅಳಕೂಡದು, ಈ ಜಾತ್ರೆಯಾಗುವವರೆಗೆ ’ ಎಂದು ಡಂಗುರ ಸಾರ ಹೇಳಿರಿ. (ಕಾರಭಾರಿಗಳು ಕಾರಕೂನರಿಗೆ ಸನ್ನೆಮಾಡುವರು. ಕಾರಕೂನರು ಒಳಗೆ ಸನ್ನೆಮಾಡುವರು. ಕೂಡಲೆ ಡಂಗುರದವನು ಸಾರುವದು ಕೇಳ ಬರುವದು. ಹಲಗೆಯ ಸಪ್ಪಳ; ಅಲ್ಲಿಂದ “ ಕೇಳ್ರಿಪೋ ಕೇಳ್ರಿ, ಸರಕಾರೀ ಡಂಗುರ. ಜಾತ್ರಿ ಆಗೇ ಆಕ್ಕೈತಿ. ಆಗೋತನಕ ಯಾರ ಸತ್ತರೂ ಯಾರೂ ಅಳಬಾರದ್ರೆಪೋ ಯಾರೂ ಅಳಬಾರದು ! ” ಹಲಗೆಯ ಸಪ್ಪಳ ಮತ್ತೆ.) ನನಗೆ ಜಾತ್ರೆಯ ಚಿಂತಿ; ಜನರಿಗೆ ಸಾಯುವ ಅವಸರ.

ಕಾರಕೂನ:— ದೇವರು, ಕೆಲ ಜನರು ಊರು ಬಿಟ್ಟು ಹೋಗುತ್ತಿರುವರು; ಅವರ ಬಂಡಿಗಳನ್ನು ಅಧಿಕಾರಿಗಳು ತರುಬಿದ್ದಾರಂತೆ; ಏನು ಮಾಡ ಬೇಕು ?

ದೊರೆ:— ಆ ಜನರನ್ನು ಊರೊಳಕ್ಕೆ ಅಟ್ಟಿರೆಂದು ಹೇಳಿರಿ. ಊರವರೇ ಅಂಜಿ ಓಡಿದರೆ ಪರ ಊರವರು ಇಲ್ಲಿ ಬಂದೇನು ಸತ್ತಾರು ? ಅದೇನೂ ಇಲ್ಲ. ಊರಲ್ಲಿ ಪ್ಲೇಗು ಇಲ್ಲ. ಪ್ಲೇಗಿಗೆ ಯಾರೂ ಹೆದರಬಾರದು. ಹೆದರಿದರೆ ಸತ್ತೀರಿ ! ಸತ್ತರೂ ಅಳಬಾರದು, ಎಂದು ಊರ ಜನರಿಗೆಲ್ಲ ತಿಳಿಯುವಂತೆ ಡಂಗುರಸಾರಿರಿ. (ಕಾರಭಾರಿಗಳು ಕಾರಕೂನರಿಗೆ ಸನ್ನೆ ಮಾಡುವರು. ಕಾರಕೂನರು ಒಳಗೆ ಸನ್ನೆಮಾಡುವರು. ಕೂಡಲೇ ಡಂಗುರದವನು ಸಾರುವದು ಕೇಳಬರುವದು. ಹಲಗೆಯ ಸಪ್ಪಳ. ಅಲ್ಲಿಂದ “ ಊರಾಗ ಪ್ಲೇಗು ಇಲ್ಲಾ. ಪ್ಲೇಗ್ಗೆ ಯಾರೂ ಬೆದರಾಕಾಗದು. ಬೆದರಿದರ ಸತ್ತೀರಿ ! ಸತ್ತರೂ ಅಳಬಾರದ್ರೆಪೋ ಅಳ ಬಾರದು ! ” ಹಲಗೆಯ ಸಪ್ಪಳ; ನಂತರ ಒಬ್ಬ ಸಿಪಾಯಿಯು ಕಾರಕೂನರ ಕೈಯಲ್ಲಿ ಒಂದು ಕಾಗದವನ್ನು ತಂದುಕೊಡುವನು. ಕಾರಕೂನರು ಅದನ್ನು ಕಾರಭಾರಿಗಳ ಕೈಯಲ್ಲಿ ಕೊಡುವರು.)

ಭಾರಿ:— (ಕೈಗೆ ಬಂದ ಕಾಗದ ನೋಡುತ್ತ) ದೇವರು, ಇಂದು ಬೆಳಗಿನಿಂದ ಐದು ಜನ ತೀರಿಕೊಂಡರಂತೆ ! ಕಾರಣ ತಿಳಿದಿಲ್ಲ, ಎನ್ನುವರು ಸರಕಾರದ ಅಧಿಕಾರಿಗಳು.

ದೊರೆ:— ಚಮತ್ಕಾರ ! ಎಷ್ಟು ಅವಸರ, ಎಷ್ಟು ಅವಸರ ! ಈ ಸಾಯುವ ಮಹಾರಾಯರು ಜಾತ್ರೆಯಾಗುವವರೆಗೆ ತಡದಿದ್ದರೆ ಏನು ಪ್ರಾಣ

ಹಾರಿಹೋಗುತ್ತಿತ್ತೇ! ಜನರಿಗೆ ತಿಳುವಳಿಕೆಯೇ ಕಡಿಮೆ. ಏನು ಯಮನ ಊರಿನಲ್ಲಿಯೂ ಜಾತ್ರೆ ನೆರೆಯುತ್ತಿರಬಹುದೇ? ಇದೆಲ್ಲ ಕೇಳಿ ನನ್ನ ತಲೆ ಕಾದುಹೋಗಿದೆ. ಏನು, ಕಾರಣವೇನಿರಬಹುದು ಡಾಕ್ಟರೇ?

ಡಾಕ್ಟರು:— ಒಂದು, ಪ್ಲೇಗು—

ದೊರೆ:— ಛಿ, ಛಿ, ನಾನದನ್ನು ಒಪ್ಪಲಾರೆ.

ಡಾಕ್ಟರು:— ಇನ್ನೊಂದು, ಮುಂಜಾವಿನಿಂದ ಒಂದೇ ಸವನೇ ಡಂಗುರ ಕೇಳಿ ಕೇಳಿ ಜನರು ಪ್ರಾಣಕಳಕೊಳ್ಳುತ್ತಿರಬಹುದು, ದೇವರು.

ದೊರೆ:— ಚೇಷ್ಟೆ ಮಾಡುತ್ತಿಲ್ಲವಷ್ಟೇ ಡಾಕ್ಟರೇ! ಕಾರಭಾರಿಗಳೇ ಡಾಕ್ಟರನ್ನು ವಂತೆ ಇರಬಹುದೇ?

ಭಾರಿ:— ಯಾಕಿರಬಾರದು? ಪ್ಲೇಗಿರಬಹುದೆಂಬ ಸುಳ್ಳು ಹೆದರಿಕೆಯಿಂದ ಜನರ ಎದೆ ಹಾರುತ್ತಿರಬೇಕು. ತಮ್ಮ ಬಾಯಿಂದ ಎಲ್ಲಿ, ಪ್ಲೇಗು ಎಂಬ ಮಾತು ಸುಳ್ಳೇ ಜಾರಿ ಹೋದೀತೆಂದು ನಿಜವಾದ ಹೆದರಿಕೆಯುಂಟಾಗಿ, ಎದೆ ಮತ್ತಷ್ಟು ಹಾರುತ್ತಿರಬೇಕು. ಎದೆಯು ಹಾರುವ ಸಪ್ಪಳದಲ್ಲಿ ಮೇಲಿಂದ ಮೇಲಾಗುವ ಡಂಗುರದ ಸಪ್ಪಳ ಕೂಡಿ, ಡಂಗುರವೋ ಎದೆಯೋ ತಿಳಿಯದಾಗಿ ಎದೆಯು ಹಾರಿ ಹಾರಿ, ಪ್ರಾಣವು ಜಿಗಿದು, ಮನುಷ್ಯನು ಪುಟಿದುಬೀಳುತ್ತಿರಬಹುದು.

ದೊರೆ:— ಡಾಕ್ಟರೇ ಇದು ಹೇಗೆ? ನಿಜವಿರಬಹುದೇ?

ಡಾಕ್ಟರು:— ನಿಜವೇನೇ ಇದ್ದರೂ, ಹೀಗಿರಬೇಕೆಂದು ನಮ್ಮ ತರ್ಕ, ದೇವರು.

ದೊರೆ:— ಇದನ್ನೆಲ್ಲ ಕೇಳಿ ನನ್ನ ಎದೆ ಹಾರುತ್ತಿದೆ.

ಡಾಕ್ಟರು:— ಜಾತ್ರೆಯ ವಿಚಾರದಿಂದಾಗುತ್ತಿರಬೇಕು. ನಿಜವಾಗಿ ತಮ್ಮ ಎದೆ ಕುಣಿದಾಡಬೇಕು, ದೇವರು.

ದೊರೆ:— (ಹಣೆ ಮುಟ್ಟಿಕೊಂಡು) ನನ್ನ ಹಣೆ ಕಾದಂತಿದೆ. ಡಂಗುರ ಸಾರುವದು ಇನ್ನು ಬೇಡ, ಎಂದು ತಿಳಿಸಿರಿ. ಜಾತ್ರೆಯು ಎಲ್ಲ ಸಿದ್ಧತೆಮಾತ್ರ ಸಾಗಲಿ. ಜಾತ್ರೆಯಾಗಲೇಬೇಕು. ಡಾಕ್ಟರೇ ನನ್ನಮೈ ಕಾದಿದೆಯೇನು ನೋಡಿರಿ?

ಡಾಕ್ಟರು:— (ನೋಡಿ) ದೊರೆಗಳ ಮೈ ಇಷ್ಟು ಬಿಚ್ಚಗಿರಲೇಬೇಕು.

ದೊರೆ:— (ತನ್ನ ನಾಡಿ ತಾನೇ ನೋಡಿಕೊಂಡು) ನನ್ನ ನಾಡಿ ಇಷ್ಟೇಕೆ ಹಾರುತ್ತದೆ?

ಡಾಕ್ಟರು:— ರಾಜನಾಡಿ, ಕೇಳುವದೇನು ? ರಣಾಂಗಕ್ಕೆ ಹೊರಟ ಕುದುರೆಯಂತೆ ಹೊರಟಿದೆ, ದೇವರು.

ದೊರೆ:— ನನ್ನ ಮೈಯ್ಯೇಕೋ ನಡುಗುತ್ತಿದೆಯಲ್ಲಾ ?

ಡಾಕ್ಟರು:— ದೇವರು, ಅದು ಜಾತ್ರೆಯ ಉತ್ಸಾಹ.

(ಸಿಪಾಯಿಯು ಕರೆದದ್ದನ್ನು ನೋಡಿ ಕಾರಕೂನರು ಒಳಗೆ ಹೋಗಿ ಬಂದು)

ಕಾರಕೂನ:— ದೇವರು, ತೆಳಗಿನ ಓಣಿಯಲ್ಲಿ ಇಬ್ಬರು ಬಡಪಾಯಿಗಳು ಸತ್ತರಂತೆ. ಅವರ ಮನೆಯಲ್ಲಿ ಕೂಡ ಏನೂ ಗಂಟಿರಲಿಲ್ಲವಂತೆ.

ದೊರೆ:— ನಮ್ಮ ಮನೆಯೇನು ಅರಮನೆಯೋ, ಯಮರಾಜನ ಸುಂಕದ ಕಟ್ಟೆಯೋ ? ಸತ್ತವರಿಗೆ ಸುಮ್ಮನೆ ಸ್ಮಶಾನದ ಹಾದಿಯನ್ನು ಹಿಡಿಯ ಹೇಳಿರಿ. ಒಬ್ಬ ಕೂಲಿ ಸತ್ತರೂ ಇಲ್ಲಿ ಬೊಬ್ಬೆ. ಒಂದು ಇಲೀ ಸತ್ತರೂ ಇಲ್ಲಿ ಬೊಬ್ಬೆಯೇ ? ಊರು ಸತ್ತರೂ ಜಾತ್ರೆ ನಿಂತೀತೇ ? ಯಾರೂ ಸತ್ತದ್ದೂ ಇನ್ನು ನನಗೆ ಹೇಳಬೇಡಿರಿ. ನಾನು ಕೇಳಲಾರೆ. (ಸಿಪಾಯಿಯು ಕರೆದದ್ದನ್ನು ನೋಡಿ ಕಾರಕೂನರು ಒಳಗೆ ಹೋಗಿ ತಿರುಗಿಬಂದು ಕಾರಭಾರಿಗಳ ಕಿವಿಯಲ್ಲಿ ಏನೋ ಹೇಳುವರು.)

'ಭಾರಿ:— ದೇವರು, ಆಚೆಯ ಕೋಣೆಯ ಮಧ್ಯದಲ್ಲಿ ಒಂದು ಇಲಿಯು ಸುಮ್ಮನೆ ಬಿದ್ದುಕೊಂಡಿದೆಯಂತೆ.

ದೊರೆ:— ಸತ್ತಿದೆಯೇ ?

'ಭಾರಿ:— ಏನೋ ದೇವರು, ಯಾರ ಕಾಲಸಪ್ಪಳಕ್ಕೂ ಅದು ಹೆದರಿ ಸರಿದಾಡಲೊಲ್ಲದು ಕೂಡ.

ದೊರೆ:— ಸಪ್ಪಳು ಮಾಡದಿದ್ದರೆ ಅದು ಧೈರ್ಯದಿಂದ ಹೊರಟು ಹೋಗಬಹುದಲ್ಲ !

'ಭಾರಿ:— ಜಡಜಂತು, ಅದಕ್ಕೆ ಅಷ್ಟು ವಿವೇಕವಿರುವಂತೆ ತೋರುವದಿಲ್ಲ.

ದೊರೆ:— ಬೆಕ್ಕು ಬಿಟ್ಟು ನೋಡಿದಿರಾ ?

ಭಾರಿ:— ಆ ಇಲಿ ಬೀಳುವ ಹೊತ್ತಿಗೆ ಕೋಣೆಯೊಳಗಿಂದ ಓಡಿಹೋದ ಎರಡು ಬೆಕ್ಕುಗಳು ಇನ್ನೂ ಕೈಗೆ ಸಿಕ್ಕಿಲ್ಲ.

ದೊರೆ:— ಆ ಇಲಿಗಳನ್ನು ಈಗಿಂದೀಗ ತಂತಿಯಿಂದ ಮುದ್ರಾಸಿಗೆ ಕಳಿಸಿರಿ.

ಡಾಕ್ಟರು:— ವಾಯುರಲೆಸ್ಸಿನಿಂದ ಕಳಿಸಿದರೆ ಒಳ್ಳೇದಾಗಲಿಕ್ಕಿಲ್ಲವೇ ?

ದೊರೆ:— ನಿಮಗೆ ಹುಚ್ಚು ಡಾಕ್ಟರೇ ! ಹಾಗೆ ಹೇಗೆ ಬಂದೀತು ?

ಡಾಕ್ಟರು:— ತಾವಂದಂತೆ ತಂತಿಯಿಂದ ಬರಬಹುದೇ ದೇವರು ?

ದೊರೆ:— [ಉದ್ವೇಗದಿಂದ] ನಾನು ಹಾಗೆಂದೆನೇ ? ನನ್ನ ಮನಸ್ಸು ಸ್ಥಿರವಿಲ್ಲ. ಕಾರಭಾರಿಗಳೇ ಆ ಇಲಿಯ ಅಂತ್ಯವಿಧಿ ತೀರಿಸಿರಿ. [ಕಾರಭಾರಿಗಳು ಹೋಗುವರು] ಡಾಕ್ಟರೇ ! ನನಗೆ ಜ್ವರ ಬಂದಿದೆಯೇನೋ ?

ಡಾಕ್ಟರು:— ಹಾಗೆ ಭಾಸವಾಗುತ್ತಿರಬೇಕು.

ದೊರೆ:— ಇದು ಪ್ಲೇಗಿನ ಜ್ವರವಿರಲಿಕ್ಕಿಲ್ಲವಷ್ಟೇ ?

ಡಾಕ್ಟರು:— ದೇವರು, ತಾವು ದೊರೆಗಳು; ಸಾಮಾನ್ಯಜನರಂತೆ ಮಾಡಿದರೆ ಹೇಗೆ ? ಪ್ಲೇಗು ಇಲ್ಲದಲ್ಲಿ ಪ್ಲೇಗಿನ ಜ್ವರವೇ ?

ದೊರೆ:— ತಮಗೆ ಪ್ಲೇಗಿನ ಹೆದರಿಕೆಯಿಲ್ಲವೇ ?

ಡಾಕ್ಟರು:— ನಾನು ಸೂಜಿಮದ್ದನ್ನು ಚುಚ್ಚಿಕೊಂಡಿದ್ದೇನೆ.

ದೊರೆ:— ಅದೇಕೆ ಚುಚ್ಚಿಕೊಂಡಿರಿ, ಪ್ಲೇಗಿಲ್ಲದೆ ಸುಮ್ಮನೇ ?

ಡಾಕ್ಟರು:— ಆ ವಿಚಾರ ಚುಚ್ಚಿಕೊಂಡ ಮೇಲೆ ನನಗೂ ಹೊಳೆಯಿತು.

ದೊರೆ:— [ಆತುರದಿಂದ] ನನಗೆ ಚುಚ್ಚುವಿರಾ ? ಡಾಕ್ಟರೇ !

ಡಾಕ್ಟರು:— ಸುಮ್ಮನೇ ಏಕೆ ದೇವರು ?

[ಕಾರಭಾರಿಗಳು ಮರಳಿ ಬರುವರು]

ದೊರೆ:— ಆ ಇಲಿಯಿಂದ ನನ್ನ ಮನಸ್ಸಿಗೆ ಹೆದರಿಕೆಯಾಗಿದೆ.

ಡಾಕ್ಟರು:— ಆ ಇಲಿಯು ಪ್ಲೇಗಿನದಿರಲಾರದು.

ದೊರೆ:— ಯಾವ ದೇವರು ಹೇಳಿದರು ನಿಮಗೆ ಇದನ್ನು ?

ಡಾಕ್ಟರು:— 'ರಾಜಾ ಪ್ರತ್ಯಕ್ಷ ದೇವತಾ' ಬೇರೆಯಾರು ? ಊರಲ್ಲಿಯೇ

ಪ್ಲೇಗಿನ ಇಲಿಗಳಿಲ್ಲದ ಮೇಲೆ ದೊರೆಗಳ ಮನೆಯಲ್ಲಿ ಎಲ್ಲಿಂದ ಬರಬೇಕು ?

ದೊರೆ:—. ಆದರೆ ತಾವೇ ಮೊದಲು ಎನ್ನಲಿಲ್ಲವೇ ಪ್ಲೇಗಿನಿಲಿಗಳಿವೆಯೆಂದು!

ಡಾಕ್ಟರು:— ಆಗ ನನಗೆ ಬುದ್ಧಿಯಿರಲಿಲ್ಲ.

ದೊರೆ:— ಮುಂಬಯಿ ಸರಕಾರದ ವೈದ್ಯಶಾಖೆಯವರು ಹಾಗೆ ತಿಳಿಸುವರಲ್ಲ! ಕಾರಭಾರಿಗಳೇ, ಅಲ್ಲವೇ ?

'ಭಾರಿ:— ಅವರೇನೋ ಹಾಗೆಂದಿದ್ದಾರೆ.

ಡಾಕ್ಟರು:—ತೊಗಲಲ್ಲೇನು ಬಲ್ಲ ತಿಮ್ಮಪ್ಪ! ದೊರೆಗಳ ಇಲಿಗಳು ದೊರೆಗಳು ಬಲ್ಲರು.

'ಭಾರಿ:— (ಕೈಯಲ್ಲಿರುವ ಕಾಗದವನ್ನು ನೋಡಿ) ಯಾವದೋ ಪತ್ರಿಕೆಯಲ್ಲಿ, 'ಹುಚ್ಚಾಪುರದಲ್ಲಿ ಜಾತ್ರೆಯ ಸಿದ್ಧತೆಯೂ ಹೆಚ್ಚಾಗಿ ನಡೆದಿದೆ; ಊರಲ್ಲಿ ಪಿಡುಗೂ ಹೆಚ್ಚಾಗುತ್ತ ನಡೆದಿದೆ.' ಎಂಬ ಸುದ್ದಿ ಪ್ರಕಟವಾಗಿದೆಯಂತೆ.

ದೊರೆ:— [ಸಿಟ್ಟಿನಿಂದ] ಏನು ಮುದ್ರಾರಾಕ್ಷಸವಿದು! ದೆವ್ವನಂಥ ತಪ್ಪು! ಇನ್ನೇನು ಸಾಯಬೇಕು? ಆ ಪತ್ರಿಕೆಗೆ ತಿದ್ದುಪಡಿ ಕಳಿಸಿರಿ. ಪಿಡುಗಲ್ಲ, ಬೆಡಗು ಎಂದು. ಊರಲ್ಲಿ ಬೆಡಗು ಹೆಚ್ಚಾಗುತ್ತ ನಡೆದಿದೆ. ಪಿಡುಗಂತೆ ಪಿಡುಗು! ಸಂಪಾದಕರಿಗೇನು? ಪಿಡುಗೂ ಸುದ್ದಿಯೇ, ಬೆಡಗೂ ಸುದ್ದಿಯೇ! ಅವರ ಗಂಟೇನು ಹೋದೀತು? [ಒಮ್ಮೆಲೆ ನಿಸ್ತೇಜನಾಗಿ] ನನ್ನ ಕೈಕಾಲೇ ಹೋದವು ಡಾಕ್ಟರ್!

ಡಾಕ್ಟರು:— ದೇವರು, ತಾವು ಧೈರ್ಯವಂತರು, ಏಕವಚನಿಗಳು. ಆಡಿದ ಮಾತು ತಿರುಗುವಂತಿಲ್ಲ ತಮ್ಮದು.

ದೊರೆ:— ಮಂಚದ ಮೇಲೆ ಬಿದ್ದುಕೊಳ್ಳಲಾ ಎನಿಸುತ್ತಿದೆ.

ಡಾಕ್ಟರು:—ತಾವು ಬಿದ್ದುಕೊಂಡರೆ ಜಾತ್ರೆಯೂ ಬಿದ್ದುಕೊಂಡುಬಿಡುವದು ದೇವರು.

ದೊರೆ:— ತಲೆ ತಿರುಗಹತ್ತಿದೆ.

ಡಾಕ್ಟರು:—ತಮ್ಮ ವಿಚಾರಗಳ ಪ್ರಭಾವವದು.

ದೊರೆ:— ಕಣ್ಣು ಉರಿಯುಹತ್ತಿವೆ.

ಡಾಕ್ಟರು:—ತಮ್ಮ ದೃಷ್ಟಿಯು ಅಷ್ಟು ಪ್ರಖರ.

ದೊರೆ:— ಬಾಯಿ ಆರುತ್ತಿದೆ.

ಡಾಕ್ಟರು:—ಏನೂ ಅಡ್ಡಿಯಿಲ್ಲ ದೇವರು.

ದೊರೆ:— ಡಾಕ್ಟರೇ, ನಿಮ್ಮ ಶಾಂತತೆ ನನಗೆ ಸಹಿಸಲಾಗುವದಿಲ್ಲ. ನನಗೇನೋ ಆಗಿದೆ. ಪರೀಕ್ಷಿಸಿ ನೋಡಿರಿ.

ಡಾಕ್ಟರು:—ಪರೀಕ್ಷಿಸಿ ಏನು ನೋಡುವದು? ಮೇಲೆಯೆ ಕಾಣುತ್ತಿದೆ. ಸತ್ತವರ ಸುದ್ದಿಗಳನ್ನು ಮುಂಜಾವಿನಿಂದ ಕೇಳಿಕೇಳಿ ಹಾಗೆ ಭ್ರಮವಾಗಿರಬೇಕು.

ದೊರೆ:— ಹಾಗೆ ಎಂದರೆ ಹೇಗೆ? ಪ್ಲೇಗು ಎಂದೋ?

ಡಾಕ್ಟರು:—ಆ ಮಾತು ನಾನಾಡಲಾರೆ. ದೊರೆಗಳು ಹೇಳಬಹುದು.

ದೊರೆ:— [ಹಾಸಿಗೆಯ ಮೇಲುರುಳುತ್ತ] ಡಾಕ್ಟರೇ, ಪ್ಲೇಗೆಂಬ ಮಾತಿಗೆ ಎಷ್ಟು ಹೆದರುತ್ತೀರಿ?

ಡಾಕ್ಟರು:—ನನಗೆ ಪ್ಲೇಗಿನ ಭೀತಿಯಿಲ್ಲ, ತಮ್ಮದು ದೇವರು.

ದೊರೆ:— ಹೆದರದೆ ಹೇಳಿರಿ; ನನಗೇನಾಗಿರಬೇಕು?

ಡಾಕ್ಟರು:—ಪ್ಲೇಗು!

ದೊರೆ:— [ಒಮ್ಮೆಲೆ ಎದ್ದು] ನನಗೇನು ಪ್ಲೇಗಾಗಿದೆ? (ವಿಕಾರವಾಗಿ) ಊರೊಳಗಿನ ಎಲ್ಲ ಇಲಿಗಳನ್ನೂ ಕೊಂದುಬಿಡಿರಿ. ಕಾರಭಾರಿಗಳೇ, ಇಲಿಗಳೆಲ್ಲಿವೆ? [ಬಿದ್ದುಕೊಳ್ಳುವನು].

'ಭಾರಿ:— ದೊರೆಸಾನಿಗಳು ಒಳಗೆ ಬರಲು ಅಪ್ಪಣೆಗಾಗಿ ಕಾದಿದ್ದಾರೆ. ಜನರು ಊರುಬಿಡಲು ಕಾದಿದ್ದಾರೆ.

ದೊರೆ:— ಕಾರಭಾರಿಗಳೇ, ಇನ್ನೇನು ದೇವರ ಜಾತ್ರೆಯೋ, ದೊರೆಗಳ ಪ್ರೇತಯಾತ್ರೆಯೋ! ಡಾಕ್ಟರೇ, ಊರಜನರಿಗೆ ಊರುಬಿಡಹೇಳಿರಿ, ಜೀವದ ಜಾತ್ರೆ ಹೊರಡಲಿ. ಡಾಕ್ಟರೇ ನಿಮಗೆ ಬುದ್ಧಿಯಿಲ್ಲ, ಹೆದರಿ

ಸಿದರೆ ಹೆದರಿಬಿಡುತ್ತೀರಿ. ಸತ್ತರೂ ಸತ್ಯ ಬಿಡಬಾರದು. ನಾನು ಹೇಳುತ್ತೇನೆ—ಇದು ಪ್ಲೇಗು.

ಡಾಕ್ಟರು:—ಸರಕಾರ ಹೇಳಿದ್ದೇ ಸತ್ಯ, ದೇವರು.

(ಕಾರಭಾರಿಗಳು ಹೇಳಹೋಗುವರು. ಒಳಗೆ "ಭಾಳ ದಿನಾ ಬಾಳು ನಮ್ಮ ಧಣಿ" ಎಂದು ಜನಜಂಗುಳಿಯು ಕೂಗುವದು ಕೇಳಬರುವದು.)

ತೆರೆ ಬೀಳುವದು

———

ತುಳಸಿ

(ಮೊದಲುನುಡಿ)

ಗೆಳೆಯ,

ಈ ಚಿಕ್ಕ ನಾಟಕದ ಕಥೆಯನ್ನು ನಿನ್ನೆದುರು ಹೇಳಿದಾಗ ನೀನು ವಿಸ್ಮಯಗೊಂಡೆ. ಸತ್ಯ, ಪ್ರೇಮ ಮುಂತಾದ ದಿವ್ಯತತ್ತ್ವಗಳ ಚರ್ಚೆಯ ನಿರೂಪಣೆಯೇ ಸಾಹಿತ್ಯದಲ್ಲಿ ಮುಖ್ಯವಾದುದೆಂದು ತಿಳಿದ ನಾನು ಇಂಥ ಹೀನಸಮಾಜದ ಚಿತ್ರವನ್ನು ಬರೆಯಲೆನಗಿದುದೇಕೆಂದು ಬೆಸನಗೊಂಡೆ. ನನ್ನ ಒಲವು ನೀನು ಹೇಳಿರುವ ಹಾಗಿರುವದೇನೋ ನಿಜ. ಆದರೆ ಕಲೋಪಾಸಕನಿಗೂ ಆದರಾತಿಥ್ಯದ ಕೆಲವು ಕಟ್ಟಳೆಗಳಿವೆ. ತಾವಾಗಿ ಯಾರಾದರೂ ತನ್ನೆಡೆಗೆ ಬಂದು ತನ್ನ ಕೃತಿಗಳ ಕಟ್ಟಡದಲ್ಲಿ ಒಂದು ಕೈಸಾಲೆಯ ಕೋಣೆಯನ್ನು ಇರಲು ಕೊಡಿರೆಂದು ಕೇಳಿದರೆ ಅವನು ಇಲ್ಲೆನ್ನಲಾರ. ಆ ಮೇರೆಗೆ ತುಳಸಿ ಬಂದಳು. ಅವಳಿಗೆ ಒಂದು ಕೋಣೆಯನ್ನು ಕೊಟ್ಟದಾಯಿತು. ಇಂಥ ಒಂದು ಕುಟುಂಬವನ್ನು ನಾನು ಚಿಕ್ಕಂದಿನಲ್ಲಿ ಕಣ್ಣಾರೆ ಕಂಡಿದ್ದೆ. ಮುಂದೆ ಕನಸಿನಲ್ಲಿಯೂ ಇಂಥದೊಂದು ಕಥೆ ಕಣ್ಣೆದುರು ಹಾಯ್ದು ಹೋಯಿತು.

ಜ್ಞಾನಿಗಳಾದ ಹಿರಿಯರೊಬ್ಬರಿಗೆ ನಾನು ಇದನ್ನು ಓದಿ ತೋರಿಸಿದೆ. ಇದರಲ್ಲಿ 'ಬೆಡಗಿ'ನ ಮಾದರಿಯಾಗಿ ತತ್ವವಿರಬಹುದೆಂದೂ ಇರದಿದ್ದರೆ ನಾಟಕವು ಅಸಹ್ಯವೆಂದೂ ಅವರು ಹೇಳಿದರು. ಅವರ ಸಮಾಧಾನಕ್ಕೋಸ್ಕರ ನಾನು ಹೀಗೆ ವಿವರಿಸಿದೆ: ಜಗತ್ತೆಂದರೆ ಒಂದು ಸೂಳೆ. ಜಗತ್ತಿನ ನೆಚ್ಚಿಗೆ ಯಾರಿಗೂ ಇಲ್ಲ. ಜಗತ್ತು ಗರತಿಯಾಗಬೇಕೆಂದು ವ್ಯರ್ಥವಾಗಿ ಸಾಹಸಮಾಡಿ ನೊಂದು ಸತ್ತ ವ್ಯಕ್ತಿ,—ರಾಮಣ್ಣ! ಜಗತ್ತಿನ ಸೂಳೆಬೆಡಗಿಗೆ ಸೋತು ಮರುಳಾದವ,—ನಾರಪ್ಪ! ಆಗ ಆ ಹಿರಿಯರಿಗೆ ಇದು ರುಚಿಸಿದಂತೆ ತೋರಿತು. ಈ ಚಿತ್ರದಲ್ಲಿ ನಿನಗೆ ತತ್ವವು ಬೇಕೇ ಆಗಿದ್ದ ಪಕ್ಷದಲ್ಲಿ ನೀನೂ ಇದರಿಂಗ ಸಮಾಧಾನ ಹೊಂದಬಹುದು.

ನಿನ್ನೊಲವಿನ

—ವಿನಾಯಕ

ಪುಣೆ ೮-೮-೩೪

ತುಳಸಿ

ಪಾತ್ರಗಳು

ರಾಮಣ್ಣ
ಚೆನ್ನಪ್ಪ } ದುರಗವ್ವ

ನಾರಾಯಣರಾಯರು ತುಳಸಿ

ವಸಂತ

ಪ್ರವೇಶ ೧

(ದುರಗವ್ವನ ಮನೆ. ಮುಂಚಿಯ ಬಾಗಿಲದ ಎದುರಿಗೆ ಒಂದು ಸಣ್ಣ ಕಟ್ಟೆಯಿದೆ. ಅದರ ಮೇಲೆ ಚೆನ್ನಪ್ಪನು ಗಂಭೀರನಾಗಿ ಎಲಡಕೆ ಹಾಕುತ್ತ ಕುಳಿತಿರುವನು. ದುರಗವ್ವನು ಅಲ್ಲಿಯೇ ಹತ್ತಿರದಲ್ಲಿ ಅನ್ನಕ್ಕಿಡತೊಡಗಿರುವಳು. ಅವಳ ಹದಿನಾರುವರುಷದ ಮಗಳಾದ ತುಳಸಿಯು ಚೆನ್ನಪ್ಪನನ್ನು ಎವೆಯಿಕ್ಕದೆ ನೋಡುತ್ತ ನಿಂತಿರುವಳು. ಇಷ್ಟರಲ್ಲಿ ದುರಗವ್ವನ ಗಂಡನಾದ ರಾಮಣ್ಣನು ಕುಂಟುತ್ತ ಒಳಕ್ಕೆ ಬರುವನು. ಎಡಗಾಲಿನ ಪಾದದ ಹತ್ತಿರಕ್ಕೂ ಮೊಳಕಾಲಿಗೂ ಅರಿವೆಯನ್ನು ಸುತ್ತಿದ್ದಾನೆ. ಸುಮಾರು ಒಂದು ತಿಂಗಳ ಗಡ್ಡವು ಬೆಳೆದಿದೆ. ಒಂದು ಹೊಲಸಾದ ಪಂಚೆಯನ್ನು ಉಟ್ಟುಕೊಂಡದ್ದಲ್ಲದೆ ಒಂದು ಹರಕು ಶರ್ಟನ್ನು ಹಾಕಿ ಚಿಂದಿಯಂತಿದ್ದ ಒಂದು ರುಮಾಲವನ್ನು ಇಟ್ಟುಕೊಂಡಿದ್ದಾನೆ.)

ರಾ:—ಏನಽ? ಏನು ಮಾಡತಿದಿ?

ದು:—ಬರ್ರಿ. ಬಂದ್ರ್ಯಾ? ನನಗ ಗೊತ್ತು ನಿಮ್ಮ ದೇಶಾಂತರ ಕಡಿಕೆ ಎಲ್ಲಿ ಮುಗೀತದಂಬೋದು! ನಾಚಿಕಿ ಇಲ್ಲಽ ನಿಮಗ, ಉಟ್ಟ ಧೋತರದಲೆ ಹೊರಟ ಮನಿಗೆ ತಿರುಗಿ ಬರಲಿಕ್ಕೆ?

ರಾ:—ಬರೀ ಕೊಟ್ಟು ವ್ಯಾಲ ಬರಗುಣಿ ಕೊಡತೀಯಲ್ಲಽ! ದಯಾ

ಮಾಯಾ ಹಾಕಿಲ್ಲೇನು ನಿನ್ನ ಹೊಟ್ಯಾಗ ದೇವರು? ನನ್ನ ಸಂಶಯ ನಿವಾರಣ ಆಗಿದ್ದರ ನಾ ಎಲ್ಲಿ ಹೋಗತಿದ್ದೆ ಮನಿ ಬಿಟ್ಟು?

ದು:—ನಿವಾರಣ ಆಗೋ ಸಂಶಯುನೂ ನಿಮ್ಮದು? ನನ್ನ ಹೊಟ್ಟೀಲಿ ಹುಟ್ಟಿದ ಕೂಸು ನಿಮ್ಮದು ಹೌದೋ ಅಲ್ಲೋ ಅಂತ ಸಂಶಯ ಬಂದರ, ನಾ ಏನು ಮಾಡೋದು ಅದಕ, ನಾಸು!

ರಾ:—ಉಂ! ಇರ್ಲಿ ಬಿಡು! ಮನಸ್ಸು ಸಡ್ಲ ಬಿಟ್ಟಂಗ ಬಾಯೀನು ಸಡ್ಲ ಬಿಡಬ್ಯಾಡ! ಇವರ್‍ಯಾರು........ಇಲ್ಲಿ ಕೂತವರು........? ಅಯ್ಯೋ! ಈಗಾರ ಏನಾತು? ಇವನ್ನ ಮನಿಬಿಟ್ಟು ಹೊರಗ ಹಾಕು. ಅಂದ್ರರ ನಮ್ಮ ಸಂಸಾರ ಸಾಗೀತು ಮತ್ತ?

ದು:—ಹುಂ! ಹೊರಗ ಹಾಕತೇನಿ! ನನ್ನ ಬಿಟ್ಟಹೋದ ಬಸವನ್ನ ಒಳಗ ತೊಗೋಬೇಕಂತ! ನನ್ನ ನಂಬಿಕೊಂಡಿರೋ ಚೆನ್ನಸ್ನ ಮನಿ ಬಿಟ್ಟು ಹೊರಗಹಾಕಬೇಕಂತ! ಚಲೋ ನ್ಯಾಯ, ಏನಾರ ಆಗಲಿ! ಇಕಾ! ಇಲ್ಲಿ ನೋಡು. ನೀ ನನ್ನ ಮದುವ್ಯಾದ ಗಂಡ. ನೀ ನನಗ ಕಟ್ಟಿದ್ದು ಇದೊಂದು ತಾಳಿಮಣಿ. ಅ....ದ....ನ್ನ ಹರದು ಬಿಟ್ಟೆ! ತೊಗೊಂಡು ಹೋಗು! ನಾ ಹೆಂಡತಿ ಅಲ್ಲ! ನೀ ಗಂಡಲ್ಲ! ನಾ ಏನಿದ್ದೇನಿ ಗೊತ್ತದ ಏನು ....?

ರಾ:—(ಸಿಡಿಲು ಬಡಿದವನಂತೆ) ಅಯ್ಯ! ಮುಂಡಿ! ಮುಂಡಿ! ಮುಂಡಿ ಮನಿಗೆ ನಾ ಯಾಕ ಬಂದೆ! ಹೂಂ ಹೊಂಡು! (ಮುಂದೆ ನಡೆದು ಮಗಳನ್ನು ನೋಡಿ) ಏ! ತುಳಸಿ! ಈ ಮನ್ಯಾಗ ನೀ ಯಾಕ ನಿಂತಿ! ನಡಿ! ನನ್ನ ಬೆನ್ನು ಹತ್ತು!

(ತುಳಸಿಯು ಹೊರಡಲು ಅಣಿಯಾಗುವಳು)

ದು:—ನೀನೂ ಹೋಗತೀಯೇನೂ?

ತು:—(ಕೆರಳಿದ ಕಣ್ಣುಗಳಿಂದ) ಹೌದೂ ಮತ್ತ! ಇಲ್ಲದಿದ್ದರ ನಿನ್ನ ಚೆನ್ನ ನನ್ನ ಬೆನ್ನ ಹತ್ಯಾನು! ಆಗ ಬಿದ್ದೀತು ನನಗ ನಿನಗ ಜಗಳ! ಅಪ್ಪನ ಕೂಡ ಊರು ತಿರಗೋದು ಬೇಕು, ನಿನ್ನ ಮನಿ ಹತ್ತರದ ಹವಾ ಬ್ಯಾಡಾ!

ದು:—ಹೋಗು! ಹೋಗು! ನನಗ ಗೊತ್ತದ ನೀ ಏನಾಗತಿ ಅಂಬೋದು!

(ತುಳಸಿಯು ರಾಮಣ್ಣನನ್ನು ಹಿಂಬಾಲಿಸಿ ಹೋಗುತ್ತಾಳೆ)

(ತೆರೆಯು ಬೀಳುತ್ತದೆ.)

ಪ್ರವೇಶ ೨

(ಅದೇ ಊರಿನಲ್ಲಿ ನಾರಾಯಣರಾಯರ ಮನೆ. ಒಳಂಗಳದಲ್ಲಿ ಎಡಕ್ಕೆ ಒಂದು ಸಣ್ಣ ಕೋಣೆಯಿದೆ. ಒಳಂಗಳದ ಮಧ್ಯದಿಂದ ನೆಟ್ಟಗೆ ದಾರಿಯು ಡ್ರಾಯಿಂಗ್ ರೂಮಿಗೆ ಹೋಗಿದೆ. ಆ ರೂಮಿನ ನಾಲ್ಕೂ ಗೋಡೆಗಳನ್ನು ಚಿತ್ರಛಾಯಾಚಿತ್ರಗಳಿಂದ ವಿಧವಿಧವಾಗಿ ಶೃಂಗರಿಸಿದೆ. ಒಂದು ವಿರಾಮಕುರ್ಚಿಯ ಮೇಲೆ ನಾರಾಯಣರಾಯರು ತಮ್ಮ ಪೋಷಾಕಿನಲ್ಲಿಯೆ ಕುಳಿತುಕೊಂಡಿದ್ದಾರೆ)

ನಾ:— ಏ! ವಸಂತಾ!

ವ:— (ಒಳಗಿನಿಂದ) ಬಂದೆ ದ್ಯಾವ್ರೂ.

ನಾ:—ಈ ನನ್ನ ಟೆನಿಸ್ ಶೂ ಬಿಚ್ಚು. (ಬಿಚ್ಚುವನು) ಹುಂ ಹೋಗಿನ್ನು, ಒಂದು ಕಪ್ಪು ಚಹಾ ತೊಗೊಂಡು ಬಾ.

ವ:—ಮೈಸೂರ ಅಂಗಡಿಯಿಂದ ತರಲೋ, ಏನು ಉಡಪಿ ಓಟೆಲ್ಲೊ, ರಾಯರ?

ನಾ:—(ಸಿಟ್ಟಿನಿಂದ) ಮಾರ್ನಿಂಗ್ ಟೀ ಉಡಪಿ ಹಾಟೆಲ್ಲು. ಇವ್ನಿಂಗ್ ಕಾಫಿ, ಮೈಸೂರು ರಿಸ್ಟಾರಾಂ, ಎಷ್ಟು ಸಲ ಹೇಳಬೇಕೋ, ನಿನಗ? ಸಾಕಾತು ಈ ಗೋಳು! ಇನ್ನು ಲಗ್ನಾ ಆದ ಮಾಡಕೋತೇನಿ; ನೋಡಲಾರೆ, ಇದನ್ನು!

ವ:— ನನ್ನ ಮ್ಯಾಲೆ ಸಿಟ್ಟಾಗಿ ಮಾಡಿಕೋಬ್ಯಾಡ್ರಿ, ರಾಯರ! ಅದು ಬರಾಬರಿ ಆಗಾಕಿಲ್ಲ.

ನಾ:—ಇರ್ಲಿ ಹೋಗು, ತುಂಟಮಗನೆ! ಚಾಡಿಷ್ಟು ಬ್ಯಾರೆ ಬೇಕು ನಿನಗ! (ವಸಂತನು ಹೋಗುತ್ತಾನೆ) ಸಿಟ್ಟಾಗಿ ಮಾಡಿಕೊಳ್ಳದೇ ಇದ್ರು, ಪ್ರೀತಿ

ಪೂಡ್ಸ್ಯಾರS ಮಾಡಿಕೋಬೇಕS, ಲಗ್ನಾ ? ಆ ಮ್ಯಾಲಾರS ಏನು ? ಗಂಡ, ಹೆಂಡತೀ ಮ್ಯಾಲ ಸಿಟ್ಟು– ಹೆಂಡತಿ, ಗಂಡನ ಮ್ಯಾಲ ಸಿಟ್ಟು ! ಇಸ್ಕೊ ಈ ವಸಂತನ ಮ್ಯಾಲ ಸಿಟ್ಟ್ಯಾಗೋದು ಬೇಕೂ ಅಂತ ಕಾಣ ತದ; ಅಂಗಡಿಗೆ ಹೋಗಿ ಹೇಳಿದಂಥ ಚಹಾ ಆರS ತಂದು ಕೊಟ್ಟ್ಯಾನು. ಹೆಂಡತಿ ಸಿಟ್ಟಿಗೆದ್ರ, ಮನ್ಯಾಗ ಚಹಾ ಮಾಡೋ ಹಂಗಿಲ್ಲ; ಅಂಗಡಿ ಯಿಂದ ತರಿಸಿದರ ಮತ್ತ ರಂಬಾಟ ! (ಕಾಲಕುಪ್ಪಸಗಳನ್ನು ತೆಗೆಯುತ್ತಿತ್ತಾನೆ. ಇಷ್ಟರಲ್ಲಿ ರಾಮಣ್ಣನು ಕುಂಟುತ್ತ ಓಡಿ ಬಂದು ಬಾಗಿಲಹತ್ತಿರ ಹಾಕಿದ್ದ ಬಾಕಿನ ಮೇಲೆ ಕುಳಿತುಕೊಳ್ಳುವನು.) ಇವ ಯಾರಪಾ ! ಕಾಲು ಮುರಿದ ರಾಮಣ್ಣಾ ! ಯಾರೊ ನೀನು ?

ರಾ––ನಾನು, ಹುಲಮನಿ ರಾಮಣ್ಣಾ, ಧಣೇರ ! ನನ್ನ ಗುರುತು ಮರ್ತಿ ರೇನು, ದೇವ್ರು !

ನಾ:—ನೀನS ? ಈಗ ಯಾಕಲಾ ಬಂದಿದ್ದು ? ಇತ್ತಿತ್ತಲಾಗ ಬಲು ಹಾರಾಡ ಲಿಕ್ಕ ಹತ್ತೀರಂತ, ನೀನು, ನಿನ್ನ ಹೆಂಡತಿ?

ರಾ:—ಹಾಂಗಲ್ಲ, ದೇವ್ರು ! ನಾ ಎಂದ ಹಾರ್ಯಾಡಿದ್ದು ? ಕಾಲು ಮುರಿದು ಕುಂಟತೇನಿ, ನಾ ನೋಳೇಮಗ !

ನಾ:—ನೀ ಇಲ್ಲ, ನಿನ್ನ ಹೆಂಡತಿ. ವಕೀಲರ ಕಡೆಗೆ ಹೋಗಿದ್ದಳಂತ? ಕಾಯದೇಸೀರ ಕೆಲಸಾ ನಡಸತೇನಂತ ಹೇಳತಿದ್ದಳಂತ ! ಅಬ್ಬಾ ! ಅಂದೆ ನಾನು! ಹೆಂಗಸಿಗೆ ಯಾಕಣಾ ಇಷ್ಟೊಂದು ಹಾರಾಟ ? ಖಟ್ಲೆ ಮಾಡು ಹೋಗು, ನನ್ನ ಮ್ಯಾಲ, ಅಂದರ ತಿರುಗಿ ಸಿಗತದ ನಿಮ್ಮ ಮನಿ !

ರಾ:—ಹಾಂಗೆಲ್ಲಾ ಆಂದು ಬದುಕೇನS ನಾ, ರಾಯ್ರು ! ನನ್ನ ಹೇಣ್ತಿ ಅಂದಿದ್ದಾಳು ಈ ಮಾತು ! ನಿಮ್ಮ ಹಿರೇರಿಗೆ ಮನಿ ಒತ್ತೀ ಹಾಕಿ ಸಾಲಾ ತಗದಾಗS ಮನಿ ಆಸೇ ಬಿಟ್ಟೆ. ಆ ಬಡ್ಡಿ, ಬಾಚೀ,–ಕೊಡೋದು ಆದೀತ್ರೆ ನನಗ ?

ನಾ:—ಈಗಾರ ಏನಾತು ? ಮತ್ತೊಮ್ಮೆ ಹೇಳ್ತೇನಿ ನೋಡು, ನಿನಗ. ಇಂಥಾ ನೂರು ಮನಿ, ನೂರು ಹೊಲ ಬಿದ್ದಾವ ನನ್ನ ಕಿಸೇದಾಗ,

ಏನಪಾ, ಅಂದ್ರು. ಹಿರೇರ ಮಾಡಿಟ್ಟ ಆಸ್ತಿ ಕಾಯಕೊಂಡು ಹೋದ್ರ ಸಾಕು ನನಗ. ಇಂಥಾ ಅಡ್ಡಗಾಲು ಹಾಕೋ ಮಸ್ತ ಮಂದೀನ ಬಲ್ಲೆ! ನಿನ್ನ ಮನಿ ಒತ್ತೀ ಬಿದ್ದು ಈಗ ೧೨ ವರ್ಷ ಆತು. ಸಾಲಾ, ಬಡ್ಡಿ ಕೂಡಿ ಮೂರು ಸಾವಿರಕ್ಕ ಬಂದು ಮುಟ್ಟೇದ. ಇನ್ನ ದಾವೆ ಮಾಡಹೋಗ..,ದಾವೆ! ಸಿಗತದ, ನಿನ್ನ ಮನಿ! (ಮೀಸಿಯಿಲ್ಲದ ಮೇಲಿನ ತುಟಿಯ ಮೇಲೆ ಕೈಯಿಳಿಯುತ್ತಾನೆ. ಬಾಗಿಲ ಹೊರಗೆ ಮರೆಗೆ ನಿಂತ ತುಳಸಿಯು ಮೆಲು ದನಿಯಿಂದ ಕರೆಯುತ್ತಾಳೆ)

ತು:—ಅಪ್ಪಾ! ನಡಿ, ಹೋಗೋಣಿನ್ನ!

ರಾ:—(ಗಡಿಬಿಡಿಯಿಂದೆದ್ದು) ಸೀ ಯಾಕ ನಡುವ ಬಾಯಿ ಹಾಕಿದಿ? ಮಾತಾಡ ಬ್ಯಾಡ ಅಂತ ಹೇಳಿದ್ದಿಲ್ಲ, ನಿನಗ? ತುಸು ತಡಿ ಒಂದೆ (ನಾರಾಯಣರಾಯನ ಕಡೆಗೆ ತಿರುಗಿ) ಇಲ್ಲಿ ನೋಡ್ರಿ— ಧಣೇರ!

ನಾ:—ಹೊರಗ ಯಾರನ ತರುಬಿ ನಿಂದ್ರಿಸೀಯಲೇ, ಹೆಡ್ಡ! ಅತಿಥಿ-ಸತ್ಕಾರ, ಏನು ಗೊತ್ತs ಇಲ್ಲ, ಈ ಜಾತಿಗೆ! ಕರಿ ಅವರ್ನ, ಒಳಗ! (ಎದ್ದು ಹೊರಡಲು............)

ರಾ:—ಕೂಡ್ರಿ! ಕೂಡ್ರಿ! ದೇವ್ರು! ಯಾರೂ ಇಲ್ಲ, ನನ್ನ ಮ............

ನಾ:—ಎಲೇ ಇವನ!

ರಾ:—ಹಾಂಗಲ್ಲ, ಕೂಡ್ರಿ ರಾಯರ! ಹೆಂಗಸೂರದೇನು, ಗಂಡಸೂರಾಗ!

ನಾ:—ಎಲೇ ಇವನ! ಮತ್ತು ತನ್ನ ಮಾತ! ಹೆಂಗಸೂರೇನು ಒಂಟಿ ಕಾಲ ಮ್ಯಾಲ ನಿಂದರಬೇಕೂ ಅಂತ ಹೇಳೇದೇನು ಶಾಸ್ತ್ರದಾಗ? ಏನು ಘೋಷಾ ಹಾಕ್ಯಾಳೊ ಈ ಪ್ರಾಣಿ? ಒಳಗ ಬಾರವಾ, ಕೂಡು! (ತುಳಸಿಯು ಮೈ ಮುದುಡಿಕೊಂಡು ಒಳಗೆ ಬಂದು ಕೂಡುತ್ತಾಳೆ. ನಾರಾಯಣರಾಯನು ಅವಳನ್ನು ದಿಟ್ಟಿಸುತ್ತಲೇ ಇರುತ್ತಾನೆ) ಹೂಂ! ಹೇಳಿನ್ನ, ಏನೋ ಹೇಳ್ತಿದ್ದೆಲ್ಲ?

ರಾ:—ನೀವs ಮಾತಾಡತಿದ್ರಿ, ರಾಯರ! ಮನಿ ಸಂಬಂದಿ ಬುದ್ದಿ ಕಲಿಸ ತಿದ್ರಿ.

(ಇಷ್ಟರಲ್ಲಿ ವಸಂತನು ಸರ್ವಿಸ್ ಟೀಯನ್ನು ಹೋಟೆಲ್ಲಿನಿಂದ ತೆಗೆದುಕೊಂಡು ಬರುತ್ತಾನೆ. ಕಫವು ಗಂಟಲದಲ್ಲಿ ಹೆಚ್ಚಾಗಿ ರಾಮಣ್ಣನಿಗೆ ಕೆಮ್ಮು ಬರುತ್ತಿರುತ್ತದೆ.)

ನಾ:—ತಂದ್ಯಾ, ವಸಂತ! ರಾಮಣ್ಣಾ, ನೀನೂ ಒಂದು ಕಪ್ಪು ಚಹ ತಗೊ. ದಮ್ಮಿಗೆ ಹಿತ ಇದು, ಏನಪಾ ಅಂದ್ರ! ನೀ ಚಹಾ ತಗೋತಿ ಹೌದಲ್ಲವಾ,....... ರಾಮಣ್ಣಾ! ಈ ಹೆಣ್ಣುಮಗಳ ಹೆಸರೇನು?

ರಾ:—ತುಳಸಿರಿ!

ನಾ:—ತುಳಸಕ್ಕಾ! ಚಹಾ ತಗೋ ನೀನೂ!

ತು:—(ನಾಚಿ) ನಾ ಒಲ್ರಿ!

ನಾ:—ಛೇ! ಒಲ್ಲೆ–ಗಿಲ್ಲೆ ಅನಬಾರದು. ನಿನ್ನ ಗಂಡ ತಂದು ಕೊಟ್ಟಷ್ಟು ನಾಚತೀಯಲ್ಲ? ವಸಂತಾ! ತೊಗೊಂಡು ಬಾ ಎರಡು ಕಪ್ಪು! (ವಸಂತನು ಒಳಗಿಂದ ಎರಡು ಕಪ್ಪು–ಬಸಿ ಜೋಡಿಯನ್ನು ತಂದು ಚಹವನ್ನು ಸುರುವಿ ಮೂವರಿಗೂ ಕೊಡುತ್ತಾನೆ. ತುಳಸಿಯೂ ತುಸು ಕುಡಿದ ಹಾಗೆ ಮಾಡಿ ಕಪ್ಪನ್ನು ಬದಿಗೆ ಸರಿಸುತ್ತಾಳೆ.) ಹೂಂ! ಕೇಳಪಾ ಇನ್ನು ಮನಿ ಸಂಬಂಧಿ! ಹೇಳಿದೆನಲ್ಲಾ ನಾನು,— ದಾವೇ ಮಾಡ್ರೀ ಅಂತ! ನಿನ್ನ ಕಿವ್ಯಾಗ ಏನ ಡಂಗುರಾ ಹೊಡೀಲ್ಯಾ ಇನ್ನ!

ರಾ:—ಹಾಂಗಲ್ಲ, ನೋಡ್ರಿ ರಾಯರ, ನನ್ನ ಹೇಣ್ತೀ ಮಾತು ನನ್ನ ಮ್ಯಾಲ ಯಾಕ ಹಾಕತೀರಿ? ಆಕೀ ಪಾಪ ಆಕೀ ಸುತ್ತ. ಆಕೀ ಸಂಬಂದ– ಸೂತ್ರ, ಎಲ್ಲಾ ಕಡಕೊಂಡ ಬಂದೇನಿ. ನನಗೇನು ಈ ಮನಿ ಬೇಕಾಗಿಲ್ಲ, ದೇವ್ರು! (ಕಫವು ಗಂಟಲದಲ್ಲಿ ಸಿಕ್ಕು ಕೆಮ್ಮುತ್ತಾನೆ) ಈ ಕಾಲ–ಹುಣ್ಣು ಮಾಯೋ ತನಕ ಈ ಊರಾಗ ಇರಬೇಕೂ ಅಂತೇನಿ. ಈ ಕೈಸಾಲಿ ಖೋಲೀ ಒಂದು ಕೊಡ್ರಿ.

ನಾ:—ಹೂಂ! ಹೌದಲಾ! ಎಳೀ ಸಿಕ್ಕಮ್ಯಾಲ ಹಚಡಾ ನುಂಗಬೇಕಂತ ಮಾಡೀಯೇನು! ಕೊಡೂದುಲ್ಲ, ಹೋಗು! ಕಾಯುದೇದ ಪ್ರಕಾರ ಆಗಲಿ ಏನಾಗತsದ!

ರಾ:—ಹೊಟ್ಟೀ ಮ್ಯಾಲ ಕಾಲು ಕೊಡಬ್ಯಾಡ್ರಿ, ರಾಯರ! ಬೆನ್ನಮ್ಯಾಲ ಕಾಲು ಕೊಡ್ರಿ! ನಾ ಬೇಡೋದು ಖೋಲಿ ಒಂದು! ನನ್ನ ಹುಣ್ಣು

ಮಾಯ್ದು ಮ್ಯಾಲ ಈ ಊರಾಗs ನಿಂದ್ರೂದುಲ್ಲ! (ಗೂರು ಹೆಚ್ಚಾಗಿ ಮಿತಿ ಮೀರಿ ಕೆಮ್ಮಹತ್ತುವನು)

ನಾ:—ಥೂ! ಸೂಳೇಮಗನ! ಈ ಮನಿ ಎಲ್ಲಾ ಹೊಲಸು ಮಾಡೀ! ನಡಿ ಹೊರಗ! ಅಂಗಳದಾಗ ಉಗುಳೀ ಮತ್ತ? ಮುಂಚ ಬಾಗಲದ ಹೊರಗ ಹೋಗು!

(ರಾಮಣ್ಣನು ಅತಿಪ್ರಯಾಸದಿಂದ ಎದ್ದು ಹೊರಡುತ್ತಾನೆ. ಹೋಗುವಾಗ ತನ್ನ ಕೈ ಹಿಡಿದು ಕರೆದೊಯ್ಯಲೆಂದು ತುಳಸಿಗೆ ಸನ್ನೆಮಾಡುತ್ತಾನೆ. ಹೊರಡಲನುವಾಗುವಂತೆ ಸರಿದಾಡಿ ತುಳಸಿಯು ಮತ್ತೆ ಕುಳಿತಲ್ಲಿಯೇ ಕುಳಿತುಕೊಳ್ಳುತ್ತಾಳೆ.)

ನಾ:—(ಮಿನುಗುನಗೆಯಿಂದ ತುಳಸಿಯ ಕಡೆಗೆ ನೋಡುತ್ತ) ನೀ ಯಾರ, ಹೂಪಿಸ ಜಾಣೆ!

ತು:—(ತುರುಬಿನ ಮೇಲೆ ಕೈಯಾಡಿಸಿಕೊಂಡು, ಬಿಗುವಿನಿಂದ) ಯಾಕ, ಸಾವೇರು, ನನ್ನ ತುರುಬಿನ ಮ್ಯಾಲ ಹರಿ ಹಾಯೋದು? ನಾ ಹೂವು ಸಿಗಿಸಿಕೊಂಡ್ರ ನಿಮ್ಮ ಕಣ್ಣ್ಯಾಕ ಅದರ ಮ್ಯಾಲ?

ನಾ:—ಓಹೋ! ಇಷ್ಟು ಬಿಗುವು ಬಂದದೇನು ಈಗಾಗಲೆ? (ಬಗ್ಗಿ ನಿಂತು ತಿಳಿಸಿಹೇಳುವವರಂತೆ ಕೈ ಮುಂದೆ ಮಾಡಿ) ನೀನಾರು ನಾಗವೇಣಿ, ಸಕಲ ಕಲಾ ಪ್ರವೀಣೆ!

ತು:—(ಮೂಗು ಮುರಿದು) ಅವ್ವ! ಇದೇನು ಕಂಪನೀ ಆಡೋ ನಾಟಕಾ ಅಂತ ತಿಳದದೇನs ಈ ಮಂಗ!

ನಾ:—(ನಕ್ಕು) ಇದೂ ಅಲ್ಲೇನು? ಹೋಗಲಿ ಬಿಡು. (ಬೇರೆ ಧ್ವನಿಯಲ್ಲಿ) ನೀ ಯಾರವಾ ತಂಗಿ!

ತು:—ಹೂಂ! ಹೀಂಗ ಕೇಳ್ರಿ! ಹೇಳತೇನಿ. ನಾ ರಾಮಣ್ಣನ ಮಗಳು....

ನಾ:—ತುಳಸಿ, ಅಲ್ಲs ನಿನ್ನ ಹೆಸರು?

ತು:—ಹೂಂ! ಯಾಕ, ಹೆಸರು ದೆಶಿ ವಿಚಾರ ರಾಯರಿಗೆ?

ನಾ:—ತುಳಸಿ! ತುಳಸಿ! ಭಲೆ! ಏನು ಹೆಸರು ನಿಂದು! ಮಲ ಮಲ ಅಂತೀ ನೋಡು ಚಿಗತ ಬಳ್ಳೀ ಹಂಗ!

ತು:—(ಓರೆಗಣ್ಣಿನಿಂದ ನಕ್ಕು) ಉಂ! ತಾವು, ಧಣೇರು! ಸಾಗವಾನಿ ಮರದ್ಹಂಗ ಬೆಳದೀರಿ, ಅಡಮುಟ್ಟ್ಯಾಗಿ!

ನಾ:—ಹೂಂ! ವರ್ಣನಾ ಬೇರೆ! ನೀ ಯಾಕ ಬಂದಿ, ತುಳಸಿ! ಸಿಮ್ಮಪ್ಪನ ಸಂಗತಿಲೆ?

ತು:—ಮನಿ ಕೇಳಲಿಕ್ಕೆ.

ನಾ:—ವಾರೆವಾ! ನಾ ಮನಿ ತುಂಬಿಸಿಗೊಳ್ಳಲಿಕ್ಕೆ ಕಬೂಲಿದ್ರ ಮನಿ ಕೇಳಲಿಕ್ಕೆ ನಿನಗ ಬಾಯಿ! ಏನು ಒತ್ತೀ ಹಾಕಿದ್ದು ತಿರುಗಿ ಬಿಡ್ರಿ ಅಂತ ಬೇಡತಿಯೋ?

ತು:—ಒತ್ತೀ-ಗಿತ್ತಿ ನಮಗೆಲ್ಲ ಗೊತ್ತಿಲ್ಲ, ರಾಯರ! ಆ ಹಿಕಮತ್ತ ನಿಮಗs ಕೊಟ್ಟ್ಯಾನ ದೇವ್ರು!

(ಅಷ್ಟರಲ್ಲಿ ರಾಮಣ್ಣನು ಸಂಶಯದಿಂದ ಎರಡೂ ಕಡೆಗೆ ನೋಡುತ್ತ ಬರುವನು)

ನಾ:—ಇಲ್ಲಿ ಬಾ, ರಾಮಣ್ಣಾ, ಕೂಡು. ದೇವರು ನನಗೂ ತುಸು ದಯಾ ಮಾಯಾ ಕೊಟ್ಟ್ಯಾನ, ಏನಪಾ ಅಂದ್ರ. ಈ ಕೈಸಾಲಿ ಖೋಲಿ ಬೇಕಂದೆಲ್ಲಾ? ತಗೊ. ಹದಿನೈದು ದಿವಸ್ಯಾಕ, ಒಂದು ತಿಂಗಳು ಇರು ಹೋಗಲಿ. ನಿನ್ನ ಹುಣ್ಣ-ಗಿಣ್ಣ ನೆಟ್ಟಗ ಮಾಡಿಕೊಂಡು ಹೋಗು. ಕೆಮ್ಮ ಉಗುಳಿ ಅಂಗಳಾ ಹೊಲಸು ಮಾಡೀ ಮತ್ತ! ಫಿನಾಯಿಲ್ ಹಾಕಿ ತೊಳಸಿಲಿಕ್ಕೆ ರೊಕ್ಕಾ ಕೊಡಬೇಕಾದೀತು ನೀನs! ಮಾಳಿಗಿ ಮ್ಯಾಲ ತುಸು ಹುಲ್ಲು-ಪಲ್ಲು ಬೆಳೀಲಿಕ್ಕೆ ಹತ್ತೇದ. ನಿಚ್ಚಣಿಕೆ ಏರಿ ಕಳೀ ತಗಿ ಅಂದ್ರ, ತೀರ್ತು! ಬಡವರ್ನ ನೋಡಕೊಳ್ಳದೇ ಇದ್ದ ಜನಕ ಕೋತೀ ಬಾಲ ಯಾಕಿಲ್ಲಾ ಅಂದ್ರಂತ! ನಾ ಹಾಂಗಲ್ಲ, ಏನಪಾ ಅಂದ್ರ!

ರಾ:—ಅಲ್ಲ ರಾಯರ, ಮತ್ತ....

ನಾ:—ಥೂ ನಿನ! ಇಂಥಾ ಹೊತ್ತಿನ್ಯಾಗ ನಡುವ ಬಾಯಿ ಹಾಕಬಾರದು! ಮತ್ತ ನನ ಮನಸು ತಿರುಗೀತು! ನಡಿ ಇನ್ನ! ಕಸ-ಗಿಸ ಹೊಡಕೊ!

ಖೋಲೀದು ! ಇಲ್ಲಿಷ್ಟು ಸಗಣಿ ಅದ. ಹಸನಾಗಿ ಸಾರಿಸಿಕೊ. ಹೂಂ ! ನಡಿಯಿನ್ನು ! ನಡಿ !

(ರಾಮಣ್ಣನು ಹೊರಡುತ್ತಾನೆ. ತುಳಸಿಯು ಅವನನ್ನು ಹಿಂಬಾಲಿಸುತ್ತಾಳೆ. ನಾರಾಯಣ ರಾಯನು ನಗೆಮೊಗದಿಂದ ಅವರನ್ನೇ ನೋಡುತ್ತ ನಿಲ್ಲುತ್ತಾನೆ.)

(ತೆರೆಯು ಬೀಳುವದು.)

ಪ್ರವೇಶ ೩

[ನಾರಾಯಣರಾಯನ ಡ್ರಾಯಿಂಗ್ ರೂಮಿನ ಎದುರಿಗಿನ ಮನೆಯಂಗಳ. ತೆರೆಯ ಎಡಕ್ಕಿರುವ ಬಾಗಿಲೇ ಕೈಸಾಲೆಯ ಖೋಲಿಯ ಬಾಗಿಲು. ಒಳಗೆ ಒಂದು ಕೈಚಿಮಣಿಯು ಬೆಳಕಿಗಿಂತ ಹೊಗೆಯನ್ನು ಹೆಚ್ಚಾಗಿ ಬೀರುತ್ತಲಿದೆ. ರಾಮಣ್ಣನು ನರಳುತ್ತ ಮಲಗಿದ್ದಾನೆ. ಬಾಗಿಲದಲ್ಲಿ ತುಸುಮುಂದಕ್ಕೆ ತುಳಸಿಯು ವಿಚಾರಪರಳಾಗಿ ಕುಳಿತಿದ್ದಾಳೆ. ಡ್ರಾಯಿಂಗ್ ರೂಮಿನ ಎರಡೂ ಬಾಗಿಲುಗಳು ಇಕ್ಕಿಕೊಂಡಿವೆ.]

ರಾ:—(ನರಳುತ್ತ)ಅವ್ವಾ ! ಹಯ್ಯೊ ! ಕಾಲೆಲ್ಲ ಎಳೀತದ, ತುಳಸಕ್ಕ ! ಜೈನಿಲ್ಲ ಮುಯ್ಯಾಗ ! ಎಂಥ ಬಾಳೇವೋ ಏನೊ! ದೇವರು ಹುಟ್ಟಿಸಿದ, ನಾವು ಹುಟ್ಟಿದಿವಿ. ಈಗ ಅನುಬೋಗಸಂತಾನು, ಅನುಬೋಗಸ್ತೇವಿ. ಮೈಯ್ಯಾಗ ಎಣ್ಣಿದ್ದಾಗ ನೆಲಾ ಕೆಳಗ ಮೇಲ ಮಾಡಿ ಬಿಡತಿದ್ದೆ ಎರಡು ದಿವಸದಾಗ ! ಈಗ ! ಅಯ್ಯೊ ! ಕಾಲು ಸೇದತದ ! ಸೇದತದ ! ದೇಶಾಂತರ ಹೋಗಿ ಬಂದೆ ನಿಮ್ಮಪ್ಪನ ಕಾಲಾಗ: ಕಾಶಿ ಆತು. ಪರಯಾಗ ಆತು. ಹುಣ್ಣಿ-ಹುಣ್ಣಿ-ಮುಂಡ್ಯಾಗ-ಉಳಕೊಂಡತೂ, ಉಳಕೊಂಡತು !........ ಇಲ್ಲಿ ತುಸು ಬಾ, ತುಳಸಕ್ಕಾ !

ತು:—(ಹತ್ತಿರ ಹೋಗಿ) ಅಪ್ಪಾ, ಯಾಕ ?

ರಾ:—ಆಗಲೆ ಆ ಪ್ಯಾರಲ ಹಣ್ಣು ಕೊಟ್ಟೆಲ್ಲಾ, ತುಳಸಿ, ಎಲ್ಲಿಂದ ತಂದಿ ಅದನ್ನ ?

ತು:—ಎಲ್ಲಿಂದಾರ ತರ್ಲಿ, ನಿನಗ ಹೊಟ್ಟೆಗೆ ಹಿತಃ ಆತೊ ಇಲ್ಲೊ ?

ರಾ:—ಆತವ್ವಾ, ಆತು ! ಯಾರು ಕೊಟ್ಟರು ಅದನ್ನು ನಿನಗ ?

ತು:—ಯಾರಿಲ್ಲೇಳು. ಇಲ್ಲೆ ಧಣೇರು ಕೊಟ್ಟರು.

ರಾ:—ನಾರಪ್ಪನ?

ತು:—ಹೂಂ.

ರಾ:—ಅದಕs ಅಂದೆ. ಒಂದು ಮಾತು ಹೇಳತೇನಿ ನೋಡು, ತುಳಸಿ, ನಿನಗs. ಸೆರಗಿನಾಗ ಗಂಟು ಹಕ್ಕೊ. ಹೆಣ್ಣುಮಗಳ ಮಾರಿ—ಮೂಗು ತುಸು ನಿಮಳ ಇದ್ರ ತೀರ್ತು. ಜನ ಆಕಿನ್ನ ಸುಮ್ಮನ ಇರಗೊಡೂದುಲ್ಲ. ನಾರಪ್ಪನ ಕಣ್ಣಂದ್ರ ಹದ್ದಿನ ಕಣ್ಣು. ಎಚ್ಚರಿರು. ನಿಮ್ಮ ವ್ವಸs ಆಗಲಿಲ್ಲs ರಂಡಿಮುಂಡಿ, ನಾ ಇರಲಾಕೂನೂ? ಇಕಾ! ಇಲ್ಲಿ ನೋಡು! ಮುತ್ತಿನಂಥ ವರಾ ನೋಡಿ ಮದುವಿ ಮಾಡತೇನಿ ನಿನಗ. ಗರತೀ ಹಂಗ ಬಾಳೇವು ಮಾಡು. (ಕಣ್ಣೀರಿಡುವನು)

ತು:—ಮಲಕೋಳಪಾ, ನಿದ್ದೀ ಮಾಡು! ಸಂಸಾರದ ಚಿಂತೇನು, ಅದs ಅದ. ಯಾರ ಬಾಸಿಂಗಬಲ ಯಾರು ಬಲ್ಲರು! ನಿನ್ನ ಹುಣ್ಣು ನೆಟ್ಟಗಾಗಲಿ. ಆ ಮ್ಯಾಲ ನನಗ ತಾಳಿಮಣಿ ಕಟ್ಟುವಂತಿ. ಇನ್ನೀಸು ಪ್ಯಾರಲಹಣ್ಣು ಕೊಡಲೇನು? ಇಲ್ಲೆ ಬುಟ್ಯಾಗ ಅವs?

ರಾ:—ಊಂಹೂಂ! ಮಲಕೋತೇನಿ ಇನ್ನ. ಕಣ್ಣು ಮುಚ್ಚತೇನಿ ಹಾಂಗ.... ಅsವ್ವಾ! ಆ ದೀಪ ದೊಡ್ಡದು ಮಾಡು, ತುಳಸಕ್ಕಾ. ಮಲಕೋ ಇನ್ನ ನೀನೂ.

(ತುಳಸಿಯು ಕೈಚಿಮಣಿಯನ್ನು ಆರಿಸಿ ಹೋಗಿ ತನ್ನ ಹಾಸಿಗೆಯ ಮೇಲೆ ಒರಗುತ್ತಾಳೆ. ರಾಮಣ್ಣನಿಗೆ ತುಸು ಜಂಪುಹತ್ತಲು ಮೆಲ್ಲನೆ ಸರಿದು ಬಾಗಿಲಿನ ಹತ್ತಿರ ಕುಳ್ಳಿರುತ್ತಾಳೆ. ತುಸು ಹೊತ್ತಿನ ಮೇಲೆ ಡ್ರಾಯಿಂಗ್ ರೂಮಿನ ಎರಡೂ ಬಾಗಿಲು ತೆರೆಯುವವು. ನಾರಾಯಣನು ಬಾಗಿಲಲ್ಲಿ ನಿಂತು ತುಳಸಿಯು ಕುಳಿತ ಕಡೆಗೆ ದಿಟ್ಟಿಸಿ ನೋಡಿ ಸನ್ನೆ ಮಾಡುವನು.)

ತು:—(ಮೆಲುದನಿಯಲ್ಲಿ) ಬರಲ್ಯಾ?

ನಾ:—ಹೂಂ.

ತು:—(ಹತ್ತಿರ ಹೋಗಿ, ಮೆಲುನಗೆಯಿಂದ) ಯಾಕ, ನನ್ನ ಯಾಕ ಕರದರು ಧಣೇರು?

ನಾ:—(ನಕ್ಕು) ಯಾಕೂ ಇಲ್ಲ. ನನ್ನ ಮನಿ ತೋರಿಸತೇನಿ ಹ್ಯಾಂಗದ!

ಇಲ್ಲಿ ನೋಡು ! ನಾಕೂ ಗೋಡೀ ಮ್ಯಾಲ ಫೋಟೋ ಹಾಕ್ಯಾವ ಸಾಲಕ ! ಬಣಗಾರು ಬರದ ಚಿತ್ರ ಅಲ್ಲ ಮತ್ತ, ಇವು ! ಇದ್ದ ಮಸ-ಸೇರ ಫೋಟೋ ಇವು ! ಯಂತರಲೆ ತಗದಿದ್ದವು !

(ನಾರಾಯಣನು ಮೆಲ್ಲನೆ ತುಳಸಿಯ ಕೈಹಿಡಿಯಲು ಪ್ರಯತ್ನಿಸುತ್ತಾನೆ.)

ತು:—(ತುಸು ನಾಚಿಕೆಯಿಂದ ಕೈಗೊಡುತ್ತ) ಪಿಶ್ಶ್ಯಾ ! ನನಗ ಇಷ್ಟು ಗೊತ್ತಿಲ್ಲಂತ ತಿಳಿದಿರಾ ! ಹಳ್ಳೀ ಹುಡುಗಿನ್ನ ಮಾಡಿದಿರೇನು ನನ್ನ ! (ನಗುತ್ತಾಳೆ)

ನಾ:—ನೀ ಯಾಕ ಹಳ್ಳೀ ಹುಡಿಗಿ ಆದೀಯು ! ಒಳ್ಳೇ ಹುಡುಗಿ ನೀನು ! ಇಲ್ಲಿ ನೋಡು ! ಇದು ನಾ ಟೇನಿಸ್ ಆಡಿದ ಫೋಟೋ ! ಹ್ಯಾಂಗ ನಿಂತೇನಿ, ನೋಡು ರ್‍ಯಾಕೆಟ್ಟು ಹಿಡಕೊಂಡು ! ಹೋದ ವರ್ಷ ಚ್ಯಾಂಪಿಯನ್ ಆಗಿದ್ದೆ ನಾನು, ಚ್ಯಾಂಪಿಯನ್ !

ತು:—ಹಾಗಂದರೇನು ? ಇಂಗ್ಲಿಸು ಕಲಿಯೋದರ ಪೈಕಿ ಏನು ಅದೂS ?

ನಾ:—ಅಲ್ಲದ, ಮತ್ತS ? ಝೂರಿ ಸವಟು ಅಂತ ತಿಳದೇನೂ ಅದು ? ಇದು ನೋಡು ! ಪಂಚಮಜಾರ್ಜರ ಫೋಟೊ ! ಪಂಚಮಜಾರ್ಜ !

ತು:—ಅಯ್ಯ ! ಹಾರೂರ ಮನ್ಯಾಗ್ಯಾಕ ಪಂಚಮರ ಫೋಟೋ ? ಮುಟ್ಟ ಗೊಂಡಾರS ಮನ್ಯಾಗಿನ ಹೆಂಗಸೂರು ?

ನಾ!—ಛೇ ! ಮಳ್ಳಿ ! ಥೂಸಿಗೋ ಅನ್ನು ! ಇದು ರಾಜರ ಫೋಟೋ, ರಾಜರದು ! 'ರಾಜಾ ಪ್ರತ್ಯಕ್ಷ 'ದೇವತಾ ! '

ತು:—ಅಯ್ಯ,! ನಸ ಶಿವನ ! ಮಂತ್ರ ಬ್ಯಾರೆ ಹೇಳತೀರಲ್ಲ ನೀವು ಮ್ಯಾಲ ಗೀಲೆ?

ನಾ:—ಹಾ ! ಹಾ! ಹಾ! ಮಂತ್ರ ಅಂತ ತಿಳದೇನು ನಾ ಹೇಳಿದ್ದು? ಹಃ ಹಃ ಹಃ! ನಾವೊಂದು ನಾಟಕಾ ಆಡಿದ್ದೆವು; ಆ ನಾಟಕದಾಗಿನ ಗಾದೀ ಮಾತದು ! ಇಲ್ಲಿ ನೋಡು. ಕೃಷ್ಣನ ಫೋಟೊ ! ಇದು ಕೃಷ್ಣ ಅಂತ ತಿಳದೀ ಮತ್ತ ! ಇದು ನನ್ನ ಫೋಟೋ ! ನಾನS ಕೃಷ್ಣಾಗಿದ್ದೆ ನಾಟಕದಾಗ; ಏನು ಮೋಜು ಆಗಿತ್ತSಂದಿ ಅವತ್ತ ! ಕೌರವ–ಪಾಂಡವರ ಕಥಿ ಕೂಡಿಸಿದ್ದವಿ; ಧರ್ಮರಾಜ, ಭೀಮಸೇನ, ಅರ್ಜುನ

ಎಲ್ಲಾರು ಹೋಗಿರತಾರ ದುರ್ಯೋಧನನ ಸಭಾಕ, ಸಂಧೀ ಮಾಡ ಲಿಕ್ಕೆ; ಆಗ ಮನ್ಯಾಗ ದ್ರೌಪದೀ ಕೂಸು, 'ಅಪ್ಪಾ!' ಅಂತ ಅಳಲಿಕ್ಕೆ ಹತ್ತದ! ಆಕಿ ಎಷ್ಟು ರಮಿಸಿದರೂ ಎಲ್ಲೆಲ್ಲು ನಿಂದ್ರೂದುಲ್ಲ! ಆಗ ಬರತದ ನೋಡು ನನ್ನ ಪಾರ್ಟು! ಅಳೋ ಕೂಸಿನ್ನ ಕರಕೊಂಡು ಅರ್ಜುನನ ಕಡಿಗೆ ಕಳಿಸಬೇಕೂ ಅಂತ ಕೃಷ್ಣ ಹೊರಡತಾನ ಆಗ ಸಭಾಕ! ಅಂದ್ರ ನಾನs ಹೊರಡತೇನಿ, ನಾನು! ಗೊತ್ತಾತs?

ತು:—ಎಲ್ಲಾ ಗೊತ್ತದ ಬಿಡ್ರಿ!

ನಾ:—ಏನು ಹೇಳಲಂದಿ ಅದರ ಮೋಜು! ಹದಿನೈದು ದಿವಸ ರಾತ್ರೆಲ್ಲಾ ರಂಗತಾಲೀಮು ಆಡಿ ನಿದ್ದಿಗೆಟ್ಟಿತ್ತು ನಮ್ಮ ಜನ! ಸ್ಟೇಜಿನ ಮ್ಯಾಲ ಹೀಂಗ ಕೌರವರು ಕೂತಿದ್ರು, ಹೀಂಗ ಪಾಂಡವರು ಕೂತಿದ್ರು. ಸಂಧೀ ಮಾಡೋದು ಬಿಟ್ಟು ತೂಕಡಿಸಲಿಕ್ಕೆ ಹತ್ತಿಬಿಟ್ರು! ಹೌದs ಗ ದುಃಶ್ಯಾಸನನ ತೊಡೀ ಮ್ಯಾಲ ಉಳ್ಳಿದನs ದುರ್ಯೋಧನ! ಆ ಶಕುನಿ ಮಾಮಾ?– ಆ ನಮ್ಮ ಗೋದೀ ವೆಂಕ್ಯಾ?– ಜಾಗರಣೆ ಮಾಡಲಿಕ್ಕೆ ಹಿರಿದಲ್ಲs ಅವ?– ಕೂತಲ್ಲೆ ಝೋಲೀ ಹೊಡಿಲಿಕ್ಕೆ ಹತ್ತಿದ ಸೆರೆ ಗುಡಕರ್ಹಂಗ!

ತು:—'ಪಾಪ! ನಿದ್ದಿಗೆಟ್ಟು ದಣಿದಿದ್ದರು' ಅಂದಿದ್ದಾರು ಜನ! ಇದಕ್ಕೆಷ್ಟು ಏನಂದಾರು?

ನಾ:—ಶಾಹಣೇಕಿ ಕಾಣತಿದಿ ಎಲ್ಯಾರ? ತಿಕೀಟು ತಗೊಂಡು ಬಂದಿರತಾರ ವರು, ನಿದ್ದಿಗೆಟ್ಟು; ಏನು ಮಂದಿ ಗೊರಕೀ ಹೊಡಿಯೋದು ನೋಡ ಲಿಕ್ಕೆ ಬರತಾರೇನು ನಾಟಕಕ್ಕ? ಮುಂದ ಹೇಳ್ತೇನಿ ಕೇಳು: ಆಗ ಬಂತು ನನ್ನ ಪಾರ್ಟು; ನಾ ಕೃಷ್ಣ ಆದವ ಹೋಗಿ ನೋಡ ತೇನಿ, ಹುಚ್ಚ ಮಂಗ ಆದೆ, ಹುಚ್ಚ ಮಂಗ! ತಲಿ ಒಡಕೊಂಡು ಸಂಧೀ ಮಾಡೋದು ಬಿಟ್ಟು ತಲಿಗೆ ತಲಿ ಒಡಕೊಂಡು ನಂದ್ಯಾಗ ಬಿದ್ದಾರ ನನ ಮಕ್ಕಳು! ಹೋಗಿ ಮಂದಿಗೆ ಕಾಣದ್ಹಂಗ ಝಾಡಿಸಿ ಒದ್ದೆ ಶಕುನಿಗೆ! ಕುಂಯ್ಯುಗುಡುಗೋತ ಎದ್ದ ನೋಡು ಹಾಂಗ!

ತು:— ಹೂಂ! ಆಗಿದ್ದೀತು! ಸ್ವಲ್ಪ ಹೊಡಿಯೋದು ಬಡಿಯೋದು ಜಾಸ್ತಿ ಕಾಣತದ ನಿಮ್ಮಲ್ಲೆ?

ನಾ:—ಮತ್ತೇನು ಮಾಡಬೇಕಿತ್ತು ಹೇಳು ಆವಾಗ? ಗೋದೀ ವೆಂಕ್ಯಾನು ಬಲು ಹುಷಾರಿ, ನೋಡು! ಎಚ್ಚರಾದ ಕ್ಷಣಕ "ಎಲ್ಲಾರಿಗೂ ಸಿದ್ಧಿ ಹತ್ತೇದಽ, ಘಾತಾತು" ಅಂತ ಅನಿಸಿತು ಅವಗ. "ಮಹಾರಾಜ! ಯಾದವೇಶ್ವರನು ಆಗಮಿಸಿದ್ದಾನೆ. ಇನ್ನು ವಿಶ್ರಾಂತಿ ಸಾಕು. ಸಂಧಿಯ ಮಾತನ್ನು ಚಿತ್ತೈಸಬೇಕು" ಅಂತ ಜಂತಿ ಹಾರೋ ಹಂಗ ಕೂಗಿಕೊಂಡ! ಒಬ್ಬೊಬ್ಬರಽ ಕಣ್ಣು ತಗದರು ನೋಡು ಭೂಪತಿಗೋಳು! "ಅಪ್ಪಾ! ಅಪ್ಪಾ!" ಅಂತ ಒದರಲಿಕ್ಕೆ ಹತ್ತಿತ್ತು ಕೂಸು! ಆಗ ಎಚ್ಚರಿಕೆ ಪಾಂಡವರಿಗೆ!

ತು:—(ನಗುತ್ತ) ಮುಂದೇನಾತು, ಹೇಳ್ರಿ?

ನಾ:—ಮುಂದೇನು ನಾಟಕ ಸಾಗಿತು ಮತ್ತ! ಸಿದ್ದೀನು ಪಾರ್ಟಿನ ಪೈಕೀ ಅಂತ ತಿಳೀತು ಜನ ಎಲ್ಲಾ! (ನಗುತ್ತ ತುಳಸಿಯ ಗಲ್ಲವನ್ನು ಚಿವುಟಲು ಹೋಗುವನು)

ತು:—(ತುಸು ಸಿಟ್ಟಿನಿಂದ) ನಾ ಒಲ್ಲೇ ಅಂದ್ರ! ನೀವೆಲ್ಲಾ ಹೀಂಗ ಮಾಡಬ್ಯಾಡ್ರಿ!

ನಾ:—ಇನ್ನೂ ನೋಡಿಲ್ಲ ತುಳಸಿ ನೀನು, ಆ ಒಳಗಿನ ಖೋಲೀನ! ಇಲ್ಲಿ ಬಾ, ನಾ ತಗದದ್ದು ಚಿತ್ರಾ ತೋರಸತೇನಿ!

ತು:—(ಮೆಲ್ಲನೆ ಕೈಕೊಸರಿಕೊಂಡು) ಈ ಸಣ್ಣ ಕೂಸಿನ ಚಿತ್ರ ಯಾರದು, ನಾರಣ್ಣಾ?

ನಾ:—ನಂದಽನಽ ಅದೂ, ಹುಡುಗಿ! ಎಷ್ಟಂತ ಹೇಳಬೇಕು ನಿನಗ! ನಾ ಕೂಸಿದ್ದಾಗಿಂದು! (ಒಮ್ಮೆಲೆ ತೀಕ್ಷ್ಣ ದೃಷ್ಟಿಯಿಂದ ನೋಡಿ ಎದುರಿಗೆ ಹೋಗಿನಿಂತು) ಅದಿರಲಿ, ನೀ 'ನಾರಣ್ಣಾ' ಅಂತ ಯಾಕ ನನಗ ಕರದಿದ್ದು? ಮೊದಲು ದ್ಯಾವ್ರು, ಆ ಮ್ಯಾಲ ರಾಯ್ರು, ಈಗ ನಾರಣ್ಣಾ! 'ನಾರಣ್ಣಾ' ಅಂತ ಯಾಕ ಕರದೀ! (ಒದರುವನು)

ತು:—(ಅಟ್ಟಹಾಸದಿಂದ ನಕ್ಕು) ಬಲೇ ಪ್ರಶ್ನಿ ರಾಯರದು! (ಅದೇ ದನಿಯಲ್ಲಿ) ನೀವು ಒಳಗ್ಯಾಕ ನನಗ ಕರದಿದ್ದು? ಮೊದಲು ಮನಿ ಬಿಟ್ಟು ಹೊರಗ, ಆ ಮ್ಯಾಲ ಪಡಸಾಲಿ ಖೋಲ್ಯಾಗ, ಈಗ ಇಲ್ಲಿ ನಡುಮನ್ಯಾಗ,- ನೀವು ಒಳಗ್ಯಾಕ ಕರದಿರಿ ನನ್ನ (ನಗುವಳು)

[ತೆರೆಯು ಬೀಳುವದು]

ಪ್ರವೇಶ ೪

(ಹಿಂದಿನ ಪ್ರವೇಶವು ಸಂಘಟಿಸಿ ಸುಮಾರು ನಾಲ್ಕು ದಿನಗಳಾದ ಮೇಲೆ. ಸಮಯ ಮಧ್ಯ ರಾತ್ರಿಯ ಸುಮಾರು. ಕೈಸಾಲೆಯ ಕೋಣೆಯಲ್ಲಿ ಹಾಸಿಗೆಯ ಮೇಲೆ ನರಳುತ್ತ ರಾಮಣ್ಣನು ಎದ್ದು ಕುಳಿತಿದ್ದಾನೆ. ಡ್ರಾಯಿಂಗ್ ರೂಮಿನ ಕಡೆಗೆ ನೋಡುವನು. ಬಾಗಿಲುಗಳು ಹಾಗೆಯೇ ತುಸು ಮುಂದಕ್ಕೆ ಮಾಡಿದ್ದವಿದ್ದು ಒಳಗಿಂದ ಮಂದವಾಗಿ ಉರಿಯುತ್ತಿರುವ ಒಂದು ದೀಪದ ಬೆಳಕು ಹೊರಚೆಲ್ಲುತ್ತಿರುತ್ತದೆ.)

ರಾ:—ಮಿಂಡಿ! ಮಿಂಡಿ! ಮಿಂಡಿ! ನನ್ನ ಹೇಣ್ತಿ ಆ ಅಕ್ಷರ ನುಡಿದಾಗ ಕಿವ್ಯಾಗ ವಿಷಾನs ಹಿಂಡಿದಲೇನೋ ಅಂತೇನಿ. ಹಗಲು-ರಾತ್ರಿ, ಚಕ್ರ ತಿರುಗಿದ್ಹಂಗ ತಿರುಗತದ ತಲ್ಯಾಗ. ಆದರ ಮ್ಯಾಲ ಈ ಮಂಡಿ ಹುಣ್ಣು ಮಿಂಡಿ-ಹುಣ್ಣು-ಮಂಡಿ-ಹುಣ್ಣು .... ಸಿವನೇ! (ಅಳುತ್ತ) ಯಾಕ ಬಡಕಿಸದಿ! ಯಾಕ ಬದಕಿಸಿದಿ!....... ತುಳಸಕ್ಕಾ! ನೀರೀಸು ಕೊಡು! ಬಾಯಿ ಮುಕ್ಕಳಿಸತೇನಿ!.......ಎಲಾ, ಇವನ! ಓನs! ಕೊಡುವಳ್ಳಲ್ಲೊ! ಘನ ನಿದ್ದಿ ಈ ಹೆಣ್ಣು ಜಾತಿಗೆ!(ತುಳಸಿಯ ಹಾಸಿಗೆಯ ಕಡೆಗೆ ಕೈನೀಡಿ ಎಬ್ಬಿಸಲು ಪ್ರಯತ್ನಿಸುವನು. ಅವಳು ಅಲ್ಲಿ ಇಲ್ಲದಿರುವದನ್ನು ನೋಡಿ ಎದೆಯು ಧಸಕ್ಕೆನ್ನುವದು.) ತುಳಸಿ! ತುಳಸಿ! ಎಲ್ಲಿ ಹೋದಿ! ಏ! ಬೇಬರಸಿ! ತುಳಸಿ! (ಡ್ರಾಯಿಂಗ್ ರೂಮಿನ ಕಡೆಗೆ ಹೊರಳಿ ನೋಡಿ) ನನ್ನ ಮಗಳು-ಮಸಕ ಬಂದ ಸಂಶಯಾನs ಖರೆ ಇದ್ರ...ನಾ ಯಾಕ ಇಲ್ಲಿದ್ದೇನು! [ಎದ್ದು ಕುಂಟುತ್ತ ಡ್ರಾಯಿಂಗ್ ರೂಮಿನ ಕಡೆಗೆ ಸಾಗುವನು. ಮುಂದಕ್ಕೆ ಮಾಡಿದ ಬಾಗಿಲನ್ನು ತೆರೆದು ಒಳಗೆ ಇಣಿಕಿನೋಡಿ ಸಿಡಿಲುಬಡಿದವನಂತೆ ಹಿಂತಿರುಗುವನು. ಹಾವು ಕಚ್ಚಿದವರಂತೆ ಅವನ ಮೋರೆಯು ಹುಚ್ಚಿಟ್ಟಿರುವದು] (ಝೋಲಿ ಹೊಡೆಯುತ್ತ) ಆ....ಯ್ಯೋ! ನನ್ನ ಮಗಳು! ಮಿಂ....ಡಿ! ಮಿಂಡಿ! (ನಿಶ್ಚೇಷ್ಟಿತನಾಗಿ ನೆಲಕ್ಕೆ ಬೀಳುವನು)

[ಒಳಗಿನಿಂದ ನಾರಾಯಣರಾಯರೂ ತುಳಸಿಯೂ ಗಾಬರಿಯಾಗಿ ಬರುವರು.]

ನಾ:—(ಹೆದರಿಕೆಯಿಂದ) ಸತ್ತ, ನಿಮ್ಮಪ್ಪ ಸತ್ತುಹೋದ, ತುಳಸಿ!

ತು:—(ಗಂಭೀರಳಾಗಿ ವಿಚಾರಿಸುತ್ತ) ಸಾಯುಲಿ, ಸಾಯುಲಿ ಸಾವ್ಯಾರಿಗೆ ಬಿಟ್ಟದ್ದು? ತಾನಾಗಿ ಬರೋ ಸಾವು....ಔತಣ ಕೊಟ್ಟರ ಬಿಟ್ಟೀತs?

ನಾ:—ಹಿಡಿ ಇಲ್ಲೆ, ಖೋಲ್ಯಾಗ ಒಯ್ದು ಇರಿಸೋಣು. ಹುಣ್ಣಿನ ನೋವಿಗೆ ಸತ್ತಾ ಅಂತ ಹೇಳಬೇಕು ನೋಡು ನಾಳೆ. ಅವನ್ನ

ಕೊಂಡ ನೋವು ಬ್ಯಾರೇನ ಕಾಣತದ ! (ಮೃತದೇಹದ ಮೇಲೆ ಒಂದು ದೋತರವನ್ನು ಹೊಚ್ಚುತ್ತಾನೆ)

ತು:—ಇದು ಎಂಥ ಪುಕ್ಕತನ, ರಾಜ್ಯಕ ಹೊರ್ತು? ನಾ ಮಗಳು, ಕಲ್ಲೆದಿ ಮಾಡಿಕೊಂಡು ಇದ್ರ ಇವರು ಇಲ್ಲದ್ದೊಂದು ಹಚ್ಯಾರ ರಗಳಿ!

ನಾ:—ಪಾಪ! ಮುದುಕ! ಮನಿ ನನಗ ಒತ್ತೀ ಬಿದ್ದದ್ದು ಅರ್ಧ ಮನಿಸ್ಸಿಗೆ ಹತ್ತಿತ್ತೋ ಏನೊ ಯಾರು ಬಲ್ಲರು !

ತು:—ಬರೇ ಮನೀನ ಬೇಕಿದ್ರ ಇಂಥ ಹತ್ತು ಮನಿ ಕೊಡತಿದ್ದೆ ನಮ್ಮ-ಪ್ಪಗ! ಅಲ್ಲ....ಅದು ಮನೀ ಅಲ್ಲ. (ರೊಚ್ಚಿಗೆದ್ದು) ಒತ್ತೀ ಬಿದ್ದದ, ಒತ್ತೀ ಬಿದ್ದದ ಅಂತ ಒತ್ತಿ ಒತ್ತಿ ಹೇಳತೀರಿ? ಹೇಳರಿ ಇದು ಯಾರ ಮನಿ? ನಂದೊ? ನಿಮ್ಮದೊ (ನಾರಾಯಣನ ಕೈಯನ್ನು ಬಲವಾಗಿ ಹಿಡಿಯುವಳು)

ನಾ:—(ಬೆಚ್ಚಿಬಿದ್ದು) ನಂ....ದು ಅಲ್ಲ, ಅಲ್ಲ, ನಿಂದು !

ತು:—(ಕೈಬಿಟ್ಟು) ಸಂಸಾರ....ಅವ್ವ....ಬಲು ತ್ರಾಸು ಕೊಟ್ಟವು ಅಪ್ಪಗ. ನಂದೂ ಲಗ್ನ ಮಾಡಬೇಕಂತಿದ್ದ, ಅಪ್ಪ! ನಾ ಲಗ್ನ ಮಾಡಿಕೊಂಡು ಬಾಳೇವು ಮಾಡೋದು ನೋಡಬೇಕಂತಿದ್ದ !

ನಾ:—(ಪ್ರೀತಿಯಿಂದ) ಈಗಾರ ಏನಾತು ! ತುಳಸಾ ! ನಿನ್ನೀ ದಿವಸದಿಂದ ನನ್ನ.ವಿಚಾರ ಬಂದದ. ನಾನೂ ಸುಧಾರಕರ ಪೈಕಿ, ಏನವಾ ಅಂದ್ರ! ಬೆಳದ ಕುಲದಾಗ ಬಳಸಿಕೊಂಡ್ರ ಕುಲ ಕೆಡತsದ ಅಂಬೋವ ನಾನೂ! ನಂದೂ ನಿಂದೂ ಲಗ್ನ ಆಗಿ ಬಿಡ್ಲಿ! ಸಮಾಜಕ್ಕ ಒಂದು ಹೊಸ ಕಿತ್ತೀನsು ಹಾಕಿ ಕೊಡೋಣು !

ತು:—(ತಿರಸ್ಕಾರದಿಂದ) ಛೀ ಮಳ್ಳs ಹೋಗು ! (ಸಾವಧಾನವಾಗಿ) ಅಲ್ಲರಿ, ಲಗ್ನದ ವಿಚಾರ ಯಾಕ ಬಂತು ನಿಮ್ಮ ತಲ್ಯಾಗ? ನಾ ಲಗ್ನಾ ಮಾಡಕೋತಿದ್ರ ನಮ್ಮಪ್ಪ ಯಾಕ ಸಾಯುತಿದ್ದ ? ಗೊತ್ತದನೋ ಇಲ್ಲೋ ! ನಾ....**ಮುಂಡಿ!** ಮುಂಡಿ ಆಗೋದು ಮಾಮೂಲು !

ನಾ:—(ಸಂಶಯದಿಂದ) ಹಾಂಗಾದರ ನಿನ್ನ ನೆಚ್ಚಿಗೇನು ನನಗ, ತುಳಸಾ!

ತು;—(ಗಟ್ಟಿಯಾಗಿ ನಕ್ಕು) ಯಾಕ? ಲಗ್ನಾದರ ಕಟ್ಟಿಹಾಕಿದ್ಹಂಗಂತ ತಿಳಿದೀರೇನು? ಕಾಯದೆಭಂಗ ಮಾಡಿದವರು ಎಷ್ಟು ಜನ ಇಲ್ಲ? ನೀವೊಂದು ನನ್ನ ನೆಚ್ಚಿಕೊಂಡು ಇರ್ರಿ. ನನ್ನ ನೆಚ್ಚಿಗಿ ಯಾರಿಗದs ನನ್ನ ನೆಚ್ಚಿಗಿ!

ತೆರೆ ಬೀಳುವದು.

ವಿರಾಮ

ಪಾತ್ರಗಳು

ರಾಮಕೃಷ್ಣಯ್ಯ	ವಿರಾಮ ಹೊಂದಿದ ಶಿರಸ್ತೇದಾರ
ಸೀತಮ್ಮ	ಅವನ ಹೆಂಡತಿ
ದಿನಕರ ಎಂ. ಎ	ಮಗ
ವೆಂಕಟಸುಬ್ಬರಾಯ	ನಗರಸಭಾಧ್ಯಕ್ಷ
ಕಿಟ್ಟ	ಅಂಚೆಯಾಳು
ಶೇಷಪ್ಪ	ಕಲೆಕ್ಟರರ ಪೇದೆ

ದೃಶ್ಯ ೧

(ರಾಮಕೃಷ್ಣಯ್ಯನವರು ವಿರಾಮಾಸನದಲ್ಲಿ ಕುಳಿತಿದ್ದಾರೆ. ಮುಖ ಜೋತುಹೋಗಿದೆ. ಸಿಗರೇಟನ್ನು ಸೇದುತ್ತಾರೆ. ಪ್ರಾತಃಕಾಲ ೮ ಘಂಟೆಯಾಗಿದೆ. ಸೀತಮ್ಮ ವೀಳೆಯದ ಎಲೆ ಜಗಿಯುತ್ತಾ ಸಮ್ಮಾರ್ಜನೀಹಸ್ತಳಾಗಿ ಬರುತ್ತಾಳೆ.)

ಸೀ:—ಉದ್ಯೋಗದಿಂದ ನಿವೃತ್ತರಾದ ಮೇಲೆ ಮಂಕು ಹಿಡಿದಿದೆ ನಿಮಗೆ! ಬೆಳಿಗ್ಗೆ ಎದ್ದು ರಾಮ-ಜಪ ಮಾಡಿದರೆ ಪುಣ್ಯವಾದರೂ ಬಂದೀತು. ಸಿಗರೇಟೇನು ಮುಕ್ತಿಕೊಡುವುದೇ? ಬೀಸಾಡಿ ಅದನ್ನು! ದುರ್ವಾಸನೆ ಬರುತ್ತದೆ.... ಹೊಟ್ಟೆಕೊಳಸುತ್ತದೆ.... ವಾಂತಿಯಾಗುತ್ತಿದೆ.... ಉಹ್ಞೂ.... ಉಹ್ಞೂ.... ವಾಂತಿ....!

ರಾ:—ಏನೇ ನಿನ್ನದು ವಿಪರೀತ? ಉದ್ಯೋಗದಲ್ಲಿದ್ದಾಗ ದಿನಕ್ಕೆ ನೂರು ಸಿಗರೇಟು ಸೇದುತ್ತಿದ್ದೆ. ಆಗ ವಾಂತಿ ಬಾರದಿದ್ದವಳಿಗೆ,ಈಗ ಒಂದು

ಸಿಗರೇಟು ಸುಟ್ಟರೆ ವಾಂತಿಯುಂತೆ ವಾಂತಿ! 'ರಿಟೈರಿ' ಹೊಂದಿದ ನೌಕರರಿಗೆ ಹೆಂಡಿರೂ ಶತ್ರುಗಳು!

ಸೀ:—ಮಾತುಮಾತಿಗೆ ನನ್ನನ್ನು 'ವೈರಿ' ಎನ್ನುತ್ತೀರಲ್ಲ!

ರಾ:—ಹೌದು; ನಾನು-ನಿನ್ನ ಗಂಡ-ಮುದುಕನಾಗಿದ್ದೇನೆ.

ಸೀ:—ಮುದುಕರಾದುದೇ ಬಂತು; ಬುದ್ಧಿ ಇನ್ನೂ ಬರಲಿಲ್ಲ!

ರಾ:—ನನಗೆ ಬುದ್ಧಿಯಿಲ್ಲ! ಬುದ್ಧಿಯಿಲ್ಲದೆ ಇಷ್ಟು ದುಡಿದೆನೆ? ಬುದ್ಧಿಯಿಲ್ಲದೆ, ಇಷ್ಟು ಹುಡುಗಿಯರ ಮದುವೆ-ನಿಷೇಕ-ಬಾಣಂತನಗಳನ್ನು ಪ್ರತಿವರ್ಷ ಎಂಬಂತೆ ಮಾಡಿಸಿದೆನೇ? ಬುದ್ಧಿಯಿಲ್ಲದೆ, ಯಾವುದಕ್ಕೂ ಲೋಪಬಾರದಂತೆ ಇಷ್ಟು ದೊಡ್ಡ ಸಂಸಾರದ ವೆಚ್ಚ ನಡಿಸಿಕೊಂಡು ಬಂದೆನೆ? ಗಂಡನೆನಿಸುವವನು ಮುದುಕನಾಗುವ ಮೊದಲೆ ಸಾಯಬೇಕು. ಬದುಕಿದರೆ ಹೆಂಡತಿಯು ಶತ್ರುವಾಗುತ್ತಾನೆ!

ಸೀ:—ನಿಮ್ಮ ಗಟ್ಟಿಗತನ ಅಂದಾಯಿತು— ಕೆಲಸವಿದ್ದಾಗ! ತಿಂಗಳು-ತಿಂಗಳು ಸಂಬಳ ಬರುತ್ತಿತ್ತು. ಲಂಬೋದರ-ವಿಘ್ನೇಶನ ದರ್ಶನಕ್ಕೆ ಹೋಗುವವರು ಸುಮ್ಮನೆ ಹೋಗುತ್ತಾರೆಯೆ? ಹಣ್ಣುಕಾಯಿಗಳನ್ನು ತೆಗೆದುಕೊಂಡೇ ಹೋಗುತ್ತಾರೆ. ಹಾಗೆಯೇ ಕಚೇರಿಯಲ್ಲಿ ಕೆಲಸವಿದ್ದಾಗ, ನಿಮ್ಮ ಮುಖ ನೋಡಬೇಕೆಂಬ ಆಸೆಯಿದ್ದವರು ಹಣದ ಚೀಲವನ್ನು ಹಿಡಿದುಕೊಂಡೇ ಬರುತ್ತಿದ್ದರು. ಆಗ ಆಯಿತು ನಿಮ್ಮ ಕಾರಭಾರ!

ರಾ:—ಆಗ ನಾನು ಸಿಗರೇಟು ಸುಟ್ಟರೆ ನಿನಗೆ ವಾಂತಿಯಾಗುತ್ತಿರಲಿಲ್ಲ.

ಸೀ:—ಇಲ್ಲ; ನಿಜವಾಗಿಯೂ ಇಲ್ಲ. ವಾಂತಿಯಾದಷ್ಟು ಹೊಟ್ಟೆತುಂಬಿಸಲು ಅನುಕೂಲವಿತ್ತು!

ರಾ:—(ಸಿಟ್ಟಿನಿಂದ) ಥೂ! ಹೆಂಗುಸರ ಬಾಯಿ ಹಳೇಕತ್ತಿಯ ಬಾಯಂತೆ ಮೊಂಡಾದರೆ ಸಿಗರೇಟೂ ಬೇಡ— ಗಿಗರೇಟೂ-ಬೇಡ.... (ಬಿಸಾಡುವನು)

ಸೀ:—ನೋಡಿ....ನಿಮಗೊಬ್ಬ ಮಗ.... ದೊಡ್ಡಸುಲ್ತಾನ....ಗಂಟೆ ಎಂಟು ಹೊಡೆಯಿತು.... ಇನ್ನೂ ಏಳಲಿಲ್ಲ.

ರಾ:—(ಕನಿಕರದಿಂದ) ಮುದಿಕತ್ತೆ! ಅವನ ಕಷ್ಟ ನಿನಗೇನು ಗೊತ್ತು? ಪಾಪ! ಎಂ. ಎ. ಪರೀಕ್ಷೆಗಾಗಿ ಹಗಲಿರುಳು ಓದಿ, ನೆತ್ತರಾರಿಸಿ,

ತಲೆ ಹಾಳುಮಾಡಿ, ನಿದ್ದೆಕೆಟ್ಟು, ನೊಂದುಹೋಗಿದ್ದಾನೆ. ಆಯಾಸ ವಾಗಿದೆ; ಮಲಗಲಿ!.... ನಿನಗೇನು ನಷ್ಟ?

ಸೀ:—ಎಂ. ಎ. ಆಗುವುದರ ಬದಲು ಎಮ್ಮೆ ಸಾಕಲು ಕಲಿತಿದ್ದರೆ.

ರಾ:—ನಿನ್ನಂಥ ಎಮ್ಮೆಯು ಬುದ್ಧಿ ಬರುತ್ತಿದ್ದರೆ....

ಸೀ:—ಹೌದು; ಹೊಟ್ಟೆಯನ್ನಾದರೂ ತುಂಬಿಸುತ್ತಿದ್ದ...

ರಾ:—ಮಂಗನ ಕೈಗೆ ಮಾಣಿಕವಿತ್ತರೆ ಅದೇನು ಮಾಡೀತು ಹೇಳು? ಅವನು ಕಲಿತ ವಿದ್ಯೆಯ ಬೆಲೆ ನಿನಗೇನು ಗೊತ್ತು?

ಸೀ:—ಬೆಲೆ ಮೂರುಕಾಸಾದರೂ ಇರುತ್ತಿದ್ದರೆ, ಈ ವೇಳೆಗೆ ಗೊತ್ತಾಗು ತ್ತಿದ್ದಿತು.

ರಾ:—(ನಿರಾಶೆಯಿಂದ) 'ಎಲಾರ್ಮ್' ಗಡಿಯಾರವೇ! ಹೊಡೆ ಹೊಡೆ!! ನಾನೇನೂ ಮಾತಾಡುವುದಿಲ್ಲ.

ಸೀ:—(ವ್ಯಸನೋದ್ವೇಗಗಳಿಂದ) ನೀವು ಮಾತಾಡಬೇಕಾಗಿಲ್ಲ; ನಾನೂ ಆಡುವ ದಿಲ್ಲ. ಮನೆಯಲ್ಲಿ ಅಕ್ಕಿಯಿಲ್ಲ; ಬೇಳೆಯಿಲ್ಲ. ಉಪ್ಪಿಲ್ಲ; ಮೆಣಸಿನ ಕಾಯಿ ಇಲ್ಲ. ಆರುತಿಂಗಳು ನಾನು ಸ್ವತಃ ಮೈಬತ್ತಿಸಿ, ಹಾಲು ಮಾರಿ, ಕೂಡಿಟ್ಟ ಹಣವನ್ನು ನಿನ್ನೆ ದಿನಕರನ ಹ್ಯಾಟು ಬೂಟಿಗೆ ಉದಾರ ದಾನಮಾಡಿಬಿಟ್ಟಿರಿ ನೀವು! ಇಂದು ಮನೆಯಲ್ಲಿ ಏಕಾ-ದಶಿ. ಗೋವಿಂದಸೆಟ್ಟಿ ಮನೆ-ಸಾಮಾನನ್ನು ಕಡಕೊಡಲು ಒಪ್ಪು ವುದಿಲ್ಲ. ಎಮ್ಮೆ-ದನಗಳಿಗೆ ಹುಲ್ಲಿಲ್ಲ; ಹುರುಳಿಯಿಲ್ಲ. ನನ್ನ ಮಗಳು ಪದ್ದುಗೆ—ಅಯ್ಯೋ ಹುಟ್ಟಿ ಆರುತಿಂಗಳಾದರೂ ಬಿಕಾರಿಯ ಕೂಸಿ ನಂತೆ ಹುಟ್ಟಿದ ವೇಷದಲ್ಲೇ ಇದ್ದಾಳೆ— ಒಂದು ಲಂಗ ಹೊಲಿಸಲೂ ಕೈಯಲ್ಲಿ ಕಾಸಿಲ್ಲ. ನಿಮಗೆ ಕೆಲಸವಿಲ್ಲದಂತೆ ಮಾಡಿದ ದೇವರು ನನಗೇಕೆ ಕೆಲಸವಿಲ್ಲದಂತೆ ಮಾಡಲಿಲ್ಲ? ನನಗೇಕೆ ಇನ್ನೂ ಹೆರುವ ಕೆಲಸ ಕೊಡುತ್ತಾನೆ?

ರಾ:—(ಪರಿಹಾಸದಿಂದ ಸ್ವಲ್ಪ ನಗುತ್ತಾ) ಅಯ್ಯೋ ಹುಚ್ಚಿ! ಕೆಲವು ಸಂಗತಿಗಳು ನಮ್ಮ ಆಧೀನ. ಕೆಲವು ಪರಮಾತ್ಮನ ಆಧೀನ. ನನಗೆ ಕೆಲಸ ಕೊಟ್ಟವರು ಕಲೆಕ್ಟರ್ ಸಾಹೇಬರು. ನಿನಗೆ ಕೆಲಸ ಕೊಟ್ಟವನು-ಕೊಡುವವನು ಪರಮಾತ್ಮ! ದಶರಥಮಹಾರಾಜ ೬೦ ಸಾವಿರ

ವರ್ಷ ಬದುಕಿದ್ದನಂತೆ. ಮೊದಮೊದಲು ಮಕ್ಕಳಿರಲಿಲ್ಲ. ಅರವತ್ತು ಸಾವಿರದ ಕೊನೆಯ ವರ್ಷಗಳಲ್ಲಿ ಒಂದು–ಎರಡು–ಮೂರು–ನಾಲ್ಕು ಮಕ್ಕಳು! ನಾವೇನು ಮಕ್ಕಳನ್ನು ಕಿತ್ತುಕೊಳ್ಳುತ್ತೇವೆಯೇ? ಅವನೇ ಕೊಡುತ್ತಾನೆ! .... ಆಗೋ— ಬಂದ— ಬಂದ— ನನ್ನ ದಿನಕರ ಬಂದ! ಮೊದಲೇ ಉದ್ಯೋಗ ದೊರೆಯದೆ ನೊಂದಿದ್ದಾನೆ.. ಚುಚ್ಚುವ ಮಾತನ್ನಾಡಿ ಮತ್ತೂ ನೋಯಿಸಬೇಡ ಮಹಾಕಾಳಿ!

ಸೀ:—ಎಂಟುವರೆ ಗಂಟೆಯ ವರೆಗೆ ಗೊರಕೆಹೊಡೆಯುತ್ತಾ ನಿದ್ರಿಸ ಬೇಕೆಂದು ಎಂ. ಎ ಪರೀಕ್ಷೆ ಹೇಳುವುದೇ? ಬರಲಿ; ಹಿಡಿಕುಂಟೆ (ಕಸಬರಿಗೆ) ಕೊಟ್ಟು ಗುಡಿಸು! ಎನ್ನುತ್ತೇನೆ. ನನಗೆ ದೇಹದಲ್ಲಿ ಶಕ್ತಿ ಯಿಲ್ಲ. ವಯಸ್ಸೂ ಆಯಿತು.

ರಾ:—ನಾನಿರುವಷ್ಟು ಕಾಲ ಅದಾಗದು.... ಆಗದೋ ಆಗದು.... ಕೆಲಸ ದವಳಿದ್ದಾಳೆ... ಗುಡಿಸುತ್ತಾಳೆ...

ಸೀ:—ಕೆಲಸದವಳಿದ್ದಾಳೆ ಅವಳ ಮನೆಯಲ್ಲಿ! ಸಂಬಳ ಕೊಡದೆ ನಾಲ್ಕು ತಿಂಗಳಾಯಿತು. ಬಾಯಿಯಲ್ಲಿ ಸಹಸ್ರನಾಮ ಹೇಳಿ ಮನೆಗೆ ಹೋದವಳು ಈ ದಿನ ಮುಖತೋರಿಸಲಿಲ್ಲ.

ರಾ:—ಅವಳು ಆ ಕಪ್ಪುಮುಖ ತೋರಿಸಲಿ, ತೋರಿಸದಿರಲಿ? ನನ್ನಮಗ ಕಸಬರಿಗೆ ಹಿಡಿಯುವುದಕ್ಕಾಗಿ ಹುಟ್ಟಿದವನಲ್ಲ. ದಮ್ಮಯ್ಯ.... ಈ ಮುದಿಗಂಡ ನಿನ್ನ ಕಾಲಿಗೆ ಅಡ್ಡಬೀಳುತ್ತಾನೆ.... ಅವನಿಗೆ ಬೇಡ ಕಸಬರಿಗೆ..

ಸೀ:— ಅವನಿಗೂ ಬೇಡ; ನನಗೂ ಬೇಡ. ಬಿ. ಎ. ತಂದೆ, ಎಂ. ಎ. ಮಗ, ಇಬ್ಬರೂ ಸೇರಿ ಮನೆ ಕೆಲಸ ನೋಡಿಕೊಳ್ಳಿ. ನಿಮಗೆ ೫೦ ವರ್ಷ ದಾಟಿದ ಮೇಲೆ ವಿರಾಮವುಂಟಂತೆ. ನನಗಿಲ್ಲವೇ? (ಎಂದು ಕಸಬರಿಗೆ ಯನ್ನು ಬಿಸಾಡಿ ಹೋಗುವಳು.)

ರಾ:—(ನಿಟ್ಟುಸಿರುಬಿಟ್ಟು) ಹೋದಳು ಮಾರಿ! ಬಂದ.... ಬಂದ.... ನನ್ನಮಗ ಬಂದ! ಆಕಳಿಸುತ್ತಾನೆ. ಎದ್ದಿದ್ದಾನೆ. ಬಂದ! ಬಾ ಮಗು ದಿನಕರ!

(ದಿನಕರನು ಆಕಳಿಸುತ್ತಾ ಬರುವನು.)

ರಾ:—ಮಗು! ಏಳುವಾಗ ಸ್ವಲ್ಪ ತಡವಾಯಿತು... ಬೇಗನೆ ಹೊರಡು.

ಸರಿಯಾಗಿ ೯ ಘಂಟೆಗೆ ಸ್ಟೋನ್‌ಸಾಹೇಬರ ಬಂಗಲೆಗೆ ಹೋಗು.

ದಿ:—ಒಂದು ಲೋಟ ಕಾಫಿಯಿಲ್ಲದೆ ತಲೆ ನೋವು ಹಿಡಿದಿದೆ.

ರಾ:—ಹುಂ....ಕಾಫಿ.... ನಿನ್ನ ತಾಯಿ ಕಾಫಿಕೊಡುವುದುಂಟೇ ?

ದಿ:—ಅಯ್ಯೋ ! ಕಾಫಿ ಇಲ್ಲದೆ ಒಂದು ಹೆಜ್ಜೆ ಇಡಲಾಗುವುದಿಲ್ಲ.... ಪ್ರಾಣವೇ ಹಾರಿಹೋಗುತ್ತದೆ.

ರಾ:—ಕುಪ್ಪಣ್ಣಯ್ಯನ ಕಾಫೀ ಅಂಗಡಿಗೆ ನುಗ್ಗು. ನನ್ನ ಲೆಕ್ಕಕ್ಕೆ ಬರೆಯಿಸಿ ಒಂದು ಲೋಟ ಕುಡಿದುಕೊಂಡು ನಡೆ. . ಓಡು. . ಸ್ಟೋನ್ ಸಾಹೇಬರು ಸ್ವಲ್ಪ ಸಿಡುಕಿನವರು. ನಿಯಮಿತ ಸ್ವಭಾವದವರು. ತಡವಾಗಿ ಹೋದರೆ ಸಿಟ್ಟು ಬಂದೀತು.ಹೋಗು....ಬೇಗನೆ ಹೋಗು.

ದಿ:—ಕುಪ್ಪಣ್ಣಯ್ಯನ ಅಂಗಡಿಗೆ ನುಗ್ಗಿದರೆ ಆತ ದೊಣ್ಣೆ ಹಿಡಿಯುತ್ತಾನೆ. ಮಾಜಿ ಶಿರಸ್ತೆದಾರರ ಮಕ್ಕಳಿಗೆ ಧರ್ಮದ ಕಾಫಿ ಕೊಡಬೇಕೆಂದು ಸರಕಾರವು ಕಾನೂನು ಮಾಡದ ವಿನಾ ನಾನೇನೂ ಕಾಫಿ ಕೊಡುವಂತಿಲ್ಲ ನಿನಗೆ. . ಎನ್ನುತ್ತಾನೆ ಆತ !

ರಾ:—ಪದ್ಮನಾಭಾ ! ಉಪಕಾರ ಮಾಡಿಸಿಕೊಂಡವರಿಗೆ ಮತ್ತೆ ನೆನಪಿಲ್ಲ. ನಾನು ಶಿರಸ್ತೆದಾರನಾಗಿದ್ದಾಗ ಎಷ್ಟು 'ರಿಕಾರ್ಡು'ಗಳನ್ನು ಈ ಕುನ್ನಿ ಕುಪ್ಪಣ್ಣನಿಗೆ ಬರೇ ಒಂದು ಲೋಟಕ್ಕಾಗಿ, ತೆಗೆದುಕೊಡಲಿಲ್ಲ ? ಕಲಿಯುಗ ವಿಾರಿತು. . ಉಪಕಾರಕ್ಕೆ ಪ್ರತಿಯಾಗಿ ಅಪಕಾರ! ಹುಂ ! ಆಗಲಿ. . (ಜೇಬಿಗೆ ಕೈ ಹಾಕಿ) ಇದು ಸಿಗರೇಟಿಗಾಗಿ ಇರುವ ದುಡ್ಡು. . (ಕೊಡುತ್ತಾನೆ) ತೆಗೆದುಕೊ....ಕಾಫಿ ಕುಡಿ. . ಸ್ಟೋನ್ ಸಾಹೇಬರ ಪಾದಕ್ಕೆ ಅಡ್ಡಬೀಳು. . ಕೆಲಸ ಕೊಡದಿದ್ದರೆ ಹಿಂದಿರುಗುವುದಿಲ್ಲವೆಂದು ಮುಷ್ಕರಹಿಡಿ! ನನ್ನ ಹೆಸರನ್ನು ಹೇಳು. ನನ್ನ ಮಗನೆಂದು ತಿಳಿಸು. ಎಂಟುವರೆ ಗಂಟೆ ಹೊಡೆಯಿತು. . ಏನಾದರೂ ಬೈದರೆ ಜೇಬಿಗೆ ಸೇರಿಸಿಕೊ. . ತಡವಾಯಿತು. . ಒದೆದರೂ ಮಾತಾಡಬೇಡ. . ಹೋಗು ಮಗು. . ಜಯ ಸಂಪಾದಿಸಿಕೊಂಡು ಬಾ !

—ಕಾಫಿ ದುಡ್ಡು ಬಂತು....ಇನ್ನು ಉತ್ಸಾಹ ಬಾರದಿರುವುದೇ? ಹೋಗುತ್ತೇನೆ....(ಮನೆಯೊಳಗೆ ಹೋಗುವನು.)

[ವೆಂಕಟಸುಬ್ಬರಾಯರ ಪ್ರವೇಶ]

ರಾ:—ಓಹೋಹೋ ರಾಯರೇ ! ಒಡವಸ ಮನೆಗೆ ಭಾಗೀರಥಿ ಬಂದಂತಾಯಿತು. ಬನ್ನಿ; ಕುಳಿತುಕೊಳ್ಳಿ; ತೃಷೆಗೆ ಏನಾದರೂ ಬೇಕೆ ? ಹೀಗೆ ಕುಳಿತುಕೊಳ್ಳಿ (ಕುರ್ಚಿಯನ್ನು ತಂದಿಡುವನು. ವೆಂಕಟಸುಬ್ಬರಾಯರು ಕುಳಿತುಕೊಳ್ಳುವರು.)

ವೆಂ:—ರಾಮಕೃಷ್ಣಯ್ಯನವರೇ ! ತಮ್ಮನ್ನು ಕಾಣದೆ ಎಷ್ಟೋ ದಿವಸವಾಗಿತ್ತು. . (ಮನಸ್ಸಿನೊಳಗೇ ನಗುತ್ತ) ಹುಡುಗಿಯ ವಿಚಾರವೊಂದು ಹಾಗೆಯೇ ಇದೆ. ಇರಲಿ; ಜಾತಕ-ಗೀತಕ ಸರಿಕೂಡುವುದೋ ನೋಡಬೇಕಷ್ಟೆ. ಅಲ್ಲದೆ ಈಗ ಮೌಢ್ಯಕಾಲ. ಮುಹೂರ್ತವೂ ಇಲ್ಲ. ಕೆಲವು ದಿನಗಳು ಕಳೆದುಹೋಗಲಂತೆ. . ಸಂಬಂಧವೇನೋ ಮಾಡಿಟ್ಟ ಪಾಕದಂತೆ ಹಳಸಿ ಹೋಗುವುದೆಂದೇನೂ ಇಲ್ಲವಷ್ಟೆ ?

ರಾ:—ನಮ್ಮ ನೆನಪು ನಿಮ್ಮಲ್ಲಿದ್ದರೆ ಸಂಬಂಧ ತನ್ನಿಂದ ತಾನೇ ಕೈಗೂಡೀತು. ಜಾತಕ-ಗೀತಕಗಳನ್ನು ಸರಿಕೂಡಿಸಿಬಿಟ್ಟೀತು. ಯಾವುದಕ್ಕೂ ಬೇಕು ಪರಸ್ಪರ ಪ್ರೀತಿ. ನನ್ನ ಮಗ ಎಂ. ಎ. ಪಾಸಾದ ಸಂಗತಿ ಗೊತ್ತಿರಬಹುದಷ್ಟೆ ?

ವೆಂ:—ಓಹೋ ! ಅದು ಗೊತ್ತಿಲ್ಲದೇನು ? ಲೋಕವೇ ಕೊಂಡಾಡುತ್ತಿದೆ ತಮ್ಮ ಔರಸಪುತ್ರನನ್ನು ! ಇಲ್ಲಿಯ ವರೆಗೆ ಬಂದು, ಇಂತಹ ಯೋಗ್ಯ ತರುಣನ ಜನ್ಮದಾತರಾದ ತಮ್ಮನ್ನು ಅಭಿನಂದಿಸುವುದಕ್ಕೆ ಅವಕಾಶ ದೊರೆಯಲಿಲ್ಲ . . ಇದೇ ವ್ಯಸನ.

ರಾ:—ಮಗು ! ದಿನಕರ! ದಿನಕರ ಎಂ. ಎ! ಬಾ ಒಮ್ಮೆ . . ರಾಯರಿಗೆ ಮುಖ ತೋರಿಸು. (ಮತ್ತೆ ನಗುತ್ತಾ) ಭ್ರಮೆ ನನಗೆ . . ಆತನನ್ನು ಈಗ ತಾನೇ ಕಳುಹಿಸಿದೆನೆಂಬುದನ್ನು ಮರೆತೆ. ಅವನೂ ಈಗ ಇರುತ್ತಿದ್ದರೆ ಎಷ್ಟು ಚೆನ್ನಾಗುತ್ತಿತ್ತು ! ಎಂ. ಎ. ಪಾಸಾಗಿದ್ದಾನೆ. ಆತನ ಯೋಗ್ಯತೆಯನ್ನು ತಾವೇ ಸ್ವತಃ ಪ್ರತ್ಯಕ್ಷವಾಗಿ ಪರೀಕ್ಷಿಸಬಹುದಿತ್ತು !

ವೆಂ:—ಬಹುದಿತ್ತು ನನಗೂ ಆ ಯೋಗ್ಯತೆ ಇರುತ್ತಿದ್ದರೆ! ಈಗ ನನ್ನ ಪರೀಕ್ಷೆಯಾಗುವ ಸಂಭವ ಬಂದಿದೆ. . ಅದರಲ್ಲಿ ಉತ್ತೀರ್ಣನಾಗಬೇಕಾ

ಗಿದೆ. . ನಿಮ್ಮೆಲ್ಲರ ಸಹಾಯ ಬೇಕಾಗಿದೆ. . ಅದಕ್ಕಾಗಿ ಇಲ್ಲಿಯ ವರೆಗೆ ಬಂದಿದ್ದೇನೆ.

ರಾ:—ಏನಾಗಬೇಕು ಹೇಳಿರಿ. ರಿಟೈರ್ಡ್ ಶಿರಸ್ತೆದಾರನಾದ ನಾನಿದ್ದೇನೆ. ಎಂ. ಎ. ಪಾಸಾದ ಮಗನಿದ್ದಾನೆ. . ಜಗತ್ತಿನಲ್ಲಿ ನಮ್ಮಿಂದ ಸಾಧ್ಯವಾಗದ ಕೆಲಸವೇನಿದೆ?

ವೆಂ:—ಮತ್ತೇನೂ ಇಲ್ಲ. ನಮ್ಮ ನಗರಸಭಾಧ್ಯಕ್ಷರ ಚುನಾವಣೆ ನಾಳೆ ಆಗಬೇಕು. ಒಟ್ಟಿಗೆ ೨೬ ಜನ ಸದಸ್ಯರು. ನಾನು ಮತ್ತು ಲೋಬೊ ಇಬ್ಬರು ಉಮೇದುವಾರರು. ಈಗ ನೋಡಲಾಗಿ ನನಗೂ ಅವನಿಗೂ ೧೩ ಮತಗಳು ದೊರೆವ ಹಾಗಿದೆ. ಒಂದು ಮತ ಹೆಚ್ಚು ಸಿಕ್ಕಿದರೆ ನಾನು ಗೆದ್ದೆ. .

ರಾ:—ಏನಾಗಬೇಕು ಹೇಳಿ. ನಾನಿದ್ದೇನೆ. . ಎಂ. ಎ. ಮಗನಿದ್ದಾನೆ. .

ವೆಂ:—ಸೀತಾರಾಮಶೆಟ್ಟರಿಗೂ ನಿಮಗೂ ಒಳ್ಳೆಯ ಪರಿಚಯವಿದೆ. . ಎಂದು ಕೇಳಿದ್ದೇನೆ. .

ರಾ:—ಪರಿಚಯವೆಂದೇನು? ನಮಗಿಬ್ಬರಿಗೂ ಒಂದೇ ಜೀವ!

ವೆಂ:—ಹಾಗಾದರೆ ಕೆಲಸ ಸುಲಭವಾಯಿತು. ನಿಮ್ಮಿಬ್ಬರ ಹಕ್ಕಿಗೂ ಸೇರಿದ ಆ ಒಂದೇ ಜೀವವನ್ನು ನನ್ನ ಕಡೆಗೆ ಎಳೆದುಬಿಡಿ.

ರಾ:—ಇಲ್ಲಿ ಒಂದು ವಿಚಾರವಿದೆ ವೆಂಕಟಸುಬ್ಬರಾಯರೇ! ಲೋಬೋ ಕೂಡ ಹೀಗೆಯೇ ಬೇಡಿದ್ದಾನೆ ನನ್ನಲ್ಲಿ. . ಆತನು ಅಧ್ಯಕ್ಷಪದವಿಯ ಹೋರಾಟದಲ್ಲಿ ಗೆದ್ದರೆ ನನ್ನ ಮಗ- ದಿನಕರ ಎಂ.ಎ. ಇವನಿಗೆ ಹೈಸ್ಕೂಲಿನ ಮುಖ್ಯಾಧ್ಯಾಪಕ ಪದವಿಯನ್ನು ಕೊಡಿಸುವುದಾಗಿ ಮಾತು ಕೊಟ್ಟಿದ್ದಾನೆ. ಶೆಟ್ಟಿಯ ಮತ ಅವನಿಗೂ ಬೇಕಾಗಿದೆ.

ವೆಂ:—ಅಯ್ಯೋ ರಾಮಕೃಷ್ಣಯ್ಯ! ನಾನು ಗೆದ್ದರೆ, ನೀವು ಗೆದ್ದಂತೆಯೇ ಅಲ್ಲವೇ? ನಿಮ್ಮ ಎಂ. ಎ. ಮಗನಿಗೆ ನನ್ನ ಮಗಳೊಡನೆ ವಿವಾಹವಾದಂತೆಯೇ ಆಗಲಿಲ್ಲವೇ? ಒಂದು ಪ್ರಸ್ತಾವ ನಡೆಯುತ್ತಾ ಇದೆ. . ಚುನಾವಣೆಯಲ್ಲಿ ನನಗೆ ಜಯ ಸಿಕ್ಕಿದರೆ ಕಬ್ಬಿನಲ್ಲಿ ಜೇನು ಕಟ್ಟಿದಂತಾಗಲಿಲ್ಲವೇ?

ರಾ:—ನಿಜವೆ. ಆದರೆ ಹೆದರಿಕೆಯಿಷ್ಟೆ. ಸೀತಾರಾಮಶೆಟ್ಟಿಗೂ ಲೋಬನಿಗೂ ಸ್ನೇಹವಾಗಲು ನಾನೆ ಕಾರಣವಾದೆ. ಅದನ್ನು ಕಡಿದು

ಬಿಡುವುದು ಹೇಗೆ ? ಅದರಲ್ಲಿಯೂ ಮುಖ್ಯಾಧ್ಯಾಪಕ ಪದವಿ ನನ್ನ ಮಗನ ಪಾಲಿಗೇ ಬರುವಾಗ ...

ವೆಂ:—ಅಲ್ಪಾಶೆಗಳನ್ನು ಕಟ್ಟಿಕೊಳ್ಳಬೇಡಿ. ನೀವು ಮನಸ್ಸು ಮಾಡಿದರೆ ಎಲ್ಲ ಆದೀತು. ನಿಮ್ಮ ಮಗ ಮುಖ್ಯಾಧ್ಯಾಪಕನಾಗಿರುವುದು ಲೇಸೋ.. ನನ್ನ ಅಳಿಯನಾಗಿರುವುದು ಲೇಸೊ.. ತೂಕಮಾಡಿ ನೀವೆ ನೋಡಿರಿ.

ರಾ:—ನನ್ನ ಮಟ್ಟಿಗೆ ಈ ಸಮಾಧಾನವಿದೆ. ಆದರೆ ಶೆಟ್ಟಿಗೆ ?

ವೆಂ:—ಅದಕ್ಕೇನು ಕೊರತೆ ರಾಮಕೃಷ್ಣಯ್ಯ ! ಆ ಸೆಟ್ಟಿಯ ಸ್ವಾಧೀನತೆಯಲ್ಲಿ ಎಷ್ಟು ಹಾಳುಬಿದ್ದ ಗುಡಿಗಳಿವೆಯೋ ಎಷ್ಟು ದೈವದೇವಸ್ಥಾನಗಳಿವೆಯೋ ಅವನ್ನೆಲ್ಲ ವೆಂಕಟಸುಬ್ಬ ಜೀರ್ಣೋದ್ಧಾರ ಮಾಡಿಸುತ್ತಾನೆ ಎಂದು ಹೇಳಿರಿ. ಅವನ ಶಾಲೆಗೆ ನೂರು ರುಪಾಯಿ ಹರಕೆ ಹೇಳಿದ್ದೇನೆ ಎನ್ನಿರಿ.ಅವನ ಮನೆ ಇದಿರಿನ ರಸ್ತೆಗೆ ಮಳೆಗಾಲದಲ್ಲಿಯೂ ನೀರು ಚಿಮುಕಿಸುವ ವ್ಯವಸ್ಥೆ ಮಾಡಿಸುತ್ತಾನೆ; ಎಂದು ಆಶ್ವಾಸನ ಕೊಡಿರಿ.ಅಂಗಳದ ಬದಿಯಲ್ಲಿರುವ ಲಾಟನು ಕಂಬವನ್ನು ರಾತ್ರಿಹಗಲು ಉರಿಸುವ ವ್ಯವಸ್ಥೆ ಆಗುವುದು ಎಂದು ನಂಬಿಕೆ ಕೊಡಿ. ಎಷ್ಟು ಮಾತುಗಳನ್ನು ಕೊಡಬಹುದೋ ಅವುಗಳನ್ನೆಲ್ಲ ಮರೆಯದೆ ಕೊಡಿ. ಭರವಸೆ ಕೊಡಿ.

ರಾ:—ಬರಿಯ ಮಾತನ್ನು ನಂಬಬಹುದೇ ಆ ಶೆಟ್ಟಿ ! ಕೈ ಬಿಸಿಯಾದರೆ..

ವೆಂ:—(ಆತ್ಮಗತ) ಈ ಮುದಿಹದ್ದಿಗೆ ಹಣದ ರುಚಿ ಹುಟ್ಟಿದೆ ! ಹಣದ ಆಸೆ ಹುಟ್ಟಿದೆ, ಇರಲಿ; ಹೀಗೆ ಹೇಳುತ್ತೇನೆ. (ಪ್ರಕಾಶ) ರಿಟೈರ್ಡ್ ಶಿರಸ್ತೆದಾರರನ್ನು ನಗರಾಧ್ಯಕ್ಷರಾಗಲಿರುವವರ ಬೀಗನಾಗಲಿರುವವರನ್ನು, ಆ ಕಾಸುಗಳ್ಳ ಶೆಟ್ಟಿ ನಂಬುವುದಿಲ್ಲವೆಂದರೇನು ? ಇದನ್ನು ಸರ್ವಥಾ 'ಒಪ್ಪಲಾರೆ !

ರಾ:—ಸಿಟ್ಟಾಗಬೇಡಿ 'ಬೀಗಯ್ಯನವರೇ!' ತಮ್ಮ ಮಾತನ್ನು ಯಾರೂ ನಂಬಬಹುದು. ಸೆಟ್ಟಿಯ ಸ್ವಭಾವ ಹೀಗೆ—ಎಂದು ಹೇಳಿದೆನಷ್ಟೆ.. ಅವನ ಗುಣವನ್ನು ವಿಸ್ತರಿಸಿದೆನಷ್ಟೆ..

ವೆಂ:—ನಿಮ್ಮಿಬ್ಬರ ಪಾಲಿಗೂ ಇರುವ ಜೀವ ಒಂದೇ ಎಂದು ನೀವೆ ಆಡಿದಿ

ರಲ್ಲ. ಗುಣವೂ ಒಂದೇ ಆಗಲಿ. ಎಂದಿಷ್ಟೆ ನನ್ನ ಅರಿಕೆ.. ಸೆಟ್ಟಿಯನ್ನೂ ನಿಮ್ಮನ್ನೂ ಬಿಟ್ಟುಬಿಡುತ್ತೇನೆ. ನಾಳೆಯ ಬೀಗರ ಪರೀಕ್ಷೆ ಇಂದೇ ಆಗಲಿ....ನಾನೀಗ ಹೋಗುತ್ತೇನೆ ರಾಮಕೃಷ್ಣಯ್ಯನವರೇ! ಕಾರ್ ಹೊರಗೆ ನಿಂತಿದೆ..

ರಾ:—ಹಾಗಾದರೆ ಸೆಟ್ಟಿಯನ್ನು ನನಗೆ ಬಿಟ್ಟುಬಿಡಿ ವೆಂಕಟಸುಬ್ಬರಾಯರೆ! ಎಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣನಾದ ನನ್ನ ಮಗ ದಿನಕರನಿಗೆ ಮಗಳು ಕೊಡುವ ವೆಂಕಟಸುಬ್ಬರಾಯರಿಗೆ 'ನಿನ್ನ ಮತ ಕೊಡಲೇಬೇಕು ಸೆಟ್ಟಿ' ಎಂದು ಕಾಲಿಗೆ ಅಡ್ಡಬೀಳುತ್ತೇನೆ. ಉಪಾಯವಿಲ್ಲ. ನಿಮ್ಮಂಥವರ ಮಾತನ್ನು ನಿರಾಕರಿಸಲು ಆಗುವುದೇ ?.... ಮರೆತೆ ವೆಂಕಟಸುಬ್ಬರಾವ್! ಕಾರು ಎಂದಿರಲ್ಲ. ನನಗೊಂದು ಉಪಕಾರ ಮಾಡುವಿರಾ? ನನ್ನ ಮಗ ದಿನಕರ....ಎಂ....

ವೆಂ:—ಹೌದು; ಎಂ. ಎ. ಪರೀಕ್ಷೆಯಲ್ಲಿ ಓದಿದವ..ಏನಾದ?

ರಾ:—ದಿನಕರ ಕಲೆಕ್ಟರರ ಕಚೇರಿಗೆ ಕಾಲುನಡೆಯಲ್ಲಿ ಹೋಗುತ್ತಿದ್ದಾನೆ... ಸಮಯಕ್ಕೆ ಸರಿಯಾಗಿ ತಲುಪುತ್ತಾನೋ ಇಲ್ಲವೋ ತಿಳಿಯದು..

ವೆಂ:—ನನ್ನಿಂದ ಏನಾಗಬೇಕಾಗಿದೆ?

ರಾ:—ನಿಮಗೆ ತೊಂದರೆಯಾಗುವ ಸಂಭವವಿಲ್ಲದಿದ್ದರೆ ಆ ದಾರಿಯಲ್ಲಿ ಕಾರನು ಓಡಿಸಿಬಿಡಿ. ದಾರಿಯಲ್ಲಿ ಸಿಕ್ಕಿದರೆ ದಿನಕರನನ್ನು ಒಳಗೆ ಹಕ್ಕಿಕೊಳ್ಳಿ. ಸಾಧ್ಯವಾದರೆ ಕಚೇರಿಗೆ ಒಂಬತ್ತುವರೆ ಗಂಟೆಯೊಳಗೆ ತಲುಪಿಸಿಬಿಡಿ.. ಹೀಗೆ ಹೇಳಿದೆನೆಂದು ಬೇಸರವೇಂಟೇ?

ವೆಂ:—ಬೇಸರವೇಕೆ ರಾಮಕೃಷ್ಣಯ್ಯ! ನಿಮ್ಮ ಮನೆಯಲ್ಲಿ ಹುಟ್ಟಿ ಬೆಳೆದ ನಾಯಿ-ಬೆಕ್ಕುಗಳನ್ನು ಕೂಡ ಕಾರಿನಲ್ಲಿಟ್ಟು ಮೆರವಣಿಗೆ ಮಾಡಿಸಬೇಕಾದರೆ ನಾನು ಸಿದ್ಧನೇ! ಸುಶಿಕ್ಷಿತ ಎಂ. ಎ. ಪದವೀಧರನ ಸಹವಾಸ ಒಂದು ನಿಮಿಷವಾದರೂ ದೊರೆತರೆ ಅದೇ ಒಂದು ಭಾಗ್ಯವಲ್ಲವೇ ?..ಆದರೆ ಕಲೆಕ್ಟರರು ಕಚೇರಿಯಲ್ಲಿರುವ ಸಂಭವವಿಲ್ಲ..

ರಾ:—ಅಯ್ಯೋ! ಅದೇಕೆ?

ವೆಂ:—ಅವರು ಸುಬ್ರಹ್ಮಣ್ಯಕ್ಕೆ ಹೋಗುತ್ತಾರಂತೆ..

ರಾ:—ಏಕಂತೆ?

ವೆಂ:—ದನಕರುಗಳ ಸಂತೆಗೆ !

ರಾ:—ಅಲ್ಲೇನು ಮಾಡುವುದಕ್ಕೆ ?

ವೆಂ:—ಎಮ್ಮೆ ದನಗಳನ್ನು ಕೊಂಡುಕೊಳ್ಳುವುದಕ್ಕೆ !

ರಾ:—ಕಲೆಕ್ಟರರಿಗೇಕಂತೆ ಎಮ್ಮೆ ದನಗಳು ?

ವೆಂ:—ನಮ್ಮ ನಗರದಲ್ಲಿ ಶುದ್ಧವಾದ ಹಾಲನ್ನು ಒದಗಿಸುವ ಒಂದು ಏರ್ಪಾಡನ್ನು ಮಾಡುವುದಕ್ಕೆ.

ರಾ:—ಅವರಿಗೆ ಎಮ್ಮೆ ಸಾಕಿಸುವ ಹುಚ್ಚೂ ಹಿಡಿಯಿತೆ ?

ವೆಂ:—ಎಂ. ಎ. ಪಾಸಾಗುವ ಹುಚ್ಚಿನಂತೆ ಅದೂ ಒಂದು ಹುಚ್ಚು ರಾಮ ಕೃಷ್ಣಯ್ಯ !

ರಾ:—ಈ ದಿನ ತಾವು ಮಂಗಳೂರಲ್ಲಿ ಇರುವುದಾಗಿಯೂ, ನನ್ನ ಮಗನ ದರ್ಶನ ತೆಗೆದುಕೊಳ್ಳುವುದಾಗಿಯೂ, ಅವರೇ ಹೇಳಿದ್ದರಲ್ಲ !

ವೆಂ:—ಉದ್ಯೋಗ ಕೊಡುವುದಾಗಿ ಭರವಸೆ ಕೊಟ್ಟಿದ್ದರೆ?

ರಾ:—ಮಗ ಎಂ. ಎ. ಪಾಸಾಗಿದ್ದಾನೆ ಎಂದೆ. ಅಯ್ಯೋ ! ಮುದಿಶಿರಸ್ತೆ ದಾರರ ಮಗ. . ಎಂ. ಎ. ಪಾಸಾಗಿದ್ದಾನೆ. . ಅವನನ್ನೊಮ್ಮೆ ನೋಡಲೇಬೇಕು . . ಎಂದರು . .

ವೆಂ:—ಇರಬಹುದು. ಸುಬ್ರಹ್ಮಣ್ಯದ ಸಂತೆಯಲ್ಲಿ ಇಂತಹ ಪ್ರಾಣಿಗಳು ಸಿಕ್ಕುವಂತಿಲ್ಲ.

ರಾ:—ಸ್ಟೋನ್‌ಸಾಹೇಬರಿಗೆ ನನ್ನಲ್ಲಿ ಅತಿ ಪ್ರೇಮ !

ವೆಂ:—ವಸ್ತ್ರದ ಮೂಟೆಹೊರುವ ಶಕ್ತಿಯಿರುವಷ್ಟು ಕಾಲ ಅಗಸನಿಗೆ ತನ್ನ ಕತ್ತೆಯಲ್ಲಿ ಪ್ರೇಮವಿರುತ್ತದೆ.

ರಾ:—[ಬೇಸರದಿಂದ] ಹೂಂ....ಇರಬಹುದು. ಅದು ಹೇಗೂ ಇರಲಿ. ನನ್ನ ಮಗನನ್ನು ಅವರ ಕಚೇರಿಗೆ ಮುಟ್ಟಿಸುವಿರೋ ?

ವೆಂ:—ಅವಶ್ಯವಾಗಿ ! ಅಗತ್ಯವಾಗಿ !

ರಾ:—ಅವರು ಕಚೇರಿಯಲ್ಲಿ ಇಲ್ಲದಿದ್ದರೆ, ದಿನಕರ ನಿಮ್ಮ ಜೊತೆಯಲ್ಲಿಯೆ ಇರಲಿ. . ನಿರುದ್ಯೋಗದ ವ್ಯಸನ ಜೀವವನ್ನೆ ಹಸಿಹಸಿಯಾಗಿ ತಿನ್ನುತ್ತಿದೆ. ಇಷ್ಟು ಸಣ್ಣ ವಯಸ್ಸಿನಲ್ಲೆ ಮುಪ್ಪು ಹಿಡಿದಂತಾಗಿದೆ. ದಿನಕ್ಕೆ ನೂರಾರು ಕನ್ಯಾ ಜಾತಕಗಳು ಬರುತ್ತಿವೆ. . ಆದರೆ ನನ್ನ

ನಿರ್ಧಾರ ಹೀಗಿದೆ: ಉದ್ಯೋಗ ಸಂಪಾದನೆಯಾದ ಅನಂತರ ಮದುವೆ ಅಥವಾ ಉದ್ಯೋಗವಿಲ್ಲದಿದ್ದರೂ ಜೀವನನಿರ್ವಾಹಕ್ಕೆ ಅನುಕೂಲ ಆಗುವುದಿದ್ದರೆ ಮದುವೆ.

ವೆಂ:—ಅರ್ಥವಾಯಿತು ರಾಮಕೃಷ್ಣಯ್ಯ! ತಂದೆಯಾದವನ ಎಣಿಕೆ ಹೀಗೆ ಇರಬೇಕಲ್ಲವೆ? ಸೆಟ್ಟಿಯ ಮತವು ನನಗೆ ದೊರೆಯುವುದು ಖಂಡಿತ ವಷ್ಟೆ?

ರಾ:—ನಾನು ನಿಮ್ಮ ಕಣ್ಣ ಮುಂದಿರುವುದು ನಿಜವಾದರೆ ಅದೂ ನಿಜ.... ಆ ಮಾತು ಹಾಗಿರಲಿ. ದಿನಕರನ ವಿಚಾರವಾಗಿ ಹೇಳುವುದಿದ್ದರೆ, ಆತ ಎಂ. ಎ. ಯಲ್ಲಿ ಪ್ರಥಮಸ್ಥಾನ ಪಡೆದಿದ್ದಾನೆ. ಎರಡು ದಿನ ಮನೆಯಲ್ಲಿಟ್ಟುಕೊಂಡು ಯೋಗ್ಯತೆಯನ್ನು ಪರೀಕ್ಷೆಮಾಡಿ.. ಆತನು ಸ್ವಲ್ಪಮೌನಶಾಲಿ; ಮೂಕನೆಂದರೂ ಸರಿಯೆ. ಹತ್ತು ಕೇಳಿ ದರೆ ಒಂದು ಉತ್ತರ. ತುಂಬಿದಕೊಡ ಅದು. ಹೇಗಾದರೂ ಮಾತಾ ಡಿಸಿ ಆತನ ತಲೆ ಹೇಗಿದೆ ನೋಡಿರಿ. ಅವನು ಮಾತಾಡುವುದಿಲ್ಲವೆಂದು ನೀವೂ ಸುಮ್ಮನೆ ಕುಳಿತು ಬಿಟ್ಟರೆ ಕೆಲಸ ಕೆಟ್ಟಿತು. ನಾಳೆ ತಿಳಿದು ಬರುವ ಸಂಗತಿಯನ್ನು ಇಂದೇ ಹೇಳಿಬಿಡುತ್ತೇನೆ. ಯಾವುದಕ್ಕೂ ಎರಡು ದಿನ ಮನೆಯಲ್ಲಿಟ್ಟು ಪರೀಕ್ಷಿಸಿ ನೋಡಿ ಆತನನ್ನು ಯಾವ ವರ್ಗಕ್ಕೆ ಸೇರಿಸಬಹುದೆಂಬುದನ್ನು ನೀವೇ ತಿಳಿದುಕೊಳ್ಳಿರಿ.

ವೆಂ:—ಹೇಳಿದುದೆಲ್ಲ ನೆನಪಿನಲ್ಲಿದೆ. ಸವ್ಯಕ್ಕೆ ನನ್ನನ್ನು ಬಿಡುವಿರೇ?

ರಾ:— ಆಗಬಹುದು. (ವೆಂಕಟಸುಬ್ಬರಾಯರು ಅಂಗಳಕ್ಕೆ ಇಳಿದಮೇಲೆ ಓಡಿಹೋಗಿ) ನೀವು ಅವರೂ ಏನಾಗಿ ಬಂದವರು; ಒಂದು ಲೋಟ ಕಾಫಿಯನ್ನಾ ದರೂ ತೆಗೆದುಕೊಳ್ಳದೆ ಹೋಗುವುದು ಸರಿಯಲ್ಲ.

ವೆ:—ಕಾಫೀ-ಗೀಫಿ ನಾನೂ ನೀವೂ ಬೀಗರಾದ ಮೇಲೆ. ಈಗ ಅವಶ್ಯ ವಿಲ್ಲ.... ನಾನು ಹೋಗುತ್ತೇನೆ.

ರಾ:—ಅಂಗಳಕ್ಕೆ ಇಳಿದ ಮೇಲೆ ಕಾಫೀ ಕುಡಿಯಿರೆಂದು ಒತ್ತಾಯಿಸಿದ ಎಂದು ಭಾವಿಸಬೇಡಿರಿ.

ವೆ:—ಹಾಗೆ ಭಾವಿಸುವುದೂ ಇಲ್ಲ. ಈಗ ಕಾಫಿಯೂ ಬೇಡ.

ರಾ:—ಹಾಗಾದರೆ ಬಲಾತ್ಕಾರವಿಲ್ಲ.

ವೆ:—ಬೀಗರೊಳಗೆ ಬಲತ್ಕಾರವೇಕೆ ? ನನಗೆ ಅಪ್ಪಣೆ ಕೊಡಿರಿ.

ರಾ:—ಆಗಬಹುದು ನಮಸ್ಕಾರ ! ನೆನಪಿರಲಿ !

(ವೆಂಕಟಸುಬ್ಬರಾಯರು ಹೋಗುತ್ತಾರೆ. ಹೋಗುವಾಗ “ ಪ್ರಯತ್ನವು ಸಫಲವಾಗಲಿ; ಮತ್ತೆ ಕೆಲಸವಿಲ್ಲದ ಈ ಬಡಗಿಗೆ ಬುದ್ಧಿ ಕಲಿಸುತ್ತೇನೆ ” ಎನ್ನುವರು.)

ರಾ:—(ಹಿಂದಿರುಗುತ್ತಾ)ಗಂಡುಗಳಿಗೆ ವೈಧವ್ಯ ವೊದಗುವದೆಂದರೆ ಹೀಗೆ— ರಿಟೈರ್ ಆಗುವಾಗ ! ನನಗಿನ್ನು ಮನ್ನಣೆಯುಲ್ಲಿ ? ಕಂಡವರು ' ಅವಲಕ್ಷಣ ! ' ಎನ್ನುತ್ತಾರೆ. ದಾರಿಯಲ್ಲಿ ನಡೆವಾಗ ಕುಚೇಷ್ಟೆ ಮಾಡುತ್ತಾರೆ. ಅಯ್ಯೋ ಅವಸ್ಥೆಯೇ !

(ಪರದೆ ಬೀಳುವದು.)

ದೃಶ್ಯ ೨

[ಎರಡು ದಿನಗಳ ಅಂತರ. ಸಾಯಂಕಾಲ. ಕೈಸಾಲೆಯಲ್ಲಿ ಸೀತಮ್ಮ ವೀಳ್ಯದೆಲೆಯನ್ನು ಜಗಿಯುತ್ತಿದ್ದಾಳೆ. ರಾಮಕೃಷ್ಣಯ್ಯ ಸಿಗರೇಟು ಸೇದಿಕೊಂಡು ಕುರ್ಚಿಯಲ್ಲಿ ಕುಳಿತಿದ್ದಾನೆ.]

ಸೀ:—ನನಗೆ ಮುಂದಿನದೆಲ್ಲ ನಿಶ್ಚಯವಾಗಬೇಕು.

ರಾ:—ನಿಶ್ಚಯವೇನು ? ನಾನೂ ಸಾಯಬೇಕು; ನೀನೂ ಸಾಯಬೇಕು.

ಸೀ:—ಸಿಗರೇಟು ಸೇದಿಕೊಂಡೇ ? ಸಾಯುವುದೇ ? ಅಥವಾ—

ರಾ:—ವೀಳ್ಯ ಜಗಿದುಕೊಂಡೇ ? ಎಂಬುದು ಸಿದ್ಧಾಂತರ ಹೊಂದಬೇಕಲ್ಲವೇ ?

ಸೀ:—ನಿಮ್ಮ ಕುಚೇಷ್ಟೆ ಸಾಕು. ಮಗನಿಗೆ ಮೂವತ್ತು ವರ್ಷ ತುಂಬಿತು.

ರಾ:—ಹುಚ್ಚು ನಿನಗೆ! ಅವನಿಗಿನ್ನೂ ಇಪ್ಪತ್ತೈದೆ ಆಗಲಿಲ್ಲ.

ಸೀ:—ಯಾರೆಂಬರು ? ಕೃಷ್ಣರಾಯರ ಹೆಂಡತಿ ಗಂಗಮ್ಮ ಮೈನೆರೆದುದೂ ನಮ್ಮ ಹುಡುಗ ಹುಟ್ಟಿದುದೂ ಒಂದೇ ದಿನ ನನಗೆ ಈಗಲೂ ನೆನಪಿದೆ. ಆಕೆ ಮೈನೆರೆದು ಮೂವತ್ತು ವರ್ಷ ಆಯಿತು.

ರಾ:—ಅವಳು ರಜಸ್ವಲೆಯಾಗಿ ಮೂವತ್ತುವರ್ಷ ದಾಟಿರಬಹುದು.ಆಗಲಿ; ಯಾರು ಬೇಡವೆನ್ನುತ್ತಾರೆ ? ನನ್ನ ಮಗನಿಗೆ ಅಷ್ಟು ವರ್ಷವಾಗಲು ನನ್ನ ಒಪ್ಪಿಗೆಯಿಲ್ಲ.

ಸೀ:—ದೊಡ್ಡವರ ಹುಡಿಗಿಯರನ್ನು ತರುವ ಕುತೂಹಲದಲ್ಲಿ, ಅವರು ಮೂವತ್ತು ವರ್ಷದ ಮುದುಕನಿಗೆ ಹುಡುಗಿಯರನ್ನು ಕೊಡರೆಂದು ಬೆದರಿ, ಹುಡುಗನ ಪ್ರಾಯವನ್ನು ಕಡಿಮೆಮಾಡಿದ್ದೀರಿ. ಹಾಗೆ ಜಾತಕ ಬರೆಯಿಸಿದ್ದೀರಿ.

ರಾ:—ತಲೆಯಿಲ್ಲದ ಗೊಡ್ಡು ಹೆಂಗಸು ನೀನು. ನನ್ನ ಆಲೋಚನೆ ನಿನಗೆ ಹೇಗೆ ತಿಳಿದೀತು? ವೆಂಕಟಸುಬ್ಬರಾಯನಿಗೆ ಹದಿನಾಲ್ಕು ವಯಸ್ಸಿನ ಹುಡುಗಿಯಿದ್ದಾಳೆ. ಕಾಣುವುದಕ್ಕೆ ರತಿಸುಂದರಿ. ಮನೆತುಂಬ ಸಿರಿ....ಸಂಪತ್ತು..ಗಂಡು ಮಕ್ಕಳಿಲ್ಲ. ಎಂ ಎ. ಪಾಸಾದವನಿಗೆ ಹುಡುಗಿಯನ್ನು ಕೊಡಬೇಕೆಂದು ತಂದೆಯ ಇಷ್ಟ. ಎಳೆ ಹುಡುಗ ನಾಗಬೇಕು; ವಿದ್ಯೆ ವಿಶೇಷ ಇಲ್ಲದಿದ್ದರೂ ಚಿಂತೆಯಿಲ್ಲವೆಂದು ಅವನ ಹೆಂಡತಿಯ ಬಯಕೆ. ಜಾತಕ ಸರಿಯಾಗಿ ಕೂಡಿಬರಬೇಕು ಎಂದು ಹುಡಿಗಿಯ ಅಜ್ಜಿಯ ಇಚ್ಛೆ. ಈ ಮೂರು ಶರತಗಳಲ್ಲಿ ಒಂದನೆಯದನ್ನು ದಿನಕರನೆ ನೆರವೇರಿಸಿದ್ದಾನೆ; ಎಂ. ಎ. ಯಲ್ಲಿ ತೇರ್ಗಡೆ ಹೊಂದಿದ್ದಾನೆ. ಉಳಿದ ಎರಡು ಶರತಗಳನ್ನು-ಹೆತ್ತು-ಹೊತ್ತು, ಸಾಕಿ ಸಲಹಿ, ಲಾಲಿಸಿ ಪಾಲಿಸಿ, ವಿದ್ಯೆಕೊಟ್ಟು, ಬುದ್ಧಿ ಕಲಿಸಿದವನಾದರೂ ಪೂರೈಸಬೇಡವೇ? ಎಂದು ಜಾತಕವಂದನ್ನು ಮಾಡಿಸಿದೆ. ಇಪ್ಪತ್ತೈದು ವಯಸ್ಸನ್ನು ತೋರಿಸುವ ಜಾತಕ ಅದು! ಹುಡಿಗಿಯಿದಕ್ಕೆ ಸರಿಯಾಗಿ ಮೇಳವಾಗುವ ದಿವ್ಯಜಾತಕ ಅದು! ನಮ್ಮ ಹುಡುಗನ ಮುಖ ನೋಡಿದರೆ ಆತನಿಗೆ ಇಪ್ಪತ್ತು ವರ್ಷವೆನ್ನುವುದೇ ಕಷ್ಟ.

ಸೀ:—ಹೀಗೆ ಮಾಡುವುದರ ಬದಲಾಗಿ ಹುಡಿಗಿಯನ್ನು ಕದ್ದು ತರಬಾರದೇ?

ರಾ:—ಪಾಪ! ಹುಡುಗನಿಗೆ ಇನ್ನೂ ಮೀಸೆ ಹುಟ್ಟಿಲ್ಲ!

ಸೀ:—ನಿಮ್ಮ ಮುಖದಲ್ಲಿ ಮೀಸೆ ಇದೆಯೋ?

ರಾ:—ಕೆಟ್ಟ ಹೆಂಗುಸು ನೀನು!

ಸೀ:—ಆಗಿರಬಹುದು. ಕೆಟ್ಟವಳಾದರೂ ಐವತ್ತೈದು ವರ್ಷವಾಯಿತು. ನಿಮ್ಮ ಕೈಹಿಡಿದೇ ನಲವತ್ತೈದಾಯಿತು. ಇನ್ನು ಕೆಟ್ಟವಳಾಗ ದಿದ್ದರೆ ಇನ್ನಾಗುವುದು ಎಂದು?

ರಾ:—ನಿನ್ನ ಈ ದುಷ್ಟಹೃದಯದ ಅನುಭವ ಈ ನಲುವತ್ತೈದು ವರ್ಷಗ ಳಲ್ಲಿಯೂ ನನಗೆ ಆಗಲಿಲ್ಲವಲ್ಲಾ ! ಇದೇ ಸೋಜಿಗ.

ಸೀ:—ಗೃಹಕೃತ್ಯದ ಮುಂದಿನ ವ್ಯವಸ್ಥೆಗಳೆಲ್ಲ ಇಂದೇ ನಿಶ್ಚಯವಾಗ ಬೇಕು. ದೇಹದಲ್ಲಿ ಶಕ್ತಿಯಿಲ್ಲ....

ರಾ:—ಅದೂ ಇರುತ್ತಿದ್ದರೆ ಮುದುಕನಾದ ನನ್ನ ಗತಿಯೇನಾಗುತ್ತಿತ್ತೊ!

ಸೀ:—ಗೆಯ್ಯುವುದಕ್ಕೆ ಆಗುವುದಿಲ್ಲ. ಒಬ್ಬಳೆ ಬಿಟ್ಟಿ ಮಾಡಿ ಸಾಕಾಯಿತು. ಮಗನಿಗೆ ಒಂದು ಮದುವೆಮಾಡಿ ಎಂದು ಮೊದಲೇ ಹೇಳಿದ್ದೆ.

ರಾ:—ಮದುವೆ ಮಾಡಿಸಬೇಕೆಂದು ಯೋಚಿಸಿದರೆ, ಜಾತಕವೇ ಸುಳ್ಳೆಂದು ನೀನು ಡಂಗುರ ಹೊಡೆಯುತ್ತೀ !

ಸೀ:—ಮದುವೆ ಮಾಡುವದರ ಬದಲು ಎಂ. ಎ ಓದಿಸಿದಿರಿ. ವಯಸ್ಸನ್ನು ಮುಚ್ಚಿಡಲು ಸುಳ್ಳು ಜಾತಕ ಮಾಡಿದಿರಿ. ತಾನಿನ್ನೂ ಮೂರು ವರ್ಷದ ಕೂಸು ಎಂದು ದಿನಕರನ ಭಾವನೆ. ದುಡಿಯುವುದಕ್ಕೆ ಮರ್ಯಾದೆ ಬಿಡುವುದಿಲ್ಲ. ನನ್ನ ಮಾತಿನಂತೆ ನಡೆಯುತ್ತಿದ್ದರೆ, ಈ ಮೊದಲೇ ನನಗೊಬ್ಬಳು ಸೊಸೆ ಬರುತ್ತಿದ್ದಳು. ದಿನಕರ ಉಂಡುಟ್ಟು ಸುಖವಾಗಿರುತ್ತಿದ್ದ. ಆತನ ಹೆಂಡತಿ ನನಗೆ ಅನುಕೂಲೆಯಾಗಿ ಗೃಹಕೃತ್ಯವನ್ನು ನಡಿಸಿಕೊಂಡು ಬರುತ್ತಿದ್ದಳು. ಸಾಯುವ ಮೊದಲೆ ಅಜ್ಜಿಯೆನಿಸಿ ನಾಲ್ಕಾರು ಮೊಮ್ಮಕ್ಕಳು ಮರಿಗಳನ್ನು ತೊಡೆಯ ಮೇಲೆ ಆಡಿಸಿಕೊಂಡು—

ರಾ:—ಒಂದುಮಣ ತಾಂಬೂಲ ಜಗಿದುಕೊಂಡು—ಎಂದು ಹೇಳು . .

ಸೀ :—ಕಣ್ಣಾರೆ ನೋಡಿ ಸುಖವಾಗಿ ಸತ್ತು ನೆಟ್ಟನೆ ಸ್ವರ್ಗಕ್ಕೆ ಹೋಗ ಬಹುದಾಗಿತ್ತು.

ರಾ:—ಹಟ್ಟಿಯಲ್ಲಿರುವ ನಿನ್ನ ಮಕ್ಕಳು,ಮರಿಮಕ್ಕಳನ್ನು ನೋಡಿ ಸಂತೋ ಷದಿಂದ ವೀಳ್ಯ ಜಿಗಿದುಕೊಂಡೆ ಹೋಗಬಹುದಲ್ಲ ಸ್ವರ್ಗಕ್ಕೆ.

ಸೀ:—ಹೌದು; ಹಟ್ಟಿಯಲ್ಲಿರುವ ದನ ಹಾಲು ಕೊಡುತ್ತದೆ. ರಿಟೈರ್ ಹೊಂದಿದ ಅಧಿಕಾರ ಬತ್ತಿದ ದನಕ್ಕಿಂತಲೂ ಕಡೆ ! ನಿರುದ್ಯೋಗಿ ಯಾದ ಎಂ. ಎ. ಹಟ್ಟಿಯ ಹೋರಿಗಿಂತಲೂ ಕನಿಷ್ಠ ?

ರಾ:—'ಕತ್ತೆಬಲ್ಲುದೆ ಹೊತ್ತ ಕತ್ತುರಿಯ ಪರಿಮಳವ' ಎಂದು ಸುಮ್ಮನೆ

ಹೇಳಲಿಲ್ಲ ಕವಿ. ನಿನ್ನಂಥ ಪ್ರಾಣಿಗಳನ್ನು ನೋಡಿಕೊಂಡೇ ಹಾಗೆ ಹೇಳಿದ್ದು! ನಾಳೆ ಮುನಸೀಫನೋ ಕಲೆಕ್ಟರನೋ ಆಗಲಿರುವ ಎಂ. ಎ. ಪಾಸಾದ ಮಗ ನಿನ್ನ ಮನೆಯೊಳಗೆ ಬಾಲಚಂದ್ರನಂತೆ ಪ್ರವರ್ಧಮಾನನಾಗಿ ವಿರಾಜಿಸುತ್ತಿರುವಾಗ ಅವನ ವಿದ್ಯೆ, ಶೀಲ, ಯೋಗ್ಯತೆ ಯಾವುದನ್ನೂ ತಿಳಿಯದೆ ಒದರುತ್ತಿರುವೆಯಲ್ಲ!

ಸೀ:—ಮನೆ ದೇವರ ಮುಂದೆ ಪ್ರಮಾಣಮಾಡಿ ಹೇಳುತ್ತೇನೆ: ಮಗನನ್ನು ಹೀಗೆಯೆ ಬಿಟ್ಟರೆ ಖಂಡಿತವಾಗಿ ಬೀದಿಯ ನವಾಬನಾಗುತ್ತಾನೆ.

ರಾ:—ಮಗನನ್ನು ಜೀವಸಮೇತ ಇರುವಂತೆಯೆ ನನಗೆ ಬಿಟ್ಟುಬಿಡು. ಕೆಲಸ ಕೊಡುವ ಸ್ಟೋನ್‌ಸಾಹೇಬರೂ ಇದ್ದಾರೆ. ಮೂವತ್ತು ವರ್ಷದ ವಿಧೇಯ ಸೇವೆ ಸಲಿಸಿದ ಭಕ್ತ, ನಾನೂ ಇದ್ದೇನೆ.

ಸೀ:—ದಿನಕರನ ಮುಖ ನೋಡಿದರೆ, ಸರಕಾರಿ ಹುದ್ದೆದಾರನಾಗುವವನಂತೆ ತೋರುವುದಿಲ್ಲ. ದೇವರಾಣೆ ಸತ್ಯವಿದು!

ರಾ:—ನಿನ್ನ ದೇವರೂ ಬೇಡ; ಆಣೆಯೂ ಬೇಡ. ಯಾವುದೂ ಇಲ್ಲದಿದ್ದರೆ ವೆಂಕಟಸುಬ್ಬಯ್ಯನ ಸಂಬಂಧವೊಂದು ಇದೆಯಲ್ಲ. ಅದು ಸಾಕು. ಮಗನಿಗೆ ಭವಿಷ್ಯದ ಹೆದರಿಕೆಯಿಲ್ಲ.

ಸೀ:— ಅನ್ನ ಹಾಕಿದರೆ ಬಾಲ ಅಲ್ಲಾಡಿಸಿ, ಓಡಿಹೋಗುವ ಕುನ್ನಿಯಂತೆ, ಮಾವನಮನೆ ಕೂಳನ್ನು ಧ್ವಂಸಮಾಡಿಕೊಂಡು ಕಾಲಯಾಪನೆ ಮಾಡುವ ಯೋಗ್ಯತೆಯೂ ಈ ನಿಮ್ಮ ಮಗನಿಗೆ ಇಲ್ಲ.

ರಾ:—(ಸಿಟ್ಟು ಬಂದು) ಮುಚ್ಚು, ಬಾಯಿ ಮುಚ್ಚು! ನನ್ನ ಮಗನನ್ನು ಹೀಗೆ ಜರೆಯಬೇಡ.

ಸೀ:—ಮಗ ನಿಮ್ಮೊಬ್ಬರ ಅಧಿಕಾರಕ್ಕೆ ಸೇರಿದವನೆಂದು ಬ್ರಹ್ಮಶಾಸನ ಮಾಡಿಲ್ಲ. ಅವನ ತಲೆಗೇರಿದ ಹೆಮ್ಮೆಯಲ್ಲಿ ಮಾತ್ರ ನಿಮಗೇ ಹಕ್ಕು! ಮೊನ್ನೆಮೊನ್ನೆಯವರೆಗೆ ತಾಯಿ ಯಾವ ಕೆಲಸ ಹೇಳಿದರೂ ಮಾಡುತ್ತಿದ್ದ ಹುಡುಗ ಬಿ. ಎ. ಎನಿಸಿಕೊಂಡ. ಹೆಮ್ಮೆ ಮೂಗಿನವರೆಗೇರಿತು; ಎಂ. ಎ. ಆದ; ನೆತ್ತಿಗೇರಿತು. ಇದಕ್ಕೆಲ್ಲ ಕಾರಣ ನೀವೆ. ಅವನ ಮೆದುಳು ಈಗ ಕೊಳೆತಿದೆ. ಮೈಮುರಿದು ಕೆಲಸ ಮಾಡಲು ಬರುವುದಿಲ್ಲ. ಬಾರದಿದ್ದರೆ ನಾನೇ ಕಲಿಸುತ್ತೇನೆ ನೋಡಿ. ಪುಸ್ತಕ

ರಾಶಿಯನ್ನು ಸುಟ್ಟು ಭಸ್ಮಮಾಡಿಸುತ್ತೇನೆ 'ಹಾರೆ ತೆಗೆದುಕೋ ಗುದ್ದಲಿಹಿಡಿ' ಎಂದು ಹುಕುಂ ಕೊಡುತ್ತೇನೆ. ಪುಸ್ತಕದ ಬೂದಿ ಯನ್ನು ಬದನೆಗಿಡಕ್ಕೆ ಹಾಕಿದರೆ ನಾಲ್ಕು ಬದನೆಕಾಯಾದರೂ ಆದೀತು; ಎಂದು ಪ್ರತ್ಯಕ್ಷವಾಗಿ ತೋರಿಸಿಕೊಡುತ್ತೇನೆ. ಅತ್ತೆ ಮಾವಂದಿರಿಗೆ ವಿಧೇಯಳಾಗಿರಬಲ್ಲ ಬಡಹುಡುಗಿಯೊಬ್ಬಳನ್ನು ತಂದು ಅವನ ಕೊರಳಿಗೆ ಕಟ್ಟುತ್ತೇನೆ....

ರಾ:—ಜೋಕೆ ಸೀತು ! ಮಾವನ ಸುದ್ದಿ ನಿನಗೆ ಬೇಡ !

ಸೀ:—ಅಂತಹ ಹುಡುಗಿಯೊಬ್ಬಳನ್ನು ತಂದು ಮದುವೆ ಮಾಡಿಸುತ್ತೇನೆ. ಆಗ ಮನೆಕೆಲಸಗಳನ್ನು ಅವಳು ನೋಡಬಹುದು. ಎಮ್ಮೆದನಗಳ ಸಾಕಣೆಯನ್ನು ನಾನು ಮಾಡಬಹುದು. ದಿನಕರ ಹಾಲುಬೆಣ್ಣೆ ಮಾರಬಹುದು. ನೀವು ಹೀಗೆಯೇ ಸಿಗರೇಟು ಸೇದಬಹುದು. ಸಂಸಾರವೆಂಬ ಘೋರ ಸಮುದ್ರದಲ್ಲಿ ನಮ್ಮ ಈ ಹರುಕು ಮನೆ ಯೆಂಬ ಒಡೆದ ದೋಣಿ ಮುಳುಗದಿರಬೇಕಾದರೆ ಇದೊಂದೇ ಉಪಾಯ . .

ರಾ:—ಗುಣಕ್ಕೆ ಮತ್ಸರವಿಲ್ಲ ಸೀತು. ಒಳ್ಳೆಯ ಅಲಂಕಾರದ ಮಾತನ್ನಾಡಿ ರುವೆ ನೀನು. ಆದರೆ. . ಆದರೆ. . ಹಾಲುಬೆಣ್ಣೆ ಮಾರುವುದಕ್ಕಲ್ಲ ದಿನಕರ ಎಂ. ಎ. ಓದಿದುದು. ಮುಚ್ಚುಬಾಯಿ. ಆತ ಬಂದನೆಂದು ತೋರುತ್ತದೆ. ಅಂಗಳದಲ್ಲಿ ಸದ್ದಾಗುತ್ತದೆ. ಮಾತಿನ ಪೆಟ್ಟಿಗೆಗೆ ಬೀಗ ಹಾಕು ! ದಮ್ಮಯ್ಯ ಬೀಗಹಾಕು !

ಸೀ:—ಮಾತಾಡದಿರುವುದನ್ನೂ ಬಲ್ಲೆ; ಸುಮ್ಮನೆ ಕುಳಿತುಕೊಳ್ಳಲೂ ಬಲ್ಲೆ. ನನ್ನ ಆಡಳಿತೆಯಲ್ಲಿ ಗೃಹಕೃತ್ಯ ನಡೆಯಬೇಕಾದರೆ ನಾನು ಹೇಳಿ ದಂತೆಯೇ ಆಗಬೇಕು. ಹಾಗಾಗದಿದ್ದರೆ ನೀವು ಸಿಗರೇಟು ಸೇದಿ; ನಾನು ನಾರಾಯಣಾ ! ಗೋವಿಂದಾ ! ಪದ್ಮನಾಭಾ ! ಎಂದು ಜಪಮಾಡುತ್ತಾ ಹಾಸಿಗೆಯಲ್ಲಿ ಬಿದ್ದುಕೊಳ್ಳುತ್ತೇನೆ.

ರಾ:—ನಾನು ಮಾತಾಡಿದರೆ ನಿನಗೆ ಆಗುವುದಿಲ್ಲ. ಮಾತಾಡಿಸದೆ ಬಿಡುವು ದಿಲ್ಲ. ಸತ್ಯಾಗ್ರಹ ಹೂಡು ! ಯಾರು ಬೇಡವೆನ್ನುತ್ತಾರೆ. ದಿನಕರ ಬಂದ. " ಮಗನೇ ! ಎಮ್ಮೆ ದನ ಸಾಕುವ, ಸೆಗಣಿಹೆಕ್ಕುವ, ಬೆರಣಿ

ಕಟ್ಟುವ ಒಳ್ಳೆಯ ಹುದ್ದೆಯನ್ನು ನಿನ್ನ ಹೆತ್ತಮ್ಮ ಸಂಪಾದಿಸಿ ಇಟ್ಟಿದ್ದಾಳೆ. ಅದನ್ನು ಬಿಡಬೇಡ" ಎಂದು ಅವನಲ್ಲಿ ಹೇಳಿ ಬಿಡುತ್ತೇನೆ. ಅವನೂ ಒಪ್ಪಿದರೆ ನನ್ನಿಂದ ಅಡ್ಡಿಬಾರದು ಮಹಂಕಾಳಿ!

ಸೀ:—ಅವನಿಗೂ ಒಂದು ಅಭಿಪ್ರಾಯವೇ? ನಿಮ್ಮ ಮಾತಿನ ಪ್ರತಿಧ್ವನಿ (ದಿನಕರ ಬರುವುದು ಕಾಣುತ್ತದೆ)

ರಾ:—ಬಾ ಮಗನೇ ಬಾ! ನಿನ್ನಮ್ಮ ಡೊಣ್ಣೆ ಹಿಡಿದಿದ್ದಾಳೆ.... ಬದುಕಿಸು ತಂದ ಶುಭವಾರ್ತೆಯಿಂದ ಆ ಡೊಣ್ಣೆಯನ್ನು ಉರುಳಿಸಿಬಿಡು!

ಸೀ:—ದೊಣ್ಣೆಯಿಲ್ಲ ಹಿಡಿಕಂಟೆ!

ರಾ:—ಶಸ್ತ್ರಸಂನ್ಯಾಸ ಮಾಡು ಕಾಳೀ! ಕರಾಳೀ! ಮಹಿಷಮರ್ದಿನಿ! ಬಾ..ಮಗು..ದಿನಕರ! ಬಾ..ಬಾ.. (ದಿನಕರನ ಕಡೆಗೆ ಆಶೆಯಿಂದ ನೋಡಿ, ಆತ್ಮಗತ) ಮುಖ ಕಂದಿಹೋಗಿದೆ. ಸೋತು ಬಂದ ಚಿಹ್ನೆಯೇ? (ಪ್ರಕಾಶ) ಮಗು! ಬಾ! ನಿನ್ನ ತಾಯಿಯ ಕೈಯಿಂದ ಈ ಮುದಿ ಜೀವವನ್ನು ಬದುಕಿಸು. ಉದ್ಯೋಗ ಸಿಕ್ಕಿತೆಂದು ಹೇಳು.. (ದಿನಕರ ಮಾತಾಡದೆ ಬರುತ್ತಾನೆ ಅವನ ಕಡೆಗೆ ಒಂದೆರಡು ಹೆಜ್ಜೆ ಆತುರದಿಂದ ಹೋಗಿ) ಹೋದ ಕೆಲಸ ಗಂಡೋ ಹೆಣ್ಣೋ ಮೊದಲು ಹೇಳಿ ಮತ್ತೆ ವಿಶ್ರಾಂತಿ. (ದಿನಕರ ಜೋಲುಮೋರೆ ಹಾಕಿಕೊಂಡು, ಅಂಗಿಯನ್ನು ತೆಗೆದು ದೊಪ್ಪನೆ ನೆಲಕ್ಕೆ ಒಗೆಯುತ್ತಾನೆ. ಉಸ್ಸೆಂದು ನಿಟ್ಟುಸಿರು ಬಿಡುತ್ತಾನೆ.) ಅಯ್ಯೋ! ನಾನು ಹೋದಲ್ಲಿ ಬಂದಲ್ಲಿ ನಿಟ್ಟುಸಿರು! ಕಣ್ಣೀರು! ಜೋಲುಮೋರೆ!

ದಿ:—ಎಲ್ಲವನ್ನೂ ವಿಸ್ತಾರವಾಗಿ ಹೇಳುತ್ತೇನೆ. ಮೊದಲು ಈ ವೇಷಕ್ಕೆ ನಮಸ್ಕಾರ ಹೊಡೆಯುತ್ತೇನೆ. (ಎಂದು ನೆಕ್‌ಟೈಯನ್ನು ಬಿಚ್ಚುವನು.)

ರಾ:—ನನಗೆ ನಿರಾಶೆಯುಂಟು ಮಾಡುವೆಯಲ್ಲ!

ದಿ:—ನಾನು ಉಂಟು ಮಾಡಿದ ನಿರಾಶೆಯಲ್ಲ ಇದು; ತಾನಾಗಿ ಆದುದು!

ರಾ:—ಸ್ಟೋನ್‌ಸಾಹೇಬರನ್ನು ಕಂಡೆಯೋ? ರಿಟೈರ್ಡ್ ಸಿರಸ್ತೆದಾರ ರಾಮಕೃಷ್ಣಯ್ಯನವರ ಮಗ; ಎಂ. ಎ. ಪಾಸಾಗಿದ್ದೇನೆ ಎಂದೆಯೋ?

ದಿ:—ನೀವು ಹೇಳಿಕೊಟ್ಟ ಬುದ್ಧಿವಾದವನ್ನು ಬಾಯಿಪಾಠ ಮಾಡಿ ಪ್ರಯೋಗಿಸಿದೆ.

ರಾ:—ಅವರೇನೆಂದರು?

ದಿ:—ಹೇಳಲು ಸಂಕೋಚವಾಗುವುದು ತಂದೆ! ಏನೋ ಒಂದು ತರ ಮಾತಾಡಿದರು. ಕೇಳಿದರೆ, ನಿಮಗೆ ವ್ಯಸನವಾದೀತು.

ರಾ:—ಒಗಟಿನಂತೆ ಮಾತಾಡಬೇಡ. ಎಲ್ಲವನ್ನೂ ಬಿಚ್ಚಿ ಹೇಳು.

ದಿ:—ಬಿಚ್ಚಿ ಹೇಳಬೇಕಾದರೆ ಹಾಗೆಯೇ ಮಾಡುತ್ತೇನೆ. He is a fool… ಅವನೊಬ್ಬ ಹುಚ್ಚ..ಎಂದರು.

ರಾ:—ಅವರ ಮಗ ನಾನು ಎಂದೆಯೊ?

ದಿ:—ಯಾರನ್ನು ಸ್ಟೋನ್‌ಸಾಹೇಬರು ಹುಚ್ಚನೆಂಬ ಬಿರುದಿಟ್ಟು ಕರೆದರೋ ಅವರ ಮಗನೇ ನಾನೆಂದು ರುಜುವಾತು ಕೊಟ್ಟೆ.

ರಾ:—ಉತ್ತರ ಏನು ಬಂತು?

ದಿ:—ಹೀಗೆ ಬಂತು. ನಿನ್ನ ತಂದೆಯ ಮೇಲೆ ನನಗೆ ಕನಿಕರವಿತ್ತು. ಆಗ ಆತನಿಗೆ ಮೆದುಳಿತ್ತು. ಮೆದುಳು ಸರಿಯಾಗಿಯೂ ಇತ್ತು. ಹೇಸರ ಕತ್ತೆಯಂತೆ ಕೆಲಸ ಮಾಡುವ ಶಕ್ತಿಯೂ ಇತ್ತು. ಈಗ ಮೆದುಳಿಲ್ಲ ಹಾಳಾಗಿದೆ. ಆದ್ದರಿಂದ ಈಗ ಕನಿಕರ. ನೀನೂ ಅವನ ಮಗನಾಗಿದ್ದರೆ ಮೊದಲು ಡಾಕ್ಟರರಿಂದ ಮೆದುಳಿನ ಪರೀಕ್ಷೆಮಾಡಿಸಿಕೊಂಡು ಮತ್ತೆ ಬಾ ಇಲ್ಲಿಗೆ..ಎಂದರು.

ರಾ:—ನಿನ್ನ ಮುದಿತಂದೆಗೆ ನಾಲ್ಕು ದಿಕ್ಕಿನಿಂದಲೂ ಅಪಮಾನ! ಅಪಮಾನ!

ದಿ:—ಮತ್ತೂ ಹೇಳಿದರು:-ನಮ್ಮ ಕಚೇರಿಯಲ್ಲಿ ಗವ್ಹರ್ನರರ ಕೆಲಸಕ್ಕೆ ನೇಮಕವೇನೂ ಆಗುವುದಿಲ್ಲ. ಒಂದೇ ಒಂದು ಕೆಲಸ ಖಾಲಿಯಾಗಿದೆ. ಕಪಬಳಿವ ರಾಮು ಕೆಲವು ದಿವಸಗಳಿಂದ ಜ್ವರ ಪೀಡಿತನಾಗಿದ್ದಾನೆ. ಹದಿನೈದು ದಿವಸಗಳ ವರೆಗೆ ರಜೆ ಪಡೆದಿದ್ದಾನೆ. ಅಷ್ಟು ದಿವಸ ಶುದ್ಧವಾದ ಇಂಗ್ಲೀಷನ್ನೆ ಆಡಿಕೊಂಡು ನೆಲಗುಡಿಸಿ ಶುದ್ಧ ಮಾಡಬಹುದು.

ರಾ:—ಅಯ್ಯೋ! ಲೋಕವೇ ನನಗೆ ವಿರುದ್ಧ. ಲೋಕದ ಒಳಗೇ ಇರುವ ಸ್ಟೋನ್‌ಸಾಹೇಬರೂ ವಿರೋಧಿಗಳು! ವ. ನೆಮಂದಿಯೂ ವಿರೋಧಿಗಳು!

ದಿ:—ಬಡತನವೂ ಕಾಸುಬೆಲೆಯಿಲ್ಲದ ಪುಸ್ತಕವಿದ್ಯೆಯೂ ವಿರೋಧಿಗಳ ಸಂಖ್ಯೆಯನ್ನೆ ಹೆಚ್ಚಿಸುವುವು.

ರಾ:—ನೀನೂ ಹೀಗೆನ್ನುವುದಿದ್ದರೆ, ಇದನ್ನಲ್ಲವೇ ಗ್ರಹಚಾರವೆಂದು ಹೇಳಬೇಕು ?

ದಿ:—ಆನಂತರ ವೆಂಕಟಸುಬ್ಬರಾಯರಲ್ಲಿಗೆ ಹೋದೆ. ಹೊಟ್ಟೆತುಂಬ ಊಟ ಮಾಡುವುದಕ್ಕಲ್ಲದೆ ಮತ್ತೇಕೆ ನಾನು ಹೋದುದೆಂದೂ ನನ್ನನ್ನೇಕೆ ಅವರು ಬರಮಾಡಿಕೊಂಡುದೆಂದೂ ನನಗೇನೂ ತಿಳಿಯಲಿಲ್ಲ.

ರಾ:—ಅವರು ನಿನ್ನನ್ನು ಮಾತಾಡಿಸಿದರೋ ?

ದಿ:—ಸತ್ತ ಹೆಣವಿರುವ ಸ್ಥಳದಿಂದ ದೂರ ನಿಲ್ಲುವಂತೆ–

ರಾ:—ನಾನು ಜೀವಂತನಾಗಿರುವಾಗ ಹೀಗೆಲ್ಲ ಹೇಳಬೇಡ ಮಗು !

ದಿ:—ನಾನು ಜೀವಂತನಾಗಿದ್ದಾಗಲೆ ಅನುಭವಿಸಿದ ಸಂಗತಿಯಿದು !

ರಾ:—ನಮ್ಮ ಸಹಾಯದಿಂದ ನಗರ ಸಭಾಧ್ಯಕ್ಷರ ಗದ್ದುಗೆಯನ್ನೇರಿದ ಮೇಲೆ ನಮ್ಮ ನೆನಪಿರುವುದು ಹೇಗೆ ಅವರಿಗೆ ?

ದಿ:—ಸೀತಾರಾಮಸೆಟ್ಟಿ ಅವರಿಗೆ ಮತಕೊಡಲಿಲ್ಲವಂತೆ. ನಮ್ಮ ಸಹಾಯದಿಂದ ಪ್ರಯೋಜನವೇನೂ ಆಗಲಿಲ್ಲವಂತೆ. ಆದರೂ ಅವರು ಅಧ್ಯಕ್ಷಸ್ಥಾನವನ್ನು ಏರಿದರಂತೆ.

ರಾ:—ಹಣ್ಣನ್ನು ಸುಲಿದು ಅದನ್ನು ನುಂಗಿ ಹೊಟ್ಟೆತುಂಬಿಸಿಕೊಂಡು ತೇಗಿದ ಮೇಲೆ– ಎಲೇ ಹಣ್ಣೇ ! ನಿನ್ನಿಂದ ನನಗೇನೂ ಪ್ರಯೋಜನವಾಗಲಿಲ್ಲ ! ಎಂದಂತೆ ಆಯಿತಲ್ಲ ಈ ಕಡಗಟ್ಟು ! ಅಥವಾ ಸುಳ್ಳು ಹೇಳಿ ನೀನೂ ಮುದಿತಂದೆಯನ್ನು ತಮಾಷೆ ಮಾಡುವೆಯಾ ?

ದಿ:—ತೆಗೆದುಕೊಳ್ಳಿ ! ಅವರೇನೋ ಒಂದು ಕಾಗದವನ್ನು ಕೊಟ್ಟಿದ್ದಾರೆ. ಅದರಿಂದ ಎಲ್ಲವೂ ವಿದಿತವಾಗಬಹುದು (ಕಾಗದವನ್ನು ಕೊಡುವನು)

ರಾ:—(ಪತ್ರವನ್ನೋದುತ್ತ ಮೈಯೆಲ್ಲ ಬೆವತು ನಿಟ್ಟುಸಿರು ಕರೆಯುತ್ತಾರೆ) ನನ್ನ ಆಶೆಯೆಲ್ಲ ಅರಬಿಸಮುದ್ರಕ್ಕೆ ಬಿತ್ತು. ನನಗೆ ಹುಚ್ಚನಾಗುವ ಕಾಲ ಒಂತು. ಹೀಗೂ ಬರೆಯಬಹುದೇ ? “ ನನ್ನ ಮಗ ಯಾವ ವರ್ಗಕ್ಕೆ ಸೇರಬಹುದು ? ಎಂದು ಕೇಳಿದ್ದೀರಿ. ಪರೀಕ್ಷೆ ಮಾಡಿದೆ. ಆತನನ್ನು ಪ್ರಾಣಿ ವರ್ಗಕ್ಕೆ ಸೇರಿಸಬಹುದು ” ಹೀಗೂ ಒಂದು ಕಾಗದವೇ ? ಹುಡುಗಿಯನ್ನು ಕೊಡಲು ಮನಸ್ಸಿಲ್ಲದಿದ್ದರೆ “ಇಲ್ಲ” ಎಂದು ಒಂದೇ ಮಾತಿನಿಂದ ಹೇಳಿ ಬಿಡಬಾರದಿತ್ತೆ ?

ಸೀ:—ಭೇಷ್! ವೆಂಕಟಸುಬ್ಬನಿಗಾದರೂ ಬುದ್ಧಿಯಿದೆ ಎಂದಾಯಿತು!

ರಾ:—(ಸಿಟ್ಟಿನಿಂದ) ಮುಚ್ಚು ಬಾಯಿ! ನೀನೀಗ ಮಾತಾಡುತ್ತಿರುವುದು ಹುಚ್ಚನೊಂದಿಗೆ!

ದಿ:—ನನ್ನ ಪ್ರಾರ್ಥನೆಯೇನೆಂದರೆ ಸದ್ಯಕ್ಕೆ ಯಾರಿಗೆ ಹುಚ್ಚು ಹಿಡಿಯುವುದೂ ಬೇಡ. ಎಲ್ಲ ಕಷ್ಟಗಳನ್ನೂ ನಾನೇ ನಿವೃತ್ತಿಮಾಡುತ್ತೇನೆ.

ರಾ:—ಏನು ಮಾಡುವೆ ಮಗು! ಕಲಿತವಿದ್ಯೆಗೆ ಬೆಲೆ ಕೊಡುವವರಿಲ್ಲದ ಈ ನಿಷ್ಠುರ ಪ್ರಪಂಚದಲ್ಲಿ ಏನು ಮಾಡುವೆ?

ದಿ:—ಮತ್ತೇನೂ ಮಾಡಲು ಸಾಧ್ಯವಿಲ್ಲದಿದ್ದರೆ ಹಾರೆಗುದ್ದಲಿಗಳನ್ನು ಹಿಡಿಯುತ್ತೇನೆ.

ರಾ:—ನನ್ನಲ್ಲಿ ಭ್ರಾಂತಿಯನ್ನು ಉದ್ರೇಕಿಸುವುದಕ್ಕೆ ಬೇರೆಯಾವ ಮದ್ದೂ ಬೇಡ. ಇದೇ ಸಾಕು. ಎಂ. ಎ. ಆದ ಮೇಲೆ ಈ ಕೆಲಸ?

ದಿ:—ಯಾಕೆ ಆಗಬಾರದು ತಂದೆ?

ರಾ:—ಯಾಕೆ ಆಗಬಾರದೆಂದು ಕೇಳುವೆಯಾ? ಕೃಷಿಮಾಡುವುದಕ್ಕೆ ಅಂಗೈಯಗಲದ ಭೂಮಿಯೂ ನಮಗಿಲ್ಲ. ಹಾರೆ ಗುದ್ದಲಿ ಹಿಡಿದು ನಿನ್ನ ತಂದೆಯ ಎದೆಗೆ ಹೊಡೆಯಬೇಕಷ್ಟೆ! ನಿನಗೆ ವಿದ್ಯೆ ಕಲಿಸಬೇಕೆಂದು, ಈ ಹಿತ್ತಿಲನ್ನೂ ಎರಡುಸಾವಿರಕ್ಕೆ ಅಡವು ಮಾಡಿದ್ದೇನೆ.

ಸೀ:—ಈ ದಿನವೆ ಶುಭದಿನ.! ನನ್ನ ಹಿಂದಿನ ಮಗನೇ ನೀನು! ತಂದೆಗೆ ಮಗನ ಬುದ್ದಿ ಇರುತ್ತಿದ್ದರೆ!

ರಾ:—ಇನ್ನೂ ನನ್ನೆದೆಯನ್ನು ಚುಚ್ಚಬೇಡ ಸೀತೂ! ಚಟ್ಟದಲ್ಲಿಟ್ಟ ಹೆಣವನ್ನು ಯಾರಾದರೂ ಚಿವುಟುತ್ತಾರೆಯೇ? ಇನ್ನಾದರೂ ಕ್ಷಮೆ ತೋರು! "ಎಲೈ ಜೀವವೇ ಹೋಗು!" ಎಂದರೂ ಜೀವವು ಹೋಗುವುದಿಲ್ಲ. ಸಾಲ ವಸೂಲಿಗೆ ಬಂದ ಸಾವುಕಾರನು ಮನೆ ಬಿಟ್ಟು ಕದಲದಂತೆ ಕದಲುವುದಿಲ್ಲ. ನನ್ನ ಕೈಕಾಲುಗಳನ್ನು ಕಟ್ಟಿ ಬಾವಿಗೆ ಎಸೆದು ಬಿಡಿ. ಆ ಮೇಲೆ ಗುದ್ದಲಿ ಕೆಲಸಕ್ಕೆ ಪ್ರಾರಂಭಿಸಿರಿ. (ಬಾಗಿಲಲ್ಲಿ ಸದ್ದು ಕೇಳಿ) ಯಾರಯ್ಯ ಅದು?

(ಹೊರಗಿನಿಂದ):— ನಾನು ಸ್ವಾಮಿ! ಟಪಾಲುಪೇದೆ ಕಿಟ್ಟ!

ರಾ:—(ಬಾಗಿಲು ತೆರೆದು) ಪತ್ರವಿದೆಯೇ

ಕಿ:—ಹೌದು ಸ್ವಾಮಿ ! ತೆಗೆದುಕೊಳ್ಳಿ (ಕೊಡುವನು)

ರಾ:—ಭಾಗ್ಯವು ಕಣ್ಣು ತೆರೆದರೆ ಏನಾಗಬೇಕು ದಿನಕರ? ತೆಗೆದುಕೊ; ಪತ್ರವನ್ನು ಒಡೆ; ಓದು.

ಕಿ:—ಅದು ರಿಜಿಸ್ಟರಾದ ಕಾಗದ ಸ್ವಾಮಿ. ಮೊದಲು ರಶೀದಿಗೆ ಸಹಿಯಾಗ ಬೇಕು.

ರಾ:—ಭಾಗ್ಯದೇವತೆಯೆ ರಿಜಿಸ್ಟರ್ ಕಾಗದದ ಮುಖಾಂತರ ಏಕೆ ಮಾತಾಡಬಾರದು? ಒಡೆ; ಹರಿ; ಓದು. (ಪತ್ರವನ್ನು ತೆಗೆದುಕೊಳ್ಳುವನು) ನಾನೇ ಓದಿ ಬಿಡುತ್ತೇನೆ. ಸಂತೋಷವಾರ್ತೆಯನ್ನು ನಾನೆ ಮೊದಲು ಓದುತ್ತೇನೆ. (ಓದುವನು. ಕಣ್ಣಿನಲ್ಲಿ ಗಳಗಳನೆ ನೀರು ಸುರಿಯುವುದು) ಎಲ್ಲ ನಿನ್ನ ವಿದ್ಯೆಗಾಗಿ ಮಾಡಿದ ಸಾಲ ಬಡ್ಡಿಯು ಮರಿಯನ್ನಿಟ್ಟು ಸಾವಿರವಾಗಿದೆ. ಲೋಬೋ ಸಿಟ್ಟಾಗಿದ್ದಾನೆ. ಒಂದು ವಾರದೊಳಗೆ ಕೊಡಬೇಕು! ಕೊಡದಿದ್ದರೆ ವ್ಯವಹರಣೆ! ಸೆರೆಮನೆ!

ದಿ:—ನನ್ನ ವಿದ್ಯೆಗಾಗಿ ಎಲ್ಲವೂ! ಮೂವತ್ತು ವರ್ಷ ನಿಮ್ಮ ಅನ್ನವನ್ನು ತಿಂದು ಬೆಳೆದ ದೇಹವಿದು. ಇದನ್ನು ಸಾಲಗಾರರಿಗೆ ಈಡಾಗಿ ಇಡುತ್ತೇನೆ. . ಕಿಟ್ಟ! ನೀನು ಹೋಗು! (ಅವನು ಹೋಗುವನು)

(ಅಷ್ಟರಲ್ಲಿ ಬಿಲ್ಲೆ ಧರಿಸಿದವನೊಬ್ಬನ ಪ್ರವೇಶ)

ರಾ:—ಯಾರಪ್ಪ? ಶೇಷು! ನನಗೆ ವಿರಾಮ ದೊರೆತಿದೆ; ನಿನಗೆ ರಿಟೈರಿಯಾಗಲಿಲ್ಲವಷ್ಟೆ?

ಶೇ:—ಬರುವ ವಾರ ಬುದ್ಧಿ! ಮತ್ತೆ ನಾನೂ—

ರಾ:—ನಿನಗೆ ನಿನ್ನ ಹಿಂದಿನ ಯಜಮಾನನ ಸೆನಪಾದರೂ ಹೇಗೆ ಬಂತು ಶೇಷು?

ಶೇ:—ಅಯ್ಯೋ ಬುದ್ಧಿ! ನಾನೂ ನಾಳೆ ನಿಮ್ಮಂತೆಯೇ ಆಗುವವನಲ್ಲವೆ? ರಿಟೈರಿಯಾಗುವವರೇ ರಿಟೈರಿಯಾದವರನ್ನು ಸಮಾಧಾನಪಡಿಸಬೇಕಲ್ಲವೇ?

ರಾ:—ಮೊದಲಿನಂತೆಯೇ, ವಿರಾಮ ಹೊಂದಿದ ಮೇಲೂ ಕಣ್ಣು, ಕಿವಿ, ಮೂಗು, ಇರುವವರನ್ನೂ ರಿಟೈರಿಯಾದ ಮೇಲೆ ಮನುಷ್ಯರೆಂದು ಯಾರೂ ಒಪ್ಪುವುದಿಲ್ಲವಲ್ಲ? ಇದೇಕೆ ಶೇಷು?

ಶೇ:—ನನಗೇನು ಗೊತ್ತು ಬುದ್ಧಿ?... ಕಲೆಕ್ಟರರು ಒಂದು ಪತ್ರವನ್ನು ಕೊಟ್ಟಿದ್ದಾರೆ (ಕೊಡುವನು)

ರಾ:—ಏನು ಪತ್ರ? ಹುಚ್ಚನೆನ್ನುವ ಬಿರುದಿನ ಸನ್ನದೊ? ನಾನದನ್ನು ಓದುವಂತಿಲ್ಲ. ಹರಿದು ಚೂರು ಚೂರು ಮಾಡುತ್ತೇನೆ. (ದಿನಕರನು ಓದುವನು)

ದಿ:—(ಓದಿದ ಮೇಲೆ) ಅಪ್ಪ! ನಮ್ಮ ನಗರಸಭೆಯುವರು ಗೋಶಾಲೆ ಯೊಂದನ್ನು ತೆರೆಯುತ್ತಾರಂತೆ.

ರಾ:—(ವಿಕಾರವಾಗಿ ನಗುತ್ತ) ನಿನ್ನ ತಾಯಿಯನ್ನು ಅದರ ಅಧ್ಯಕ್ಷೆ ಯನ್ನಾಗಿ ಮಾಡಲಿ; ಹೇಗೆ ನೀತು? ಹ ಹ್ಹ ಹ್ಹಾ!

ದಿ:—ಒಬ್ಬ ಸುಶಿಕ್ಷಿತ ತರುಣ ಅದರ ಮೇಲ್ವಿಚಾರಣೆಗೆ ಬೇಕಂತೆ. ಕಲೆಕ್ಟರ್ ಸಾಹೇಬರು ಆ ಕೆಲಸವನ್ನು ನನಗೆ ಕೊಡುತ್ತಾರಂತೆ.

ರಾ:— ತಲಬು ಎಷ್ಟಂತೆ? ಪೆನ್‌ಶನ್ ಇರುವ ಕೆಲಸವೇ?

ದಿ:—ಅದೊಂದೂ ಗೊತ್ತಿಲ್ಲ. ತಮ್ಮ ಹಿಂದಿನ ವಿಧೇಯ ಸೇವಕನ ಮಗನಿಗೆ ಈ ಘನಪದವಿಯನ್ನು ಸಾಹೇಬರು ಕೊಡುತ್ತಾರಂತೆ!

ರಾ:—ರಾಮಾ! ಹೀಗೆ ಬರೆಯಲೂ ಸಾಹೇಬರಿಗೆ ಮನಸ್ಸು ಬಂತೆ? ನೀತು, ನೀನು ಈ ಕೆಲಸಕ್ಕೆ ಅರ್ಜಿಹಾಕು.

ಸೀ:—ನಾನೂ ಗಂಡಾಗಿರುತ್ತಿದ್ದರೆ ಅರ್ಜಿಹಾಕಬಹುದಿತ್ತು.

ರಾ:—ನೀನೇಕೆ ಮಾತಾಡುವುದಿಲ್ಲ ದಿನಕರ? ನನ್ನ ಕಣ್ಣಮುಂದೆ, ನಾನು ಜೀವಂತನಾಗಿರುವಾಗ, ಇಂತಹ ನೀಚಕಾರ್ಯಗಳನ್ನು..ಅಥವಾ ನಾನೇ ನೀಚ....ನಾನೇ ಹುಚ್ಚ.... ಏನು ಶೇಷಪ್ಪ— ನೀನೂ ಹಾಗೆಯೇ ಹೇಳುವೆಯಲ್ಲವೆ? ಕಣ್ಣಿಗೆ ಕತ್ತಲೆ ಕವಿಯುತ್ತಿದೆ....

ಸೀ:—ಇವರಿಗೆ ನಿಜವಾಗಿಯೂ ಹುಚ್ಚು, ದಿನಕರ....

ರಾ:—ನಿನ್ನ ವಿದ್ಯೆಗೆ ಜಯವಾಯಿತು ನೀತು. ನಾನು ಹುಚ್ಚನಾಗುತ್ತೇನೆ ನೀತು. ನೀವೇ ಬುದ್ಧಿವಂತರಾಗುತ್ತೀರಿ.... ಆಯಾಸವಾಗುತ್ತಿದೆ..... ಹಾಸಿಗೆ ಬಿಚ್ಚು.. (ಅತ್ತಿತ್ತ ಓಡುತ್ತಾನೆ)

ಸೀ:—ಇಂತಹ ಅವಸ್ಥೆಯೂ ಆಯಿತಲ್ಲ.... ದಿನಕರ! ನಿನಗೆ ಯಾವ ಡಾಕ್ಟರರ ಪರಿಚಯವೂ ಇಲ್ಲವೇ?

ರಾ:--ನನ್ನ ಕೈಗೆ ಬೇಡಿ ಕೊಡಿಸಿರಿ....

ದಿ:--ಇದು ಹುಚ್ಚಲ್ಲ ತಾಯಿ! ಮೂವತ್ತು ವರ್ಷ ಹಗಲುರಾತ್ರಿ ತಿರುಗಿದ ಯಂತ್ರವಿದು. ಈಗ ತಿರುಗುವುದಿಲ್ಲ; ದೂಳಿ-ಹಿಡಿದಂತಾಗಿದೆ, ಅಷ್ಟೆ!

ಸೀ:-- ನನ್ನ ಭಾಗ್ಯದೇವತೆ ಕಣ್ಮುಚ್ಚಿತೇ? ಅಯ್ಯೋ! ಏನೇನೋ ಮಾತಾಡುತ್ತಾರೆ! (ಹೋಗಿ ರಾಮಕೃಷ್ಣಯ್ಯನನ್ನು ಹಿಡಿಯುತ್ತಾಳೆ. ಅವನು ಹೊಡೆಯುವುದಕ್ಕೆ ಬರುತ್ತಾನೆ)

ದಿ:--ಭಾಗ್ಯದೇವತೆ ಕಣ್ಣುಮುಚ್ಚಿದರೆ ಮುಚ್ಚಲಿ. ತಂದೆ ಕಣ್ಣು-ಮುಚ್ಚದಿದ್ದರೆ ಸಾಕು.

ರಾ:—(ಮುಷ್ಟಿ ಬಿಗಿದು) ಇದರಲ್ಲಿ ಒಂದೇಟು ಸ್ಟೋನ್ ಸಾಹೇಬರಿಗೆ. ಇನ್ನೊಂದು ವೆಂಕಟಸುಬ್ಬನಿಗೆ. ಮತ್ತೊಂದು ಸೀತುಗೆ.

ಶೇ:—ಅಮ್ಮ! ಸ್ವಾಮಿ! ಯಜಮಾನರನ್ನು ಹಿಡಿದುಕೊಳ್ಳಿ. ನಾನು ಪಲಾಯನ ಮಾಡುತ್ತೇನೆ..

ರಾ:--ಮತ್ತೊಂದೇಟು ಈ ಶೇಷನಿಗೆ! (ಎಂದು ಓಡಿಬರುವನು. ಸೀತಮ್ಮ ದಿನಕರ ಇಬ್ಬರೂ ರಾಮಕೃಷ್ಣಯ್ಯನನ್ನು ಹಿಡಿದುಕೊಳ್ಳುವರು.)

ದಿ:—ನೀನು ಹೋಗು ಶೇಷ! ನಮ್ಮ ಅವಸ್ಥೆ ನಮಗಿರಲಿ!

ಶೇ:--ವಿಚಾರಮಾಡುವಾಗ ರಿಟೈರಿಯಾಗುವುದು ಅಪಾಯಕರವೆಂದೇ ಹೇಳಬೇಕು. ಮತ್ತೇನು ಆದರೂ ಚಿಂತೆಯಿಲ್ಲ. ರಿಟೈರಿಯೊಂದು ಆಗದಿದ್ದರೆ, ತಂತಮ್ಮ ಬುದ್ಧಿಗೆ ತಾವು, ತಾವೇ ಒಡೆಯರಾಗಿ ಮನುಷ್ಯರು ಹೇಗೂ ಬಾಳಬಹುದು. ನಾನು ಬರುತ್ತೇನೆ, ಸ್ವಾಮಿ! (ಶೇಷಪ್ಪ ಹೋಗುವನು.)

[ಪರದೆ ಬೀಳುವುದು]

'ಹವ್ಯಾಸ-ಮುನಿ-ವಿರಚಿತ- ಮಹಾಭಾರತಾಂತರ್ಗತ'

ನಿರುತ್ತರ-ಕುಮಾರ

ಪಾತ್ರಗಳು

೧ ಮುದಿಗೊಲ್ಲ
೨ ಉತ್ತರ-ಕುಮಾರ
೩ ಬೃಹನ್ನಡಾ (ಅರ್ಜುನ)
೪ ಕೃಷ್ಣ

ದೃಶ್ಯ ೧

[ವಿರಾಟದೊರೆಯ ಅರಮನೆಯ ಒಂದು ಭಾಗ; ಉತ್ತರಕುಮಾರನು ನೃತ್ತದ ಹೆಜ್ಜೆಗಳನ್ನಿಡುತ್ತ ಬರುವನು. ತುದಿಗಾಲಿನಿಂದ ನಡೆಯುತ್ತ, ಬಲಗಾಲು ಮುಂದಿರುವಾಗ ಬಲಬದಿಗೆ, ಎಡಗಾಲು ಮುಂದಿರುವಾಗ ಎಡಬದಿಗೆ ವೈದೂಗುತ್ತ ಮುಂದೆ ಮುಂದೆ ನಡೆದು ಆಯಾಸದಿಂದ ನಿಂತು–]

ಉ:——ಇದೆಂತಹ ಚಮತ್ಕಾರ! ಹೆಜ್ಜೆ ತಪ್ಪಿ ನಡೆದರೆ ಅದು ಕಲೆಯಂತೆ! ನೃತ್ತವಂತೆ!.... ಬೃಹನ್ನಡೆ ಹೇಳುವಳು !....ಬೃಹನ್ನಡೆಯ ಮಾತೆಲ್ಲ ವಿಚಿತ್ರವಾಗಿದೆ!.... ಮನುಷ್ಯನಿಗೆ ಬುದ್ಧಿ ಇದ್ದುದರಿಂದ ಅವನಿಗೆ ಯಾವ ಕಲೆಯೂ ಬಾಧಿಸುವದಿಲ್ಲವಂತೆ!....ಹೆಜ್ಜೆ ತಪ್ಪಿ ನಡೆಯಲು ಅವನಿಗೆ ಹೆದರಿಕೆ!.... ಹಾಡುವ ಕಲೆ ಕೋಗಿಲೆಯಲ್ಲಿ, ಕುಣಿಯುವ ಕಲೆ ನವಿಲಿನಲ್ಲಿ, ಚಿತ್ರಕಲೆ-ರೇಖಾಕಲೆ ಹಾರುವ ಹಕ್ಕಿಯಲ್ಲಿ!.... ಅಯ್ಯೊ ನನಗಂತೂ ಕುಣಿಯುವ ಹುಚ್ಚು. ಒಮ್ಮೊಮ್ಮೆ ಆ ಉಬ್ಬಿಸಲ್ಲಿ ನನಗೆ ನಾಲ್ಕು ಕಾಲುಗಳಿರಬಾರದೆ, ಇನ್ನೂ ಹೆಚ್ಚಾಗಿ ಕುಣಿಯುತ್ತಿದ್ದೆ ಎನ್ನಿಸುವದು! ಮನುಷ್ಯನಾದ ತಪ್ಪಿಗೆ ಸರಳ ನಡೆಯಬೇಕು, ಸುಮ್ಮನೆ ಮಾತನಾಡಬೇಕು!

ಮು:—(ತೇಕುತ್ತ ಓಡುತ್ತ ಬಂದು) ಮಹಾರಾಜರೆ, ರಕ್ಷಿಸಿರಿ, ರಕ್ಷಿಸಿರಿ.

ಉ:—(ಅವನನ್ನು ದಿಟ್ಟಿಸಿ ಕನಿಕರದಿಂದ) ಇದೊಂದು ಮನುಷ್ಯ ಮಾದರಿ!

ಮು:—(ತತ್ತರಿಸುತ್ತ, ಇತ್ತಿಂದತ್ತ ಬೆದರಿ ಓಡುವವನಂತೆ) ಮಹಾರಾಜರೆ, ರಕ್ಷಿಸಿರಿ, ರಕ್ಷಿಸಿರಿ.

ಉ:—(ತಲೆದೂಗುತ್ತ) ಅಹಾ! ಇದೀಗ ನಿಜವಾದ ಕುಣಿತ, ಹೊಸ ಹೆಜ್ಜೆ, ಬೃಹನ್ನಡೆಗೆ ಇದು ಸಿಕ್ಷಯುವಾಗಿ ಗೊತ್ತಿಲ್ಲ. (ಮುದಿಗೊಲ್ಲನಂತೆ ತಾನೂ ಇತ್ತಿಂದತ್ತ ಜಿಗಿಯುತ್ತ) ಹೀಗೆ-ಹೀಗೆ ಅಲ್ಲವೆ? ಈ ನೃತ್ತದ ಹೆಸರೇನು?

ಮು:—(ಹೆದರಿಕೆಯಿಂದ) ಮಹಾರಾಜ, ನಮ್ಮ ಹಸುಗಳನ್ನು--

ಉ:--ಓಹೊ, ಇದು ಹಸುಗಳ ಹೆಜ್ಜೆಯೆ!

ಮು:--ಅಯ್ಯೋ! ನಮ್ಮನ್ನು ರಕ್ಷಿಸಿರಿ(ಎಂದು ಮೊಣಕಾಲೂರಿ ಹಣೆಯನ್ನು ನೆಲಕ್ಕೆ ಮುಟ್ಟಿಸುವನು)

ಉ:--(ಆನಂದದಿಂದ) ನಿಜ, ಇದು ಹಸುಗಳ ಹೆಜ್ಜೆಯೆ? ನಾಲ್ಕುಕಾಲು-ಗಳಿಂದ ನಡೆಯುವಂತೆ ತೋರಿಸಬೇಕಲ್ಲವೆ? ಹೀಗೆ- ಹೀಗೆ-

ಮು--ಅಯ್ಯೋ, ನಮ್ಮನ್ನೆಲ್ಲ ಹೊಡೆದು ನಮ್ಮ ಹಸುಗಳನ್ನು ಕದ್ದೊಯ್ದರು, ರಕ್ಷಿಸಿರಿ ನಮ್ಮನ್ನು. ಅಯ್ಯೋ, ಅಯ್ಯೋ! (ಕುಮಾರನು ತನ್ನನ್ನು ಒಂದೇ ಸವನೆ ದಿಟ್ಟಿಸಲು-ಎದ್ದು-ದೂರ ಸರಿದು ನಡಗುತ್ತ ನಿಲ್ಲುವನು)

ಉ:—(ಅರ್ಧ ತನ್ನಷ್ಟಕ್ಕೆ) ಅಹಾ! ಕಲೆಯೆ, ಧನ್ಯ, ಧನ್ಯ! ಎಂತಹ ಭಾವವನ್ನಾದರೂ ಭಾವನೆಯನ್ನೂ, ವಿಕಾರವನ್ನೂ ಸೂಕ್ಷ್ಮವಾಗಿ ವ್ಯಕ್ತ ಮಾಡಿ, ಮೂಡಿಸಿ ತೋರಿಸಬಲ್ಲೆಯಲ್ಲವೆ ನೀನು! ಇದೊ, ಈ ಉದಾಹರಣೆ! ಮನಸಿನ ತಳಮಳವನ್ನು, ಬಂದೊದಗುವ ವಿಪತ್ತನ್ನು ಮಾತಿನಿಂದ ಹೀಗೆ ವ್ಯಕ್ತಮಾಡಿ ತೋರಿಸಬಹುದೆ? ವ್ಯರ್ಥ ಮನುಷ್ಯಜನ್ಮ! ಮಾತಿನ ಮೋಹದಲ್ಲಿ ಸಿಕ್ಕು ಮಾರ್ಮಿಕ ವಿಕಾರಗಳ ಅನುಭವವನ್ನೆ ಕಳೆದುಕೊಂಡ ಮನುಷ್ಯ! ದೇವಾ, ಯಾವ ಪಾಪಕ್ಕಾಗಿ ಪ್ರಾಣಿಯನ್ನು ಮನುಷ್ಯನನ್ನಾಗಿ ಮೂಡಿಬಿಟ್ಟೆ! ಛೆ, ಇವನು ಕುಣಿಯುವದನ್ನು ನೋಡಿದರೆ ನನಗಂತೂ ಭಯ-ವಿಕಾರವೆ ಉಂಟಾಗುವದು. ಇವನ ಮೇಲೆ ಘೋರ ಆಪತ್ತು ಒದಗಿದೆ ಎಂದು ಭಾಸವಾಗುವದು. ಗೋವಳಾ, ಪ್ರೀತನಾಗಿರುವೆ; ಬೇಡು, ಬೇಕಾದುದನ್ನು-

ಮು:—(ಒಮ್ಮೆಲೆ ತಡೆಯದೆ) ಅಯ್ಯೊ, ಮಹಾರಾಜರೆ, ರಕ್ಷಿಸಿರಿ. ನಮ್ಮೆಲ್ಲರಿಗೆ ಜೀವದ ಆಪತ್ತು–-

ಉ:– (ಆನಂದದಿಂದ) ಆದೊ! ನನ್ನ ಕಾಯಾಸ ಸರಿಯಾಯಿತು! ಇವನ ಮೇಲೆ ಆಪತ್ತು ಬಂದಿರಬಹುದೆಂದು ನನಗೆ ಆಗಲೇ ತೋಚಿತು.

ಮು:--(ಕೈಮುಗಿದು) ಮಹಾರಾಜರೆ, ದಯುವಿಟ್ಟು ನನ್ನ ಮಾತು ಕೇಳಿದರೆ–

ಉ:--(ನಿರಾಶೆಯ ಕೋಪದಿಂದ) ಛೆ, ರಸಭಂಗಮಾಡಬೇಡ ಹೀಗೆ! ಮಾತು ಕೇಳುವದಂತೆ! ಎಲೊ, ಮಾತು ಎಂಬುದೊಂದು ಮನುಷ್ಯನನ್ನು ಮೋಸದ, ಬಯಲ-ಡಂಭಕತನದ ದೂಳಿಯಲ್ಲಿ ಗರಗರ ತಿರುಗಿಸುವ ಗಾಳಿಯ ಸುತ್ತು! ಅದಕ್ಕೆ ನನ್ನ ಮಾತು ಕೇಳಿಕೊ. ಈ ನಿನ್ನ ಕಲೆಗೆ ಸರಿಗಟ್ಟುವದು ಮಾತಿಗೆ ಶಕ್ಯವಿಲ್ಲ. ಆನಂದವಾಗಲಿ, ದುಃಖವಾಗಲಿ, ಉತ್ಸಾಹವಾಗಲಿ, ಉತ್ಸವವಾಗಲಿ ಮಾತಿನಿಂದ ವ್ಯಕ್ತಪಡಿಸುವದು ಶಕ್ಯವಿಲ್ಲ....ಆದೊ....ಮತ್ತೆ ಮಾತಾಡುವ ಮೋಹಕ್ಕೆ ಬೀಳುವೆ. (ಮುದಿಗೊಲ್ಲನು ಬಿಕ್ಕುವನು) ಹಂ.... ಇದೀಗ ಸರಿಯಾದುದು..ದುಃಖ ವಾದರೆ ಅಳುವದರಿಂದಲೆ ವ್ಯಕ್ತಪಡಿಸಬೇಕು– ಆದೊ, ಆದೊ, ಎಷ್ಟು ಸೊಗಸಾಗಿ ಸರಿಯಾಗಿ ಬಿಕ್ಕುವೆಯಲ್ಲ! ನಿನಗೀಗ ದುಃಖ ವಾಗಿದೆಯೆಂದು ಯಾರಿಗಾದರೂ ತಟ್ಟನೆ ತಿಳಿಯಬಹುದು...

ಮು:—(ಬಿಕ್ಕುತ್ತ) ನನ್ನ ದುಃಖವಲ್ಲ, ಮಹಾರಾಜ, ದೊರೆಗೆ, ದೊಡ್ಡ ದೊರೆಗೆ ದುಃಖ; ದೇಶಕ್ಕೆ ದುಃಖ;

ಉ:—ಹಾಗಿದ್ದರೆ ಇದಕ್ಕೂ ಜೋರಾಗಿ ಬಿಕ್ಕಬೇಕಲ್ಲವೆ?

ಮು:—(ಮೊದಲಿನಂತೆ) ಮಹಾರಾಜರೆ, ಕೌರವರೆಲ್ಲ ನಮ್ಮ ದೊರೆಗಳ ಹಸು ಗಳನ್ನುಕದ್ದೊಯ್ದಾರೆ; ನಿಜವಿದ್ದ ಸಂಗತಿ,ಮಹಾರಾಜರೆ, ನಮ್ಮನ್ನು ಉಳಿಸಿರಿ, ನಮ್ಮ ಹಸುಗಳನ್ನು ಉಳಿಸಿರಿ.

ಉ:—(ಏನೂ ತಿಳಿಯದೆ) ಏನು?

ಮು:—ನಮ್ಮ ಹಸುಗಳನ್ನೆಲ್ಲಾ ಹೊಡೆದೋಡಿಸಿ ಒಯ್ದಾರೆ, ದುಷ್ಟ ಕೌರವರು.

ಉ:—(ಸಿಟ್ಟಿನಿಂದ) ಎಲೊ, ಮೂರ್ಖಾ, ಹಾಗಿದ್ದರೆ ಇದುವರೆಗೆ ಯಾಕೆ ಬೊಗಳಲಿಲ್ಲ?

ಮು:—(ಹೆದರಿ) ಅದನ್ನೆ ಹೇಳಿದೆ.... ಮಹಾರಾಜರೆ....

ಉ:—(ಗದ್ದರಿಸುತ್ತ) ಪಶುಗಳ ಕೂಡ ಅಲೆದಾಡಿ ನಿನ್ನ ಬುದ್ಧಿಯೂ ಪಶುವಿನಂತೆ ಆಗಿದೆ. ಅದನ್ನೆ ಹೇಳಿದನಂತೆ! ಹೇಳುವುದಕ್ಕೆ ಕ್ರಮ, ಮರ್ಯಾದೆ ಬೇಡವೆ?.... ರಾಜಕಾರ್ಯಗಳನ್ನು ಹೇಳಬೇಕಾದರೆ ಅಂತಃಪುರದಲ್ಲಿ ಬರಬೇಕೆ? ನಡೆ.... ಹೊರಗೆ ಹೋಗಿ, ಮತ್ತೆ ತಿರುಗಿ ಬಂದು, ದ್ವಾರಪಾಲಕನಿಗೆ ತಿಳುಹಿಸಿ, ಅವನ ಅಪ್ಪಣೆಯನ್ನು ಪಡೆದು, ಯೋಗ್ಯವಾದ ಆಚಾರದಿಂದ ಸಭಾಮಂದಿರದಲ್ಲಿ ಹೇಳುವೆಯಂತೆ ಇದನ್ನು...ಅಷ್ಟರಲ್ಲಿ ನಾನು ಸಭಾಮಂದಿರದಲ್ಲಿ ಬರುವೆ ಸರಿಯಾದ ಉಡುಪು ಧರಿಸಿ.... ಅದನ್ನೆ ಹೇಳಿದನಂತೆ! .... ಮೂರ್ಖ.... ಯಾರಿಗೆ ಹೇಳುವದು?.... ದೊರೆಗೆ ಹೇಳುವದನ್ನು ಬಿಟ್ಟು ಅಂತಃಪುರದ ಹುಡುಗರಿಗೆ, ಹೆಂಗಸರಿಗೆ ಹೇಳಲು ಬರುವೆಯಾ? ನಡೆ.. ನಡೆ.. ಅಥವಾ ತಡೆ... ನಿನಗೆ ಏನೂ ಗೊತ್ತಿಲ್ಲವೆಂದು ತೋರುತ್ತದೆ.. ಅಷ್ಟೊಂದು ಮಹತ್ವದ ಸಂಗತಿ ಇದ್ದರೇನೇ ಸಭಾಮಂದಿರಕೆ ಹೋಗಬಹುದು.. ಹಂ.... ನೀನು ಹೇಳುವದಾದರೂ ಏನು?.... ಬೆದರಬೇಡಲೊ...ಮಾತನಾಡು....ಮೂಕನಂತೆ ನಿಂತುಕೊಂಡರೆ ನನಗೆ ತಿಳಿಯುವದು ಹೇಗೆ ನಿನಗೆ ಏನು ಬೇಕೆಂಬುದು?

ಮು:—(ನಡಗುತ್ತ) ಕೌರವರು ನಮ್ಮ ಹಸುಗಳನ್ನು ಕದ್ದೊಯ್ದರು--

ಉ:—(ಸಿಟ್ಟಿನಿಂದ) ಎಲೋ, ಮತ್ತೆ ಮತ್ತೆ ಮೂರ್ಖನ ಹಾಗೆ ಅದನ್ನೆ ಬೊಗಳುವೆಯಲ್ಲ!..ಕದ್ದೊಯ್ದರಂತೆ! ಯಾರಿಗೆ ವಿಶ್ವಾಸ ಹುಟ್ಟುವದು ಇಂತಹ ಮಾತಿನಲ್ಲಿ!.. ನಿಮಗೆ ಗೊತ್ತಿಲ್ಲದೆ ಒಯ್ದರೆ ಅದು ಕಳವು.... ನಿಮಗೆ ಗೊತ್ತಿಲ್ಲದೆ ಒಯ್ದಿರುವರೆ? ಶಕ್ಯವೆ ಇಲ್ಲ.... ಹಾಗಿದ್ದರೆ ಕೌರವರೇ ಒಯ್ದವರು ಅಂತ ನಿನಗೆ ತಿಳಿಯುವದು ಹೇಗೆ, ನೀನು ನನ್ನ ಕಡೆ ಬರುವದು ಹೇಗೆ--

ಮು:—(ತಡೆಯದೆ) ಒಂದು ದೊಡ್ಡ ಸೈನ್ಯಕಟ್ಟಿಕೊಂಡು ಬಂದು ನಮ್ಮನ್ನೆಲ್ಲ ಹೊಡೆದೋಡಿಸಿ--

ಉ:—ಹಾಗಿದ್ದರೆ "ಗೆದ್ದು ಒಯ್ದರು" ಅಂತ ಹೇಳಬೇಕು, "ಕದ್ದು ಒಯ್ದರು" ಅಂತ ಅಲ್ಲ....ಹಂ.... ಒಂದು ದೊಡ್ಡ ಸೈನ್ಯಕಟ್ಟಿಕೊಂಡು

ಬಂದು ಕೌರವರು— "ದುಷ್ಟ ಕೌರವರು" ಅಂತ ಹೇಳಿದಿ. ಹಾಗೆ ಹೇಳಬಾರದು; ಅವರು ಮಾಡಿದ್ದು ತಪ್ಪು ಅಂತ ನಿರ್ಣಯ ಆಗದೆ ಅವರನ್ನ "ದುಷ್ಟ" ಅಂತ ಅನ್ನುವ ಹಾಗಿಲ್ಲ, ಇರಲಿ–ಹಂ– ಕಟ್ಟಿಕೊಂಡು ಬಂದು ಹಸುಗಳನ್ನೆಲ್ಲಾ **ಗೆದ್ದು** ಒಯ್ದರು....ಮುಂದೆ?

ಮು:—(ತಿಳಿಯದೆ) ಮುಂದೆ.... ಮುಂದೆ ... ನಮಗ ಏನೂ ತೋಚಲಿಲ್ಲ ಅಂತ....

ಉ:—ಅಂತ ಅಂತಃಪುರಕ್ಕೆ ಬಂದೆಯಾ? ಸರಿ... ತಪ್ಪುಜಾಗೆಗೆ ಬಂದಿರುವೆ, ಅಂದ ಮೇಲೆ ನಿನಗ ಏನೂ ತೋಚಲಿಲ್ಲ ಅಂತ ತಾನೇ ಸಿದ್ಧವಾಗುವದು... ಹಂ.... ಮುಂದೆ?

ಮು:—(ಪೆಚ್ಚಾಗಿ) ಮುಂದೇನು....

ಉ:—(ಕೆರಳಿ) ಮುಂದೇನು? ಅಂತ ನಾನೇ ನಿನಗೆ ಕೇಳಿದೆ.

ಮು:—ನಮ್ಮ ಹಸುಗಳನ್ನು ಬಿಡಿಸಿ ನಮ್ಮನ್ನ ಉಳಿಸಬೇಕು ದೊರೆಗಳು..

ಉ:—ಅಯ್ಯೋ! ಇಷ್ಟೇ ಅಹುದಲ್ಲೋ?.... ಹೋಗು.... ಉತ್ತರಕುಮಾರ ರಾಜಪುತ್ರರು ಆ ಹಸುಗಳನ್ನೆಲ್ಲಾ ಬಿಟ್ಟುಕೊಡಿರಿ ಅಂತ ಹೇಳಿಯಾರಂತ ಹೇಳಿಬಿಡು ಕೌರವರಿಗೆ....ನಡೆ.... ಇಷ್ಟೊಂದು ಸಣ್ಣ ಕೆಲಸಕ್ಕೆ ಸಭಾಮಂದಿರಕೆ ಹೋಗಬೇಕಾಗುತ್ತಿತ್ತು ಸುಮ್ಮ ಸುಮ್ಮನೆ.. ಇಷ್ಟೊಂದು ಬೊಬ್ಬಾಟ ಯಾಕೊ?.... ಮನೆಯ ದಾರಿ, ಮನೆಯ ಅಭಿಮಾನ ಮನುಷ್ಯನಿಗಿಂತ ದನಕರಗಳಿಗೆ ಹೆಚ್ಚು ಗೊತ್ತಿದೆ. ಇಷ್ಟ ತಿಳಿಯಬಾರದೆ ಇವರಿಗೆ? ಸಂಜೆಯಾದ ಕೂಡಲೆ ಹಸುಗಳೆಲ್ಲಾ ತಾವಾಗಿಯೆ ತಿರುಗಿ ಬರುವವು ಮನೆಗೆ...

ಮು:—ಇಲ್ಲ....ಮಹಾರಾಜರೆ....ಅವುಗಳನ್ನೆಲ್ಲಾ ಕಟ್ಟಿಹಾಕಿರುವರು..

ಉ:—ಕಟ್ಟಿಹಾಕಿರಬಹುದು! ಯೋಗ್ಯ! ಇನ್ನೇನು–ರಾಜರೂ ಅವರ ಸೈನಿಕರೂ ದನಕರ ಮೆಯ್ಯಿಸುತ್ತ ಅಡ್ಡಾಡಬೇಕು ಅನ್ನುವಿಯೊ ಏನು?

ಮು:—ಇಲ್ಲ....ಮಹಾರಾಜರೆ....ಯುದ್ಧ ಆಡದೆ ಬಿಡುವದಿಲ್ಲ ಅಂತ....

ಉ:— ಏನು? ಯುದ್ಧ ಆಡದೆ ಬಿಡುವದಿಲ್ಲ? ಹುಚ್ಚು ಹಿಡಿದದೆ ಅವರಿಗೆ! ಪಶುಗಳ ಸಲುವಾಗಿ ಯುದ್ಧ ಹೂಡುವಷ್ಟು ಪಶುಬುದ್ಧಿ ಬಂದಿಲ್ಲ ನಮಗೆ–ಹೋಗು– ಅವರಿಗೆ ಹೇಳು–"ನೀವು ಎಷ್ಟು ಹಟ ಹಿಡಿದರೂ

ಯಾರೂ ಯುದ್ಧ ಆಡುವದಿಲ್ಲ; ದನ-ಕರುಗಳ ಸಂಸಾರ ಕಟ್ಟಿಕೊಂಡು ಯಾಕೆ ಕಷ್ಟ ಬಡುವಿರಿ? " ಅಂತ ತಿಳುಹಿಸಿಬಿಡು ಅವರಿಗೆ.... ಅಯ್ಯೋ, ನಮ್ಮ ಮಾವ ಕೀಚಕನಾದರೂ ಇರಬಾರ ದಾಗಿತ್ತೆ?.... ಮನೆಯಲ್ಲಿ ಕೂಳಿಗೆ ಬಿದ್ದ ಮಾವ, ಅಳಿಯ, ಬಡವ, ಬ್ರಾಹ್ಮಣ–ಯಾರಾದರೂ ಇದ್ದರೆ ಎಷ್ಟು ಅನುಕೂಲವಾಗುವದು... ಬೇಡಾದ ಕೆಲಸಕ್ಕೆಲ್ಲ ಅವರನ್ನ ಮುಂದೆ ದೂಡಲು ಬರುವದು.... ಛೆ, ಈ ಕೌರವರಿಗಂತೂ ಹುಚ್ಚೇ ಹಿಡಿದಿದೆ.... ಕಾಲ ಕೆದರಿ ಯುದ್ಧ ಹೂಡಿ ತಾವು ಕ್ಷತ್ರಿಯರು ಅಂತ ಅನ್ನಿಸಿಕೊಳ್ಳುವ ಹಟ....ಹಾಗೆ ನೋಡಿದರೆ ಅವರ ಮನೆತನದೊಳಗೆಯೆ ಕ್ಷತ್ರಿಯ ರಕ್ತವಿಲ್ಲ.... ಮುತ್ತಾತ ಮಹರ್ಷಿ, ಕಕ್ಕನೊಬ್ಬ ಬ್ರಹ್ಮಚಾರಿ.... ಮೋಸದಿಂದ ರಾಜ್ಯ ದಕ್ಕಿಸುವದು, ರಾಜ್ಯ ದಕ್ಕಿತೂ ಅಂತ ಕ್ಷತ್ರಿಯರು ದೊಡ್ಡ ವರು ಅನ್ನಿಸಿಕೊಳ್ಳುವದು, ದೊಡ್ಡವರೆಂಬೋ ಧಾರ್ಷ್ಟ್ಯದಿಂದ ಸಣ್ಣ ವರನ್ನು ಸಾಯಹೊಡೆಯುವದು.... ಬಡತನದಿಂದ ಬುದ್ಧಿಗೆಟ್ಟ ಬ್ರಾಹ್ಮಣ ಮಾಡುವ ಕೆಲಸ ಇದೊ....ಎಲೊ!.... ಇನ್ನೂ ಇಲ್ಲಿಯೆ ನಿಂತಿರುವೆಯಲ್ಲ!.... ನಡೆ.... ನಾನೀಗ ರಾಜಕಾರಣದ ಆಲೋಚನೆ ನಡೆಸಿರುವೆ, ತಾನು ನಿಂತುಕೊಂಡಿರುವ!....ನಡೆ ....ಅಥವಾ ತಡೆ.... ಏನೊ...ಅಂ...ಕೌರವರ ಸೈನ್ಯದ ಕೂಡ ಯಾವನಾದರೂ ಬ್ರಾಹ್ಮಣ ಬಂದಿರುವನೇನೊ?....ಅಂ....?

ಭು:—ಅವರ ಗುರು....ಅವರೇನೊ ದ್ರೋಣಾಚಾರ್ಯ ಅಂತ—

ಉ:–ಅಹಾ! ನನ್ನ ತರ್ಕ ಸರಿಯಾಗಲೇಬೇಕು....ಬಡ ಬ್ರಾಹ್ಮಣನ ಕೆಲಸ ಅಂತ ನಾನು ಆವಾಗಲೆ ಕಾಯಾಸ ಕಟ್ಟಿದ್ದೆ....ತನ್ನ ಹುಡುಗನಿಗೆ ಹಸುವಿನ ಹಾಲು ಎಂದೂ ದೊರಕಲಿಲ್ಲ ಎಂದು ಕಿಚ್ಚು ಆ ಬ್ರಾಹ್ಮ ಣನ ಹೊಟ್ಟೆಯಲ್ಲಿ!....ಹಾಂ.... ಹೀಗೆ ಮಾಡುವೆ.... (ಕೊರಳೊಳಗಿನ ಹಾರವನ್ನು ತೆಗೆದು) ಇದೊ....ಇದನ್ನು ತೆಗೆದುಕೊ, – ಆ ಬ್ರಾಹ್ಮಣನಿಗೆ ಹೇಳು – **ರಾಜಪುತ್ರನಾದ ಉತ್ತರಕುಮಾರನು ಕೈಮುಗಿದು ತಮಗೆ ಗೋದಾನಮಾಡಿದ್ದಾನೆ— ಆ ಹಸುಗಳನ್ನೆಲ್ಲ ಒಯ್ದುಬಿಡಿರಿ....ಈ ಹಾರವು ಮೇಲೆ ದಕ್ಷಿಣೆ — ಎಂದು ಕೊಟ್ಟುಬಿಡು...ನಡೆ....**

ಇನ್ನೊಮ್ಮೆ ಏನಾದರೂ ರಾಜಕಾರ್ಯವಿದ್ದರೆ ಸಭಾಮಂದಿರಕ್ಕೆ ಬಾ, ಅಂತಃಪುರಕ್ಕೆ ಬರಬೇಡ.... (ಒಳಗೆ 'ಕುಮಾರಾ, ಕುಮಾರಾ, ಕೇಳಿದೆಯಾ'?) ಅದೊ...ಕಣ್ಣುಮುಚ್ಚು...ನಡೆ... ಅಂತಃಪುರದಲ್ಲಿ ಬಂದದ್ದಕ್ಕೆ ಬೃಹನ್ನಡೆಯು ನಿನ್ನ ಜೀವ ಹೊಡೆದೀತು–ಹೊಡೆದಾಳು–ಹೊಡೆದಾಸು..ನಡೆ

(ಮುದಿಗೊಲ್ಲನು ಹೌಹಾರಿದವನಂತೆ ಹೋಗುವನು. ಅಷ್ಟರಲ್ಲಿ ಬೃಹನ್ನಡೆಯು ಬರುವಳು)

ಬೃ:—(ತಡೆದ ಉತ್ಸುಕತೆಯಿಂದ) ಕುಮಾರಾ, ಕುಮಾರಾ, ಕೇಳಿದೆಯಾ?

ಉ:—(ಉಸಿರೆಳೆದು) ಕೇಳಿದೆ.

ಬೃ:—(ಚಕಿತಳಾಗಿ) ಇದೇನು? ಕುಮಾರನು ಹೆದರಿದನೆ?

ಉ:—(ವಿಷಾದದಿಂದಲೆ) ಛೆ, ಹೆದರಿಕೆ ಅಲ್ಲ....

ಬೃ:—ಹಾಗಾದರೆ ಇಷ್ಟೊಂದು ಉದ್ದವಾದ ಉಸಿರೆಳೆಯುವದೇಕೆ?

ಉ:—(ನಕ್ಕು) ಓಹೊ! ಅದೊ? ಉಸಿರೆಳೆಯುವದು ಹೆದರಿಕೆಯ ಲಕ್ಷಣವಲ್ಲ..ಏನೊ, ಹಂಚಿಕೆ ಹಾಕುವಾಗ..ಏಕಾಗ್ರಚಿತ್ತನಾಗುವದಕ್ಕೆ ಉಸಿರು ತಡೆದಿದ್ದೆ..ತಡೆದ ಉಸಿರನ್ನು ಬಿಡಲೇಬೇಕಲ್ಲವೆ?

ಬೃ:—(ಆಶ್ಚರ್ಯದಿಂದ) ಹಂಚಿಕೆ? ಇನ್ನೂ ಹಂಚಿಕೆಯೆ?.. ನೀನು ಇಷ್ಟರಲ್ಲಿಯೆ ಆರ್ಭಟಿಸುತ್ತ ರಣಾಂಗಣಕ್ಕೆ ಹೋಗಿರಬಹುದೆಂದು ಮಹಾರಾಣಿಯವರು, ಉತ್ತರಾಕುಮಾರಿಯು ಅಧೈರ್ಯದಿಂದ, ಅಭಿಮಾನದಿಂದ ತಿಳಿದಿದ್ದಾರೆ.

ಉ:—(ನಕ್ಕು) ಮೊದಲು ರಣಾಂಗಣವೆಂಬುದು ಕಲ್ಪನೆ—ರಣಾಂಗಣಕ್ಕೆ ಎರಡು ಸೈನ್ಯಗಳು ಬೇಕು. ಸದ್ಯಕ್ಕೆ ಅಲ್ಲಿದ್ದುದು ಕೌರವರ ಸೈನ್ಯವೊಂದೇ.. ಇದಲ್ಲದೆ ರಾಜಕಾರ್ಯದಲ್ಲಿ ಹೆಂಗಸು ತಿಳಿದುಕೊಂಡುದಕ್ಕೆ ಮಹತ್ವಕೊಡುವದು ಇನ್ನೊಂದು ತಪ್ಪು.. ಇಂತಹದಕ್ಕೆ ಬೇಕು ವ್ಯಾಪಕದೃಷ್ಟಿ.. ಆ ದೃಷ್ಟಿಯಿಂದ ನೋಡಿದಲ್ಲಿ—ಪಾಪ! ದೇವತೆಗಳಿಗೂ ಬ್ರಾಹ್ಮಣರಿಗೂ ಎಂತಹ ದುರ್ಭಿಕ್ಷೆ ಬಂದಿತಲ್ಲ ಎಂದು ನನ್ನ ನಿರಾಶೆ!

ಬೃ:—(ಚಕಿತಳಾಗಿ) ದುರ್ಭಿಕ್ಷೆ........?

ಉ:—ಅಲ್ಲದೆ ಮತ್ತೇನು? ರಾಜ್ಯದಲ್ಲಿಯ ಹಸುಗಳೆಲ್ಲ ಕಳೆದ ಮೇಲೆ ಘೃತವೆಲ್ಲಿಂದ ಬರಬೇಕು? ಘೃತವಿಲ್ಲದಿದ್ದರೆ ಯಜ್ಞಮಾಡುವದೆಂತು?

ಯಜ್ಞ ತಡೆದರೆ ದೇವತೆಗಳ ಆಹಾರ–ವ್ಯವಹಾರ ಸಾಗುವದು ಹೇಗೆ ? ಭೂಸುರರಿಗೆ ರಸ–ಪಾಯಸಾದಿಗಳ ಬೋಜನದಿಂದ ತೃಪ್ತಿಪಡಿಸುವ ದೆಂತು ?

ಬೃ:—(ಮೇಲಿನಂತೆ) ಇದೇನು ಕುಮಾರಾ, ರಾಜ್ಯಕ್ಕೆ ಆಪತ್ತು ಬಂದಾಗ ದೊರೆಯ ಒಬ್ಬನೇ ಒಬ್ಬ ವೀರ–ಪುತ್ರನಾದ ನೀನು ಹೀಗೆ ವಿನೋದ ಹಾಸ್ಯಗಳಿಂದ ಕಾಲಕಳೆಯುವದೆ ?

ಉ:— ಬೃಹನ್ನಡೇ, ಇದು ವಿನೋದವಲ್ಲ.. ಈ ವಿಷಯ ಹೆಂಗಸರಿಗೆ ತಿಳಿಯುವದಿಲ್ಲವೆಂದು ಹೇಳಲಿಲ್ಲವೆ? ನೀನು ಹೆಂಗಸೂ ಅಲ್ಲ – ಗಂಡಸೂ ಅಲ್ಲ – ನಿನಗಂತೂ—

ಬೃ:—(ಕೆರಳಿ) ಸಾಕು. ಶತ್ರುಗಳು ರಾಜ್ಯವನ್ನು ನುಗ್ಗುವಾಗ ಇಂತಹ ಕೈಲಾಗದ ವಿವೇಚನೆಯೆ ? ನನ್ನ ಅಣ್ಣನು ಕೆಚ್ಚೆದೆಯವನೆಂದು ಉತ್ತರಾಕುಮಾರಿಯೂ, ನನ್ನ ಕಂದನು ವೀರಪುತ್ರನೆಂದು ದೇವಿಯರೂ ಅಭಿಮಾನಪಡುವಾಗ –

ಉ:—ನಾನು ದುರಭಿಮಾನಕ್ಕೆಪ ಕ್ಕಾಗಿ ದುರ್ಯೋಧನನ ಸೈನ್ಯಕ್ಕೆ ಎದು-ರಾಗಬೇಕಲ್ಲನೆ ?.... ಅಯ್ಯೋ ! ಎಂತಹ ಸಂಕುಚಿತಭಾವನೆ, ಸ್ವಾರ್ಥದ ಕಲ್ಪನೆ ! ಬೃಹನ್ನಡೇ, ನಿನಗಿನ್ನೂ ಜನರ ಸ್ವಭಾವ ಗೊತ್ತಿಲ್ಲ. ಹೆಂಗಸು ಎಂದಿಗಾದರೂ ಸ್ವಾರ್ಥಿ. ತನಗಾಗಿ ತನ್ನ ಮಗ ದುಡಿಯಬೇಕು, ತನಗಾಗಿ ತನ್ನ ಗಂಡ ತೊಳಲಬೇಕು, ತನಗಾಗಿ ತನ್ನ ತಂದೆ ಬಳಲಬೇಕು ಎಂಬುದು ಹೆಂಗಸಿನ ಆಶೆ....ಹೆಂಗಸರೆಲ್ಲರೂ ಸ್ವಾರ್ಥಿ... ಅವರಬಿನವು–ಒಯ್ಯಾರ, ಅವರ ವೇಷ–ಭಾಷೆ—

ಬೃ:— (ಏನೂ ತಿಳಿಯದೆ) ಇದೇನು ಕುಮಾರಾ, ರಣಾಂಗಣಕ್ಕೆ ಸನ್ನದ್ಧನಾಗಬೇಕಾದ ವೇಳೆಯಲ್ಲಿ ಹೆಂಗಸರ ಸ್ವಭಾವದ ಹರಟೆಯೆ ?

ಉ:—ನಾನು ಹೆಂಗಸ ಅಲ್ಲ ಎಂದು ನಿನಗೆ ಸಿದ್ಧಮಾಡಿತೋರಿಸಲಿಕ್ಕೆ....

ಬೃ:—ನೀನು ಹಾಗೆ ಎಂದು ಹೇಳುವ ಧೈರ್ಯ ಯಾವನಿಗೆ ? ಅದಕಾಗಿಯೆ ರಣಾಂಗಣದಲ್ಲಿ ಪೌರುಷ ತೋರಿಸಿ....

ಉ:—ಬೃಹನ್ನಡೇ, ಇದು ನಿನ್ನಹುಚ್ಚು. ರಣಾಂಗಣಕ್ಕೆ ಹೋಗುವವ ಹೇಡಿ,ಹೆಂಗಸು ಎಂದು ನನ್ನಅಭಿಪ್ರಾಯ...ಅದನ್ನೇ ನಿನಗೆ ಹೇಳಲಿಕ್ಕೆ

ಬಂದಿರುವೆ....ಪೌರುಷವಂತೆ!.... ಯುದ್ಧದಲ್ಲಿ ಮಡಿಯುವದಂತೆ!... ಅದು ಪರಮಾತ್ಮನಿಗೆ ದ್ರೋಹ.. ತಂದೆ ಗಳಿಸಿಟ್ಟ ವೈಭವವನ್ನು ವ್ಯಸನದಲ್ಲಿ ಮಣ್ಣುಗೂಡಿಸುವಂತೆ, ಪರಮಾತ್ಮನು ಕೊಟ್ಟ ಜೀವ-ಶಕ್ತಿಯನ್ನು, ಆಯುಷ್ಯದ ಎಳೆಯನ್ನು ಒಂದು ಬಾಣದಿಂದ, ಒಂದು ಗದೆಯಿಂದ ಕಡಿದೊಗೆವುದು ಮೂರ್ಖತನ....ಹೆಂಗಸರ ಹಂಚಿಕೆ ಕೇಳುವದು ಇನ್ನೊಂದು ಮೂರ್ಖತನ....ನೋಡಿಲ್ಲವೆ ಹೆಂಗಸಿನ ಹಟಕ್ಕೆ ಬಿದ್ದು ಪಾಂಡವರು ತಮ್ಮ ಮನೆತನವನ್ನು ಹಾಳುಮಾಡಿಕೊಂಡು ಅಡವಿಪಾಲಾದದ್ದು? ....ವ್ಯಾಪಕದೃಷ್ಟಿಬೇಕು,ಬೃಹನ್ನಡೇ, ಇಂತಹ ರಾಜಕಾರ್ಯದ ಹಂಚಿಕೆಗೆ ಯಾವಾಗಲೂ ವ್ಯಾಪಕದೃಷ್ಟಿ ಬೇಕು....

ಬೃ:—(ಕಳಕಳಿಯಿಂದ) ಕುಮಾರಾ, ಕುಮಾರಾ, ಎಂತಹ ಅವೇಳೆಯಲ್ಲಿ ಎಂತಹ ವಿಚಾರ! ಹೀಗಿಲ್ಲಿ ನೀನು ಹೊತ್ತುಗಳೆದರೆ ಕೌರವರು ನಿನ್ನ ರಾಜ್ಯವನ್ನು ಅಪಹರಿಸಬಹುದು! ಯಾರಿಗೆ ವಿಶ್ವಾಸಹುಟ್ಟುವದು ನಿನ್ನ ಈ ಮಾತಿನಲ್ಲಿ? ನಮ್ಮ ರಾಜಕುಮಾರನು ಹೇಡಿಯಾದನೆಂದು ನಿನ್ನ ಜನರೆಲ್ಲರೂ ನಾಚಿಕೆಯಿಂದ ಶತ್ರುಗಳಿಗೆ ತಲೆ ತಗ್ಗಿಸಬೇಕಾಗುವದು.

ಉ:—ಬೃಹನ್ನಡೇ, ಯುದ್ಧವೆಂದರೇನೆಂಬುದು ನಿನಗೇನು ಗೊತ್ತು? ಜನರಿಗೇನು ಗೊತ್ತು?....ಯುದ್ಧದಲ್ಲಿ ಸತ್ತವರು ಶೂರರಂತೆ!.... ಉಳಿದವರೆಲ್ಲ ಹೇಡಿಗಳೇ?-ಹಾಗಾದರೆ ಹೇಡಿಗಳಿಗೆಯೆ ಯುದ್ಧದಲ್ಲಿ ಜಯ ದೊರಕುವದೆಂದು ಹೇಳಬೇಕಲ್ಲವೆ?....ನೋಡಿದಿಯಲ್ಲೊ, ಜನರ ವಿಚಾರಗಳೆಂದರೆ ಇಷ್ಟೊಂದು ತಪ್ಪು, ಇಷ್ಟೊಂದು ಅಸಮಂಜಸ.. ಮನೆಯಲ್ಲಿ ಕುಳಿತು ಮಾನ್ಯತೆಯ ಪತ್ರ ಕೊಡುವರು ಅವರು....

ಬೃ:—(ಅವನನ್ನು ದಿಟ್ಟಿಸಿ) ಕುಮಾರಾ, ನೀನು ನಿಜವಾಗಿಯೆ ಹೆದರಿರುವಿ.... ನಿನ್ನ ಜೀವಕ್ಕಾಗಿ ಹೆದರಿರುವಿ....

ಉ:—ನಾನು ಹೆದರಿದ್ದು ನಿಜ...ಆದರೆ ನಾನು ವ್ಯಾಪಕ – ದೃಷ್ಟಿಯಿಂದ ಹೆದರಿರುವೆ, ತಿಳಿಯಿತೇ?....ಬೃಹನ್ನಡೇ, ನಿನ್ನ ಈ ಪರಿಸ್ಥಿತಿಯಲ್ಲಿ ನಿನಗೆ ಸಂಸಾರದ ವ್ಯವಹಾರ–ಪಾಪ! ಹೇಗೆ ತಿಳಿಯುವದು?....ನಾನು

ಇಂದು ಯುದ್ಧಕ್ಕೆ ಹೊರಟರೆ ನನ್ನ ಕೂಡ ಉಳಿದ ತರುಣರೂ ಬರುವರಲ್ಲವೆ? ನಾನು ರಾಜಪುತ್ರನೆಂದು ನನ್ನ ಸಂರಕ್ಷಣೆಗಾದರೂ ಬರಲೇಬೇಕಲ್ಲವೆ? ಬೃಹನ್ನಡೇ, ನನ್ನಂತೆ ಉಳಿದವರು ಕೂಡ ತಮ್ಮ ತಾಯ್ತಂದೆಗಳ ಮಗು, ತಮ್ಮ ಹೆಂಡದಿರ ಗಂಡ, ತಮ್ಮ-ಥೆ, ಇದೆಲ್ಲ ತೊಡಕು ನಿನಗೆ ತಿಳಿಯುವಂತಿಲ್ಲ.

ಬೃ:—(ಸಿಟ್ಟಿನಿಂದ) ಕುಮಾರಾ, ನೀನು ಯುದ್ಧಕ್ಕೆ ಹೊರಡದಿದ್ದರೆ ನಿನ್ನನ್ನು ಬಲಾತ್ಕಾರದಿಂದ ನಾನು ಎಳೆದೊಯ್ಯುವೆ.

ಉ:—(ನಕ್ಕು) ನೋಡಿದೆಯಿಲ್ಲೋ? ನನ್ನ ತರ್ಕ ಮತ್ತೆ ಸರಿಯಾಯಿತು. ಯುದ್ಧಕ್ಕೆ ಹೋಗುವವರೆಲ್ಲ ಹೆಂಗಸು, ಹೇಡಿ ಎಂದು ಹೇಳಿದ್ದಿಲ್ಲವೆ? ಅದಕಾಗಿಯೆ ನಪುಂಸಕಳಾದ ಬೃಹನ್ನಡೆಗೆ ಯುದ್ಧಕ್ಕೆ ಹೋಗುವ ಇಷ್ಟೊಂದು ಹುಚ್ಚು ಹಟ..ಈಗ.. ಆ ವಿಚಾರವನ್ನು ಬಿಟ್ಟು ಬಿಡು..ಯಾರೂ ಯುದ್ಧಕ್ಕೆ ಹೋಗಲಿಲ್ಲವೆಂದು ತಿಳಿ.. ಆಮೇಲೆ ಏನಾಗುವದು?

ಬೃ:—(ಅಸಹ್ಯದಿಂದ) ಆಗುವದೇನು? ವೈರಿಯುರಿಂದ ನಡೆದು ಬಂದ ನಿನ್ನ ರಾಜ್ಯ ಹಾಳಾಗುವದು.

ಉ:—ಯುದ್ಧಕ್ಕೆ ಹೋದೆವೆಂದು ತಿಳಿ.... ಆಮೇಲೆ ಏನಾಗುವದು?

ಬೃ:—(ಅಭಿಮಾನದಿಂದ) ಸೋಲುವಾಗ ಸತ್ತರೆ ಮೇಲಿನ ಸ್ವರ್ಗ, ಜೀವದಿಂದ ಜಯಶಾಲಿಯಾದರೆ ಇಲ್ಲಿಯೇ ಸ್ವರ್ಗ..

ಉ:—ಹಂ....ಇನ್ನು ವಿಚಾರಮಾಡುವಾ....ಈಗ ಎರಡು ಪಕ್ಷ....ಒಂದು ಸಾಯದೆ ಸೋಲುವದು, ಇನ್ನೊಂದು ಜೀವದಿಂದ ಜಯಶಾಲಿಯಾಗುವದು....ಒಂದರಿಂದ ನರಕ, ಇನ್ನೊಂದರಿಂದ ಸ್ವರ್ಗ, ಅಲ್ಲವೆ?.. ಬೃಹನ್ನಡೇ, ಇಂತಹ ಸ್ವಾರ್ಥದ ವಿಚಾರಕ್ಕೆ ಗಂಡಸರು ಎಂದಾದರೂ ಒಪ್ಪಬಹುದೆ? ನರಕಕ್ಕೆ ಹೆದರುವಂತಹ ಅಳ್ಳೆದೆಯು ಗಂಡಸಿನದಲ್ಲ! ನಡೆ – ಈ ಉತ್ತರಕುಮಾರನ ಪೌರುಷವನ್ನು ನೋಡುವದಿದ್ದರೆ ನನ್ನನ್ನು ಹಿಂಬಾಲಿಸು (ಎಂದು ಒಳಗೆ ಹೊರಡುವನು)

ಬೃ:—(ಸಂಶಯದಿಂದ) ಕುಮಾರಾ, ಎಲ್ಲಿಗೆ ಹೊರಟೆ?

ಉ:—ನಿನಗೆ ಪೌರುಷ ನೋಡಬೇಕಾಗಿದೆಯಲ್ಲವೆ ?..ನಡೆ, ಹಾಗಾದರೆ ನೃತ್ಯಶಾಲೆಗೆ. (ಎಂದು ಹೊರಡುವನು)

ಬೃ:—(ಅವನನ್ನು ಅಡ್ಡಗಟ್ಟಿ) ಕುಮಾರಾ, ಕುಮಾರಾ, ದೊರೆಯ ಅನ್ನ ಉಂಡ ಉಪಕಾರಕ್ಕಾಗಿ ನಿನ್ನನ್ನು ಬಲಾತ್ಕಾರದಿಂದ ಒಯ್ಯುವೆ ರಣಾಂಗಣಕ್ಕೆ.

ಉ:—(ಕದಲದೆ) ಬೃಹನ್ನಡೇ,ನನ್ನ ಮಾತು ಕೇಳಿಕೊ....ನಿನಗೇನೊ ಹೆಂಗಸರಂತೆ, ಹುಡುಗಬುದ್ಧಿಯವರಂತೆ ಅದ್ಭುತ ನೋಡುವ ಕುತೂಹಲ ಇರಬಹುದು ಹೋಗುವದಾದರೆ ಹೋಗು.ಸಂಜೆಯಾಗುವದರೊಳಗಾಗಿ ಮಾತ್ರ ತಿರುಗಿ ಬಂದುಬಿಡು..ನೀನು ಬರುವಷ್ಟರಲ್ಲಿ ನಾನು ಹೊಸದೊಂದು ನೃತ್ಯವನ್ನು ರೂಢಿಮಾಡಿಕೊಂಡಿರುವೆ..ಹಹ.. ನಿನಗೆ ಹೆದರಿಕೆಯಾಗಿದೆ ಒಬ್ಬಾಕೆಗೆ ಹೋಗಲಿಕ್ಕೆ ! ಅದಕ್ಕೆ ನನ್ನನ್ನು ಜೊತೆಗೆ ಸೇರಿಸಿಕೊಳ್ಳುವೆಯಲ್ಲವೆ ?... ಆದರೆ ಮಹತ್ವದ ಕೆಲಸವನ್ನು ಬಿಟ್ಟು....

ಬೃ:—(ಕೆರಳಿ) ಕುಮಾರಾ, ಸಾಕುಮಾಡು ನಿನ್ನ ಹೇಡಿತನ !....ನನ್ನಲ್ಲಿ ಪೌರುಷವಿರಲಿಕ್ಕಿಲ್ಲ ಒಂದು ವೇಳೆ....ಆದರೆ ಪೌರುಷದ ವೀರರನ್ನು ಇದೇ ಕಣ್ಣುಗಳಿಂದ ನೋಡಿರುವೆ...ಪಾಂಡವರ ಅಂತಃಪುರದಲ್ಲಿ ಗಾಯನ-ನರ್ತನ ಕಲಿಸುತ್ತಿದ್ದೆ ಮೊದಲು....ನರವೀರನಾದ ಪಾರ್ಥನಾಗಲಿ, ಸಾವಿರಾರು ಮದ್ದಾನೆಗಳ ಕೊಬ್ಬುಳ್ಳ ಭೀಮಸೇನನಾಗಲಿ, ತೇಜಸ್ಸಿನಿಂದ ಕಣ್ಣುಕುಕ್ಕಿಸುವ ನಕುಲ-ಸಹದೇವರಾಗಲಿ ಇಂತಹ ಪ್ರಸಂಗದಲ್ಲಿ ಗರ್ಜಿಸುತ್ತ, ಶಸ್ತ್ರಸಮೇತರಾಗಿ—

ಉ:—ಅಯ್ಯೋ, ಬೃಹನ್ನಡೇ, ಸಾಕುಮಾಡು ಈ ಹಾಳು ಹರಟೆಯನ್ನು. ಎರಡನೆಯವರು ಮಾಡಿದಂತೆ ಮಾಡಬೇಕೆಂದರೆ ಎರಡೆರಡು ಯುಗಗಳ ಆಯುಷ್ಯ ಸಾಲಲಿಕ್ಕಿಲ್ಲ....ಐದು ಮಂದಿ ಒಟ್ಟುಗೂಡಿ ಒಬ್ಬಾಕೆಯನ್ನೆ ಮದಿವೆಯಾದ-ಐವರೂ ಉನ್ಮತ್ತರಂತೆ ಆ ಒಬ್ಬ ಹೆಂಡತಿಯನ್ನು ಜೂಜಿನಲ್ಲಿ ಸೋತ-ಅವಿವೇಕಿ ಪಾಂಡವರಂತೆ ನಡೆ ಎನ್ನುವೆಯಾ ಈ ಉತ್ತರಕುಮಾರನಿಗೆ—ನಡೆ....ಇಂದಿನ ಹೊಸ ನೃತ್ಯವನ್ನು....

ಬೃ:—ಅಯ್ಯೋ, ಹೇಡಿ! ರಣಾಂಗಣದಲ್ಲಿಯ ಪೌರುಷದ ನೃತ್ಯವೂ ನಿನಗೆ ಹೊಸತು. ಅದನ್ನು ನೋಡಿದೆ ಎಂದರೆ....

ಉ:—(ಉತ್ಸುಕನಾಗಿ) ಏನು? ರಣಾಂಗಣದಲ್ಲಿ ಗಾಯನ–ನರ್ತನವಿದೆಯೆ? ಬೃಹನ್ನಡೇ, ಮೊದಲೇ ಹೇಳಲಿಲ್ಲವೇಕೆ? ನನಗೇನೊ ರಣಾಂಗಣದಲ್ಲಿ ಪಶುಗಳಂತೆ ಕಾದಾಡಿ ಒಬ್ಬರನ್ನೊಬ್ಬರು ಕೊಲ್ಲುವರೆಂಬ ಕಲ್ಪನೆ ಯಿದ್ದಿತು.

ಬೃ:—(ಆವೇಶದಿಂದ) ರಣಾಂಗಣದ ವೀರರ ನರ್ತನವು ನಿನಗೇನು ಗೊತ್ತಿದೆ? ಅವರ ಹೆಜ್ಜೆಯ ಗತಿ–ಸ್ಥಿತಿಗಳನ್ನು ನೀನೇನು ಬಲ್ಲೆ? ಕಾಲ್ಬೆರಳಿನಿಂದ ಬಲವಾಗಿ ನೆಲಕ್ಕೆ ಸಿಲ್ಲಿಸಿದ ಬಿಲ್ಲಿನ ಟಣತ್ಕಾರದೊಡನೆ, ಕಿವಿವರೆಗೆ ಜಗ್ಗಿದ ಬಾಣದ ಏಕಾಗ್ರತೆಯೊಡನೆ, ಸಕಲ ಸಾತ್ವಿಕ ವಿಕಾರಗಳೆಲ್ಲವೂ ಇಲ್ಲಿಯೆ ಸೇರಿವೆಯೊ ಏನೊ ಎನ್ನುವಂತೆ ತೇಜಸ್ಸಿನಿಂದ ರಸವತ್ತಾದ ಕಣ್ಣುಗಳಿಂದ ಸಾಹಸದಿಂದ ಉಕ್ಕಿ ಉಬ್ಬಿಸಿದ ಎದೆಯಿಂದ, ಗಾಂಭೀರ್ಯದಿಂದ ಬಲಭುಜದ ಮೇಲೊಗೆದ ತಲೆಯಿಂದ....

ಉ:—(ಉತ್ಸಾಹದಿಂದ) ಬೃಹನ್ನಡೇ, ಎಂತಹ ಸೊಗಸಾದ ಚಿತ್ರವಾಗುವದು! ತಡೆ....ಕುಂಚ ತರುವೆ...ಬೃಹನ್ನಡೇ, ತೀವ್ರ ನಡೆ.... ಬಣ್ಣದ ಪಟ ವನ್ನು ತರುವೆ....ಯಾರಲ್ಲಿ?....ಅಯ್ಯೋ, ಬೃಹನ್ನಡೇ, ಮೊದಲೇ ಹೇಳಬಾರದಾಗಿತ್ತೆ? ನಡೆ...ನನ್ನ ತಂದೆಯವರೂ ಅಲ್ಲಿಯೇ ಹೋಗಿರು ವರಂತೆ.... ಎಲ್ಲವೂ ಮುಗಿಯುವದರೊಳಗಾಗಿ, ಸೂರ್ಯನು ಮುಳುಗುವದರೊಳಗಾಗಿ ಹೋಗುವ ನಡೆ. . . .ಯಾರಲ್ಲಿ....ನನ್ನ ಕುಂಚ, ಬಣ್ಣದ ಪಟ....

ಬೃ:—ಕುಮಾರಾ, ನಿನ್ನ ಬಾಣ–ಬತ್ತಳಿಕೆ ತರಹೇಳು—

ಉ:—ಯಾಕೆ? ಅವರವರ ಬಾಣ–ಬತ್ತಳಿಕೆ ಇರಬಹುದಲ್ಲ ಅವರವರ ಕಯ್ಯೊಳಗೆ!

ಬೃ:—ನೀನು ಬಾಣ-ಬತ್ತಳಿಕೆ ತಾರದ ಹೊರತು ನಾನು ಬರುವದೇ ಇಲ್ಲ...

ಉ:—ಬೃಹನ್ನಡೇ, ಈಗ ನೀನು ಹೆದರಿಡೆ. ಅದನ್ನು ತೋರಿಸಬಾರದೆಂದು ಸುಮ್ಮಸುಮ್ಮನೆ ಹಟ ತೊಡುವೆ. . ಬಾಣ ಯಾಕೆ? ಬತ್ತಳಿಕೆ

ಯಾಕೆ?..ಇರಲಿ..ನನ್ನ ಚಿತ್ರಪಟ ನೋಡಿದೆಯೆಂದರೆ ನಿಜವಾಗಿಯೆ ಹೆದರುವಿ... ಅಷ್ಟೊಂದು ಸೊಗಸಾಗಿ ಬರೆಯುವೆ ಚಿತ್ರವನ್ನು !

ಬೃ:—(ಆವೇಶದಿಂದ) ಕುಮಾರಾ, ರಣಾಂಗಣದಲ್ಲಿ ಚಿತ್ರಬರೆಯುವ ವೀರನಿಗೆ ಕುಂಚ ಬೇಡ, ಬಣ್ಣ ಬೇಡ, ಪಟ ಬೇಡ; ಭೂದೇವಿಯ ಹೃದಯ ಪಟದ ಮೇಲೆ ಶತ್ರುಗಳ ರಕ್ತದಿಂದ ಕೆಂಪಾದ ಬಾಣಗಳಿಂದ ಬರೆಯುವನು ವೀರನು....

ಉ:—ಬೃಹನ್ನಡೇ,ಮತ್ತೆ ಈ ರಾಕ್ಷಸೀ ಮಾತನ್ನು ನುಡಿದೆ–ಗಾಯನವಿದೆ, ನರ್ತನವಿದೆ ಎಂದು ಹೇಳಿದೆ; ಮತ್ತೆ ಬಾಣ, ರಕ್ತ ಎಂದು ಹೇಳುವೆ.

ಬೃ:—ಕುಮಾರಾ ಮುಗ್ಧನಿರುವೆ ನೀ. ರಣಾಂಗಣದ ಗಾಯನ-ನರ್ತನವೆಂದರೆ ಶತ್ರುಗಳ ಪ್ರಳಯದ ಭೈರವ–ತಾಂಡವ....

ಉ:—ಛೆ,ಹಾಗಿದ್ದರೆ ಬೇಡ..ನಮ್ಮ ನೃತ್ಯವೇ ಒಳಿತು....ಸಾತ್ವಿಕವಾಗಿದೆ.

ಬೃ:—(ವಿಚಾರಿಸಿ, ಒಮ್ಮೆಲೆ) ಕುಮಾರಾ, ನಾನು ಹೇಳಿದ್ದು ತಪ್ಪು..ಪ್ರಳಯ ತಾಂಡವವೆಂದು ನಿನ್ನನ್ನು ಹೆದರಿಸಬೇಕೆಂದು ಮಾಡಿದ್ದೆ....

ಉ:—(ಗಟ್ಟಿಯಾಗಿ ನಕ್ಕು) ಈ ಬೃಹನ್ನಡೆಯು ನನ್ನನ್ನು ಹೆದರಿಸಬೇಕೆಂದು ಮಾಡಿತಂತೆ!....ಹ ಹ ಬೃಹನ್ನಡೇ, ನನಗೆ ಹೆದರಿಕೆಯಿಲ್ಲ. ಆದರೆ ನಿಜವಾಗಿಯೆ ಒಬ್ಬರನ್ನೊಬ್ಬರು ಕ್ರೂರಪಶುಗಳಂತೆ ಸಾಯ ಹೊಡೆದರೆ ನನಗೆ ಹೇಸಿಕೆಯಾಗುವದು— ಹೆದರಿಕೆಯಂತೆ !.... ನೋಡುವೆಯಂತೆ! ಕ್ರೂರವಾದ ಕೃತ್ಯಗಳನ್ನು ಕಲ್ಪಿಸಿ, ವಿಕಾರವಾದ ಕೊಳೆ–ಹೆಣಗಳನ್ನು ತುಂಬಿ, ಉದ್ರೇಕದ ಚಿತ್ರಬರೆದು ತೋರಿಸುವೆ.. ಆಗ ನೀನು ಹೆದರುವೆಯೊ, ನಾನು ಹೆದರುವೆನೊ ತಿಳಿಯುವದು!....(ಒಮ್ಮೆಲೆ) ಬೃಹನ್ನಡೇ, ನೀನು ಹೇಳಿದ್ದು ನಿಜವೇ? ಗಾಯನ–ನರ್ತನವಿದೆಯೆ? ಬೃಹನ್ನಡೇ, ಹೇಳು, ಹೇಳು! ಯಾರಲ್ಲಿ?... ನನ್ನ ರಥವನ್ನು ಸಜ್ಜುಗೊಳಿಸಿರಿ..ಬೃಹನ್ನಡೇ, ಹೆದರಬೇಡ.. ಮನೋಹರವಾಗಿ, ಶೀತಲವಾಗಿ ಪಸರಿಸಿದ ಗಿಡದ ನೆರಳಿನಲ್ಲಿ ಕುಳಿತುಕೊಳ್ಳುವ..ನೀನು ಆಗಾಗ ನೋಡಿದ್ದನ್ನು ಹೇಳುವೆಯಂತೆ–ಸರಸವಾಗಿ..ನೀನು ಹೇಳಿದಂತೆ ವಿಷಯಗಳನ್ನೆಲ್ಲ ನಾನು ಚಿತ್ರಿಸುವೆ—

ಬೃ:—ಒಂದು ವೇಳೆ ಕಾಳಗವು ಪ್ರಾರಂಭವಾದರೆ—

ಉ:—ಹೆದರಬೇಡ, ಬೃಹನ್ನಡೇ, ಅವರಿಗೆ ಹೇಳಿಕೊಳ್ಳೋಣ; ನಾವು ಚಿತ್ರವನ್ನು ಬರೆಯಲು ಬಂದಿರುವೆವು, ನಾನಾತೆರದ ವಿಕಾರಗಳು ವ್ಯಕ್ತವಾಗುವಂತೆ ಅವರನ್ನು ಕೆಲಹೊತ್ತು ಹಾಗೆಯೆ ನಿಲ್ಲಿಸೋಣ.... ಆಯಿತಿಲ್ಲೊ?.... ನಡೆ.. ನಾವಿಬ್ಬರೆ ಹೋಗುವ— ಯಾರಲ್ಲಿ?—ನನಗೆ ಸಾರಥಿ ಬೇಡ.. ಆಯಿತಿಲ್ಲೊ, ನೀನೇ ಸಾರಥಿಯಾಗು....

ಬೃ:—(ಬೆದರಿದಂತೆ) ಅಮ್ಮಯ್ಯ, ದುಷ್ಟರ ದವಡೆಗೆ ನಾನೇ ಮೊದಲನೆಯ ತುತ್ತಾದೇನು?..ಬೇಡ..ನನಗೆ ಹೆದರಿಕೆ....

ಉ:—(ಬೃಹನ್ನಡೆಯನ್ನು ಎಳೆಯುತ್ತ) ಆ ಹೆದರಿಕೆ ಬೇಡ..ನನಗೆ ತಿಳಿಯುವದಿಲ್ಲವೆ?—ನಿನ್ನಂತಹ ವಸ್ತುವನ್ನು ನೋಡಿದರೆ ಯಾರೂ ಕ್ರೂರತನದಿಂದ ಕೈಯೆತ್ತುವದಿಲ್ಲ; ಅಂತೇ ನೀನು ಸಾರಥಿ!

(ಎಂದು ಎಳೆದುಕೊಂಡು ಹೋಗುವನು)

ದೃಶ್ಯ ೨

(ರಣಾಂಗಣದ ಸಮೀಪದಲ್ಲಿನ ಶಮೀವೃಕ್ಷದ ನೆರಳಿನಲ್ಲಿ)

[ಗಿಡದಡಿಯಲ್ಲಿ ಒಂದು ಬಂಡೆಗಲ್ಲು; ಅದರ ಮೇಲೆ ಎಡದ ಮೊಳಕೈಯನ್ನೂರಿ, ಗದ್ದವನ್ನು ಎಡಗೈಯಲ್ಲಿಟ್ಟು, ಎದುರು ದಿಟ್ಟಿಸುತ್ತ, ಮುಂದೆ ಪಟವನ್ನಿಟ್ಟುಕೊಂಡು, ಬಲಗೈಯಲ್ಲಿ ಉದ್ದವಾದ (ಬಣ್ಣದ) ಕುಂಚವನ್ನು ಹಿಡಿದು, ಉತ್ತರಕುಮಾರನೊಬ್ಬನೆ ಮಗ್ಗುಲಾಗಿ ಮಲಗಿದ್ದಾನೆ]

ಉ:—(ಉತ್ಸಾಹ ತುಳುಕುತ್ತ) ಬೃಹನ್ನಡೇ, ಎಂತಹ ದಿವ್ಯವಾದ ದೃಶ್ಯವಿದು!.. ಬೃಹನ್ನಡೇ, ಆದರೂ ನನಗೆ ಒಂದು ದುಃಖ. ಅನಾಯಾಸವಾಗಿ ಉತ್ತರದ ಎಲ್ಲ ರಾಜರು ಬಂದಿದ್ದಾರೆ. ಪಾಂಡವರೊಬ್ಬರಿದ್ದರೆ ನನ್ನ ಚಿತ್ರಪಟ ಪೂರ್ತಿಯಾಗುತ್ತಿತ್ತಲ್ಲ! ಈಗ?.... ಒಂದೇ ಸೈನ್ಯ!—ಅದರ ಎದುರಿಗೆ....? ಯಾವದನ್ನು ದಿಟ್ಟಿಸುವಂತೆ ಇವರನ್ನು ಬರೆಯಲಿ?.... ಬೃಹನ್ನಡೇ, ಹಂಚಿಕೆ ಹಾಕಬಾರದೆ?....ಅಂ....ಬೃಹನ್ನಡೇ....(ಒಮ್ಮೆಲೆ

ಸದ್ದಿಲ್ಲದನ್ನು ಕಂಡು ಅತ್ತಿತ್ತ ನೋಡಿ ಚಕಿತನಾಗಿ) ಅಯ್ಯೋ !.... ಬೃಹನ್ನಡೇ, ಬೃಹನ್ನಡೇ–ಛೆ, ಇಂತಹ ಅಂಜುಬುರುಕರ ಜೊತೆಯಲ್ಲಿ ಕೆಲಸ ಮಾಡುವದೆಂದರೆ ಬಹಳೇ ಕಠಿಣ. . ಈ ಬೃಹನ್ನಡೆ ಮತ್ತೆ ಬೆದರಿ ಹೋಯಿತೇನೊ!....ಬೃಹನ್ನಡೇ, ಬೆದರಬೇಡ, ಬಾರೆ. (ಹಿಂದುಗಡೆಯಿಂದ ಬಂದು ನಿಂತ ಬೃಹನ್ನಡೆಯನ್ನು ನೋಡಿ) ಬೃಹನ್ನಡೇ, ನಿನಗೆ ಎಷ್ಟು ಧೈರ್ಯ ಹೇಳಿರುವೆ, ಆಶ್ವಾಸನ ಕೊಟ್ಟಿರುವೆ, ಮತ್ತೆ ಮತ್ತೆ ಹೆದರುವೆಯಲ್ಲ !

ಬೃ:—ಹೆದರಿಕೆ ಅಲ್ಲ, ಕುಮಾರಾ, ಈ ಮರವನ್ನು ಹತ್ತಿ ಮೇಲೆ ಕುಳಿತಿದ್ದೆ.

ಉ:—(ನಗೆಯಿಂದ)ಹ...ಬೃಹನ್ನಡೇ,ಮತ್ತೆ ನನಗೆಯೆ ಮೋಸಮಾಡಬೇಕೆನ್ನುವೆಯಾ ?.... ನನಗೆ ತಿಳಿಯುವದಿಲ್ಲವೆ ?. . ಮರವನ್ನು ಏರುವಷ್ಟು ಚಿಕ್ಕಂದಿನ ಮಂಗತನ ಇದೆಯೆ ನಿನ್ನಲ್ಲಿ ?....ನಿನ್ನಷ್ಟು ವಯಸ್ಸಾದ ಮನುಷ್ಯಪ್ರಾಣಿಯು ಮರವನ್ನು ಹತ್ತುವದೆಂದರೆ ಹೆದರಿಕೆಯೆ ಅದಕ್ಕೆ ಕಾರಣ (ಏನೊ ತಟ್ಟನೆ ಹೊಳೆದಂತಾಗಿ ಗಟ್ಟಿಯಾಗಿ ನಗುತ್ತ) ಹಹಹ.... ಎಂತಹ ಸೋಜಿಗ !

ಬೃ:—(ಸಂಶಯದಿಂದ) ಏನದು, ಕುಮಾರಾ ?....ಹೀಗೆ ನನ್ನ ಉಪಹಾಸ ಮಾಡಬೇಡ. ಮೊದಲೇ ಹೇಳಿದ್ದಿಲ್ಲವೆ ? ಇಲ್ಲಿಯ ವರೆಗೆ ನನ್ನನ್ನು ಕರೆ ತಂದು ಉಪಹಾಸಮಾಡುವದಾದರೆ ನಾನು ಹೋಗಿಬಿಡುವೆ ತಿರುಗಿ.

ಉ:—(ನಗೆ ತಡೆದು) ಬೃಹನ್ನಡೇ,ನಿನ್ನ ಉಪಹಾಸವಲ್ಲ. . ನಿನಗೆ ಅಷ್ಟೊಂದು ಹೆದರಿಕೆಯಾದರೆ ನನಗೆ ಹೇಳುವೆಯಂತೆ – ನಿನ್ನನ್ನು ಮನೆಗೆ ಮುಟ್ಟಿಸಿ ಬರುವೆ. . ಈಗ ನಾನು ನಕ್ಕದ್ದು ನನ್ನ ವಿಚಾರಕ್ಕಾಗಿ...(ಮತ್ತೆ ನಗುತ್ತ) ಇದೇ ನೀನು ಮರವನ್ನು ಹತ್ತಿದಾಗ ಪಾಂಡವರಿಲ್ಲದ್ದಕ್ಕೆ ನನ್ನ ಚಿತ್ರ–ಪಟಕ್ಕೆ ಕೊರತೆಯಾಯಿತಲ್ಲ ! ಎಂದು ಖೇದಪಡುತ್ತಿದ್ದೆ. ಅಷ್ಟರಲ್ಲಿ ನೀನು ಮರಹತ್ತಿದ್ದೆ ಎಂದು ಹೇಳಿದೆ....ಅದು ಮಂಗತನ ಎಂಬ ವಿಚಾರ ನನಗೆ ಹೊಳೆಯಿತು....ವಿಚಾರಕ್ಕೆ ವಿಚಾರ, ಕಲ್ಪನೆಗೆ ಕಲ್ಪನೆ ಹೇಗೆ ಹೊಂದುವದು ನೋಡಿದೆಯಾ, ಬೃಹನ್ನಡೇ ? ನನ್ನ ಸಾರಥಿಯಾದ ನೀನು ಮರವನ್ನು ಹತ್ತಿದಲ್ಲಿ ಅರ್ಜುನನಂತೆ ನಾನೂ ಕಪಿ–ಧ್ವಜನೆ ಅಲ್ಲವೆ ಎಂದು. . (ನಗುತ್ತ) ಅವನ ಧ್ವಜದಲ್ಲಿ ಕಪಿ, ನನ್ನ

ಸಾರಥಿಯು ಕಪಿಯಂತೆ ಮೇಲೆ – ಗಿಡದ ತುದಿಯಲ್ಲಿ – ಹಹ....ಧ್ವಜ ದಂತೆ...

ಬೃ:—(ಕೆರಳಿ) ಸಾಕು....ನಾನು ಮರವನ್ನು ಹತ್ತಿದ್ದು...

ಉ:—(ಸಮಾಧಾನದಿಂದ) ವಿನೋದವಿದು ಬೃಹನ್ನಡೇ, ಕೋಪಿಸಬೇಡ.... ನಾನೂ 'ಕಪಿಧ್ವಜ' ಎಂಬ ವಿಚಾರ ಸೊಗಸಾಗಿಲ್ಲವೆ ?....ನೀನು ಕಪಿ ಯಾದುದು....ಏನೋ ಒಂದು ಆಕಸ್ಮಿಕ ಕಾರಣ...ಅದನ್ನು ಮರೆತರೆ ಒಟ್ಟು ವಿಚಾರವು ಸೊಗಸಾಗಿಲ್ಲವೆ ?

ಬೃ:—ಕುಮಾರನಿಗೆ ಎಲ್ಲವನ್ನೂ ಸರಸವಾಗಿ ಬಣ್ಣಿಸಬೇಕೆಂದು ಮುಂಚಿತ ಎಲ್ಲವನ್ನೂ ನೋಡಿಕೊಳ್ಳಬೇಕೆಂದು ಮರ ಹತ್ತಿದರೆ––

ಉ:—ಬೃಹನ್ನಡೇ, ವಿನೋದ ಎಂದು ಹೇಳಲಿಲ್ಲವೆ? ... ಅದೊ, ನೋಡು, ಇಂತಹ ದಿವ್ಯ–ದೃಶ್ಯವನ್ನು ನೋಡಿ ಯಾರಿಗೆ ಉತ್ಸಾಹ ಬರಲಿಕ್ಕಿಲ್ಲ! ನನ್ನವಂತೂ ಬಾಹುಗಳು ಒಂದೇ ಸವನೆ ಸ್ಫುರಣಹೊಂದುತ್ತಲಿವೆ; ಕೈಬೆರಳುಗಳು ಕುಣಿಯುತ್ತಲಿವೆ.

ಬೃ:—ಅದಕಾಗಿಯೆ ಕುಮಾರನಿಗೆ ಬಾಣ–ಬತ್ತಳಿಕೆ ತರಲು ಹೇಳಿದ್ದೆ. (ವಿಷಾದದಿಂದ) ಆದರೆ ನನ್ನಂತಥವರ ಮಾತಿನಲ್ಲಿ...

ಉ:—(ನಿರಾಶೆಯಿಂದ) ಬೃಹನ್ನಡೇ, ಹೀಗೆ ರಸಭಂಗಮಾಡಬೇಡ. ನನ್ನ ಬಾಹುಗಳು ಸ್ಫುರಣಹೊಂದುವದು ಕುಂಚವನ್ನು ಹಿಡಿಯಲಿಕ್ಕೆ; ನನ್ನ ಕೈಬೆರಳುಗಳು ಕುಣಿಯುವದು ಚಿತ್ರವನ್ನು ಬರೆಯುವದಕ್ಕೆ.... ಹುಂ. .ಅದಿರಲಿ – (ಮುಂದೆ ನೋಡಿ) ಬೃಹನ್ನಡೇ, ಮೊದಲು ಒಂದು ಸಂಗತಿ ನನಗೆ ತಿಳಿಯಬೇಕಾಗಿದೆ – ಈ ಸೈನ್ಯವೆಲ್ಲ ಒಂದು ಆಲದಮರ ವನ್ನು ಸುತ್ತುಗಟ್ಟಿ ಯಾಕೆ ನಿಂತಿದೆ?....ಅದರ ಉದ್ದಿಶ್ಯವೇನು ? ಎಂದು ನನ್ನ ತೊಡಕು. ಅದು ಗೊತ್ತಾಗದೆ ಅವರ ಮುಖದಲ್ಲಿ ಎಂತಹ ಕಳೆ, ಎಂತಹ ಮುದ್ರೆ ಮೊದಲಾಗಿ ಹೇಗೆ ಗೊತ್ತುಪಡಿಸುವದು ?

ಬೃ:—(ಎದುರು ದಿಟ್ಟಿಸಿ) ಆಲದ ಮರ ಆಲದ? ಮರ ಎಲ್ಲಿದೆ ?

ಉ:—ಬೃಹನ್ನಡೇ, ಹಾಗೆ ನೋಡಬೇಡ. ಚಿತ್ರಬರೆಯುವವನಿಗೆ ಎರಡು ದೃಷ್ಟಿಗಳು. ಒಂದು ವ್ಯಾಪಕ, ಒಂದು ಸೂಕ್ಷ್ಮ....ಅಂತಹ ದೃಷ್ಟಿ ಯಿಂದ ನೋಡು....(ತೋರಿಸುತ್ತ) ಅದೊ. .ಎದುರಿನಲ್ಲಿ ಆಲದ ಮರ

ಕಾಣುವದಿಲ್ಲವೆ ? . . ಆ – ಅದರ – ತುಟ್ಟತುದಿಯಲ್ಲಿ ಎಲೆಗಳು ಬಾಡಿ ದಾತೆ–ಮುತ್ತಿವೆ ನೋಡು ! ಅದೊ,ಎಲ್ಲ ಒಡಿಯಿಂದಲೂ ಬೇರುಗಳು ಕೆಳಗೆ ಜೋತುಬಿದ್ದಿವೆ ನೋಡು . . ಹಂ . . ಯಾರೊ ಅದರ ಟೊಂಗೆಗೆ ಧನುಷ್ಯವನ್ನು ನೇತುಬಿಟ್ಟಿರುವರು ನೋಡು....ನೋಡಿದೆಯಾ ?.... ಕಾಣುವದಿಲ್ಲವೆ ? . . ಅದರ ಬುಡದಲ್ಲಿ ಒಂದು ಬಿಳಿಯ ಶಿಬಿರವಿದೆ ನೋಡು . . ಕಾ–(ಬೃಹನ್ನಡೆಯು ಖೊಳ್ಳೆಂದು ನಗಲು ತಡೆದು ಚಕಿತನಾಗಿಯೂ, ಕೋಪದಿಂದಲೂ ಅವಳನ್ನು ದಿಟ್ಟಿಸುವನು)

ಬೃ:—(ಗಟ್ಟಿಯಾಗಿ ನಕ್ಕು) ಕುಮಾರಾ, ಅದು ಆಲದ ಮರವಲ್ಲ. ಆ ಶಿಬಿರ, ಆ ಬೇರು, ಆ ಟೊಂಗೆ, ಆ ಎಲೆ ಒಂದೂ ಇಲ್ಲ.

ಉ:—(ಸಿಟ್ಟಿನಿಂದಲೆ) ಬೃಹನ್ನಡೇ, ಸೂಕ್ಷ್ಮದೃಷ್ಟಿಯಿಂದ ನೋಡಬೇಕೆಂದು ಹೇಳಿಲ್ಲವೆ ?

ಬೃ:—(ನಕ್ಕು) ಕುಮಾರಾ, ಮರದ ಮೇಲಿನಿಂದ ಎಲ್ಲವನ್ನೂ ನೋಡಿರುವೆ. ಅದು ಆಲದ ಮರವಲ್ಲ. ಜಗತ್ತನ್ನೆಲ್ಲ ತನ್ನ ಸ್ಥೈರ್ಯ–ಧೈರ್ಯ ಗಳಿಂದ, ತನ್ನ ಸತ್ಯ–ಸಾಹಸಗಳಿಂದ ನಡುಗಿಸುವ ವೃದ್ಧ–ಪಿತಾಮಹ ರಾದ ಭೀಷ್ಮಾಚಾರ್ಯರು ಅವರು !

ಉ:—ನಗುವೆ ಯಾಕೆ ? ಪೆಚ್ಚಾದವಳು ನೀನು. ನಾನು ಹೇಳಿದ್ದು ನನ್ನ ಸೂಕ್ಷ್ಮದೃಷ್ಟಿಯಿಂದ. ಮುಪ್ಪಿನ ಮುದುಕರಿಗೂ ಆಲದ ಮರಕ್ಕೂ ಸಾಮ್ಯವೆಂದು ಅಲಂಕಾರವಾಗಿ ಹೇಳಿದೆ. (ತಾನೂ ನಗುತ್ತ) ಅಯ್ಯೊ ! ಬೃಹನ್ನಡೇ, ನೀನು ಮೋಸಹೋದೆಯಲ್ಲವೆ ? ಟೊಂಗೆ ಎಂದರೆ ಅವರ ಬಾಹು, ಬೇರು ಅವರ ಕೂದಲು, ಶಿಬಿರ ಅವರು ಧಾರಣಮಾಡಿದ ಬಿಳಿದಾದ ಏಕವಸ್ತ್ರ . . ಅಯ್ಯೊ ! . . ನನಗೆ ಗೊತ್ತಿಲ್ಲವೆ ? ನಿನ್ನನ್ನು ಮೋಸಮಾಡಬೇಕೆಂದು ಕಲೆಯ ಪಾರಿಭಾಷಿಕ ಶಬ್ದಗಳನ್ನು ಉಪ–ಯೋಗಿಸಿದೆ . . ಹಹ....(ಗಂಭೀರವಾಗಿ) ಅದಿರಲಿ....ಬೃಹನ್ನಡೇ, ನೀನು ಎಂದಿಗೂ ನೋಡದ, ಕೇಳದ ಆಶ್ಚರ್ಯವೊಂದನ್ನು ತೋರಿಸುವೆ . . ಕುರುಡರಿಗೆ ಕಣ್ಣು ಕಾಣುವದಿಲ್ಲ, ಗೊತ್ತಿದೆಯೆ ನಿನಗೆ ! . . ಆದರೂ ಕುರುಡರು ನಡೆವಾಗ ಎರಡನೆಯವರಿಂದ ಅವರಿಗೆ ಅಪಘಾತ ಒದಗ ಬಾರದೆಂದು, ಎರಡನೆಯವರಿಗೆ ಅವರು ಕಾಣಿಸಬೇಕೆಂದು–ಕತ್ತಲೆ

ಯಲ್ಲಿ ಕೂಡ ಅವರು ಎರಡನೆಯವರಿಗೆ ಅವರು ಕಾಣುವಂತೆ, ಬೆಕ್ಕಿನ ಕಣ್ಣುಗಳಲ್ಲಿಯಂತೆ ದೇವನು ಕರುಡರ ಕಣ್ಣಿನಲ್ಲಿಯೂ ಮಿಂಚು ಹಾಕಿರುವ..ಗೊತ್ತಿದೆಯೆ ನಿನಗೆ ?

ಬೃ:—(ಚಕಿತಳಾದವಳಂತೆ) ಇದೆಂತಹ ಅದ್ಭುತ ! ನಿಜವೇನೆ ಇದು ?

ಉ.—ನನ್ನನ್ನು ಕೇಳಬೇಡ..ನಿನ್ನ ಎದುರಿನಲ್ಲಿಯೆ ನಿಂತಿದೆ ಉದಾಹರಣೆ.. ನೋಡು ಕಣ್ಣುತೆರೆದು..ಅದೊ ! ಆ ಪಿತಾಮಹರ ಬದಿಯಲ್ಲಿ ನಿಂತ ಧೃತರಾಷ್ಟ್ರ ! ಅವನ ಎರಡೂ ಕಣ್ಣುಗಳು ಹೇಗೆ ಮಿಂಚುವವು ನೋಡು !

ಬೃ:—(ನೋಡಿ, ನಗೆಯಿಂದ ತಲೆ ಅಲ್ಲಾಡಿಸುತ್ತ)ಕುಮಾರಾ,ಈ ಸಲ ನಾನು ಮೋಸ ಹೋಗುವದಿಲ್ಲ..ನನಗೇನು ಗೊತ್ತಿಲ್ಲವೆ ? ಅವು ಧೃತರಾಷ್ಟ್ರನ ಕಣ್ಣುಗಳಲ್ಲ. ಧೃತರಾಷ್ಟ್ರನು ಇಲ್ಲಿ ಬಂದಿರುವದೇ ಇಲ್ಲ.

ಉ:—(ಗಾಂಭೀರ್ಯದಿಂದ) ಬಂದಿಲ್ಲವಂತೆ ! ಅವನು ಚರ್ಮಚಕ್ಷುವಿನಿಂದ ಕುರುಡನಾದರೆ, ನೀನು ಜ್ಞಾನಚಕ್ಷುವಿನಿಂದ ಕುರುಡ..ಕಾಣುವ ದಿಲ್ಲವೆ ?

ಬೃ:—ಅಯ್ಯೊ, ನೀನೆಷ್ಟು ಮೋಸಮಾಡಿದರೇನು ? ಅವು ಎರಡು ತಳತಳಿಸುವ ಮಣಿಗಳು..ನನಗೆ ಗೊತ್ತಿಲ್ಲವೆ- ? ಒಂದಕ್ಕೊಂದು ಸಮೀಪದಲ್ಲಿದ್ದ ರೇನಾಯಿತು ? ಒಂದು ದುರ್ಯೋಧನನ ಕಿರೀಟದಲ್ಲಿದ್ದುದು; ಇನ್ನೊಂದು ಕರ್ಣನ ಮಣಿ.. ಎಲ್ಲಿ ದುರ್ಯೋಧನನೊ ಅಲ್ಲಿಯೆ ಅವನ ಕರ್ಣ. ನನಗೆ ಗೊತ್ತಿಲ್ಲವೆ ?

ಉ:—(ನಗುತ್ತ) ಅಹಾ ! ಬೃಹನ್ನಡೇ, ಈಗ ಮಾತ್ರ ನೀನು ವಿನೋದ ಪ್ರಾರಂಬಿಸಿದೆ ನೋಡು..ದುರ್ಯೋಧನನಿದ್ದಲ್ಲಿಯೆ ಕರ್ಣವಂತೆ ! ಹಹ..ಇಷ್ಟು ತಿಳಿಯುವದಿಲ್ಲವೆ ನನಗೆ ? ಮನುಷ್ಯನ ತಲೆಯಿದ್ದಲ್ಲಿ ಅದರ ಬದಿಗೆ ಅವನ ಕರ್ಣ..ಹಹ..!

ಬೃ:—(ಕೆರಳಿದವಳಂತೆ) ಕುಮಾರಾ, ಇದೇನು ವಿನೋದ ? ಧನುರ್ಧಾರಿಯಾದ ಕರ್ಣನ ವಿಷಯ ನಾನು ಹೇಳಿದರೆ—

ಉ:—ಹೀಗೊ ?.. ಬೃಹನ್ನಡೇ.. ಯಾಕೊ..ಕಂಡವರನ್ನು ಕೆಣಕುವ ಉತ್ಸಾಹದಲ್ಲಿರುವೆ ? ನೋಡು ನಾನು .. ಕೋಪಿಸಬೇಡ .

(ವಿಚಾರಿಸುತ್ತ) ಹಂ. . ಧನುರ್ಧಾರಿಯಾದ ಕರ್ಣ! . . ಬೃಹನ್ನಡೇ, ನೀನು ಪಾಂಡವರ ಅರಮನೆಯಲ್ಲಿ ಇದ್ದೆ ಎಂದು ಹೇಳುವೆ. . (ಎದುರು ನೋಡಿ ತಲೆತೂಗಿ) ಈ ಕರ್ಣನಲ್ಲಿ ತನ್ನ ಪ್ರೇಮ ಎಂದು ದ್ರೌಪದಿ ಎಂದಾದರೂ ಹೇಳುತ್ತಿದ್ದಳೇನು ?

ಬೃ:—(ಕೋಪದಿಂದ) ಕುಮಾರಾ, ಸಾಕುಮಾಡು ಈ ಸಲ್ಲದ ನಿಂದೆಯನ್ನು. ದ್ರೌಪದಿಯಂತಹ ಸಾಧ್ವಿಯ ವಿಷಯ ಹೀಗೆ ಮಾತನಾಡಿದರೆ—

ಉ:—(ಆಶ್ಚರ್ಯ ತೋರಿಸಿ) ಬೃಹನ್ನಡೇ, ಕೋಪಿಸುವೆ ಯಾಕೆ ? ಸಾಧ್ವಿ ಯಾದರೆ ಸುಂದರ ವಸ್ತುವಿಗೆ ಮನಸೋಲಬಾರದೆ ?

ಬೃ:—(ತಿರಸ್ಕಾರದಿಂದ) ಆ ಸೂತಪುತ್ರನು ದ್ರೌಪದಿಯಂತಹ ಕ್ಷತ್ರಿಯ ರಮಣಿಗೆ ಸುಂದರನಾಗಿ ತೋರುವನೆ !

ಉ:—ಇದೆಲ್ಲಿಯ ಕಲ್ಪನೆ, ಬೃಹನ್ನಡೇ ? ಕಾಲ್ಕೆಳಗೆ ತುಳಿಯುವ ಕೆಸರಿನಲ್ಲಿ ಹುಟ್ಟಿದ ಕಮಲವು ಕಾಮಿನಿಯ ಕರುಳಿನಲ್ಲಿ ಕಂಗೊಳಿಸುತ್ತ ಮೆರೆ ಯುವದಲ್ಲವೆ ?

ಬೃ:—(ಅಸಹ್ಯದಿಂದ) ಕುಮಾರಾ, ಹೀಗೆ ಎರಡನೆಯವರಿಗೆ ಅಸಹ್ಯಮಾತ-ನಾಡಿದರೆ ಹೋಗಿಬಿಡುವೆ ನಾನು ಮನೆಗೆ.

ಉ:—(ನಕ್ಕು) ಯಾಕೆ ? ಹೆದರಿಕೆ ಸೇರಿತೆಂದು ಹೇಳಬೇಕು ? ಸುಮ್ಮನೆ ಸಿಟ್ಟಿನ ಹಟ ಯಾಕೆ ? ನೀನೇ ನೋಡು, ಬೃಹನ್ನಡೇ, ಐದು ಜನ ವೀರರಲ್ಲಿ ಪ್ರೇಮವಿದ್ದವಳಿಗೆ ವೀರನಾದ ಆರನೆಯವನಲ್ಲಿಯೂ ಪ್ರೇಮವಿರಬಹುದೆಂದು. . ಬೃಹನ್ನಡೇ, ಕಿವಿ ಮುಚ್ಚಬೇಡ. . ನಾನು ಹೇಳುವದನ್ನು ಕೇಳಿಕೋ.

ಬೃ:—(ತಡೆದ ಕೋಪದಿಂದ) ಐವರಲ್ಲಿ ಯಾರಾದರೂ ನಿನ್ನ ಮಾತನ್ನು ಕೇಳಿದ್ದರೆ ಏನು ಮಾಡುತ್ತಿದ್ದರೊ ?

ಉ:— ನಿನ್ನಂತೆ ಕಿವಿಯನ್ನು ಮಾತ್ರ ಮುಚ್ಚುತ್ತಿರಲಿಲ್ಲ ಖಂಡಿತ. . ಪಾಂಡವರು ಕ್ಷತ್ರಿಯರು, ವೀರರು, ಉದಾರಮನಸಿನವರು, ಆರ್ಯವೃತ್ತಿಯರು; ತಮ್ಮ ದ್ರೌಪದಿಗೆ ವೀರನಲ್ಲಿ, ಸಾಹಸಿಯಲ್ಲಿ, ಸೌಂದರ್ಯದಲ್ಲಿ ಪ್ರೇಮವಿದೆ ಎಂದು ಅಭಿಮಾನ ಉಕ್ಕಿ ಅವರು ಹೆಚ್ಚಿನ ವೀರರಾಗುತ್ತಿದ್ದರು, ಹೆಚ್ಚಿನ ಸಾಹಸಮಾಡುತ್ತಿದ್ದರು.

ಬೃ:— (ನಿರುತ್ತರಳಾಗಿ) ಕುಮಾರಾ, ನನಗೆ ಒಂದೂ ತಿಳಿಯುವದಿಲ್ಲ. ಒಂದಾನೊಂದು ಕಾಲಕ್ಕೆ ನನ್ನ ಒಡೆಯರಾದ ಪಾಂಡವರ ವಿಷಯಕ್ಕೆ ಯಾವ ಮಾತೂ ಬೇಡ... (ಹೆದರಿಸುವವಳಂತೆ) ಇಲ್ಲವಾದರೆ, ಹೊರಟು ಹೋಗುವೆ ನಾನು ಮನೆಗೆ.

ಉ:—ಬೃಹನ್ನಡೇ, ಬಂದ ಕೆಲಸ ಮಾಡದೆ ಹೋದೆಯಾದರೆ ನೀನು ಪಾಂಡವರಲ್ಲಿಯೂ ಹೀಗೆಯೇ ಮೈಗಳ್ಳತನದಿಂದ ಕೆಲಸ ಮಾಡಿರಬೇಕೆಂದು ತಿಳಿಯುವೆ ನೋಡು.

ಬೃ:—(ಮತ್ತೆ ನಿರುತ್ತರಳಾಗಿ) ಬಂದ ಕೆಲಸವನ್ನು ಬಿಟ್ಟು ಹೀಗೆ ಬೇರೆ ಹರಟಿ ಕೊಚ್ಚಿದರೆ —

ಉ:—ಹರಟೆ! ಬೃಹನ್ನಡೇ, ಚಿತ್ರಬರೆಯುವಾಗ ಸೌಂದರ್ಯದ ವಿಷಯವಾಗಿ ಮಾತನಾಡದಿದ್ದರೆ ಮತ್ತೆ ಯಾವಾಗ ಆಡುವದು ಹೇಳು ನೋಡುವ!

ಬೃ:—ಹಾಗಾದರೆ ಕುಮಾರನು ಚಿತ್ರಬರೆಯಲಿಕ್ಕೆ ಪ್ರಾರಂಭಿಸಲಿ.

ಉ:—ಮೊದಲು ವ್ಯಾಪಕ ಮತ್ತು ಸೂಕ್ಷ್ಮದೃಷ್ಟಿಯಿಂದ ಎಲ್ಲವನ್ನೂ ನೋಡಿಕೊಳ್ಳಬೇಕಲ್ಲವೆ?

ಬೃ:—ಇದುವರೆಗೆ ನೋಡುತ್ತಿರುವೆವಲ್ಲ!

ಉ:—(ಒಮ್ಮೆಲೆ) ಓಹೊ ಅಹುದಲ್ಲವೆ? ಇಷ್ಟರಲ್ಲಿಯೆ ಮರೆತುಬಿಟ್ಟೆ ನೋಡು (ಮತ್ತೆ ಮುಂದೆ ನೋಡಿ ಚಕಿತನಾಗಿ) ಬೃಹನ್ನಡೇ, ಇದೇನು? ಈ ಸೈನಿಕರು ಇಷ್ಟರಲ್ಲಿಯೆ ನಮ್ಮ ಹಸುಗಳ ಹಾಲು ಹಿಂಡಿದಂತೆ ಕಾಣುವದಲ್ಲ! ಅದೊ !.... ನೋಡು— ಆ ಬಿಳಿದಾದ ಪಾತ್ರೆ ತುಂಬಿದೆ ನೋಡು.. ನೋಡಿದೆಯಾ? [ಬೃಹನ್ನಡೆಯು ಕೈಮುಗಿದುದನ್ನು ನೋಡಿ] ಇದೇನು, ಬಹನ್ನಡೇ, ಕೈಮುಗಿದು ನಿಂತಿರುವೆಯಲ್ಲ!.. ಹಾಲಿನ ಪಾತ್ರೆಗೆ ಕೈಮುಗಿಯುವದೆ? ಹಹ.... ವ್ಯಾಪಕದೃಷ್ಟಿ ಎಂದರೆ ಹಾಲಿನ ಪಾತ್ರೆಗೆ ಹಾಲಿನ ಸಮುದ್ರ ಎಂದು ತಿಳಿಯುವದೆಂದು ನಿನ್ನ ಕಲ್ಪನೆಯೇನು?....ಅಯ್ಯೋ-ಪೆಚ್ಚು!

ಬೃ:—(ಕಳಕಳಿಯಿಂದ) ಕುಮಾರಾ, ಸಮಸ್ತಲೋಕಗಳಿಗೆಲ್ಲ ಸನ್ಮಾನ್ಯರಾದ ಭುವನೈಕಧನುರ್ಧರರಾದ, ಕೌರವ – ಪಾಂಡವರಿಬ್ಬರಿಗೂ ಗುರು—

ಗಳಾದ, ದ್ವಿಜಶ್ರೇಷ್ಠರಾದ ದ್ರೋಣಾಚಾರ್ಯರ ಉಪಹಾಸವಾಡ ಬಹುದೆ ಹೀಗೆ?

ಉ:—ಏನು? . . ಹಹ . . ಬೃಹನ್ನಡೇ . . ಮತ್ತೆ ಮೋಸಹೊದೆ-ಮಗನಿಗೆ ಹಾಲು ದೊರಕದ್ದಕ್ಕಾಗಿ ಪ್ರತಿಜ್ಞೆಮಾಡಿದ ವೀರರಿಗೆ ಹಾಲಿನ ಪಾತ್ರೆಯೆ ಸಂಕೇತವಲ್ಲವೆ?

ಬೃ:—(ಅವನ ಕಡೆಗೆ ಲಕ್ಷ್ಯವಿಲ್ಲದೆ) ಅದೊ, ನೋಡಿದೆಯಾ? ಬಿಳಿದಾದ ಒಟ್ಟಿ ಯನ್ನುಟ್ಟು, ಬಿಳಿದಾದ ಯಜ್ಞೋಪವೀತವನ್ನು ತೊಟ್ಟು, ಬಿಳಿದಾದ ಜಡೆಗಳಿಂದ ಶೋಭಿಸುತ್ತ ಸದ್ಗುಣಗಳ ಮೂರ್ತಿಯಂತೆ ನಿಂತ ಆ ಮಹಾನುಭಾವರೇ ದ್ರೋಣಾಚಾರ್ಯರು. ಕರು ಕಳೆದುಕೊಂಡ ಹಸುವಿನಂತೆ, ಅರ್ಜುನನಿಲ್ಲದೆ ಆಚಾರ್ಯರು ಅವನನ್ನು ಹುಡುಕು ವಂತೆಯೊ ಏನೊ – ಸುತ್ತಲೂ ನೋಡುತ್ತಿರುವರು.

ಉ:—(ಬೃಹನ್ನಡೆಯನ್ನು ದಿಟ್ಟಿಸುತ್ತ) ಬೃಹನ್ನಡೇ, ನೀನು ನಿಜವಾಗಿಯೇ ಅಂತಃ ಪುರದಲ್ಲಿ ಸೇವೆಮಾಡಿರುವೆಯಾ? ಈಗ ನಿನ್ನ ಮುಖದಲ್ಲಿ ಕಳೆಗಟ್ಟು- ತ್ತಿರುವ ಕಾಂತಿಯನ್ನುನೋಡಿದರೆ–ನನಗಂತೂ ಸಂಶಯವೇ ಇದೆ. . (ಯೋಚನೆ ಹೊಳೆದು)....ಹಂ . . ಹೀಗೆ ಮಾಡುವೆ . . ಬೃಹನ್ನಡೇ, ಇನ್ನು ನನ್ನನ್ನು ಮಾತಾಡಿಸಬೇಡ . . ಸುತ್ತಲೂ ನೋಡುತ್ತಿರು, ಸರಿಯಾದ ದೃಷ್ಟಿಯಿಂದ. ಮೊದಲು ಇಲ್ಲಿ ಚಿತ್ರಬರೆಯುವೆ....ಅರಮನೆಗೆ ಹೋದ ಮೇಲೆ ನನ್ನ ಹಂಚಿಕೆ ಸಾಧಿಸುವೆ.

ಬೃ:—(ಉತ್ಸುಕತೆಯಿಂದ) ಯಾವ ಹಂಚಿಕೆ?

ಉ:—ನೀನು ನಗದಿದ್ದರೆ, ನಾಚದಿದ್ದರೆ, ಹೆದರದಿದ್ದರೆ ಹೇಳುವೆ . . ಹೇಳ ಲಿಯಾ? ಈ ಸೈನ್ಯಕ್ಕೆ ಎದುರಾಗಿ ಯಾರೂ ಇಲ್ಲ . . ಆದರೂ ಇವರು ಯಾರನ್ನೊ ಎದುರಿಸುವಂತೆಯೆ ಬರೆಯುವೆ . . ಅರಮನೆಗೆ ಹೋದ ಮೇಲೆ – ನಗಬೇಡ, ನಾಚಬೇಡ – ನಿನಗೆ ಕವಚತೊಡಿಸಿ, ನಿನ್ನ ಕೈಯಲ್ಲಿ ಧನುಸ್ಸುಕೊಟ್ಟು ಇವರನ್ನು ಎದುರಾಗುವಂತೆ ಚಿತ್ರಿಸುವೆ . . ನಾನು ತೋರಿಸುವೆ–ಹಾಗೆ ಧನುಸ್ಸುವನ್ನು ಹಿಡಿದು, ವೀರನ ಹೆಜ್ಜೆಯನ್ನೂ ನಿನಗೆ ತೋರಿಸುವೆ–ಹಾಗೆ ನಿಲ್ಲುವೆಯಂತೆ— ನಿನಗೆ ಆ ವೇಷ

ಒಪ್ಪಬಹುದೆಂದು, ಚಿತ್ರಕ್ಕೆ ಭಾವ-ಗಾಂಭೀರ್ಯ ಬರಬಹುದೆಂದು ನನಗೆ ಬಲವಾಗಿ ತೋರಿದೆ.

ಬೃ:—(ನಾಚಿ) ಅಮ್ಮಯ್ಯ! ಯಾರಾದರೂ ನಕ್ಕಾರು, ನಾನು ಧನುಷ್ಯ ಹಿಡಿದರೆ —

ಉ:—ಯಾರೂ ನಗುವದಿಲ್ಲ....ನನ್ನ ವ್ಯಾಪಕದೃಷ್ಟಿಗೆ ಹೊಳೆದಿದೆ,ಸೂಕ್ಷ್ಮ ದೃಷ್ಟಿಗೆ ಕಾಣಿಸಿದೆ,...ಇದಲ್ಲದೆ ಚಿತ್ರದಲ್ಲಿ ಧನುಷ್ಯ ಹಿಡಿದ ವ್ಯಕ್ತಿ ನೀನು ಎಂದು ಯಾರಿಗೂ ತಿಳಿಯುವಂತಿಲ್ಲ; ನೋಡುವೆಯಂತೆ?.... ಹಂ...ನೋಡುತ್ತಿರು...ನಾನು ಏನನ್ನೆ ಬರೆಯುತ್ತಿರಲಿ, ಏನಾದರೂ ಅದ್ಭುತ ನಡೆದರೆ ಮಾತ್ರ ಮರೆಯದೆ ಹೇಳುತ್ತಿರು....ಒಮ್ಮೆಲೆ ಬೆದರಿಕೆ ಬಂದರೆ ತಿಳುಹಿಸು ನನಗೆ.... ಹಾಗೆಯೆ ಓಡಿಹೋಗಬೇಡ.... ಅಂ....ತಿಳಿಯಿತೆ?(ಎಂದು ಧ್ಯಾನಮಗ್ನನಾಗಿ ಪಟದಲ್ಲಿ ದೃಷ್ಟಿಯಿಡುವನು)

ಬೃ:—(ಮುಂದೆ ನೋಡುತ್ತ)ಅದೊ!....ಆಚಾರ್ಯರು ನಗುತ್ತಿರುವರು!ನೋಡು ದುರ್ಯೋಧನನನ್ನು ಏನನ್ನೊ ಕೇಳುತ್ತಿರುವ – ಅದೂ ಆಚಾರ್ಯರಿಗೆಯೆ! ಭೀಷ್ಮಪಿತಾಮಹರು ಕೂಡ ಆಚಾರ್ಯರು ಹೇಳಿದಂತೆಯೆ ಸುತ್ತಲು ನೋಡುತ್ತ ತಲೆತೂಗುತ್ತಿರುವರು..(ಒಮ್ಮೆಲೆ) ಇದೇನು!... ನಮರಸನ್ನಾಹ!....ಆಚಾರ್ಯರು ವ್ಯೂಹರಚನೆ ನಡೆಸಿದ್ದಾರೆ!.... (ಮತ್ತೊಂದೆಡೆ ನೋಡಿ) ಇದೇನು!...ವಿರಾಟನ ಸೈನ್ಯ!...ಕೌರವರ ಕೂಡ ಕಾಳಗಕ್ಕೆಂದು ಬಂದಿರುವ ವೃದ್ಧ ವಿರಾಟದೊರೆ!....ಅಯ್ಯೊ! ವಿರಾಟನ ಕ್ಷಾತ್ರತೇಜಸ್ಸು ನೋಡಿದರೆ ಕನಿಕರ ಬರುವದು!..ಪಾಪ!.... ಆಚಾರ್ಯರ ನೇತೃತ್ವದಲ್ಲಿದ್ದ ಪ್ರಚಂಡ-ಕೌರವ-ಸೇನಾ-ಸಮುದ್ರವು ತನ್ನ ತೆರೆಗಳ ಹೊಡತದಿಂದ ವಿರಾಟನನ್ನು ಸಿಪ್ಪೆಯಂತೆ ತೂರಿಸಿ ಚಲ್ಲುವದಲ್ಲವೆ?....ಅಯ್ಯೊ..ಏನು ಮಾಡಲಿ?.... ಅಣ್ಣನ ಮಾತು ಮೀರದೆ ಆಯುಧವನ್ನು ಹಿಡಿಯುವಂತಿಲ್ಲ....ಆದರೂ ವಿರಾಟದೊರೆಗೆ, ನಮಗೆ ಆಶ್ರಯವನ್ನೂ ಅನ್ನವನ್ನೂ ಕೊಟ್ಟ ವಿರಾಟದೊರೆಗೆ, ಆಪತ್ತು ಒದಗಿದಾಗ ಹೇಡಿಯಾಗಿ ಕೃತಘ್ನನಾಗಿ ನಾನು ನೋಡುತ್ತ ನಿಲ್ಲುವದೆ? ಹಾಳಾಯಿತು ನಮ್ಮ ಪ್ರತಿಜ್ಞೆ– ಮತ್ತೆ ಹನ್ನೆರಡು ವರ್ಷ ವನವಾಸ ಕೈಕೊಂಡರೂ ಚಿಂತೆಯಿಲ್ಲ,

ಧರ್ಮವೆಂದು ಕಷ್ಟಸಹಿಸುವ ಧರ್ಮರಾಜನಿಗೆ ಕೋಪಬಂದರೂ ಚಿಂತೆಯಿಲ್ಲ....ಇದನ್ನು ನೋಡಲಾರೆ, ನಮ್ಮ ಆಯುಧಗಳನ್ನು ಬಚ್ಚಿಟ್ಟ ಶಮೀವೃಕ್ಷವು ಇಲ್ಲಿಯೆ ಇದ್ದ ಸಂಯೋಗವನ್ನು ಕಳೆದು ಕೊಳ್ಳಲಾರೆ, ಕ್ಷಾತ್ರಧರ್ಮ ಬಿಡಲಾರೆ.... ನನ್ನ ಆಯುಧ, ಆಯುಧ, ಕೈಯಲ್ಲಿ ಆಯುಧ....(ಆವೇಶದಿಂದ ಹೋಗುವನು)

ಉ:—(ಪಟದಲ್ಲಿಯೆ ದೃಷ್ಟಿಯಿಟ್ಟು, ಬರೆದುದಕ್ಕಾಗಿ ತಲೆ ತೂಗುತ್ತ) ಹೆದರಬೇಡ, ಬೃಹನ್ನಡೇ, ಆಯುಧಕ್ಕೆ ಹೆದರಬೇಡ....ಆಯುಧದ ಕ್ರೂರಸ್ವರೂಪವನ್ನು ತೋರಿಸಬೇಕೆಂದೇ, ಸೈನಿಕನಿಗಿಂತ ಅವನ ಆಯುಧವನ್ನು ದೊಡ್ಡದಾಗಿ ಇಟ್ಟುಕೊಂಡಿದ್ದೇನೆ....ಹಹ....ಬೃಹನ್ನಡೇ ಬರಿಯ ರೇಖಾಮಾತ್ರವಾದ ಆಯುಧವನ್ನು ನೋಡಿ ಇಷ್ಟು ಹೆದರುವೆಯಲ್ಲವೆ? ಅರಮನೆಗೆ ಹೋಗಿ ಅದರಲ್ಲಿ ಬಣ್ಣ ತುಂಬಿದೆನೆಂದರೆ ಎಷ್ಟು ಹೆದರುವೆಯೊ?....ಈಗಾದರೂ ತಿಳಿಯಿತೆ ನಿನಗೆ ಯಾರು ಹೇಡಿ ಎಂಬುದು?.... ಪ್ರಳಯಕಾಲದ ಮೇಘಗಳನ್ನು ಕೂಡ, ಕೂದಲು ಕೊಂಕದಂತೆ, ಸ್ಥಿರನಾಗಿ ಗಟ್ಟಿಗನಾಗಿ ಚಿತ್ರಿಸಬಲ್ಲೆ..ಹಂ..ಆಯುಧ.. (ನಿರಾಶೆಯಿಂದ) ಅಯ್ಯೋ, ಎದುರಿಗೆ ಒಂದು ಸೈನ್ಯ ಇರಬಾರದಿತ್ತೆ? ಈಗಲಾದರೂ....ಈ ಆಯುಧವನ್ನು ಹೀಗೆ, ಹೀಗೆ ಸಜ್ಜಾಗಿ ಚಿತ್ರಿಸುವೆ.

(ಗಾಬರಿಗೊಂಡ ಮುದಿಗೊಲ್ಲನು ಬರುವನು)

ಮು:—ಅಯ್ಯೋ! ರಾಜಕುಮಾರಾ, ದೊರೆಯು ಬಂದಾನೆ–ಒಂಟಿಗ ಬಂದಾನೆ. ಅವನ ಸೈನ್ಯ ಬಂದಿದೆ. ರಾಜಕುಮಾರಾ,...ಮಹಾರಾಜರ ಸಹಾಯಕ್ಕೆ – ಅಯ್ಯೋ—

ಉ:—ಓಹೊ! ಬೃಹನ್ನಡೇ, ಉತ್ಕೃಷ್ಟವಾಯಿತು...ಎದುರು ಸೈನ್ಯ ಬಂದಿತಲ್ಲವೆ? ಯಾವ ಸೈನ್ಯ ಆದರೇನು? ಸೈನ್ಯಗಳಲ್ಲಾ ಒಂದೇ ಮಾದರಿ..ಎರಡು ಸೈನ್ಯ ಎಂದು ಹೆದರಬೇಡ – ನಮ್ಮ ದೃಷ್ಟಿಯಿಂದ ಎಷ್ಟು ಸೈನ್ಯ ಸೇರಿದರೇನು – ಎಲ್ಲಾ ಒಂದೇ....ಬೆದರಬೇಡ.. ಇನ್ನು ನೋಡುವೆಯಂತೆ ಪಟದ ಆವೇಶವನ್ನು, ಚಿತ್ರದ ಗಾಂಭೀರ್ಯವನ್ನು! ಹಂ..ಬೃಹನ್ನಡೇ, ಯಾವ ಬದಿಯಿಂದ ಬಂದಿದೆ ಈ ಎರಡನೆಯ ಸೈನ್ಯ? (ಪಟದಲ್ಲಿ ತೋರಿಸುತ್ತ)ಎದುರಿನಿಂದ ಬಂದಿತೆ?..

(ವಿಚಾರಿಸಿ) ಹಿಂದಿನಿಂದ ಬಂದರೆ ಇನ್ನಿಷ್ಟು ಸೊಗಸು !....ಈ ವೃದ್ಧ ಪಿತಾಮಹರ, ಈ ಆಚಾರ್ಯರ, ಈ ಕರ್ಣನ ಗಂಭೀರ–ಮುಖಗಳನ್ನು ಹೀಗೆ, ಹೀಗೆ ಮನೋಹರವಾಗಿ, ವಕ್ರವಾಗಿ ತಿರುಗಿಸುವೆ...ಅಹಾ! ದೇಹ ಒಂದುಕಡೆ ನಿಂತುದು, ಮುಖ ಮತ್ತೊಂದು ಕಡೆ ನೋಡುವುದು . . ಯಾವ ಬದಿಯಿಂದ ಬಂದಿವೆ, ಹೇಳು ನೋಡುವಾ.

ಮು:—(ಹೆಚ್ಚಾಗಿ ಗಾಬರಿಗೊಂಡು) ಮಹಾರಾಜರೆ, ಇದೊ – ಇದೊ – ನಾನು ಬರುತಾ ಮುಂದೆ ಬಂದೆ· · ನನ್ನ ಹಿಂದಿನಿಂದಲೆ ಬರಹತ್ತಿದೆ ಸೈನ್ಯ. . ಅದೊ ಆ ದೂಳಿ ಎಬ್ಬಿಸುವದೇ—

ಉ:—(ಆನಂದಾತಿರೇಕದಿಂದ) ದೂಳಿ ಎದ್ದಲ್ಲಿ ಇನ್ನಿಷ್ಟು ಸೊಗಸು ! ಮೋಡಗಳ ಮರೆಯಲ್ಲಿ ಆಗಾಗ ಕಾಣುವ ಸೂರ್ಯ-ಬಿಂಬದಂತೆ ದೂಳಿಯಲ್ಲಿ, ಅಲ್ಲಲ್ಲಿ ಅವರ ಮುಖ–ಬಿಂಬಗಳನ್ನಷ್ಟೆ ಇಟ್ಟುಕೊಳ್ಳುವಾ.

ಮು:—(ಏನೂ ತಿಳಿಯದೆ ಮತ್ತಿಷ್ಟು ಗಾಬರಿಯಾಗಿ) ಅಯ್ಯೊ, ಮಹಾರಾಜರೆ, ಏಳಿರಿ ಏಳಿರಿ. . ಸೈನ್ಯಗಳು ಒಂದಕ್ಕೊಂದು ಎದುರಾಗಿ ನಿಂತಿವೆ. . ಅದೊ, ಆಯುಧಗಳನ್ನ ಸಜ್ಜುಗೊಳಿಸತಾರೆ. . ಅಯ್ಯೊ ! ಅಯ್ಯೊ !

ಉ:—ಬೃಹನ್ನಡೇ, ಅಷ್ಟೇಕೆ ಹೆದರುವೆ ?. . ಆಯುಧ ಸಜ್ಜುಗೊಳಿಸಿದರೆ ಏನಾಯಿತು? ಕೂಗು, ಕೂಗಿ ಹೇಳು ಅವರಿಗೆ. . ಆಯುಧಗಳನ್ನು ಸಜ್ಜಾಗಿ ಹಿಡಿದುಕೊಂಡು ಕ್ಷಣಮಾತ್ರ, ಒಂದು ಕ್ಷಣಮಾತ್ರ ಹಾಗೆಯೆ ನಿಂತುಕೊಳ್ಳಿರಿ ಎಂದು..ಹಂ..ದುರ್ಯೋಧನನ ಗದೆ ಕಾಣುವದೆ ?..ಅಲ್ಲಲ್ಲಿ ಸೈನಿಕರ ಖಡ್ಗಗಳು ಮಿಂಚುವವೇನು ನೋಡು....ಸರಿಯಾದ ದೃಷ್ಟಿಯಿಂದ ನೋಡು ಮತ್ತೆ ! . . ಕರ್ಣನ ಕಿರೀಟ ಇನ್ನೂ ಹೊಳೆಯುತ್ತಿರುವದೆ ? (ತನ್ನಷ್ಟಕ್ಕೆ ಒಮ್ಮೆಲೆ ನಕ್ಕು) ಹಹ..ಬೃಹನ್ನಡೇ, ಆ ಆಲದ ಮರ ಎಲ್ಲಿ ನಿಂತಿದೆ ನೋಡಲು ಮರೆಯಬೇಡ. . (ನಗುತ್ತಲೆ) ಅಯ್ಯೊ ! ಹಹ. . ಆಲದಮರಕ್ಕೆ ಆವೇಶದ ರೋಮಾಂಚದಿಂದ ತುದಿಯಲ್ಲಿಯ ಎಲೆಗಳೆಲ್ಲ ಸೆಟೆದು ನಿಂತಿವೆ, ಅಲ್ಲವೆ? ಬೃಹನ್ನಡೇ, ಕೋಪಿಸಬೇಡ. . ಉತ್ಸಾಹದ ಭರದಲ್ಲಿ ವಿನೋದಮಾಡಿದೆ· · ಹಹಹ....

ಮು:—(ಹೌಹಾರಿದವನಂತೆ) ಮಹಾರಾಜರೇ, ನನ್ನ ಮಾತು ಕೇಳಿರಿ. . ಅಯ್ಯೊ

ಇನ್ನಾದರೂ ಹೇಳಿರಿ. . ಅಯ್ಯಯ್ಯೋ, ಶಂಖ ಊದಹತ್ತಿದರು---
ಇನ್ನೇನು—?

ಉ:--(ತಟ್ಟನೆ) ಓಹೊ! ಯಾರವರು ಶಂಖ ಊದುವವರು ?... ಅಹಾ ! ಗಂಭೀರವಾಗಿ ಮುಖ ತಿರುಗಿಸಿ ನಿಂತ ಈ ವೀರರಲ್ಲಿ ಯಾರಾದ ರೊಬ್ಬರು ಶಂಖ ಊದುತ್ತಿದ್ದರೆ—!. .ಅಹಾ !. .ಮೋಡಗಳ ನಡು-ವಿಂದ ಹೊರಬೀಳುವ ಅಸ್ತ್ವವಿರಾಜಂಪ್ರಸಂತೆ–! (ತನ್ನಷ್ಟಕ್ಕೆ ತಲೆತೂಗುವನು)

ಮು:—(ಹತಾಶನಾಗಿ) ಮಹಾರಾಜರೆ, ರಕ್ಷಿಸಿರಿ ! ಉಳಿಸಿರಿ ನಮ್ಮನ್ನು .... ಇನ್ನು ವಿಳಂಬವಿಲ್ಲ. . ಅಯ್ಯೋ, ಇನ್ನೊಂದು ನಿಮಿಷಮಾತ್ರ. . ಅದೊ ! ಕಾಲಾಳು ಕಾಲಾಳಿನ ಎದುರಿಗೆ, ಬಿಲ್ಲಾಳು ಬಿಲ್ಲಾಳಿನ ಎದುರಿಗೆ, ರಥವು ರಥಕ್ಕೆ, ಆನೆಯು ಆನೆಗೆ ಇದಿರಾಗಿ....ಸಜ್ಜಾಗಿ ನಿಂತರು. .

ಉ:—(ಕಾಲು ಬಡೆಯುತ್ತ) ಹಾಗಾದರೆ – ನೀನೇಕೆ ಹೆದರುವೆ ? ಬೃಹನ್ನಡೇ, ಹೆದರಬೇಡ. . ಅವರವರು ಅವರವರ ಎದುರಿಗೆ. . ನಮಗೇನು ಹೆದರಿಕೆ ? ನಾವೇನು ಕಾಲಾಳು ಅಲ್ಲ, ಬಿಲ್ಲಾಳು ಅಲ್ಲ, ರಥ ಅಲ್ಲ, ಆನೆಯಲ್ಲ....ನಮ್ಮನ್ನು ಎದುರಿಸುವವರು ಯಾರು ?.... ಅಲ್ಲಿಯೂ ಯಾವನಾದರೂ ಚಿತ್ರಬರೆಯುವವ ಇದ್ದಾನೆಯೆ ?.... ಇಲ್ಲವೆಂದ ಮೇಲೆ ಹೆದರುವೆ ಯಾಕೆ ?. . ಹಂ. . ಅಯ್ಯೋ ? ಬೃಹನ್ನಡೇ, ಇನ್ನೊಂದು ಸೊಗಸಾದ ಚಿತ್ರ !. . ಮರೆತೇಬಿಟ್ಟಿರುವೆ. . ಒಂದು ಸೈನ್ಯ ಮತ್ತೊಂದು ಸೈನ್ಯ ಸುತ್ತುಗಟ್ಟಿ ಚತುರಂಗವು ಚತುರಂಗಕ್ಕೆ ಎದುರಾದರೆ. .?. . ಬೃಹನ್ನಡೇ. . ನನ್ನಲ್ಲಿ ವಿಶ್ವಾಸವಿಟ್ಟು ಓಡು. ವೆಯಾ ? ಓಡುತ್ತ ಹೋಗಿ ಕ್ಷಣಮಾತ್ರ ಅವರಿಗೆ ಹಾಗೆ ನಿಲ್ಲುವಂತೆ ಹೇಳುವೆಯಾ ?. . ಬೃಹನ್ನಡೇ, ನೋಡು, ನಿನಗೆ ಕೈಮುಗಿಯುವೆ. . ಇದೊಂದೆ ಸಲ. . ಆದೊಂದು ಸನ್ನಿವೇಶ ನೋಡಿಕೊಂಡು ತಿರುಗಿ-ಹೋಗುವಾ. . ಇಲ್ಲವಾದರೆ –ನಿನಗೆ ಎಷ್ಟೊಂದು ಹೆದರಿಕೆಯಾದರೂ ನಾನು ಇಲ್ಲಿಯೇ ಉಳಿಯುವೆ ನೋಡು. .

ಮು:—(ಧೈರ್ಯಗೆಟ್ಟು) ಅಯ್ಯೋ, ಅನರ್ಥ !. . ನಮ್ಮ ಸೈನ್ಯ ಕಂಗೆಟ್ಟಿತು, ಓಡಹತ್ತಿತು.

ಉ:—(ಬೇಜಾರದಿಂದ) ಛೀ, ಹುಚ್ಚೀ, ಬೃಹನ್ನಡೇ, ಓಡು ಎಂದು ನಿನಗೆ ಹೇಳಿದರೆ ನೀನು ಸೈನ್ಯಕ್ಕೆ ಓಡು ಎಂದು ಹೇಳಿದೆಯಾ?..ಛೆ! ಹಾಳಾಯಿತು ನಿನ್ನ ಬುದ್ಧಿ..ನಿನ್ನನ್ನು.. (ಮೇಲೆ ನೋಡಿ ಏನೂ ತಿಳಿಯದೆ) ಬೃಹನ್ನಡೇ, ಹೆದರಿ ನಿನ್ನ ಸ್ವರೂಪ ಕೂಡ ಬದಲಾಯಿಸಿತಲ್ಲ..ನಿನ್ನ ಮುಖ ಎಷ್ಟು ಕಪ್ಪುಗಟ್ಟಿದೆಯಲ್ಲ!.. ಎಲ!..

ಮು:—(ಅಡ್ಡಬಿದ್ದು) ಮಹಾರಾಜರೆ, ರಕ್ಷಿಸಿರಿ, ಉಳಿಸಿರಿ ನಮ್ಮನ್ನು.. ಅದೋ ನಮ್ಮ ಸೈನ್ಯ ಸೋತು ಓಡಿತು..

ಉ:—(ಅವನನ್ನು ದಿಟ್ಟಿಸಿ) ಆಂ.. ಎಲ! ಯಾರದು? ಬೃಹನ್ನಡೆ ಎಲ್ಲಿ? (ಎದ್ದು ನೋಡಿ ಒಮ್ಮೆಲೆ) ಇದೇನು, ಕಾಳಗ ನಡೆದಿದೆ!.. ಎಲೊ, ಬೊಗಳಬಾರದಾಗಿತ್ತೆ ಮೊದಲೆ?.. ಅಯ್ಯೋ, ಬೃಹನ್ನಡೆ ಎಲ್ಲಿ?.. ಮೂರ್ಖಾ, ಯಾರದಾದರೂ ಬಾಣ ತಗಲಿದ್ದರೆ ಈ ಚಿತ್ರ ಹಾಳಾಗುತ್ತಿತ್ತಲ್ಲ....ಬೃಹನ್ನಡೇ..

ಮು:—(ಎದ್ದು ನಡುಗುತ್ತ) ಇಲ್ಲ ಮಹಾರಾಜರೆ, ಯಾರೂ ಇಲ್ಲ.... ನಮ್ಮ ಸೈನ್ಯ ಓಡಿತು..ಅದನ್ನೆ ಹೇಳಿದೆ—

ಉ:—(ಅತ್ತಿತ್ತ ಓಡಾಡುತ್ತ) ಮೂರ್ಖಾ, ಸೈನ್ಯ ಓಡಿತೆಂದು ಈಗ ಹೇಳಲು ಬಂದೆಯಾ?

ಮು:—ಮಹಾರಾಜರೆ, ಆವಾಗಲೆ ಬಂದೆ...ಅಯ್ಯೋ, ಉಳಿಸಿರಿ ನಮ್ಮನ್ನು.

ಉ:—(ಹಾಗೆಯೆ) ಆವಾಗಲೆ ಬಂದನಂತೆ! ಸೈನ್ಯವೆಲ್ಲಾ ಓಡಿದೆ, ನೀನೊಬ್ಬನೇ ಇಲ್ಲಿ ಬಂದೆಯಾ? ಓಡಬೇಕಾಗಿತ್ತು ನೀನೂ ಅವರ ಕೂಡ! ಇನ್ನು..ನನ್ನ ಕಾಲಿಗೆ ತೊಡಕು..ನಿನ್ನನ್ನು ಕಟ್ಟಿಕೊಂಡು ಓಡಲಿಯಾ? ಬೃಹನ್ನಡೇ, ಬೃಹನ್ನಡೇ—

ಬೃ:—(ಒಳಗಿನಿಂದ) ಕುಮಾರಾ, ಓಡಬೇಡ, ಬೆದರಬೇಡ, ಶತ್ರುವಿಗೆ ಬೆನ್ನು ತೋರಿಸಬೇಡ....ಇದೊ ಬಂದೆ—

ಉ:—(ಅತ್ತಿತ್ತ ನೋಡಿ) ಬೃಹನ್ನಡೇ, ಎಲ್ಲಿರುವೆ?..ಇದೊ..ಶತ್ರುವಿಗೆ ಬೆನ್ನು ತೋರಿಸದೆ ಓಡುವೆ..(ಹಾಗೆ ಮಾಡಿ) ಅಯ್ಯೊ, ಇದು ಶಕ್ಯವಿಲ್ಲ.. ಬೃಹನ್ನಡೇ, ಶತ್ರುವಿಗೆ ಬೆನ್ನು ಕಾಣಿಸಿದರೂ ಅಡ್ಡಿಯಿಲ್ಲ..ನಾನು ಮರ್ಯಾದೆಯಿಂದಲೇ ಓಡುವೆ—(ಎಂದು ತಿರುಗುವಷ್ಟರಲ್ಲಿ)

ಬೃ:—(ಒಳಗಿನಿಂದ) ಕುಮಾರಾ, ಹೇಡಿಯಾಗಬೇಡ, ರಣಾಂಗಣದಿಂದ ಕಾಲ್ತೆಗೆಯಬೇಡ....

ಉ:—(ಅತ್ತಿತ್ತ ನೋಡಿ) ಬೃಹನ್ನಡೇ, ಎಲ್ಲಿರುವೆ? ಅಹಾ! ಮತ್ತೆ ಮರವನ್ನು ಹತ್ತಿರುವೆಯಾ?.. ಹೆದರಬೇಡ, ಬೃಹನ್ನಡೇ..ನನ್ನ ಸೈನಿಕರೆಲ್ಲರೂ ಓಡುವಾಗ ಹೇಡಿಯಂತೆ ಕೃತಘ್ನನಂತೆ ನಾನೊಬ್ಬನೇ ಹಿಂದೆ ಉಳಿಯಬೇಕೆ?– ಅವರನ್ನು ಹಿಡಿದು ತರುವೆ.. ಇದೊ..ನಾನು ಅವರ ಮುಂದಾಳು ಅಲ್ಲವೆ? ಅದಕಾಗಿ ಈಗ ಅವರ ಮುಂದೆ ಓಡುತ್ತಿರಬೇಕಲ್ಲವೆ? ಇದೊ! ನನ್ನನ್ನು ಮಾತಾಡಿಸಬೇಡ,ನಾನು ಹಿಂದುಳಿದರೆ ನನ್ನ ಸೈನ್ಯ ಹೆಚ್ಚು ಹೆದರೀತು! ಅಯ್ಯೊ! ಬೃಹನ್ನಡೇ ಕೆಳಗಿಳಿಯಬೇಡ.. (ಮುದಿಗೊಲ್ಲನಿಗೆ) ನಿನ್ನ ತಲೆಯಲ್ಲಿ ಇಲ್ಲದ ಬುದ್ಧಿಯನ್ನು ಕಾಲಿಗಾದರೂ ಕೊಡು, ಮೂರ್ಖಾ!...ಬೃಹನ್ನಡೇ, ಬಂದೆ.. ತೀವ್ರವೇ ನನ್ನ ಸೈನಿಕರ ಮುಂದೆ ಓಡದಿದ್ದರೆ ಹಿಂದಿನಿಂದ ಓಡುವ ನನ್ನನ್ನು ನೋಡಿ ಮತ್ತಿಷ್ಟು ಓಡಿಯಾರು....ಕೆಳಗಿಳಿಯಬೇಡ, ಬೃಹನ್ನಡೇ.. ನನ್ನ ಕೂಡ ಓಡಲು ನಿನ್ನ ಶಕ್ತಿ ಸಾಲಲಿಕ್ಕಿಲ್ಲ..ಬಂದೆ.. ಹೆದರಬೇಡ, ಬೃಹನ್ನಡೇ ಹೆದರಬೇಡ–(ಓಡುವನು...ಮುದಿಗೊಲ್ಲನು ಏನೂ ತಿಳಿಯದೆ ಹಿಂಬಾಲಿಸುವನು]

(ತೆರೆ ಬೀಳುವದು)

ದೃಶ್ಯ ೩

[ಕೌರವ–ಪಾಂಡವರ ರಣಾಂಗಣ; ಎರಡೂ ಸೈನ್ಯಗಳ ನಡುವಿನ ಬಯಲು; ತೆರೆಯು ಮೇಲಕ್ಕೆದ್ದಾಗ ಯಾರೂ ಇಲ್ಲ. ಅಷ್ಟರಲ್ಲಿಯೆ ಕಳೆಗುಂದಿದ ಅರ್ಜುನನು,–ಕೈಯಲ್ಲಿ ಗಾಂಡೀವ ಹಿಡಿದುಕೊಂಡು ಬರುವನು. ಅವನ ಹಿಂದಿನಿಂದ ಕೃಷ್ಣ–ಕೃಷ್ಣನನ್ನು ತಪ್ಪಿಸಬೇಕೆಂದು ಅರ್ಜುನನೂ–ಅರ್ಜುನನನ್ನು ಬಿಡಬಾರದೆಂದು ಕೃಷ್ಣನೂ ಹಟತೊಟ್ಟಂತೆ ಅವರ ಹಾವ–ಭಾವಗಳಿಂದ ಕಂಡುಬರುವದು]

ಅ:—ಕೃಷ್ಣಾ, ಕೆಣಕಬೇಡ ನನ್ನ! –ಅಯ್ಯೊ, ಎಂತಹ ನೀಚ ಕೆಲಸ! ನಮ್ಮ ಹಿರಿಯರನ್ನ, ನಮ್ಮ ಗುರುಗಳನ್ನ, ನಮ್ಮ ಬಾಂಧವರನ್ನ– ಹುಳಗಳಂತೆ ಕೊಂದು ಒಗೆಯುವದೆ? ಯಾವ ನರಕದ ಬಾಗಿಲು ತೆಗೆದಿದೆ ನನಗಾಗಿ?

ಕೃ:—ಅರ್ಜುನಾ, ಇಲ್ಲದ ಹೆದರಿಕೆ ಬಹಳ ನಿನಗೆ – ನರಕಕ್ಕೆ ಬಾಗಿಲು ಇದೆ ಅಂತ ಯಾರು ಹೇಳಿದರು ನಿನಗೆ?– ಹೆದರಬೇಡ – ನರಕಕ್ಕೆ ಬಾಗಿಲೇ ಇಲ್ಲ, ನನಗ ಗೊತ್ತದ, ನನ್ನ ಮಾತು ಕೇಳಿಕೊ....

ಉ:—("ಕೃಷ್ಣಾ, ತಡೆ ತಡೆ" ಎಂದು ಓಡುತ್ತ ಬಂದು)ಕೃಷ್ಣಾ, ಇದೇನು ?– ನರಕಕ್ಕೆ ಬಾಗಿಲು ಇಲ್ಲ ಅಂತ ಸುಳ್ಳು ಸಾಧಿಸುವೆಯಾ? ಅರ್ಜುನಾ, ನರಕಕ್ಕೆ ಬಾಗಿಲು ಇದೆ– ಆದರೆ ಸದ್ಯಕ್ಕೆ ನಾವೂ ನೀವೂ ಹೆದರುವ ಕಾರಣವಿಲ್ಲ – ಆ ಬಾಗಿಲಲ್ಲಿ ಈಗ ಕೃಷ್ಣನೇ ಸಿಕ್ಕಿಕೊಂಡು ಬಿದ್ದಾನೆ. ಒಳಗಿನವರು ಹೊರಗೆ ಹೋಗುವ ಹಾಗಿಲ್ಲ – ಹೊರಗಿನವರು ಒಳಗೆ ಹೋಗುವ ಹಾಗಿಲ್ಲ –

ಕೃ:—ಉತ್ತರಾ, ತಡೆ ಈ ನಿನ್ನ ಉದ್ಧಟತನವನ್ನು – ಹುಡುಗಬುದ್ಧಿಯುವ ನೀ – ಎಂತಹ ಸಮಯ ! ಎಂತಹ ಮಾತಾಡುವಿ ?

ಉ:—ಓಹೊ ! – ಸಮಯಕ್ಕೆ ಸರಿಯಾಗಿ ಮಾತಾಡಬೇಕು ಎಂಬೋ ಹೊಸ ತತ್ವ ಹುಡುಕಿದೆಯಾ.... ಕೃಷ್ಣಾ ? – ನಿನಗೆ ಮಾತಿನ ಗುಟ್ಟು ಹೇಳಿಡುವೆ ನೋಡು, ಒಮ್ಮೆ. ಆಡುವ ಮಾತಿಗೆ ಅರ್ಥವಿದ್ದರೆಯೆ ಅದನ್ನು ಮಾತಾಡಬೇಕು.

ಕೃ:—(ಸಿಟ್ಟಿನಿಂದ) ನಾನೂ ಅದನ್ನೆ ಹೇಳಿದೆ, ನಿನ್ನ ಮಾತಿಗೆ ಅರ್ಥವಿಲ್ಲ ಎಂದು––

ಉ:—ಕೃಷ್ಣಾ, ನೀನು ಸಿಟ್ಟಿಗೆ ಬಂದಲ್ಲಿ ನಿನಗ ಹೇಗೆ ತಿಳಿದೀತು ಅರ್ಥ ? ಬುದ್ಧಿಯನ್ನು ಯಾವಾಗಲೂ ನಿನ್ನ ವಶದಲ್ಲಿಟ್ಟುಕೊ, ತಿಳಿಯಿತೆ, ಸಿಟ್ಟಿನ ವಶದಲ್ಲಿ ಅಲ್ಲ– ಈಗ ನೀನೊಂದು ಘೋರಪಾತಕದಿಂದ ಮೈ ಉಬ್ಬಿ ನರಕದ ಬಾಗಿಲಲ್ಲಿ ಸಿಕ್ಕಿಕೊಂಡಿಲ್ಲವೆ ?

ಕೃ:–ಬಿಗಿಹಿಡಿ ನಿನ್ನ ನಾಲಗೆಯನ್ನು! ಅರ್ಜುನಾ, ರಣಾಂಗಣ ತಡೆದಿದೆ, ನಿನ್ನ ಸಲುವಾಗಿ.

ಉ:—ಅರ್ಜುನನ ಸಲುವಾಗಿ ಅಲ್ಲ, ನಿನ್ನ ಸಲುವಾಗಿ! – ಕೃಷ್ಣಾ, ಸಾರಥಿಯಾದ ನೀನು ನಿನ್ನ ಜಾಗೆ ಬಿಟ್ಟು ಇಲ್ಲಿ ಯಾಕೆ ಬಂದೆಯೊ? ಅರ್ಜುನನು ಯುದ್ಧ ಒಲ್ಲೆ ಎನ್ನುವ – ಎಂದ ಮೇಲೆ––

ಕೃ:—(ಗಂಭೀರವಾಗಿ) ಅದು ಅವನ ಮೋಹವಿದೆ.

ಉ:—[ಗಟ್ಟಿಯಾಗಿ ನಕ್ಕು] ಕೃಷ್ಣಾ, ನಿನ್ನ ಮಾತು ಕೇಳಿ ನಗೆ ಬರುವದು. ಕೇಳಯ್ಯಾ! ಮೋಹ ಯಾರದು? ಪಾಪ ಯಾರದು? ಯುದ್ಧದಲ್ಲಿ ಆಯುಧ ಕೈಕೊಳ್ಳುವದಿಲ್ಲ ಎಂದು ವಚನಕೊಟ್ಟು ಅದನ್ನು ಈಗ ಮುರಿಯುವೆ ಅಲ್ಲವೆ? ಎಂತಹಾ ಘೋರವಾದ ಪಾಪ! ವಚನ ಭಂಗ! ಅದಕ್ಕೆಯೆ ಬೇರೆ ಬೇರೆ ಸಮಯಕ್ಕೆ ಬೇರೆ ಬೇರೆ ಮಾತ ನಾಡಬೇಕೆಂದು ಹೇಳಿದೆಯೊ ಏನೊ?

ಕೃ:—[ತಿರಸ್ಕಾರದಿಂದ] ಹುಚ್ಚಾ, ನಾನು ಆಯುಧ ಕೈಕೊಂಡಿರುವೆನೆ? ನನಗೆ ಹೇಳಲು ಬರುವೆಯಾ?

ಉ:—ಕೃಷ್ಣಾ, ಆಯುಧ ಎಂದು ತಪ್ಪುಕಲ್ಪನೆ ಬೇಡ - ಅವರವರಿಗೆ ತಕ್ಕ ಅವರ ಆಯುಧ– ನಿನ್ನಂತಹನ ಆಯುಧ ಎಂದರೆ ಆ ನಿನ್ನ ಹದನ ವಾದ ನಾಲಗೆ – ಕಾರಣ, ದಯಮಾಡಿ ತಮ್ಮ ನಾಲಗೆಯನ್ನು ತಡೆದು ಬಾಯಿಮುಚ್ಚುವಂತಹರಾಗಿರಿ – ತಮ್ಮ ಖಡ್ಗವನ್ನು ಒರೆಯಲ್ಲಿ ಹಾಕಿರಿ, ನೋಡುವಾ!

ಕೃ:—(ಸಿಟ್ಟಿನಿಂದ) ಕುಮಾರಾ, ನನ್ನೆದುರು ಮಾತನಾಡಲು ನಿನ್ನ ಯೋಗ್ಯತೆ ಅಲ್ಲ. ನಿನಗೆ ಅಧಿಕಾರವಿಲ್ಲ; ಬಾಯಿಮುಚ್ಚು, ಇಲ್ಲವಾದರೆ—

ಉ:—ಕೃಷ್ಣಾ, ನಿನಗಿನ್ನೂ ವ್ಯವಹಾರ ಕೂಡ ಗೊತ್ತಿಲ್ಲವಲ್ಲೋ? ನನ್ನ ತಂಗಿಯಾದ ಉತ್ತರೆ, ಅಭಿಮನ್ಯುವಿನ ಹೆಂಡತಿ; ಅಭಿಮನ್ಯು ನಿನ್ನ ಸೋದರಳಿಯ; ಆದ್ದರಿಂದ ನಾವೂ ನೀವೂ ಬೀಗರು – ಬುದ್ಧಿ ಹೇಳುವದು, ಬಯ್ಯುವದು ಬೀಗತನದ ಕೆಲಸವಲ್ಲವೆ?

ಅ:—[ಕಳಕಳಿಯಿಂದ] ಕುಮಾರಾ, ನನ್ನ ಸಲುವಾಗಿ ನಿಮ್ಮಿಬ್ಬರಲ್ಲಿ ವೈಮನಸ್ಸು ಬೇಡ. ನನಗೆ ಯುದ್ಧಬೇಡ– ಯಾರು ಏನು ಹೇಳಿದರೂ ಬೇಡ..

ಕೃ:—ಅರ್ಜುನಾ, ಅರ್ಜುನಾ, ಕ್ಷಾತ್ರಧರ್ಮವನ್ನು ಬಿಡಬೇಡ..

ಉ:—ಅಯ್ಯೋ, ನೀನು ಮನುಷ್ಯಧರ್ಮವನ್ನು ಬಿಡಬೇಡೊ, ಕೃಷ್ಣಾ! ಕ್ಷಾತ್ರಧರ್ಮವಂತೆ! ನಿನಗೆ ಯಾಕೆ ಗೊತ್ತಿಲ್ಲದರ ಗೊಡವೆ? ನಾನು ಇರುವೆನಲ್ಲ ಕ್ಷತ್ರಿಯ– ನನಗೆ ಗೊತ್ತಿದೆ ಕ್ಷಾತ್ರಧರ್ಮ, ಅರ್ಜುನನಿಗೆ

ಗೊತ್ತಿದೆ ಕ್ಷಾತ್ರಧರ್ಮ - ನಿನಗೊಬ್ಬನಿಗೆಯೆ ಗೊತ್ತಿಲ್ಲ ನೋಡು, ನಿನ್ನ ಧರ್ಮ ಯಾವುದೆಂಬುದು ?

ಕೃ:—ಕುಮಾರಾ, ನನ್ನ ಕೆಣಕಬೇಡ ತಿಳಿಯಿತೆ ?- ಆಮೇಲೆ ಪಶ್ಚಾತ್ತಾಪವಾದೀತು ! ನಾನು ಒಂದು ಮನಸ್ಸಿನವ, ಒಂದೇ ನಿಶ್ಚಯದವ.

ಉ:—[ಬೇಜಾರವಾಗಿ] ನಿನ್ನ ಒಂದೇ ನಿಶ್ಚಯ ಹಾಳಾಯಿತೊ ಕೃಷ್ಣಾ - ಅದನ್ನೆಲ್ಲಾ ಪರಕೀಯರ ಮುಂದೆ ಹೇಳುವೆಯಂತೆ ! - ಬೀಗರಿಗೆ ಒಬ್ಬರೊಬ್ಬರ ಒಳಗುಟ್ಟೆಲ್ಲಾ ಗೊತ್ತು - ಯಾಕೆ ಮಾತನಾಡುವೆ. 'ಒಪ್ಪಂದ, ಒಪ್ಪಂದ' ಎಂದು ಹಗಲಿರುಳು ಹೌಹಾರಿ ಓಡಾಡಿದವನೂ ನೀನೇ, ಈಗ ಯುದ್ಧಮಾಡು ಎಂದು ಹೇಳುವವನೂ ನೀನೇ- ಮತ್ತೆ 'ಒಂದೇ ನಿಶ್ಚಯ'ವಂತೆ !

ಅ:—[ವಿಷಾದದಿಂದ] ನನಗೆ ಒಪ್ಪಂದ ಬೇಡ, ಯುದ್ಧ ಬೇಡ; ರಾಜ್ಯಬೇಡ, ಐಶ್ವರ್ಯ ಬೇಡ.

ಉ:—ನಿನಗೆ ಬೇಡಾದೀತು ಅರ್ಜುನಾ, ಆದರೆ ಆ ಎಲ್ಲ ವೈಭವ ಈ ಕೃಷ್ಣನಿಗೆ ಬೇಕಾಗಿದೆ. ತನ್ನ ತಂಗಿಯ ಗಂಡನ ರಾಜ್ಯದಲ್ಲಿ ಮೆರೆಯುವ ಉಬ್ಬು ಈ ಕೃಷ್ಣನಿಗೆ - ಹಂ - ಕೌರವರ ಕಡೆ ಶಕುನಿ, ಪಾಂಡವರ ಕಡೆ ಕೃಷ್ಣ ! - ಎಂತಹ ಬೀಗರನ್ನು ಕಟ್ಟಿಕೊಂಡಿರುವರು ಈ ಅಣ್ಣತಮ್ಮಂದಿರು ! ಅರ್ಜುನಾ, ಯಾರು ಹೇಳಿದ್ದರು ನಿನಗೆ ಇಂತಹ ನೆಂಟತನ ಕಟ್ಟಿಕೊಳ್ಳಲಿಕ್ಕೆ ? ಮನೆತನ ನೋಡಿ ಮದಿವೆ ಮಾಡಿಕೊಳ್ಳಬೇಕು, ಎಂಬೋ ಮಾತು ತಿಳಿಯಲಿಲ್ಲವಲ್ಲ ನಿನಗೆ ?

ಕೃ:— (ತಡೆಯದೆ) ಕುಮಾರಾ, ನೀನು ಹೋಗುವೆಯಾ ? ನಿಲ್ಲುವೆಯಾ ?— ಈಗ ನನಗೆ ಯುದ್ಧಮಾಡೆಂದು ಅರ್ಜುನನಿಗೆ ಉಪದೇಶ ಮಾಡಬೇಕಾಗಿದೆ. ಈ ಹಾಳು ಹರಟೆ ತಡೆಯುವೆಯೊ—ಇಲ್ಲೊ—

ಉ :—ಕೃಷ್ಣಾ, ಪಾಪ! ನಿನ್ನ ಅಜ್ಞಾನ ನೋಡಿ ನನಗೆ ಕನಿಕರ ಬರುವದು ! ವ್ಯಾಪಕದೃಷ್ಟಿಯಿಂದ, ಸೂಕ್ಷ್ಮದೃಷ್ಟಿಯಿಂದ ವ್ಯವಹಾರ ತಿಳುಹಿಸುವದು ನಿನಗೆ ಹಾಳು ಹರಟೆ ಆಯಿತಲ್ಲವೆ ?. . . ಅಯ್ಯೋ, ನೀನು ಕ್ಷತ್ರಿಯ ಅಲ್ಲ ಎಂದು ಆವಾಗಲೇ ಹೇಳಲಿಲ್ಲವೆ ? ....ಕೃಷ್ಣಾ,

ರಣಾಂಗಣದ ಮೇಲೆ ಯುದ್ಧಮಾಡುವ ರೂಢಿ ಕ್ಷತ್ರಿಯರದು, ಉಪದೇಶ ಮಾಡುವದಲ್ಲ. . . . .

ಅ:—ಕೃಷ್ಣಾ, ಸುಮ್ಮಸುಮ್ಮನೆ ಕೋಪ ಯಾಕೆ?. . . .ಯಾರು ಎಂತಹ ಉಪದೇಶಮಾಡಿದರೂ ಪ್ರಾಣಿವಧದಂತಹ, ಸ್ವಜನರನ್ನು ಕೊಲ್ಲು-ವಂತಹ ಪಾಪ ನಾನು ಮಾಡುವದಿಲ್ಲ; ಇದು ನಿಶ್ಚಿತ.

ಕೃ:—ಕೊಲ್ಲುವದು ? ಈ ಹುಚ್ಚು ಯಾರು ಹಾಕಿದರು ನಿನ್ನ ತಲೆಯೊಳಗೆ?

ಉ:—ಕೃಷ್ಣಾ, ಯುದ್ಧದಲ್ಲಿ ಒಬ್ಬರೊಬ್ಬರನ್ನು ಖಡ್ಗ-ಬಾಣಗಳಿಂದ ಹೊಡೆಯುವದೊಂದು ಪರಿಪಾಠ ಇದೆ, ಗೊತ್ತಿದೆಯೇನು ನಿನಗೆ? ಪೆಟ್ಟು ಬಲವಾಗಿ ತಾಕಿದರೆ ಒಮ್ಮೊಮ್ಮೆ ಜೀವ ಹೋಗುವದು ಮನುಷ್ಯನ ಧರ್ಮ ಇದೆ, ಗೊತ್ತಿದೆ ಏನು ನಿನಗೆ? ಅಂತಹದಕ್ಕೆ ಒಂದೇ ಶಬ್ದದಲ್ಲಿ "ಕೊಲ್ಲುವದು" ಎಂದು ಹೆಸರು.

ಕೃ:—(ತಿರಸ್ಕಾರದಿಂದ) ಹುಚ್ಚು, ಕೊಲ್ಲುವದಂತೆ! ಯಾರು ಕೊಲ್ಲುವದು ? ಯಾರನ್ನು ಕೊಲ್ಲುವದು ?

ಉ:—(ಸಂಶಯದಿಂದ) ಬಹಳ ಹೊತ್ತು ಹೀಗೆಯೆ ಹರಟೆ ಕೊಚ್ಚುತ್ತ ನಿಂತು ಕೊಂಡೆಯೆಂದರೆ ಕೌರವರೇ ಕೊಡುವರು ನಿನಗೆ ಉತ್ತರವನ್ನು.

ಕೃ:—(ತಿರಸ್ಕಾರದಿಂದ) ನಾನು ಹೇಳುವದು ತಾತ್ವಿಕದೃಷ್ಟಿಯಿಂದ. ದೇಹ ನಶ್ವರ, ಆತ್ಮಾ ಅಮರ—

ಉ:—(ನಡುವೆಯೆ) ಆತ್ಮಾ ಆ ಮರ, ಅದೊ! ಅಲ್ಲಿ ಕಾಣಿಸುವದಲ್ಲ ಆ ಮರ ! ಯುದ್ಧದೊಳಗೆ ಭಾಗ ತೆಗೆದುಕೊಳ್ಳುವದಿಲ್ಲ ಎಂದು ಹೇಳಿ-ಕೊಂಡ ಮೇಲೆ ನಿನಗೆ ಇಷ್ಟು ಧೈರ್ಯ ಬಂದಿತಲ್ಲವೆ?

ಕೃ:—ಕುಮಾರಾ, ತಡೆ, ಎಚ್ಚರಿಕೆ. . . .ನನಗೀಗ ಆವೇಶ ಬಂದಿದೆ........

ಉ:—(ಕೆಣಕುವವನಂತೆ) ಮತ್ತೆ ಯಾವ ವೇಷ? ನೀನು ಮಾತಾಡುವಾಗ ಯಾವದಾದರೊಂದು ವೇಷವನ್ನೆ ಹಾಕಿಕೊಳ್ಳುವೆ—ಮುಂದಿಗಾಗಿ. ಮುಂದಿಗೆ ಹೇಳುವದು ಸುಲಭ, ಕೃಷ್ಣಾ, ಯಾವಾಗಲೂ ಸುಲಭ.

ಕೃ:—(ಅಸಹ್ಯದಿಂದ ಅವನ ಕಡೆಗೆ ನೋಡದೆ ಅರ್ಜುನನಿಗೆ) ಅರ್ಜುನಾ, ಹೊತ್ತು ಕಳೆಯಬೇಡ.....ಕೈಕಾಲು ಬಿಡಬೇಡ....ಎದೆಗುಂದಬೇಡ.

ಉ:—ಮತ್ತು ಮುಂದಿಯ ಮಾತು ಕೇಳಬೇಡ. .

ಕೃ:—(ಅವನ ಕಡೆಗೆ ಲಕ್ಷ್ಯವಿಲ್ಲದೆ) ಈಗ ನೀನು ಯುದ್ಧಮಾಡದೆ ಹೋದರೆ ಎಂದರೆ ಶತ್ರುಗಳು ನಿನಗೆ ಹೇಡಿ ಎನ್ನುವರು.

ಉ:—ಯಾಕೆಂದರೆ ಕೃಷ್ಣನನ್ನು ಉಳಿಸುವವರು ಯಾರು ?

ಕೃ—(ಮೇಲಿನಂತೆಯೆ) ಸತ್ತರೆ ಸ್ವರ್ಗ, ಉಳಿದರೆ ಐಶ್ವರ್ಯ.

ಉ:—' ನಿನಗೇನಾದರೂ ನನಗೆ ಅಷ್ಟೆ ' ಅಂತ ಅವನ ಅಭಿಪ್ರಾಯ.

ಕೃ:—(ಮೇಲಿನಂತೆಯೆ) ಧರ್ಮ ಬಿಟ್ಟವರೆಲ್ಲ ದುಷ್ಟರು, ಅವರನ್ನು ಕೊಲ್ಲುವದರಲ್ಲಿ ಪಾಪವಿಲ್ಲ....

ಉ:—ಅಯ್ಯೊ ಕೃಷ್ಣಾ, ಹಾಗಿದ್ದರೆ ದೂರ ಸರಿ ಮೊದಲು.

ಕೃ:—(ಒಮ್ಮೆಲೆ ಕೋಪಾವೇಶದಿಂದ ಉತ್ತರನಿಗೆ) ಎಲೊ !

ಉ:—ನಿನ್ನ ಹಿತದ ಮಾತು ಹೇಳಿದೆ, ಕೃಷ್ಣಾ. ನೀನು ಧರ್ಮ ಬಿಟ್ಟಿರುವೆ ಅದಕ್ಕೆ.

ಕೃ:—ನಾನು ಧರ್ಮದ ಉಪದೇಶ ನಡೆಸಿರುವೆ.

ಉ:—ಅದಕ್ಕೆಯೆ ಹೇಳಿದ್ದು ನೀನು ಧರ್ಮಬಿಟ್ಟಿರುವೆ ಎಂದು. . ಅವರವರ ಧರ್ಮ ಅವರಿಗೆ. . ನಿನ್ನ ಉಪದೇಶ ಯಾಕೆ ?. . ಇನ್ನೊಂದು ಮಾತು, ಕೃಷ್ಣಾ, ಯಾವಾಗಲೂ ಮುಂದಿಗೆ ತಿಳಿಯುವ ಹಾಗೆ ಮಾತಾಡಬೇಕು.

ಕೃ:—(ಹಟದಿಂದ) ನನ್ನ ಮಾತು ಎಲ್ಲರಿಗೂ ತಿಳಿಯುವದು. ಬುದ್ಧಿ ಇದ್ದವರಿಗೂ, ಇಲ್ಲದವರಿಗೂ, ಭಕ್ತರಿಗೂ, ಬಂಟರಿಗೂ, ಹೆಂಗಸಿಗೂ ಹುಡುಗರಿಗೂ, ಬ್ರಾಹ್ಮಣನಿಗೂ ಶೂದ್ರನಿಗೂ ··!

ಉ:—(ನಕ್ಕು) ಈ ಅಹಂಕಾರ ಯಾರಿಗೂ ಬಿಟ್ಟಿಲ್ಲ, ಕೃಷ್ಣಾ. ಎಂತಹ ಬುದ್ಧಿಗೂ ತಿಳಿಯುವ ಮಾತು ಎಂದರೆ ಅದನ್ನು ಹೇಳುವವನಿಗೆಯೆ ಬುದ್ಧಿ ಇಲ್ಲ ಅಂದಹಾಗೆ. . ಅದಕ್ಕೆ ಇನ್ನು ಸಾಕುಮಾಡಿರಿ. . . . ಅಷ್ಟೊಂದು ಮಾತಾಡುವ ಆವೇಶ ಇದ್ದರೆ, ಕೌರವ ಸೈನ್ಯ ನಿಂತಿದೆ, ಅಲ್ಲಿ ಹೋಗು, ನೋಡುವಾ....ಪಾಪ !....ಅವರಿಗೆ ಹೊತ್ತು ಹೋಗದಂತೆ ಆಗಿರಬಹುದು.....

ಕೃ:— (ಅವನಿಂದ ದೂರಾಗಿ ಅರ್ಜುನನಿಗೆ) ಅರ್ಜುನಾ, ಇನ್ನೂ ನಿನ್ನ ಮೋಹ ಹೋಗಿಲ್ಲವೆ ? ಬೇಡ..ನಿನ್ನಲ್ಲಿ ಸಾಹಸ ಇದೆ,ಶಕ್ತಿ ಇದೆ....ಮನುಷ್ಯನಲ್ಲಿ

ಮೀರಿದ ಶಕ್ತಿ ಇದೆ......ಮನುಷ್ಯನು ತನಗೆ ತಾನೇ ಮಿತ್ರ, ತಾನೇ ಶತ್ರು, ತನ್ನ ಉದ್ಧಾರ ತಾನೇ ಮಾಡಿಕೊಳ್ಳಬೇಕು—

ಉ:—ತನ್ನ ನಾಲಗೆ ತಾನೇ ತಡೆಯಬೇಕು........(ಉಸುಗರೆದು) ಅಬ್ಬ! ಇಷ್ಟೊಂದು ಮಾತಾಡುವವನನ್ನು ಎಲ್ಲಿಯೂ ನೋಡಲಿಲ್ಲ........ ಅರ್ಜುನಾ, ಇಂತಹ ಹರಟೆ ಕೇಳುವದಕ್ಕಿಂತ, ಸಾಯಲಿ ಬದುಕಲಿ ಯುದ್ಧಮಾಡುವದೇ ಒಳಿತು ಅಂತ ನಿನಗೆ ಅನಿಸುವದಿಲ್ಲವೆ?....ನನ್ನ ಮಾತು ಕೇಳು, ಯುದ್ಧಮಾಡು, ಏಳು....

ಅ:—(ಕಳಕಳಿಯಿಂದ) ಕುಮಾರಾ, ಕುಮಾರಾ, ನೀನೂ ಹೀಗೆ ಹೇಳಬೇಕೆ? 'ತಾಯ್ತಂದೆಗಳ ಮಗು, ಹೆಂಡತಿಯ ಗಂಡ' ಇಂತಹ ಮನುಷ್ಯನ ಜೀವ ಕೊಲ್ಲಬಾರದೆಂದು ನೀನೇ ಹೇಳುತ್ತಿರಲಿಲ್ಲವೆ?

ಉ:—ಅರ್ಜುನಾ, ನನ್ನ ಮಾತು ಬೇರೆ—

ಕೃ:—(ಅಣಕಿನಿಂದ) ಮುಂದಿಗೆ ಹೇಳುವದು ಸುಲಭ, ಸುಲಭ, ಅಲ್ಲವೆ?

ಉ:—(ಕನಿಕರ ತೋರಿಸಿ) ಅಯ್ಯೋ, ಹುಚ್ಚೇ! ನನ್ನ ಮಾತು ಬೇರೆ ಎಂಬುದರ ಅರ್ಥವಾದರೂ ತಿಳಿದಿದೆಯೆ ನಿನಗೆ? (ಅರ್ಜುನನಿಗೆ) ನನ್ನ ತಾಯ್ತಂದೆ ಗಳಿಗೆ ನಾನು ಒಬ್ಬನೇ ಮಗ; ನಿನಗೆ ಇನ್ನೂ ನಾಲ್ಕುಜನ ಸಹೋದರ ರಿದ್ದಾರೆ. ನನ್ನ ಹೆಂಡತಿಗೆ ನಾನೊಬ್ಬನೇ ಗಂಡ, ದ್ರೌಪದಿಗೆ ಮತ್ತೆ ನಾಲ್ಕು ಜನ ಇದ್ದಾರೆ—

ಕೃ:—(ತಡೆಯದೆ) ಕುಮಾರಾ, ಇಂತಹ ಅಸಹ್ಯ ಮಾತು ತಡೆಯದಿದ್ದರೆ ಆ ನಿನ್ನ ನಾಲಗೆ—

ಉ:—ಕೃಷ್ಣಾ, ಬೇಕಾದರೆ ಕಿವಿಯನ್ನು ಮುಚ್ಚಿಕೋ....ಹಂ....ನಿನ್ನ ತಂಗಿಗಾಗಿ ನಿನಗೆ ಸಿಟ್ಟುಬಂದಿದೆ, ನನಗೆ ಗೊತ್ತು........ಆದರೆ ನಿನ್ನ ತಂಗಿಯಾದ ಸುಭದ್ರೆ ಅರ್ಜುನನ ಪಟ್ಟದರಸಿ ಅಲ್ಲ........ ಕೃಷ್ಣಾ, ಕ್ಷತ್ರಿಯ ರಾಜರ ವ್ಯವಹಾರದ ಲೆಕ್ಕಕ್ಕೆ ಪಟ್ಟದರಸಿ ಒಬ್ಬಳೇ ಹೆಂಡತಿ....ನಿನಗೆ ಕ್ಷಾತ್ರಧರ್ಮ ಗೊತ್ತಿಲ್ಲವೆಂದು ಮೊದಲೆ ಹೇಳ ಲಿಲ್ಲವೆ?....ಹಂ....ಯಾಕೆ ಅರ್ಜುನಾ, ಹೇಳು, ಮಾತನಾಡು.

ಅ:—(ದೈನ್ಯದಿಂದ) ಕುಮಾರಾ, ಕುಮಾರಾ, ಯಾಕೆ ನನ್ನನ್ನು ನಿರುತ್ತರ ಮಾಡುವೆ?....ನನಗೆ ಮಾತಿನ ಮೋಹ ಬೇಡ, ಒಣ ತರ್ಕ ಬೇಡ....

ನನ್ನೆದುರಿನಲ್ಲಿ ನಿಂತವರೂ ನನ್ನಂತೆಯೆ ಮಕ್ಕಳಲ್ಲವೆ, ಗಂಡಂದಿರಲ್ಲವೆ, ಸಂಸಾರಿಗರಲ್ಲವೆ?

ಉ:—ಅವರಿಗೆ ಸಂಸಾರ ಬೇಡಾಗಿದೆಯೊ, ಅರ್ಜುನಾ? ಇಲ್ಲವಾದರೆ ಇಲ್ಲಿ ಯಾಕೆ ಬರುತ್ತಿದ್ದರು ಸಾಯಲಿಕ್ಕೆ?

ಅ:—ಆದರೂ ಅವರನ್ನು ನಾನು ಯಾಕೆ ಕೊಲ್ಲುವದು?

ಉ:—ಹೀಗೆ ಮಾತನಾಡಿದರೆ ಹೇಗೆ ಅರ್ಜುನಾ?...ನಿನ್ನ ಗುರಿ ಎಂದಿಗೂ ತಪ್ಪುವದಿಲ್ಲ ಎಂಬೋ ನಿಶ್ಚಯದಿಂದ ನಿನ್ನೆದುರಿಗೆ ಬಂದು ನಿಂತರೆ ಅವರನ್ನು ನಿರಾಶೆಗೊಳಿಸುವೆಯಾ?

ಕೃ:—(ಗಂಭೀರವಾಗಿ) ಅವರವರ ಕರ್ಮಕ್ಕಾಗಿ ಅವರು ಸಾಯುವರು. ಯಾರೇನು—

ಉ:—(ಮೆಲುದನಿಯಲ್ಲಿ ಕೃಷ್ಣನಿಗೆ) ನಾನೂ ಅದನ್ನೆ ಹೇಳಿರುವೆ....ಸುಮ್ಮನಿರ-ಬಾರದೆ?........ತಿಳಿಯದ ಹಾಗೆ ಮಾತಾಡಿ ಕೆಲಸ ಕೆಡಿಸಿಕೊಳ್ಳುವೆ ನೀನು.

ಅ:—(ಕಳಕಳಿಯಿಂದ) ಅಯ್ಯೋ ಕುಮಾರಾ, ಇಂತಹ ಕ್ರೂರ, ಇಂತಹ ಹೇಸಿ ಕೆಲಸದ ತಪ್ಪನ್ನು ಅನ್ಯರ ಮೇಲೆ ಹೊರಿಸುವದೆ? ಬೇಡ, ನನಗೆ ಯುದ್ಧವೇ ಬೇಡ. ಅವರು ನನ್ನನ್ನೇ ಕೊಂದರೂ ಚಿಂತೆ ಇಲ್ಲ.... ನನಗೆ—

ಉ:—ನೋಡಿದೆಯಾ ಅರ್ಜುನ........ನಿನ್ನನ್ನು ಕೊಂದರೆ ಅವರಿಗೆ ಪಾಪ ತಗಲುವದಿಲ್ಲವೆ?....ನಿನ್ನ ವಧಮಾಡಲು ಅವರಿಗೆ ಅವಕಾಶಕೊಟ್ಟು-

ಅ:—ಇಲ್ಲ........ಇಲ್ಲ – ಅದಕಾಗಿಯೆ ನಾನು ರಣಾಂಗಣವನ್ನು ಬಿಟ್ಟು ಹೋಗುವೆ. ನಾನು ಅವರನ್ನು ಕೊಲ್ಲುವದೂ ಬೇಡ, ಅವರು ನನ್ನನ್ನು ಕೊಲ್ಲುವದೂ ಬೇಡ–ಎರಡೂ ಪಾಪ....ನಾನು ಹೋಗುವೆ ಎಲ್ಲಿಯಾದರೂ.

ಉ:—ಎಲ್ಲಿಗೆ ಹೋಗುವದು ಅರ್ಜುನಾ?.... ಅಂತಹ ಸ್ಥಳ ಇದ್ದರೆ ನಿನಗೆ ನಾನು ಹೇಳುತ್ತಿದ್ದಿಲ್ಲವೆ?.... ಅರಣ್ಯಕ್ಕೆ ಹೋದೆ ಎಂದು ತಿಳಿ.... ಅರಣ್ಯದಲ್ಲಿಯ ಪಶು-ಪಕ್ಷಿಗಳನ್ನು ಹುಡುಕಿ ಹುಡುಕಿ ಕೊಲ್ಲುವವರು ನಿನ್ನನ್ನು ಬಿಡುವರೆ?

ಅ:—(ಹತಾಶನಾಗಿ) ಅಯ್ಯೋ, ಏನು ಮಾಡಲಿ? ಕುಮಾರಾ ಕುಮಾರಾ, ಹೇಳಬಾರದೆ? ನನಗೆ ಉಪಾಯ ತೋರಿಸಬಾರದೆ?

ಉ:—ಅದೇಕೆ? ಅವರು ನಿನ್ನನ್ನು ಕೊಲ್ಲದಂತೆ ಮಾಡು....

ಅ:—ಆಗಲಿ..ಅವರಿಗೂ ತಿಳುಹಿಸಿ ಹೇಳುವೆ.. ಕೈಮುಗಿಯುವೆ, ಬೇಡಿಕೊಳ್ಳುವೆ..

ಉ:—ಅವರು ನಿನ್ನ ಮಾತು ಕೇಳಲಿಲ್ಲ ಎಂದರೆ....?

ಅ:—(ಹತಾಶನಾಗಿ) ಅಯ್ಯೋ ಕುಮಾರಾ, ಏನು ಮಾಡಲಿ?

ಉ:—ನಿನ್ನನ್ನು ಕೊಲ್ಲುವದು ಅವರಿಗೆ ಶಕ್ಯವಿಲ್ಲ ಎಂದು ತೋರಿಸಿದರಾಯಿತು.

ಕೃ:—(ಗಂಭೀರವಾಗಿ) ಯಾರು ಯಾರನ್ನೂ ಕೊಲ್ಲುವದಿಲ್ಲ. ಆತ್ಮಾ ಅಮರ-

ಉ:—ಆ ಮಾತು ಮುಗಿದಿದೆ ಕೃಷ್ಣಾ. ಈಗ ಮತ್ತೊಂದು ವಿಷಯ ನಡೆದಿದೆ..ಈಗ ಅರ್ಜುನ ಯುದ್ಧಮಾಡುವದಿಲ್ಲ...ತಾನು ಯಾರನ್ನೂ ಕೊಲ್ಲುವದಿಲ್ಲ – ಎರಡನೆಯವರು ತನ್ನನ್ನು ಕೊಲ್ಲಲಿಕ್ಕೆ ಬಂದರೆ ಅವರಿಗೆ ಅನುವುಕೊಡುವದಿಲ್ಲ...ತನ್ನ ಸಂರಕ್ಷಣ ಮಾಡಿಕೊಳ್ಳುವ ಶಕ್ತಿ ಇದೆ ಅರ್ಜುನನಿಗೆ..(ಮೊಲುದನಿಯಲ್ಲಿ ಬಿಟ್ಟನಿಂದ) ಸುಮ್ಮನಿರಬಾರದೆ?

ಅ:—(ವಿಚಾರಿಸಿ) ಛೆ,' ಅದೂ ಶಕ್ಯವಿಲ್ಲ..ಅದೂ ಯುದ್ಧವೇ ಆಗುವದು....

ಉ:—ಅದು ಹೇಗೆ ಯುದ್ಧ ಆದೀತು, ಅರ್ಜುನಾ? ಯುದ್ಧಕ್ಕೆ ಇಬ್ಬರು ಬೇಕು ಕಡಿದಾಡುವವರು..ನೀನು 'ಕಡಿದಾಡುವದಿಲ್ಲ, ಕಡಿದಾಡಗೊಡುವದಿಲ್ಲ' ಎಂದರೆ ಯುದ್ಧವೆಲ್ಲಿಂದ ಬಂದಿತು?

ಅ:—(ವಿಷಾದದಿಂದ) ಕುಮಾರಾ, ನೀನು ಹೀಗೆ ಹೇಳುವೆಯಾ? "ಯುದ್ಧ ಒಲ್ಲೆ''ನೆಂದು ಹೇಳಿ ನೀನು ರಣಾಂಗಣ ಬಿಟ್ಟು ಹೋದೆ. ನನಗೆ ಮಾತ್ರ ಹಾಗೆ ಮಾಡಬೇಡ ಎನ್ನುವೆಯಾ?

ಉ:—ನನ್ನ ಮಾತು ಬೇರೆ ಅರ್ಜುನಾ. ಮೊದಲಿನಿಂದಲೂ ಯುದ್ಧ ಬೇಡ ಅಂತ ನಾನು ಹೇಳಿದ್ದೆ. ಈಗ ನೋಡು....ಯುದ್ಧಕ್ಕೆ ಹೊರಡುವದು ಎಂದು ಮನೆಯೊಳಗೆ ನೀನು ಹೇಳಿ ಬಂದಿರುವೆ; ಉತ್ಸವ ಆಯಿತು, ನಮಸ್ಕಾರ ಆಯಿತು, ಆಶೀರ್ವಾದ ಆಯಿತು, ಆರತಿ ಆಯಿತು... ದ್ರೌಪದಿಗೆ ಹೇಳುವದಾಯಿತು, ಕೇಳುವದಾಯಿತು. ಈಗ ನಾವು

ತಿರುಗಿ ಹೋಗುವವರೊಳಗೆ ಹೆಂಗಸು-ಹೆಂಗಸರು ತಮ್ಮತಮ್ಮೊಳಗೆ ಕಾದಾಡಿ ಒಬ್ಬರೊಬ್ಬರ ಮೇಲೆ ಮತ್ತಿಷ್ಟು ಸಿಟ್ಟಾಗಿ ಕುಳಿತಿರುವರು; ಮೊದಲೇ ನಿನ್ನ ಮೇಲೆ ಕುದಿಯುವದು ಕೌರವರ ಸಿಟ್ಟು, ನೋಡಿದೆಯಿಲ್ಲೊ ? ನಿನ್ನ ಹೆಂಡತಿ ಎಂಬೋ ಒಂದು ತಪ್ಪಿಗೆ ದ್ರೌಪದಿಯನ್ನು ಕೂದಲು ಹಿಡಿದೆಳೆದು ಅಪಮಾನಗೊಳಿಸಿದರು !

ಅ:—ಕುಮಾರಾ, ಅಪಮಾನದ ಸ್ಮರಣೆ ಮಾಡಿ ನನ್ನನ್ನು ಕೆಣಕಬೇಕೆನ್ನುವೆಯಾ ? ನನಗೆ ಮಾನವಿಲ್ಲ, ಅಪಮಾನವಿಲ್ಲ..

ಕೃ:--ಅದೇ ಧೀರರ ಲಕ್ಷಣ.

ಉ:--ಓಹೊ! ನಿನಗೆ ಮತ್ತೆ ಬಂದಿತೆ? ಸುಮ್ಮನಾಗು ಅಂತ ಇಷ್ಟೊಂದು ಹೇಳಿದರೂ ನಾಚಿಕೆ ಇಲ್ಲ, ಈಗ ಅದು ಧೀರರ ಲಕ್ಷಣ ಎಂದು ಪ್ರೌಢಿ ಬೇರೆ !

ಕೃ:--ಆಯ್ಯೋ ! ಎಂತಹ ಮೋಹ ನಿಮ್ಮದು ! ನನ್ನ ಮಾತು, ನಿನ್ನ ಮಾತು ! ನಾನು ಕೊಲ್ಲುವದು, ಅವರು ಕೊಲ್ಲುವದು ! ಮಾನ, ಅಪಮಾನ ! ಸುಖ, ದುಃಖ—ಇದೆಲ್ಲಾ ಹುಚ್ಚು ಕಲ್ಪನೆ. . . . ಜಗತ್ತಿನ ಸತ್ಯವಲ್ಲ ಇದು; ಜಗತ್ತಿನಲ್ಲಿ ಒಂದೇ ಸತ್ಯ, ಒಂದೇ ತತ್ವ, ಎಲ್ಲರೂ ಒಂದೇ—

ಉ:--ಹಾಗಾದರೆ ನಿನ್ನ ಬದಲು ನಾನು ಮಾತನಾಡುವೆ, ಸುಮ್ಮನಾಗುವೆಯಾ ?

ಕೃ:—(ಆವೇಶದ ಭರದಿಂದಲೆ) ಜಗತ್ತಿನಲ್ಲಿ ಒಂದೇ ಆತ್ಮಾ, ಒಂದೇ ಪರಬ್ರಹ್ಮ....ನಾವೆಲ್ಲ ಅದೇ. . ನಮ್ಮೆಲ್ಲರಲ್ಲಿ ಅದು ಒಂದೇ. . ಅದು-ಅದು (ಉತ್ತರನು ಖೊಳ್ಳೆಂದು ನಗುವನು. ಸಿಟ್ಟಿನಿಂದ ನೋಡಿ)ನಗುವೆಯೇನು ?

ಉ:--(ನಗೆ ತಡೆಯುತ್ತ) ನಕ್ಕರೂ ಒಂದೇ, ಅತ್ತರೂ ಒಂದೇ. . ಕೃಷ್ಣಾ, ನಿನ್ನ ಮಾತಿಗೆ ನಗಬೇಕೊ, ಅಳಬೇಕೊ ತಿಳಿಯುವಂತಿಲ್ಲ....ಹಹ.... ಈಗ ನನಗೆ ತೋರಿತು ಹಂಚಿಕೆ..ಜಗತ್ತಿನಲ್ಲಿ ಇದ್ದುದು ಒಂದೇ,ಅದು ಪರಬ್ರಹ್ಮ ಎಂದೆಯಲ್ಲವೆ ? ಅರ್ಜುನಾ, ಕೃಷ್ಣಾ,ನನಗೀಗ ತಿಳಿಯಿತು ಜಗತ್ತಿನ ರಹಸ್ಯ-ಸತ್ಯವಾದುದು ಎಂದರೆ ಅದು, ಅದು........ಅವನು ಅಲ್ಲ, ಅವಳು ಅಲ್ಲ. . ಗಂಡಸು ಹೆಂಗಸು ಎಂಬುದು ಸುಳ್ಳುಭೇದ....

ಕೃ:--ಎಲೊ, ಅದು ನನ್ನ ವಿಚಾರ-ಈಗ ನಿನ್ನದೆಂದು ಸಾಧಿಸುವೆಯಾ ?

ಉ:--(ಆನಂದಾತಿರೇಕದಿಂದ) ನನ್ನ-ನಿನ್ನ ಎಂಬುದು ಸುಳ್ಳು........ಅದೊಂದೇ ಸತ್ಯ-ಅಹಾ ! ನನಗೀಗ ತಿಳಿಯಿತು ! ಅರ್ಜುನಾ ನೀನು ಬೃಹನ್ನಡೆಯ ವೇಷದಲ್ಲಿದ್ದಾಗ ಸ್ಮರಣೆಯಿದೆಯೆ ? ಅದೇ ನಿನ್ನ ನಿಜವಾದ ವೇಷ......

ಕೃ:--ನೋಡಿದೆ ಇಲ್ಲವೊ, ಅರ್ಜುನಾ, ನಿನ್ನ ಕಡೆಯವನೆಂದು ಹೇಳಿಕೊಳ್ಳುವ ಇವನೂ ಕೂಡ ನಿನಗೆ 'ಹೇಡಿ' ಎನ್ನುವನು.

ಉ:--(ಚಕಿತನಾಗಿ) 'ಹೇಡಿ' ಎಂದವರು ಯಾರು ?

ಕೃ:--ಅರ್ಜುನನಿಗೆ ಬೃಹನ್ನಡೆಯ ವೇಷವೇ ತಕ್ಕದ್ದೆಂದು ಹೇಳಲಿಲ್ಲವೆ ?

ಉ:--ಹಾಗಾದರೆ 'ಹೇಡಿ' ಎಂದು, ಹಾಗೆ ಎಂದು ಯಾರು ಹೇಳಿದರು ನಿನಗೆ ?

ಕೃ:--(ತಿರಸ್ಕಾರದಿಂದ) ಹಃ ಇಂತಹ ಅಸಭ್ಯ ಹರಟೆ ಬೇಡ ನನಗೆ.

ಉ:--ಕೃಷ್ಣಾ, ಜಗತ್ತಿನಲ್ಲಿ ಸಭ್ಯವಿಲ್ಲ, ಅಸಭ್ಯವಿಲ್ಲ....ಗಂಡಸು-ಹೆಂಗಸು ಎಂಬ ಕಲ್ಪನೆಯಿಂದಲ್ಲವೆ ಸಭ್ಯ-ಅಸಭ್ಯದ ಕಲ್ಪನೆಯಾದದ್ದು ?

ಕೃ:--ಗಂಡಸು-ಹೆಂಗಸು ಎನ್ನುವ ಭೇದಾವಸ್ಥೆ ಕಲ್ಪಿಸುವದು ಅಜ್ಞಾನ. ಅದಕ್ಕೆ ಹೇಳುವೆ, ಅರ್ಜುನಾ, ಎಲ್ಲವೂ ಒಂದೇ ಇದ್ದಲ್ಲಿ ಯಾರು ಯಾರ ಕೂಡ ಕಡಿದಾಡುವರು ? ಯಾರು—

ಉ:--ನೀನು ತಡೆಯದಿದ್ದರೆ ನಾನೇ ನಿನ್ನಕೂಡ ಕಡಿದಾಡುವೆ ನೋಡು-ಬೃಹನ್ನಡೆಯು ಗಂಡಸೂ ಇದ್ದಿಲ್ಲ, ಹೆಂಗಸೂ ಇದ್ದಿಲ್ಲ..ಅದಕಾಗಿಯೆ ಬೃಹನ್ನಡೆಯಲ್ಲಿ ಅಷ್ಟೊಂದು ಧೈರ್ಯವಿರಬೇಕು ! ಕೃಷ್ಣಾ, ಮೊದಲೇ ಹೇಳುವೆ; ಬೇಕಾದರೆ ಕಿವಿ ಮುಚ್ಚಿಕೊ—ಪೌರುಷವು—ನಿಜವಾದ ಸತ್ಯವಾದ-ಪೌರುಷವು ನಪುಂಸಕನಲ್ಲಿಯೆ ಕಂಡುಬರುವದು....ಇದೇ ರಹಸ್ಯ....ಅಯ್ಯೊ ಇದುವರೆಗೆ ನನಗೆ ತಿಳಿಯಬಾರದಾಗಿತ್ತೆ ?..ಕೃಷ್ಣಾ, ನಡುವೆ ಮಾತಾಡಿಸಬೇಡ ನನ್ನನ್ನು....ನನಗೆ ಗೊತ್ತಾಯಿತು ಹಂಚಿಕೆ....ಅರ್ಜುನನಲ್ಲಿ ಧೈರ್ಯ ತುಂಬುವ ಹಂಚಿಕೆ ನನಗೆ ತೋಚಿತು.

ಕೃ:--(ತಿರಸ್ಕಾರದಿಂದ) ಹುಚ್ಚು !

ಉ:—ಕೃಷ್ಣಾ ನನಗೆ ಆವೇಶ ಬಂದಿದೆ. . ನಡೆ, ನಡೆ ನೀನು ಇಲ್ಲಿಂದ........ ಅರ್ಜುನನ್ನು ಯುದ್ಧಕ್ಕೆ ನಿಲ್ಲಿಸದಿದ್ದರೆ ನಾನು ಉತ್ತರಕುಮಾರನಲ್ಲ !

ಅ:— ಕುಮಾರಾ, ನೀನು ಎಷ್ಟು ಹೇಳಿದರೂ—(ಹೊರಡುವನು)

ಉ:—ಅರ್ಜುನಾ, ಹೇಳುವದಿಲ್ಲ, ಕೇಳುವದಿಲ್ಲ.... (ಅರ್ಜುನನು ಹೋಗುವನು) ಅಯ್ಯೋ ! ಇದೇ ಈಗ ಸ್ಮರಣೆಗೆ ಬಂದಿತ್ತಿಲ್ಲ ! ನಡುವೆ ಮಾತನಾಡಿಸಿ ಮತ್ತೆ ಮರೆಯಿಸಿ ಬಿಟ್ಟಿರಿ...ಯಾವುದು ? ....ಹಂ....ಸಿಕ್ಕಿತು.... ಪೌರುಷಕ್ಕೆ ಬೇಕು ನಪುಂಸಕ, ನಪುಂಸಕತ್ವ, ನಪುಂಸಕ ತತ್ವ ನಪುಂಸಕ ವೃತ್ತಿ.... ಯಾರು ? ಯಾರಲ್ಲಿ ?....ಎಲೊ ಆ ಶಿಖಂಡಿಯನ್ನು ಬರಮಾಡು....ಶಿಖಂಡೀ, ಇಲ್ಲಿ ಅರ್ಜುನನ ಹತ್ತರ ಬಂದು ನಿಲ್ಲು.... ಮಾತಾಡಬೇಡೋ ಕೃಷ್ಣಾ, ಕೆಲಸ ಮಾಡುವ ಯೋಗ್ಯತೆ ಇಲ್ಲದೆ. . ಅದು ನೋಡು ಅಲ್ಲಿ, ಅರ್ಜುನನು ಶಿಖಂಡಿಯ ಮರೆಯಾಗಿ ಯುದ್ಧ ಮಾಡುವದನ್ನು– ಇನ್ನಾದರೂ ನಾಚು. . ಓಹೊ ! ನಾಚಿಕೆಗೇಡಿ–ತನ ಧೀರರ ಲಕ್ಷಣ ಅಲ್ಲವೆ ? ಸಾಕುಮಾಡು ನನ್ನ ಮೇಲೆ ಹಲ್ಲು ಕಡಿಯುವದನ್ನು . . ಅದೊ ಆ ಅರ್ಜುನನ ರಥದ ಕುದುರೆಗಳು ಕಡಿವಾಣ ಕಡಿಯುತ್ತಲಿವೆ ಆತುರತೆಯಿಂದ. ಎಲೊ, ಸಾರಥೀ, ಆ ಕುದುರೆಯ ಕಡಿವಾಣವನ್ನಾದರೂ ಹಿಡಿಯುವೆಯೊ ಇಲ್ಲವೊ ?

ಕೃ:—(ತಿರಸ್ಕಾರದಿಂದ) ಹುಚ್ಚ ! (ಹೋಗುವನು)

ಉ:—(ಆನಂದದಿಂದ ಮೇಲೆ ಕೈನೀಡಿ) ಪರಬ್ರಹ್ಮನ ಸಲುವಾಗಿ.

(ತೆರೆಬೀಳುವದು)

ಬದುಕಬಹುದು

ಮುನ್ನುಡಿ

ಇದು ನನ್ನ ಪ್ರಥಮಪ್ರಯತ್ನ. ಈ ರೀತಿಯ 'ಗೀತಾ–ನಾಟಕ' (Opera)ಗಳಲ್ಲಿ ಮೊದಲನೆಯ ಯತ್ನ. ಸಂಪೂರ್ಣ ಸಂಗೀತದಿಂದಲೇ ಆಡ–ಬಹುದಾದ ನಾಟಕವಿದು. ಗದ್ಯ–ಸಂಗೀತಗಳ ಬೆರಕೆಯಿಂದ ನಾಟಕಕ್ಕೆ ಹಾನಿಯಿದೆಯೆಂದು ತಿಳಿಯುವ ನಾನು, ಗದ್ಯನಾಟಕವನ್ನೆ ಇದು ತನಕ ಬರೆಯುತ್ತಿದ್ದೆ. ಈಗ ಈ ಗೀತಾನಾಟಕಕ್ಕೆ ಕೈಹಾಕಿರುತ್ತೇನೆ. ರಂಗ ಭೂಮಿಯ ಮೇಲೆ ಈ ನಾಟಕವನ್ನು ಪುತ್ತೂರಿನ ದಸರಾ ಮಹೋತ್ಸವದ ಕಾಲದಲ್ಲಿ ತಂದುದೂ ಆಯಿತು. ನಾಟಕವು ಸಾಮಾನ್ಯದೃಷ್ಟಿಯಿಂದ ಯಶಸ್ವಿಯಾಯಿತೆನ್ನಲು ಕೊರತೆಯಿಲ್ಲ. ಇಂಥ ನಾಟಕಗಳು ದಾರುಣ ದುಃಖವನ್ನೂ, ವ್ಯಂಗ್ಯಹಾಸ್ಯವನ್ನೂ, ಸರಳಹಾಸ್ಯವನ್ನೂ ಚಿತ್ರಿಸಲು ಅನುಕೂಲವೆಂದು ನನಗೆ ತೋರುವುದು.

ಅಭಿನಯಿಸುವ ಕಾಲದಲ್ಲಿ, ಹಾಸ್ಯಪ್ರಧಾನ ವಿಷಯಗಳು ಬರುವಾಗ ನಟರು, ತುಸು ಅತಿ ಅಭಿನಯವನ್ನೂ ಮಾಡುವದು ಅವಶ್ಯವಾಗುವುದು. ದುಃಖಬದ್ಧ ಪ್ರಸಂಗಗಳನ್ನು ಚಿತ್ರಿಸುವಾಗ ನಟನೆಯು ಯಥಾತ್ಮಿಕವಾಗಿರ

ಬೇಕೋ, ಬೇಡವೋ ಎಂಬ ವಿಚಾರ ನಾನಿನ್ನೂ ಯೋಚಿಸಿಲ್ಲ.

ಇದರ ಸಂಗೀತ ಭಾಗವನ್ನು ಕುರಿತು ಒಂದು ಮಾತು. ಇದು ಒಂದನ್ನೊಂದು ಹಿಡಿದು, ಕೂಡಿ ಸರಿಯುವ ರಾಗಮಾಲಿಕೆಯಂತಿದೆ. ಬಿಡುಪದಗಳಾಗಿ ಇಂಥ ನಾಟಕಗಳ ತುಂಡುಗಳು ಬದುಕಲಾರವು. ಮರದ ಬೇರು ತಾಳು, ಕೊಂಬೆಗಳಂತೆ, ಕೆಲವು ಕೂಡಿ ಒಂದಾಗಿ, ಒಂದು ಬಿಡಿಸಿ ಹಲವಾಗಿ-ರಾಗಗಳು ಬೆಳೆದು ಹರಡಬೇಕು. ಈ ಗ್ರಂಥದಲ್ಲಿ ರಾಗಗಳ ಹೆಸರುಗಳನ್ನು ಅಲ್ಲಲ್ಲಿ ಕೊಟ್ಟಿರುವೆನೇ ವಿನಹ-ಧಾಟಿಯನ್ನು ಸೂಚಿಸಿಲ್ಲ. ಅವೆಲ್ಲವೂ ಹೊಸವು. ಅವೇ ಅವುಗಳ ಹೊರತು ಇನ್ನೊಂದರ ಛಾಯೆಯಿಲ್ಲ. ಒಂದೆರಡು ಕಡೆಗಳ ಇನ್ನೊಂದು ಹಾಡಿನಲ್ಲಿರುವ ಸರಣಿಯನ್ನು ಅಲ್ಲಿ ಇಲ್ಲಿ ಹಿಡಿದರೂ, ಪ್ರಸಂಗ ಬಂದಾಗ ತಮ್ಮ ಅನುಕೂಲತೆಗೆ ಸರಿಯಾಗಿ ಸೊಕ್ಕಿ ಹರಿಯುವ ಹಾದಿಯನ್ನು ಹಿಡಿದಿವೆ.

ಸದ್ಯದಲ್ಲಿ ಹಾಡನ್ನು ಬೆರೆಸಿ ಎರಡನ್ನೂ ಕೊಲ್ಲಲು ಯತ್ನಿಸುವ ಜನರು, ಈ ನಾಟಕದ ಮಾದರಿಯಿಂದ, ಇವೆರಡನ್ನೂ ಸ್ವತಂತ್ರವಾಗಿ ಬೆಳೆಯಿಸಿ ಯಶ ಗಳಿಸಬಹುದೆಂದೇ ನನ್ನ ಸೂಚನೆ.

೧೫-೪-೩೫
ಪುತ್ತೂರು

ಶಿವರಾಮ ಕಾರಂತ

ಪಾತ್ರಗಳು

(ಕಾಲ:—ಕ್ಷಯಸಂವತ್ಸರದ ಕೊನೆಯ ದಿನ. ಮರುದಿನವೇ ಪ್ರಭವಸಂವತ್ಸರದ ಯುಗಾದಿಯು ಬರಲಿದೆ)

ಅವಧೂತ:—ಚಿರವಾದ ಸತ್ಯವನ್ನು ಸಾರುತ್ತ ಸಂಚರಿಸುವ ಒಬ್ಬ ಸಾಧುವು.

ನವಗುರು:—ಅವಧೂತನ ಮಾತನ್ನು, ತನ್ನದೇ ಅರ್ಥದಿಂದ ತಿಳಿದು ಜಗತ್ತನ್ನು ಎಚ್ಚರಿಸುವ ಒಬ್ಬ ಹೊಸಯುಗದ ಸನ್ಯಾಸಿ.

ಫಲ್ಗುಣ:— ಚೈತ್ರೆಯ ತಂದೆ– ಅಳಿಯನನ್ನು ಹುಡುಕುವ ಮಾವ

ಹೇಮಂತ:—ತನ್ನ ಆಸ್ತಿ–ಪಾಸ್ತಿಗಳನ್ನು ವಿಕ್ರಯಿಸಿ, ಒದಲು ಪುಣ್ಯ ಸಂಪಾದನೆ ಮಾಡಬೇಕೆಂದು ಯತ್ನಿಸುವ ವ್ಯಾಪಾರಿ.

ವಸಂತ:— ಯುಗಾದಿಗೆ ಬರಲಿರುವ ಮದುವಣಿಗ.ಚೈತ್ರೆಯ ಪ್ರಣಯಿ.

ಚೈತ್ರೆ:— ಫಲ್ಗುಣನ ಗೆಳತಿ.

ನಿದ್ರಾ:— ಹೇಮಂತನ ಮಡದಿ.

ವಿಶಾಖ
ವಿನಾದ
ವಿರಾಗ } ಊರಲ್ಲಿ ಉದ್ಯೋಗವಿಲ್ಲದೆ ಅಲೆಯುವ ಉಂಡಾಡಿಗಳು.

ಬದುಕಬಹುದು

ಅಂಕ ೧

(ನಿರ್ಜನವಾದ ಒಂದು ಪ್ರದೇಶ. ಅವಧೂತನು ಹಾಡುತ್ತ ಬರುವನು! ಅವನ ಹಾಡನ್ನು ಕೇಳಿ ಮೆಲ್ಲಗೆ—ನವಗುರುವು ಬಂದು ಆಲಿಸುವನು. ಅವನೊಡನೆ ಮಾತನಾಡಿ ಮಾತಿನ ಅರ್ಥ ತಿಳಿದವನಂತೆ ತೋರಿಸಿಕೊಳ್ಳುವನು.)

(ರಾಗ ಭೈರವಿ)

ಅ:—ನೀಲವಾಗಿಹುದು ಆಕಾಶಾ ।
ಮುಗಿಲ ಕುಣಿತವು ಮಿಗುವ ತೋಷಾ ॥
ಒಂದಾಗಿಹುದು ಈ ದೇಶಾ ।
ಜಗದ ಜಡತೆಯು ಫಲವೆ ಕ್ಲೇಶಾ ॥ ॥ ೧ ॥

ಬಾನೊಳಗೆ ಮಿರುಗುವುವು ತಾರಾ ।
ವಿಶ್ವಕದು ಬೆಳಕಿಹುದು ಸಂಸಾರಾ ।
ಮನದೊಳಗೆ ಮರುಗುವುದು—ದೇಶಾ ।
ಘನತರದ ಬಾಳ್ವೆಯೊಳೆ—ತೋಷಾ ॥ ೨ ॥

ಏಕವಾಗಿರಲು ಆ ಕಾಶಾ ।
ಮುಗಿಲು ತೊಟ್ಟಿತು ಹಲವು ವೇಷಾ ।
ಶೂನ್ಯವಾಗಿರಲು ಮನ ಹಾಸ ।
ಅದುವೆ ನಿಜ ಕಲಿರಾಯನಾವಾಸ ॥ ೩ ॥

(ಹಾಡನ್ನು ಕೇಳಿ ದಾರಿಸಾಗುತ್ತಿರುವ ನವಗುರುವು ಅಲ್ಲಿಗೆ ಬಂದು ಅವಧೂತನನ್ನು ಮಾತ-ನಾಡಿಸುವನು.)

ನ:—ಏಕೆ ಹಾಡುವೆಯು ಏ ದಾಸ ?
ಅರ್ಥವಾಗದು ನನಗೆ ಈ ವೇಷ !

ಬೇಡುವೆಯ ನೀನೇನು ಕಾಸ !
ಅದಕೇನು ಸಂಗೀತ-ಮೋಸ ॥

ಅ:—ನೀಲವಾಗಿಹುದು ಆಕಾಶಾ
ಮುಗಿಲ ಕುಣಿತವು ಮಿಗುವ ತೋಷಾ !
ತಾಸಿಹುದು ಅದರ ಉಲ್ಲಾಸ !
ಬೇಕಿಲ್ಲ ಜೀವನಕೆ ಮೋಸ !

ನ:—ನೀನೇನು ಸಾಧುವೇ ಏ ದಾಸ !
ಕ್ಷೇಮವೇ ನಿನ್ನೊಡನೆ ಸಹವಾಸ !
ಕಾಸು ಬೇಡದೆ ಇರಲು ನೀನೀಶ.
ನೀಡೆನಗೆ-ಜವದೊಳಗೆ ಉಪದೇಶ!

(ಎಂದು ಕಾಲೂರಿ ಅವನನ್ನು ನಮಸ್ಕರಿಸುವನು)

ಅ:—ನೀಲವಾಗಿಹುದು ಆಕಾಶ !
ಮುಗಿಲ ಕುಣಿತವು ಮಿಗುವ ತೋಷಾ !
ಬರಿದು ಆಗಿಹುದು ನಿನ್ನ ದೇಶಾ !
ಇದುವೆ ಲಾಲಿಸು ನೀನಗುಪದೇಶಾ !

ನ:—' ನೀಲವಾಗಿಹುದು ಆಕಾಶ ! '

ಅ:—' ನೀಲವಾಗಿಹುದು ಆಕಾಶ !
ಮುಗಿಲ ಕುಣಿತವು ಮಿಗುವ ತೋಷಾ ! '

ನ:—ಮುಗಿಲ ಕುಣಿತವು ಮಿಗುವ ತೋಷಾ !

ಅ:—ಬರಿದು ಆಗಿಹುದು ಈ ದೇಶ !

ನ:—ಬರಿದು ಆಗುವುದೇ ಈ ದೇಶ !

ಅ:—ಜಗದ ಜಡತೆಯು ಫಲವೆ ಕ್ಲೇಶ !

ನ:—ಜಗದ ಜಡತೆಯು ಫಲವೆ ಕ್ಲೇಶ !
ಇದು-ಏನೆ ನೀನೀವ ಉಪದೇಶ !
ಬರಿದು ಆಗುವುದೆ ಈ ದೇಶಾ !
ವರಗುರುವೆ ನಮಿಸುವೆನು ಈ ದಾಸಾ !
ಬೆಳಕು ತೋರಿದೆ ನೀನು-ಉಪದೇಶಾ ॥

ಅ:—ನೀಲವಾಗಿಹುದು ಆಕಾಶಾ ।
ಮುಗಿಲ ಕುಣಿತವು ಏಗುವ ತೋಷಾ ॥
ಬರಿದಾಗಿಹುದು ಈ ದೇಶಾ ।
ಜಗದ ಜಡತೆಯು ಫಲವೆ ಕ್ಲೇಶಾ ॥ (ತೆರಳುವನು)

(ದೊರೆತ ಉಪದೇಶದಿಂದ ಪುಲಕಿತನಾಗಿ, ಜಗತ್ತಿಗೆ ತಾನು ಉಪದೇಶ ಮಾಡುವೆನೆಂದು ಅದನ್ನು ಕರೆಯುವನು.)

ನ:—ಏ ಮೂಢ ಜಗವೇ !
ಏ ಹೀನ ಜಗವೇ !
ತ್ವರೆ ಬನ್ನಿ ಜಗವೇ !
ನಿಜಸತ್ಯ ಒರೆವೆ !
(ಅದಕ್ಕೂ ಗಟ್ಟಿಯಾಗಿ)
ಏ ಮೂಢ ಜಗವೇ !
ಏ ಹೀನ ಜಗವೇ !
ತ್ವರೆ ಬನ್ನಿ ಜಗವೇ !
ನಿಜಸತ್ಯ ಒರೆವೆ !
(ಇನ್ನೂ ಗಟ್ಟಿಯಾದ ಧ್ವನಿಯಿಂದ)
ಏ ಮೂಢ ಜಗವೇ
ಏ ಹೀನ ಜಗವೇ
ತ್ವರೆ ಬನ್ನಿ ಜಗವೇ
ನಿಜ ಸತ್ಯ ಒರೆವೆ. . . .

(ಈ ಕೂಗನ್ನು ಕೇಳಿ ಫಲ್ಗುಣ ಹೇಮಂತರು ಅಲ್ಲಿಗೆ ಧಾವಿಸಿ ಬರುವರು)

ನ:—ಏ ಮೂಢ ಜಗವೇ . . .
ಫ:—(ನಡುಗಿ) ನಾ ಬಂದೆ . . . ಗುರುವೇ !
ಫಲುಗುಣನು . . ಗುರುವೇ !
ನ:—ಏ ಹೀನ ಜಗವೇ !
ಹೇ:—ನಾ ಬಂದೆ .... ಗುರುವೇ !
ಹೇಮಂತ .... ಗುರುವೇ !

ನ:—ತ್ವರೆ ಬಂದಿರೇನು !
ನಿಜ ಸತ್ಯವೇನು !
ಘ:—ನಿಜ ಸತ್ಯವೇನು !
ಹೇ:–ಸತ್ಯ ನಿಜವೇನು ?

(ರಾಗ ಯಮುನ್)

ನ:—ದಿವ್ಯತಪದೊಳು ಎನಗೆ ಗುರುದೇವನೊರೆದಿಹನು !
ಪರಮಸತ್ಯವನೊಂದ ! ಅರಿತಿಹುದೆ ಮೂಢ ಜಗ !
ಘ:—ಅರಿತಿಲ್ಲ ! ಅರಿತಿಲ್ಲ !
ಹೇ:–ಅರಿತಿಲ್ಲ ! ಅರಿತಿಲ್ಲ !
ನ:—ಪರಮಸತ್ಯವನೊಂದ ! ಅರಿತಿಹುದೆ ಮೂಢ ಜಗ !
ಅರಿತಿಲ್ಲ !
ನೋಡುವುದು ಗಗನವನು ! ದೃಷ್ಟಿ ಮೇಲಕೆ ಎತ್ತಿ !
ನೋಡುವುದು ಮುಗಿಲುಗಳ ! ಕತ್ತ ಮೇಲಕೆ ಎತ್ತಿ !
ಪೇಳುವೆನು ಸತ್ಯವನು ! ಸತ್ಯವೆಂಬುವ ತತ್ತಿ !
ಬಿಡಿಸಿಡಿರಿ, ಬಿಡಿಸಿಡಿರಿ ನಿಮ್ಮ ಚಿತ್ತ-ಭಿತ್ತಿ ! ॥
ಹೇ:—ಬಿಡಿಸಿದೆವು ಬಿಡಿಸಿದೆವು–ನಮ್ಮನೆತ್ತಿ !
ಘ:—ಬಿಡಿಸಿದೆವು ಬಿಡಿಸಿದೆವು ನಮ್ಮನ್ನೆತ್ತಿ ! ॥
ನ:—ನೀಲವಾಗಿಹುದು ಆಕಾಶ !
ಹೇ:—ಅಹುದು ಆಕಾಶಾ !
ಘ:—ಅಹುದು ಆಕಾಶಾ !
ನ:—ಮುಗಿಲ ಕುಣಿತವು ಮಿಗುವ ತೋಷಾ !
ಹೇ:—ಮುಗಿಲ ಕುಣಿತವೆ-ಅಹುದು ತೋಷಾ !
ನ:—ಬರಿದಾಗುವುದು ಈ ದೇಶಾ !
ಹೇ:—ಬರಿದಾಗುವುದು ದೇಶಾ (ಗಾಬರಿಯಿಂದ)
ನ:—ಜಗದ ಜಡತೆಯು ಫಲವೆ ಕ್ಲೇಶಾ !
ಘ:—ಬರಿದಾಗುವುದು....ದೇಶಾ ! (ಬೆದರಿ)
ಜಗದ ಜಡತೆಯು ಫಲವೆ ಕ್ಲೇಶಾ !

ಹೇ: --ಹಾಗಾದರಂತು ಬಲು ಮೋಸಾ !

ಫ:--ನಿಜಕು ಇದರಿಂದ ತ್ರಾಸಾ ॥

ನ:--ನಿಜ ನಿಜ-ಕೂಡುತಿದೆ ನಮ್ಮ ಪ್ರಾಸಾ !

ಅಂತಿರೇಂ ಇದರರ್ಥ ! ಮೂಢ ಪಶುಗಳೆ ನೀವು !

ಕಲಿಯುಗದ ನೋಟಗಳೆ ! ಭಾರತಿಯ ಕೀಟಗಳೆ !

ವರುಷವಾವುದು ಇದುವೆ ಅರಿವುಂಟೆ ನಿಮಗೆ !

ಫ:--ಕ್ಷಯನಾಮ ವತ್ಸರವು !

ನ:--ಕ್ಷಯನಾಮ ವತ್ಸರವು.

ಮಾಸವಾವುದು ಪೇಳು ?

ಫ:—ಮಾಸವಿದು ದ್ವಾದಶವು !

ನ:—ದಿನವಿದಾವುದು ಪೇಳು ?

ಹೇ:—ಕೊನೆಯ ಒಂದೇ ದಿನವು !

ನ:—ಉಳಿದಿಹುದು ದಿನವೊಂದೆ ! ಎಲೆ ಹೀನ ಜಗವೆ !

ಅದರೊಳಗೆ ಮಾಡುವುದು ನಿಮ್ಮಗಳ ಮದುವೆ !

ಫ:—ನಮ್ಮಗಳ ಮದುವೆ !

ನ:—ಅದರೊಳಗೆ ಮಾಡುವಿರಿ ನೀವೆಲ್ಲ ದಾನಗಳ !

ಅದರೊಳಗೆ ತ್ಯಜಿಸುವುದು ಈ ಇಳೆಯ ಪಾಶಗಳ !

ಹೇ:–ನನ್ನಾಸ್ತಿ ದಾನಗಳ !

ನ:—ಕ್ಷಯವು ಬಂದಿದೆಯ್ಯಾ !

ಜಗದ ಬಾಳ್ವೆಗೆ ನೋಡು !

ಉಳಿದುದೊಂದೇ ದಿನವು !

ಜವದೊಳಗೆ ನೀ ನೋಡು ! ॥

ದಾನ ಗೈವುದ ಗೈದು !

ಈ ದಿನವು ಮುಗಿಯಲ್ಕೆ !

ಸಗ್ಗವೇರುವ ಸಿದ್ಧತೆಯ ಗೈಯ್ಯಬೇಕು !

ನಾಳೆ ಎಂಬುದು ಇಲ್ಲ ! ಬದುಕುವರೆ ಎಡೆಯಿಲ್ಲ !

ಕ್ಷಯವತ್ಸರವು ಮುಗಿಯೆ ! ಕ್ಷಯವೆಲ್ಲ ಜೀವ !

ಫ:—ಏನೇನು ! ಕ್ಷಯವತ್ಸರವು ಮುಗಿಯೆ ! ಕ್ಷಯವೆಲ್ಲ ಜೀವ!
ನಾಳೆಯೆಂಬುದು ಇನ್ನು ಬರಲಾರದೇನು !

ನ:—ನಾಳೆಯೆಂಬುದು ಇನ್ನು ಭಾಗ್ಯವಿಲ್ಲದ ಹೆಣ್ಣು !
ನಾಳೆಯೆಂಬುದು ಇನ್ನು ದೀಪವಿಲ್ಲದ ಕಣ್ಣು !
ನಾಳೆಯೆಂಬುದು ಇನ್ನು ಬೆಲೆಯೆ ಇಲ್ಲದ ಮಣ್ಣು !
ನಾಳೆಯೆಂಬುದು ಇನ್ನು ಸವಿಯೆ ಇಲ್ಲದ ಹಣ್ಣು !

ಫ:—ನಾಳೆ ಇಲ್ಲದ ಮ್ಯಾಲೆ। ಇಂದಿನಾ ಗತಿ ಹೇಳು ॥
ಇಂದೆ ಇರುವಳು ಮಗಳು, ಮದುವೆ ಇಲ್ಲದ ಗೋಳು ॥

(**ರಾಗ ಅಸಾವೇರಿ**)

ನ:—ಮದುವೆ ಇಲ್ಲದ ಮಗಳೆ!

ಫ:—ಅಳಿಯನಿಲ್ಲದ ನಾನು ॥

ನ:—ಅಳಿಯನಿಲ್ಲದೆ ಮೋಕ್ಷ। ಗೇಳೆಯ–ಇಲ್ಲವು ನೋಡು !
ಮದುವೆ ಇಲ್ಲದ ಮಗಳ ಹೊಳೆಗೆ ತಳ್ಳುತೆ, ಓಡು ॥
ನಾಳೆಯುಗ ಮುಗುಚುವುದು !
ಹಾಳುಯುಗ ಬರಲಿಹುದು !
ಪುಣ್ಯಸಂಪಾದನೆಗೆ–ಬಲು ಕಷ್ಟವೂ ॥

ಫ:—ಏನ ಗೈಯಲು ಬೇಕು ಪೇಳು ಧೊರೆಯೇ !

ನ:—ನಾಳೆ ಉದಯಿಪ ಮೊದಲು।
ಹಾಳು ಮಗಳನು ಮಾರು।
ಗೋಳ ತಪ್ಪಿಸಿಕೊಳ್ಳು ಮಾವತನದ ॥

ಫ:—ಬೇಗ ಪೋಗುವೆ ಗುರುವೆ ! ಇಂದೆ ಮಾರುವೆ ಮಗಳ।
ಈಗಲೇ ತೊಡಗಿದೆನು ವಿಕ್ರಯವನು !
ಗೆಳೆಯರೇ ! ಬಂಧುಗಳೆ, ಇತ್ಯಾದಿ ಜನಗಳೇ ॥
ಯಾರಾದರೂ ಚಿಂತೆ ಇಲ್ಲವೆನಗೆ !
ಬೇಕೆನಗೆ ಬಲುಬೇಗ ಅಳಿಯನೊಬ್ಬನು ನೋಡಿ !
ಬಯಸಿ ಬರುವರು ಬನ್ನಿ—ಓಡಿ ! ಓಡಿ !

ಇನ್ನಿಲ್ಲ–ದಂಥ ಮಗಳು !
ಸೊಗಸಿನೊಳು ! ನಗುವ ಮುಗುಳು !
ಕೆಲಸಕ್ಕೆ ಚಿನ್ನದಗಳು ! (ತೆರಳುವನು.)

(ರಾಗ–ಭೀಮಪಲಾಸ್)

ನ:—ನೀನೇಕೆ ಅಳುತಿಹೆಯು ಎನ್ನ ಶಿಷ್ಯಾ !
ನೀನೇಕೆ ಅಳುತಿರುವೆ ಎನ್ನ ಶಿಷ್ಯಾ !
ಮಗಳಿಹಳೆ ಸಿನಗೂವೆ ಎನ್ನ ಶಿಷ್ಯಾ !

ಹೇ:—ಗು–ರು....ರಾಯಾ........

ನ:—ಬಿಡು ಭಯಾ. . . . .

ಹೇ:—ಇಡುದಯಾ– . . . .

ನ:—ಜಗಮಾಯಾ.... ಎನ್ನ ಶಿಷ್ಯಾ ।
ನೀನೇಕೆ ಅಳುತಿಹೆಯು ಎನ್ನ ಶಿಷ್ಯಾ ॥

('ಉಡಪಿ ಕೃಷ್ಣಾ' ಎಂಬಂತೆ)

ಹೇ:—ಮಗಳು ಇಲ್ಲಾ ಬರಿಯ ಮಡದಿ ॥
ಹೆರಿಗೆ ಇಲ್ಲಾ ಹೊರೆಯು ಗಡದಿ ॥
ಆದರೇನು ಆಸ್ತಿ ಬಹಳ । ತೊಟ–ಗೀಟ ದೊಡ್ಡಮೇಳ !

ನ:—ಅಯ್ಯೊ ಮರುಳಾ ! ತ್ಯಜಿಸು ಗೋಳಾ !
ನಾಳೆ ಬಹುದು ಕಠಿಣ ಕಾಲಾ !
ಇಂದೆ ಎಲ್ಲ ತ್ಯಜಿಸು ಮೂಳ । ನೆಲವು ಅಲ್ಲ ಬರಿಯ ಧೂಳ ! ॥

ಹೇ:—ಈಗ ಹೊರಟೆ । ಇಂದೆ ಹೊರಟೆ । ನಾಳೆ ಬರುವ ಮೊದಲೆ ಹೊರಟೆ.
ಎಲ್ಲ ಜನರೇ ಕೇಳಿರೆನ್ನ,
ಎನ್ನ ತೋಟ ನಿಜಕು ಚಿನ್ನ.
ಎನ್ನ ಭೂಮಿ ತೊಳೆದ ರನ್ನ.
ಬೆಲೆಯು ಕೊಟ್ಟು ಕೊಳ್ಳಿರಣ್ಣಾ.

ನ:—ನೀಲವಾಗಿಹುದು ಆಕಾಶಾ
ಮುಗಿಲ ಕುಣಿತವು ಮಿಗುವ ತೋಷಾ ॥

ಬರಿದು ಆಗುವುದು ಈ ದೇಶಾ
ಜಗದ ಜಡತೆಯು ಫಲವೆ ಕ್ಲೇಶಾ ॥ (ತೆರಳುವನು)

(ವಿಶಾಖ–ವಿರಾಗ–ವಿನಾದ ಬರುವರು)

(ರಾಗ–ಭೂಪ)

ಮೂವರು:—ಮೂವರು ನಾವು, ವಿಶಾಖ–ವಿರಾಗ–ವಿನಾದಾ ।

ವಿನಾದ:—ವಿಶಾಖನಿವನು !

ವಿರಾಗ:—ವಿರಾಗ ನಾನು !

ವಿಶಾಖ:—ವಿನಾದನುಳಿದವನು !

ಮೂ:—ಮೂವರು ನಾವು, ವಿಶಾಖ-ವಿರಾಗ-ವಿನಾದ!

ವಿನಾ:—ಮುಂದಿನ ದಿಸವು

ವಿರಾ:—ಹಿಂದಿಸದಲ್ಲವು !

ವಿಶಾ:—ಬದುಕಲು ಎಡೆ ಇಲ್ಲವು ॥

ಮೂ:—ಮೂವರು ನಾವು–ವಿಶಾಖ–ವಿರಾಗ–ವಿನಾದ.

ವಿನಾ:—ನಾಳೆಗೆ ಇಲ್ಲದು ।

ವಿರಾ:—ಇಂದಿಗೆ ಸಲ್ಲುದು.

ವಿಶಾ:—ಅದುವೇ ನಿಜವಿಹುದು.

ಮೂ:—ಮೂವರು ನಾವು–ವಿಶಾಖ–ವಿರಾಗ–ವಿನಾದ.

ವಿನಾ:—ನಿನ್ನೆಯು ಕಾಣದೆ

ವಿರಾ:—ಇಂದೇ ಬದುಕದೆ

ವಿಶಾ:—ನಾಳೆಗೆ ಎಲ್ಲಿ ಇದೆ ?

ಮೂ:—ಮೂವರು ನಾವು – ವಿಶಾಖ – ವಿರಾಗ – ವಿನಾದ ॥

ಫ:—(ಪ್ರವೇಶ)ಮಗಳಿಹರು ಎನಗೆ–ಅಳಿಯಂದಿರಿಲ್ಲ !
ಅಳಿಯಂದಿರಿಲ್ಲ !

ಚಿನ್ನದಂಥಾ ಮಗಳು !

ವಿನಾ:—ಇನ್ನಷ್ಟು ನೀ ಹೊಗಳು !

ಫ:—ಮುತ್ತಿನಂಥಾ ಮಗಳು !

ವಿರಾ:—ಬಾಯ್ಬಿಟ್ಟು ನೀ ಬೊಗಳು !
ಘ:—ವಜ್ರದಂಥಾ ಮಗಳು !
ವಿನಾ:—ಸರಮಾಡಿ ಕೊಡು ಕೊರಳು !
ಮೂ:—ಮೂವರು ನಾವು–ವಿಶಾಖ–ವಿರಾಗ–ವಿನಾದ !
ವಿನಾ:—ವಿಶಾಖನಿವನು
ವಿರಾ:—ವಿರಾಗ ನಾನು,
ವಿಶಾ:—ವಿನಾದನುಳಿದವನು !
ಘ:—ಮೂವರು ಬೇಡ ! ಒಬ್ಬನೆ ಸಾಕು !
ಅಳಿಯನು ಬೇಕು !
ಮಗಳಾ ಕೊರಳಿಗೆ ಮಾಲೆಯನಿಕ್ಕುವ ಅಳಿಯನು ಬೇಕು !
ವಿನಾ:—ಮುಂದಿನ ಯುಗವು ಬಲು ಕೆಡು–ಯುಗವು !
ಹಿಂದಿನ ಯುಗವು ಕಾಣದ ಯುಗವು !
ಇಂದಿನ ಯುಗದೊಳು – ಇಲ್ಲವು ನಗುವು ॥
ಮೂವರು ನಾವು ....॥ ಪಲ್ಲ ॥
ವಿರಾ:—ಮಗಳನು ಹೆತ್ತವ ಮಾಡುವೆಯಂತೆ
ಹೆರುವಾ ಮೊದಲೇ ಬೇಡವೆ ಚಿಂತೆ.
ಹೆತ್ತಾ ಪಾಪಕೆ ಹೊರು ಆ ಕಂತೆ
ಮೂವರು ನಾವು.........॥ ಪಲ್ಲ ॥
ವಿಶಾ:—ಮುತ್ತಿನ ಮಗಳನು ಮನೆಯೊಳಗಿರಿಸು.
ಸುತ್ತಲು ಎತ್ತರ ಕೋಟೆಯ ಬಿಗಿಸು !
ಮೆತ್ತುತೆ ಮಣ್ಣನು ! ಬಾಳ್ವೆಯ ಮುಗಿಸು !
ಮೂವರು ನಾವು ......॥ ಪಲ್ಲ ॥

(ರಾಗ ಭೂಪಾಳಿ)

ಘ:—ನಿಷ್ಠುರವು ಜಗವಿದುವೆ !
ಕನ್ಯದಾನದ ಫಲವಷ್ಟೆ!
ಇಷ್ಟಿಷ್ಟು ಸಿಗದ ತೆರಗೈಯುತಿಹುದು ॥
ಎಷ್ಟು ಕರೆದರು ಜನರ

ಕೊಳ್ಳರೆನ್ನಯ ಮಗಳ
ದುಷ್ಟದಿನ ಬಹ ಮುಂಚೆ–ಅಳಿಯುನಿಲ್ಲಾ ॥ (ತೆರಳುವನು)

ಮೂ:—ಮೂವರು ನಾವು ವಿಶಾಖ–ವಿರಾಗ–ವಿನಾದ ॥

ವಿನಾ:—ವಿಶಾಖನಿವನು

ವಿರಾ:—ವಿರಾಗ ನಾನು

ವಿಶಾ:—ವಿನಾದನುಳಿದವನು ॥

(ಅದೇ ಸ್ಥಳಕ್ಕೆ ಹೇಮಂತನು ಆಸ್ತಿ ವಿಕ್ರಯದ ಸಲುವಾಗಿ ಬರುವನು)

(ರಾಗ ಕೇದಾರ)

ಹೇ:—ಹೊನ್ನನೀಯುವ ನೆಲವು ।
ನೀರು ತುಂಬಿದ ಕೊಳವು ।
ವಿಕ್ರಯಕೆ ಅಣಿಯಿಹುದು ತ್ವರೆಯು ತ್ವರೆಯು ॥
ಯಾರಿಗಾದರು ಕೊಡುವೆ ।
ಬೆಲೆಯು ಇಲ್ಲವು ಕಡಿಮೆ ।
ಚಿನ್ನದಂಥಾ ನೆಲವು, ಮಣ್ಣಾದರೇನು ॥

ಮೂ:—ಏನು ಕೂಗುತಲಿಹೆಯು ?

ಹೇ:—ಮಾರುವೆನು ಸ್ಥಿರಚರಾಸ್ತಿಯು ನೆಲವ,

ವಿರಾ:—ಏಕೆ ಮಾರುತಲಿಹೆಯು ?

ಹೇ:—ಸುಮ್ಮನಿಳಿಸಲು ಹೊರೆಯು !

ವಿನಾ:—ಹೊರೆಯೆ ಏನದು ಧರೆಯು !

ಹೇ:—ನನ್ನ ಪಾಲಿಗೆ, ಧರೆಯು !

ವಿರಾ:—ಧರೆಯು ಪಾಲಿಗೆ ನೀನು !

(ಕೆಳಗಿನ ಸಂಭಾಷಣೆಯಲ್ಲಿ ವಿರಾಗ ವಿಶಾಖರ ಹಾಡುಗಳು ಭೂಪದಲ್ಲೂ ಹೇಮಂತನ ಹಾಡು ಕೇದಾರದಲ್ಲೂ ಹರಿಯುವುದು)

ಮೂ:—ಮೂವರು ನಾವು–ವಿಶಾಖ–ವಿರಾಗ–ವಿನಾದ

ಹೇ:—ಕೊಳ್ಳಿರೈ ಪುಣ್ಯಾತ್ಮರೆನ್ನ ನೆಲವ !

ವಿರಾ:—ನಿನ್ನ ನೆಲ ನೀನೆ ಕೊಳ್ಳುವುದು ।

ಹೇ:—ಬಲು ಕಡಿಮೆ ಬೆಲೆಗೆ ಕೊಡುವೆ ।

ವಿನಾ:—ನಿನ್ನ ಬೆಲೆ ಕಡಿಮೆಯೇ ಪಶುವೆ !
ಹೇ:—ನಾಳೆ ದೊರೆಯುದು ಇಷ್ಟು ಅಗ್ಗ ನೆಲವು !
ವಿಶಾ:—ಇಂದೆ ಸೇರುತೆ ಬಿಡಲೊ ಅಗ್ಗ ನೆಲವ !
ಮೂ:—ಮೂವರು ನಾವು—ವಿರಾಗ—ವಿಶಾಖ—ವಿನಾದ ! (ತೆರಳುವರು)
ವಿರಾ:—ನಾಳೆಯು ದಿನವು ।
ಬಲು ಕೆಡು-ದಿನವು !
ವಿಶಾ:—ಕೊಳ್ಳುವರಿಲ್ಲವು
ನಿನ್ನಯು ನೆಲವ
ಮೂ:—ಬದುಕಿಗೆ ನಾಳೆ
ಇಹುದೈ 'ಗೋಳೆ'

(ರಾಗ ಭೂಪಾಳಿ)

ಹೆ:—ನಾಳೆಯಾ ಕೆಡುಗಾಲ, ಬರುವ ಮುಂಚೆಯೆ ಸೆಲವ।
ಮಾರಿ, ಕಾಸನುಗೈವೆ, ಎಂದರೀ ಜಗವೆನ್ನ ।
ನಂಬಲಾರದೆ ನಿಂತು ಅಣಕಿಸುತಲಿಹುದು ! ।। (ತೆರಳುವನು)

ಅಂಕ ೨

(ಫಲ್ಗುಣನು ತನ್ನ ಮನೆಯ ಕಡೆಗೆ ಧಾವಿಸಿ ಬರುವನು)

(ರಾಗ ಭಾಗೇಶ್ರಿ)

ಫ:—ತಾಳಲಾರೆನು ದುಃಖ
ಬಹಳ ಆಳದ ದುಃಖ
ಅದರ ಆಳಕೆ ಇಲ್ಲ—ಇಷ್ಟಿಷ್ಟು ಲೆಕ್ಕ ॥
ಮಗಳ ಕೊಡುವೆನು ಎಂದು
ನಾಲ್ಕು ಹಾದಿಲಿ ನಿಂದು
ಎಷ್ಟು ಕಿರುಚಿದೆನಲ್ಲ—ಕೇಳರಿಂದು
ಬದುಕ ಉಳಿವದು ಇಲ್ಲ
ನಾಳೆಯಾ ದಿನಕಿಲ್ಲ
ಯೋಚನೆಯೊಳಾಯ್ತೆನಗೆ ಇಂದೊಂದು ಗಲ್ಲ ॥

(ರಾಗ ಮಾಂಡ್)

ಚೈ:—ಬಹನಲ್ಲ, ಬಹನಲ್ಲ, ಬಹನಲ್ಲಾ ಯನ್ನ ನಲ್ಲಾ....॥ ಪ ॥
ಯನ್ನ ನಲ್ಲಾ ಬಹನಲ್ಲಾ ರನ್ನನಲ್ಲಾ !
ಯನ್ನ ನಲ್ಲಾ ಬಹನಲ್ಲಾ ರನ್ನನಲ್ಲಾ ॥ ಪ ॥
ಬಹನು ನಾಳೆ
ಬಹಳ ಲೀಲೆ
ಜಗದ ಮೇಲೆ.. .. .. .. ॥ ಪ ॥
ಹಾಳು ಕ್ಷಯಕೆ ! ಇಂದೆ ಮುಗಿವು
ನಾಳೆ ತುಂಬ ನಗುವ ಯುಗವು
ನಾಳೆಯೆಂಬ, ಆಸೆ ಬಹಳ
ನಾಳೆ ಬರಲು ಲೀಲೆ ಬಹಳ
ನಾಳೆ ಮುಗಿಯೆ ! ನಾಳೆ ತಿರುಗಿ !
ಬಾಳ್ವೆಗಿಲ್ಲಾ—ನಾಳೆ ಕೊನೆಯು ॥
ಅಪ್ಪನೇತಕೆ ಇಲ್ಲಿ
ಚಿಂತೆಯಾಗೈವ ।
ಚಿಂತೆಯೆಂಬುದು ಮುಪ್ಪು !
ಸಂತೋಷ ಬಾಳ್ವೆ ॥
ಸಂತೋಷ ಬಾಳ್ವೆ ॥ ಸಂತೋಷ ಬಾಳ್ವೆ ॥
ಬಹನಲ್ಲ, ಬಹನಲ್ಲ, ಬಹನಲ್ಲಾ ಯನ್ನನಲ್ಲಾ ॥

ಘ:—ಚೈತ್ರೆ—ನಿನ್ನಯ ತಂದೆ, ಅಳುವನೇಕೆಂದೂ ।
ಹೇಳಲೇ, ಕೇಳುವೆಯ 'ಅಳಿಯನಿಲ್ಲೆಂದೂ ॥
ಅಳಿಯನಿಲ್ಲದ ಮಾವಗಿಲ್ಲ ಸ್ವರ್ಗವು ಎಂದು !
ಹುಡುಕಿದೆನು ಅಳಿಯನನು ಗಲ್ಲಿಯೊಳು ನಿಂದು ॥

ಚೈ:—ಅಳಿಯ ಬರುವನು ತಾನೆ
ಹುಡುಕಲೇತಕೆ ನೀನೆ
ಚೈತ್ರೆ ಮುದ್ದಿಸಲೆಂದು । ಬಹನು ಇಂದು ॥
ಬಹನು ನಲ್ಲ.... ॥ ಪ ॥

ಫ:—ಅಳಿಯು ಬರುವನೆ ಏನೆ
ಮಗಳೆ ನೀನಿಕು – ಜಾಣೆ
ಹುಡುಕುತಲಿ ಬೇಸತ್ತೆ । ನೀನೆ ಇತ್ತೆ ॥

ಚೈ:—ಹಾಳು ವತ್ಸರವಿದುವೆ !
ಕಳದು ಹೋದಾಕ್ಷಣವೆ
ಬರುವೆನೆಂದೊರೆದಿಹನು, ಬಂದೆ ಇಹನು ॥

ಫ:—ಬಂದೆ ಇಹನೆ ?

ಚೈ:—ಆರು ಗಳಿಗೆಯು ಇನ್ನು ಬರಲು ಇಹನು !
ಸ್ವಾಗತಕೆ ಹಾತೊರೆದು ನಿಂತು ಇಹೆನು !
ಗಾಳಿಯೊಳ ಬೆರೆಯುತಲಿ ಹೊರಟೆ ಇಹನು !
ಇನ್ನಾರು ಗಳಿಗೆಯು ಕಳೆಯೆ ಬಂದೆ ಇಹನು !

ಫ:—ಆರು ಗಳಿಗೆಯು ಬೇಕೆ!
ಅಳಿಯು ಬರಲು
ಮುಂಚೆ ಬಾರನೆ ಅವನು
ಉಳಿಸೆ ದಿಗಿಲು
ಕರೆಯಲೇಂ ನಾನವನ
ಬಿಗಿದು ಕೊರಲು
ಬರಲಾರನೇಂ ಅವನು
ಚೈತ್ರ ಇರಲು
ಬರಲಾರನೇಂ ಈಗ ।
ಬರಲಾರನೀಗಳಿಗೆ ।
ಬರಲಾರನೀಕ್ಷಣಕೆ। ಬರಲಾರನೇ !

ಚೈ:—ಬರಲಾರನಂತೆ ಬರಲಾರನಂತೆ ಬರಲಾರನಂತೆ !
ಹಾಳು ಕ್ಷಯವತ್ಸರವು ಕಳೆಯಬೇಕಂತೆ,
ಪ್ರಭವ ವತ್ಸರ ಗಾಳಿ ಬೀಸಬೇಕಂತೆ,
ತಾನಾಗ ಓಡುತಲಿ ಬರುವನಂತೆ !

ನಾನವನ ಸ್ವಾಗತವ ಗೈವೆನಂತೆ ! ಗೈವೆನಂತೆ। ಗೈವೆನಂತೆ,
ಮರೆಯೊ ಚಿಂತೆ ! ॥

(ರಾಗ–ದುರ್ಗಾ)

ಫ:—ಬೇಡಮ್ಮ ನಿನ್ನನ್ನೆ
ಯಾರಿಗಾದರು ಕೊಡುವೆ ।
ಅಳಿಯರಾಯನ ಮುಖವ ಬೇಗ ಕಾಂಬೆ ॥
ಪುಣ್ಯವಿಲ್ಲವು ನಾಳೆ ।
ದಾನಮಾಡಿದರೆನಗೆ ॥

ಚೈ:—ದಾನವೇತಕೆ ಅಪ್ಪ ಚೈತ್ರೆಯನ್ನು . .
ತಾನೆ ಬಯಸುವರಿಲ್ಲ ಕನ್ಯೆಯನ್ನು ?

ಫ:—ಫಲುಗುಣನ ಮಗಳನ್ನು
ಯಾರು ಬಯಸಿದರೇನು !
ದಾನದಧಿಕಾರವಿದು ತಂದೆಗಿಹುದು !
ನಾಳೆ ಮುಂಜೆಯೆ ಅದನು ಮುಗಿಸಲಿಹುದು !

(ಅಲ್ಲಿಗೆ ನವಗುರುವಿನ ಪ್ರವೇಶ)

ನ:—ನೀಲವಾಗಿಹುದು ಆಕಾಶಾ
ಮುಗಿಲ ಕುಣಿತವು ಏಗುವ ತೋಷಾ ।
ಬರಿದು ಆಗುವುದು ಈ ದೇಶಾ
ಜಗದ ಜಡತೆಯ ಫಲವೆ ಕ್ಲೇಶಾ ॥

(ರಾಗ–ಶಂಕರಾ)

ಫ:—ಹೇ ! ಗುರುವೆ, ಹೇ ಗುರುವೆ, ಗುರುವೆ !
ಮನದೊಳಗೆ ಬಲುವಾಗಿ–ಮರುಗುತಿರುವೆ ! ಇರುವೆ !

ನ:—ಯಾವ ಕನ್ಯೆಯು ಇವಳು ? ಪೇಳು ಗೆಳೆಯ !

ಫ:—ಅಳಿಯನಿಲ್ಲದ ಯನ್ನ ಮಗಳು ದೊರೆಯೆ.

ನ:—ಗೈಯಲಿಲ್ಲವೆ, ದಾನ ಇನ್ನು ಅವಳ !

ಫ:—ದೊರೆಯಲಿಲ್ಲವು ಅಳಿಯ, ಯನ್ನ ಹವಳ. .

ನ:—ಬೇಗ ಗೈಯಲು ಬೇಕು ದಾನವಿದನು.
ಉಳಿದಿಹುದು ಬರಿ ನಾಲ್ಕು ಗಳಿಗೆಯಿನ್ನು,
ನಾಳೆದಿನ ಗೈಯುವೊಡೆ ಪುಣ್ಯವೆಲ್ಲಿ ?
ಇಂದಿನದೆ ಕೊನೆಯದಿನ, ನಾಳೆಯಿಲ್ಲ ॥
ಅಳಿಯನಿಲ್ಲದ ಮಾವ !
ತಂಗಿಯಿಲ್ಲದ ಭಾವ !
ದೇಹವಿಲ್ಲದ ಜೀವ-ವ್ಯರ್ಥವಲ್ಲ, ವ್ಯರ್ಥವಲ್ಲ. (ತೆರಳುವನು)

ಫ:—......ಅಳಿಯನಿಲ್ಲಾ, ಅಳಿಯನಿಲ್ಲಾ
ಎಲ್ಲ ಜನರೇ ಕೇಳಿರೆನ್ನ ।
ಮಗಳು ಇಹಳು ದಿವ್ಯ ಚಿನ್ನ ।
ಬೇಗ ಬಂದು ಕೇಳಿ ದಾನ ।
ನಾಳೆ ಇರಿಸೆ ಅಪಮಾನ ॥ (ತೆರಳುವನು)

(ರಾಗ-ಮಾಂಡ್)

ಚೈ:—ಬಹನಲ್ಲ. ಬಹನಲ್ಲಾ, ಬಹನಲ್ಲಾ
ಯನ್ನನಲ್ಲಾ ॥
ಎನ್ನನಲ್ಲಾ ಬಹನಲ್ಲಾ ದಿನವಿಲ್ಲಾ ।
ಯೆನ್ನನಲ್ಲಾ ಬಹನಲ್ಲಾ ದಿನವಿಲ್ಲಾ ॥ ಪ ॥ (ತೆರಳುವಳು)

(ಹೇಮಂತನು ಅಲ್ಲಿಗೆ ಬರುವನು)

(ರಾಗ-ಕರ್ಣಾಟಕಿ ಭೈರವಿ)

ಹೇ:—ಕೊಳ್ಳುವರಾರೋ । ಯನ್ನಾಸ್ತಿಯ ॥
ಕೇಳಿದೆ, ಹೇಳಿದೆ ಗೋಳಿಟ್ಟು ಕೂಗಿದೆ ।
ನಾಳೆಯೊಳಗೆ ಬೆಲೆಯು ಹಾರುವ ಆಸ್ತಿಯ !
ನಾಳೆಯ ಮುನ್ನವೆ ಆದಷ್ಟು ಹೊನ್ನನು ।
ಗಳಿಸುವೆನೆಂದರೆ ಕೊಳ್ಳುವವರಿಲ್ಲಾ,
ಮುಂದಿನ ವರುಷಕೆ ಬದುಕಲು ನಿಲುವಿಲ್ಲಾ ।
ಇಂದಿನ ವರುಷವು ಕಳೆಯುವುದಲ್ಲ ॥

(ಹೇಮಂತನ ಮಡದಿಯಾದ ನಿದ್ರಾದೇವಿಯು ಬರುವಳು)

(ರಾಗ–ಸಾರಂಗ)

ನಿದ್ರಾ:—ನಾಥನ ಕಾಣದೆ ನೊಂದಿಹೆನೋ ।
ಮಮ ನಾಥನ ಕಾಣದೆ ನೊಂದಿಹೆನೋ
ನಾಥಾ, ನಾಥಾ ॥
ಈ ಯುಗದ ಅಂತ್ಯವು
ಮುಂದಿನ ಆದಿಯು
ಮುಂದಿನ ಆದಿಯು
ಇಂದಿನ ಕೊನೆಯೂ
ಇಂದಿಲ್ಲದಿಹ ಸುಖ ನಾಳೆಗೆ ಒಲ್ಲದು
ಇಂದರಳಿದ ಹೂವು ನಾಳೆಯೆ ಸಾವುದು
ನಾಳೆಯ ಮುಂಜೆಯೆ ಎಲೆ ಪ್ರಿಯನಾಥಾ
ಬಾಳುವ. ಪುಣ್ಯದ ಬಾಳ್ವೆಯ ದಾತಾ ॥

(ನಾಥನನ್ನು ಕಂಡು)

ಕಾಣುವ. ನಾಥನು ನೊಂದಿಹನೋ
ಹೇ:—ನಾಥೆಯೆ, ಹೇಮಂತ ಬಂದಿಹನೋ
ತನ್ನ ಆಸ್ತಿಯ ಮಾರದೆ ನೊಂದಿಹನೋ.
ಈ ಯುಗದ ಅಂತ್ಯವು
ಮುಂದಿನ ಆದಿಯು
ಆಸ್ತಿಯ ಮಾರಲು
ಕಾಣೆನು ಹಾದಿಯು.
ಬೇಗನೆ ಆದಷ್ಟು ಕಾಂಚನ ಕೂಡುವ
ಎಂದೊಡೆ ಜನರಿಲ್ಲ ತೋಟವ ಕೊಳ್ಳುವ
ನಾಳೆಯು ದುರ್ದಿನ–ಬರಲಿಹ ಮೊದಲೆ
ಮಾರಲು ಬೇಕಲ್ಲ ಬೆಲೆ ತಗ್ಗುವುದೆಲೆ ॥
ನಿ:—ನಾಥಾ, ನಾಥಾ, ನಾ....ಥಾ ।

ಹೇ:—ನಾಥೆ, ನಾ....ಥೆ, ನಾ....ಥೆ ।

[ಅಲ್ಲಿಗೆ ನವಗುರುವು ಬರುವನು]

ನ:—ನೀಲವಾಗಿಹುದು ಆಕಾಶಾ
ಮುಗಿಲ ಕುಣಿತವು ಎಗುವ ತೋಷಾ
ಬರಿದು ಆಗುವುದು ಈ ದೇಶಾ
ಜಗದ ಜಡತೆಯು ಫಲವೆ ಕ್ಲೇಶಾ ॥

(ರಾಗ–ಬೇಹಾಗ್)

ಹೇ:—ಹೇ–ಗುರುವೆ, ಹೇ ಗುರುವೆ....ಹೇ....ಗುರುವೆ
ಹಿರಿ ಹಿರಿ ಗುರುವೆ ಹೆಗ್ಗುರುವೇ। ಗುರುಗುರು ಗುರುವೆ ಗುಗ್ಗುರುವೆ!
ನ:—ಮಾರಿದೆಯು ನೀನಿಂದು ನಿನ್ನ ಆಸ್ತಿ?
ಹೇ:—ದೊರಕಲಿಲ್ಲವು ನೋಡಿ ಒಳ್ಳೆ ದೋಸ್ತಿ ।
ನ:—ನಾಳೆ ಇರಿಸಲು ಅದಕೆ ಬೆಲೆಯೆ ನಾಸ್ತಿ ।
ಹೇ:—ಬಯಸುತಿರುವೆನು ನಾನು ಬೆಲೆಯು ಜಾಸ್ತಿ ॥
ನ:—ಎಷ್ಟಕಾದರು ಅದನು ಕೊಟ್ಟುಬಿಡೆಲೊ
ನಾಳೆಯೆಂಬುದು ಜಗದಿ ನಿಜವೆ ಇಲ್ಲೋ
ದಾನವಾದರು ದಾನ ಕೊಟ್ಟುಬಿಡೆಲೊ
ಪುಣ್ಯವನು ಅದಷ್ಟು ಕಟ್ಟಿಕೊಳೆಲೊ ॥
ನಾಳೆಯೆಂದರೆ ಸಾವು
ಇಂದಿನದು ಜೀವ.
ಇಂದು ದೊರಕಿದ ಪುಣ್ಯ
ಪರದ ಖರ್ಚಿನ ನಾಣ್ಯ ॥
ನೀಲವಾಗಿಹುದು ಆಕಾಶಾ
ಮುಗಿಲ ಕುಣಿತವು ಎಗುವ ತೋಷಾ
ಬರಿದು ಆಗುವುದು ಈ ದೇಶಾ
ಜಗದ ಜಡತೆಯು ಫಲವೆ ಕ್ಲೇಶಾ ॥ (ತೆರಳುವನು)
ಹೇ:—ಕೇಳೆ–ಮಡದೀರತ್ನ–ಗುರುವಿನುಪದೇಶಾ !

ನೀಲವಾಗಿಹುದು ಆಕಾಶಾ ।
ಮೇಲೆ ಸ್ವರ್ಗದಿ ಬಹಳ ತೋಷಾ ॥
ಭೂಮಿಯೊಳು ಎಲ್ಲ ಬರಿ ಮೋಸಾ ।
ಅದರಿಂದ ಫಲಿಸುವುದು ಕ್ಲೇಶಾ ॥
ಇದುವೆ ಅರ್ಥವು ಗುರುವಿನುಪದೇಶಾ ! ॥
ಯಾರಾದರೂ ಬನ್ನಿ, ಬನ್ನಿ ಜವದೀ
ಈಗಲೀ ಮಾರುವೆನು ನಿಂತ ನೆಲದಿ
ಬೆಲೆಯ ಆಸೆಯು ಕಾಕು
ಬರಿಯ ಪುಣ್ಯವು ಸಾಕು ।
ಕೊಂಬವರು ತ್ವರೆ ಬೇಕು !
ಕರೆ ಕರೆದು ಕೂಗುತಿಹೆ–ದಿಕ್ಕ ನಾಲ್ಕು ! (ತೆರಳುವನು)

ಅಂಕ ೩

(ಹಾದಿಯಲ್ಲಿ–ಬರುತ್ತಿರುವ–ವಿಶಾಖ–ವಿರಾಗ–ವಿನಾದರು)

(ರಾಗ–ಭೂಪ)

ಮೂ:—ಮೂರೇ ಮೂವರು–ವಿಶಾಖ–ವಿರಾಗ–ವಿನಾದಾ ॥
ವಿನಾ:—ಯುಗವಿದು ಈಗ ।
ಬದಲಿಸಲಿಹುದು ॥
ಮುಂದಿನ ಯುಗವು ।
ಬಲು ಕೆಡುಕಿನದು ॥
ಬಾಳಲು ಎಡೆಯೇ ।
ಇಲ್ಲದೆ ಇಹುದು ॥

(ನಲ್ಲನನ್ನು ಕೂಗುತ್ತ ಚೈತ್ರಾಂಗಿಯು ಬರುವಳು)

ಚೈ:—ಬಾರೆ, ಬಾರೆ, ಬಾ....ರೆ ॥
ಸ್ವಾಗತ ಬಯಸುವೆನು ಬಾ....ರೆ ॥
ಫಾಲ್ಗುಣವು ಕಳೆಯುತಿದೇ ।

ಈ ಯುಗವು ಮುಣುಗುತಿದೇ ।
ನವಯುಗವು ಕರೆಯುತಿದೇ ॥ ಬಾ....ರೆ॥ ಬಾ....ರೆ॥
ಬಾರೆ, ಬಾರೆ। ಬಾರೆನ್ನ ನಲ್ಲಾ ।
ವಸಂತ....ಬಾ ...ರೇ। ಬಾ....ರೇ ॥
ಕ್ಷಯವದು ಕ್ಷಯಿಸುತಿದೆ
ಹೃದಯದೊಳ್ ಆಸೆಯಿದೆ
ಬಾಳ್ವೆಯ ಬಯಕೆ ಇದೆ
ಬಾ....ರೆ। ಬಾ....ರೇ। ಬಾ....ರೇ ॥
ವಸಂತ.....ಬಾ....ರೇ। ಬಾ....ರೇ ।

ಮೂ:—ಯಾರಲೆ ನೀ ರಮಣಿ? ಕೇಳ್ವರು ಮೂವರು ವಿಶಾಖ ವಿರಾಗ ವಿನಾದ।

ವಿರಾ:—ವಿಶಾಖನಿವನು

ವಿನಾ:—ವಿನಾದ ನಾನೂ

ವಿಶಾ:—ವಿರಾಗನುಳಿದವನು ॥

ಚೈ:—ಬಾ..ರೆ ಬಾ..ರೆ ಬಾ..ರೇ

ವಿರಾ:—ಯುಗವಿದು ಕಳಚಲು ಕೂಗುವರಾರೆ?

ವಿನಾ:—ನಗುವನು ಹೊದ್ದಿದೆ ನಿನ್ನಯ ಮೋರೆ

ವಿಶಾ:—ಜವದೊಳು ಪೇಳಲೆ ನೀನಾರೆ?

ಚೈ:—ಬಾ..ರೆ ಬಾ..ರೆ ಬಾ..ರೇ

ವಿರಾ:—ಕರೆಯದೆ ಬಂದವರು ನಾವು ಇರಲು

ವಿನಾ:—ಈಗಲೆ ಈ ಯುಗವು ಮುಗಿಯುತಿರಲು

ವಿಶಾ:—ಕಿರುಚುವೆ ನೀನ್ಯಾಕೆ ಬಿಗಿದು ಕೊರಲು ?

ವಿರಾ:—ನಗುವಿದೇನು ?

ವಿನಾ:—ಆಸೆಯೇನು ?

ವಿಶಾ:—ಕರೆಯಿದೇನು !

ಚೈ:—ಬಾ....ರೆ, ಬಾ....ರೆ, ಬಾ....ರೇ॥
ಸ್ವಾಗತವ ಬಯಸುವಳು ತವ ನೀ....ರೆ॥

ವಿರಾ:—ಬಹ ಯುಗವು ಕೆಡುಯುಗವು ।
ಸಗುವ ಯುಗವೇ ಅಲ್ಲ ॥

ವಿನಾ:—ಇಹಯುಗವು ಸರಿಯುತಿದೆ ।
ಇನ್ನು ನೋಡಲು ಇಲ್ಲ ॥

ವಿಶಾ:—ಬಾರೆ! ಸೇರೆವ್ಮುಗಳ ।
ನಾಳೆಯೆಂಬುದೆ ಇಲ್ಲ
॥ ಬಾ....ರೆ ಬಾ....ರೆ ॥

ಮೂ:—ಮೂವರು ನಾವು ವಿಶಾಖ–ವಿರಾಗ–ವಿನಾದ ॥

ಚೈ:—ಮೂವರೆ ನೀವು !
ಸಾವಿನ ತಮ್ಮರು ! ವಿಶಾಖ–ವಿರಾಗ–ವಿನಾದ!
ಬಾಳ್ವೆಯು ಇಲ್ಲವು ನಿಮಗಿನ್ನು
ಬಾಳುವ ಜೀವರು ನಾವಿನ್ನು
ಬಾಳ್ವೆಯ ಮರೆವರು ಸಾಯುವರು
ಬಾಳ್ವೆಯ ನೆನೆವರು ಬದುಕುವರು ॥
ಬಾ....ರೆ, ಬಾ....ರೆ, ಬಾ....ರೇ ॥

(ತೆರೆಯೊಳಗಿಂದ)

(ರಾಗ–ವಸಂತ)

ವ:—ಬರುತಲೆ ಇಹೆನೆ ಚಿಂತ್ರಾಂಗಿ
ಸಜ್ಜೆಯ ಬಿಟ್ಟೆನು, ಶುಭಾಂಗಿ
ನಗುವನು ತೊಡುತಿಹೆ ಶೋಭಾಂಗಿ ! ॥

ಚೈ:—(ಆನಂದ ಉನ್ಮತ್ತಳಾಗಿ) ಬಾ....ಬಾ.... (ತೆರಳುವಳು)

(ಹೇಮಂತ ಫಲ್ಗುಣರು ಜತೆಯಲ್ಲಿ ಬರುವರು)

ಫ:—ವತ್ಸರ ಕಳಚಲು, ಗಳಿಗೆಯು ಉಳಿದಿದೆ ।
ಅಳಿಯನ ಪಡೆಯುವೆನಿನ್ನೆಂತು !
ಕನ್ಯಾದಾನದ ಫಲವೆಂತು !
ಪುಣ್ಯದ ಗೈಯ್ಮೆಗೆ ಎಡೆಯೆಂತು ? ॥

ಮೂ:—ಮೂವರು ನಾವು-ವಿಶಾಖ-ವಿನಾದ-ವಿರಾಗ ।

ವಿನಾ:—ವಿಶಾಖನಿವನು ।

ವಿರಾ:—ವಿರಾಗ ನಾನು ।

ವಿಶಾ:—ವಿನಾದನುಳಿದವನು ।

ಘ:—ಮೂವರು ಬೇಡ!
ಒಬ್ಬನೆ ಸಾಕು!
ಅಳಿಯನು ಬೇಕಿಹುದು! ॥

ವಿರಾ:—ಬಾಳ್ವೆಯು ಮುಂದೆ ।
ಇಲ್ಲದ ಮೇಲೆ ।
ಮದುವೆಯು ನಮಗೇಕೆ? ॥

ವಿನಾ:—ನಾಳೆಯ ಯುಗವ
ಬರುವಾ ಮುನ್ನವೆ
ಹೊಡೆಯುವೆ ನೀ ಕೇಕೆ!

ವಿಶಾ:—ಮಗಳನು ಕೊಲ್ಲದೆ
ಅಳಿಯನ ಹುಡುಕುವೆ
ಮರುಳನೆ ನೀ ಢೋಕೆ ॥

ಘ:—ಅಳಿಯನ ಹುಡುಕುತೆ, ಗಳಿಗೆಯು ಸರಿವುದು ।
ಕಾಣೆನು ದಾರಿಯನು ॥

ಹೇ:—ಆಸ್ತಿಯು ಮಾರಲು, ಆಯುಷ್ಯ ಸರಿಯಿತು
ಕಾಣೆನು ಗಾತ್ರಿಯನು,

ಘ:—ಹೇಮಂ....ತ ।

ಹೇ:—ಘಲುಗು....ಣ ।

ಇಬ್ಬರು:—ಗುರುಗಳ ಕರೆವ ।
ಗುರುಗಳ ಕರೆವ ।
ಎಲ್ಲವ ಒರೆವ !

[ಅಲ್ಲಿಗೆ ನವಗುರುವಿನ ಪ್ರವೇಶ]

ನ:—ನೀಲವಾಗಿಹುದು ಆಕಾಶ

ಮುಗಿಲ ಕುಣಿತವು ಮಿಂಗುವ ತೋಷಾ
ಬರಿದು ಆಗುವುದು ಈ ದೇಶಾ
ಜಗದ ಜಡತೆಯು ಫಲವೆ ಕ್ಲೇಶಾ ॥ ಪಲ್ಲ ॥

ಘ:—ಏ ಗುರುವೆ, ಹೇ ಗುರುವೆ, ಹೇ ಗುರುವೆ ॥
ಪಾದಕೆರಗುವೆ
ಪ್ರಾಣ ನೀಗುವೆ

ಹೇ:—ಏ ಗುರುವೆ, ಏ ಗುರುವೆ, ಹೇ ಗುರುವೇ ॥
ಪ್ರಾಣ ನೀಗುವೆ
ಪಾದಕೆರಗುವೆ

ನ:—ದಾನಗೈದೆಯಾ?

ಘ:—ಆಳಿಯುನಿಲ್ಲವು.
ಮಾನ ಕಾಯುಲು
ಬೇಕು ಗುರುಗಳು.

ನ:—ಮಾರಲಿಲ್ಲವೆ ?

ಹೇ:—ಕೊಂಬರಿಲ್ಲವು.
ಮಾನ ಕಾಯುಲು
ಬೇಕು ಗುರುಗಳು.

[**ರಾಗ–ಅಠಾಣ**]

ಘ:—ಯುುಗವು ಕಳಚುವ ಮುನ್ನ ।
ಮಗಳ ಕೊಳ್ಳುತೆ ನೀವು ।
ದಾನದಾ ಫಲವದನು । ಕೊಡಿಸಲಿಹುದು !
ಹೇ ಗುರುರಾಯ !

ಹೇ:—ಬೆಲೆಯುು ತಗ್ಗುವ ಮೊದಲು ।
ಆಸ್ತಿದಾನವ ಪಿಡಿದು ।
ಪುಣ್ಯದಾ ಫಲವದನು । ಬಡಿಸಲಿಹುದು ॥
ಹೇ ಗುರುರಾಯ ॥

ಘ:—ಅಗೊ-ಯುಗವ ಕಳಚುತಿದೆ !
ದುರ್ದಿಸವು ನೋಡುತಿದೆ !

ನ:—ಎನಗೆ ಬೇಡವಿದು ದಾನಾ ।
ನಾಳೆ ತಗ್ಗುವುದು ವರಮಾನಾ ॥
ನಿಮ್ಮ ಉಳಿಸಲು ಪೋಗೆ ನಾನು ।
ಪಾಪದಾ ಕೂಪದಲಿ ಮುಣುಗೇನು ! ॥

ಹೇ:—ಗುರುರಾಯ ಹೇ। ಗುರುರಾಯ ।
ಕಾಯದಿರೆ-ಬಿಡಲಿಹೆವು ಇಲ್ಲೆ ಕಾಯ !

ಘ:—ಗುರುರಾಯ ಹೇ । ಗುರುರಾಯ ।
ಪಾಪವನು ತೊಳೆಯುವರೆ ! ಇಲ್ಲುಪಾಯ ॥ ನಿಮಗಿಲ್ಲುಪಾಯ !

ಹೇ:—ಬಿಡೆಲೊ ಕಾಯ ।
ಇಲ್ಲೆ ರಾಯ ! ॥

ಘ:—ಬಿಡುವೆ ನಾನೂ ।
ಪ್ರಾಣವನ್ನು ॥

ನ:—ತುಸು ತಡೆಯಿರೆಲವೊ ಪ್ರಾಣ ।
ಸ್ನಾನ ಗೈಯುತೆ ಬರುವೆ ನಿಧಾನ ॥
ಪಿಡಿಯುವೆನು ಮಗಳನ್ನೆ ದಾನ ।
ನಿನ್ನಾಸ್ತಿ ಅದಕಾಯ್ತು ಕಾಂಚಾನಾ ॥ (ತೆರಳುವನು)

ಹೇ:—ಉಳಿದೆವ್ವೆ ನಾವು !

ಘ:—ಉಳಿದೆವ್ವೆ ನಾವು ! ಕರೆಯುವೆನು ಮಗಳನ್ನು ॥

(ಕ್ಷಯವತ್ಸರವು ಕಳಚಿ-ಪ್ರಭವದ ಯುಗಾದಿಯು ಬಂದಿತು.
ನಲಿವಿಂದ ಚೈತ್ರ ವಸಂತರು ಕೈಹಿಡಿದು ಬರುವರು.)

[ರಾಗ-ಪೀಲು]

ಚೈತ್ರ-ವಸಂತರು:—ಆನಂದ ರಾಜ್ಯವಿ··ನ್ನು ।
ಆಹ್ಲಾದ ರಾಜ್ಯವಿ..ನ್ನೂ ॥

ಆ............ನಂದ।
ಆ............ಹ್ಲಾದ।
ಅ. ಅ. ಅ...ಅ. ಆ. ಆ...ಆ. ಆ. ಆ.

ವ:—ನವ ಯು...ಗ।
ಒಂ...ದಿರೆ!
ಚೈತ್ರೀಯ ಚಂದಿರೆ!॥

ಚೈ:—ಗತ ಕಾ....ಲ
ಸಂದಿ....ರೆ
ವಸಂತ ಬಂಧುರೆ॥
ಆನಂದ ರಾಜ್ಯವಿನ್ನು

(ನವಗುರುವು ಬರುವನು)

(ರಾಗ-ಅಥಾಣ)

ನ:—ಎಲ್ಲಿ ಕರೆಯಿಸು ಮಗಳ ಮಾವ!
ನಿನ್ನುಳಿಸೆ ಪಿಡಿಯುವೆನು ದಾನ!
ಎಲ್ಲಿ ದಾನವ ಕೊಡುವ ಭೂಮಿ!
ನಿನ್ನುಳಿಸೆ ಆಗುವೆನು ಕಾಮಿ!

ವ:—ಮಗಳಿಹಳು ಎನ್ನೊಡನೆ ಸ್ವಾಮಿ!
ತಂದೆಯಿಂ ನನಗುಂಟು ಭೂಮಿ!

ನ:—ಹೇಮಂತ ಫಲುಗುಣ
ಎನು ಘಾಸಿ!
ಮಗನೇನು ಮಗಳೇನು!
ಏ ಭಿಕನಾಸಿ!

ನ:—ಹಳೆಯುಗದೊಳಗಿಷ್ಟು ಅನ್ಯಾಯವೆ!
ವ:—ಹೊಸಯುಗ ಬಂದಿದೆ, ಸಂತೋಷವೇ?
ಚೈ:—ಮೋರೆ ತಗ್ಗಿಪ ಜನಕೆ ಬಾಳ್ವೆಯಿಲ್ಲ.
ಮುಂದಿನಾ, ಇಂದಿನ ನವಜನಕೆ ಬಾಳ್ವೆ ಎಲ್ಲಾ

ಆಸೆ ಬಿಟ್ಟಿಹ ಜನಕೆ ನರಕವಿಹುದು
ಆಸೆ ಉಳಿಸಿದ ಜನರು ಬದುಕಬಹುದು !
ಬದುಕಬಹುದು
ಬದುಕಬಹುದು
ಬದುಕಬಹುದು

ಚೈತ್ರ-ವಸಂತರು:—ಆನಂದ ರಾಜ್ಯವಿನ್ನು
ಆಹ್ಲಾದ ರಾಜ್ಯವಿನ್ನು
ಆ.........ನಂದ
ಆ.........ಹ್ಲಾದ

[ಪ್ರವೇಶ—ಅವಧೂತ]

ರಾಗ-ಭೈರವಿ)

ಅವಧೂತ:—ನೀಲವಾಗಿರಲು ಆಕಾಶಾ ।
ಮುಗಿಲು ತೊಟ್ಟಿತು ಹಲವು ವೇಷಾ ॥
ಮನದಿ ತುಂಬಿರಲು ಆವೇಶಾ ।
ಆಳಿವೆಂಬುದಿಲ್ಲ ಉಲ್ಲಾಸ ॥

———

ನಾಲು

ಪಾತ್ರಗಳು

ಸುಬ್ಬಣ್ಣ	ದೊಡ್ಡಣ್ಣ.
ತಮ್ಮಯ್ಯ	ಅವನ ತಮ್ಮ.
ರಾಮಯ್ಯ	ಅವರ ಸೋದರ ಮಾವ.
ಕೆಂಚೇಗೌಡ	ನಂಬಿಕೆಯಾಳು.
ಗೌರಕ್ಕ	ದೂರದ ಸಂಬಂಧ.

(ಹಳ್ಳಿಯ ವಠಾರ. ನಾಲ್ಕು ಕಂಬದ ದೊಡ್ಡ ತೊಟ್ಟಿ. ಒಂದುಕಡೆ ಕೆಲವು ಹಾಸುಗೆಗಳು ಪೇರಿಸಿ ಇಡಲ್ಪಟ್ಟವೆ. ಅದರ ಹತ್ತಿರ ಸಣ್ಣ ಕೈಮೇಜು, ಗದ್ದಿಗೆಗಳಿವೆ. ಅದರ ಎದುರು ಪಕ್ಕದಲ್ಲಿ ಒಂದು ಮಂಚವಿದೆ. ವಠಾರದ ಮಧೆ ಒಂದು ಮೇಜು, ಕುರ್ಚಿ, ಎರಡು ಬೆಂಚುಗಳಿವೆ. ಆಚೆ ಈಚೆ ಎರಡು ಬಾಗಿಲುಗಳು. ಕಿಟಕಿಗಳು. ಗೋಡೆಯ ಮೇಲೆ ಕೆಲವು ಗಾಜಿನ ಚಿತ್ರಪಠಗಳು.)

(ಕೆಂಚ ಪ್ರವೇಶಿಸಿ)

ಕೆಂ:—ತಾಯೀ! ತಾಯೀ!!

(ಗೌರಕ್ಕ ಪ್ರವೇಶಿಸಿ)

ಗೌ:—ಏನೊ ಅದು.

ಕೆಂ:—ಬಿಸಿ ಬಿಸಿ ನೀರು ಕೊಡಿ ಅಮ್ಮಣ್ಣೀ. ದೊಡ್ಡ ಗೂಳಿಗೇನೋ ಬಂದದೆ ಉಪದ್ರ—ಒಟ್ಟೆ ಆವಾಡಿಗ್ನ ಘುಂಗಿ ಆಗೆ ಬುರ್ರಂತ ಊದಿ ಕೊಂಡೈತೆ.

ಗೌ:—ಅಯ್ಯೋ ಪಾಪವೇ! ಏನ್ಬಂತಪ್ಪಾ-ಮೂಕ ಜೀವಾ (ನೀರು ತಂದಿತ್ತು) ರಾತ್ರೀಯೆಲ್ಲಾ ತುಂಬಾ ಒದ್ಕೊಂಡ್ತೂಂತ ತಿಮ್ಮ ಹೇಳಿದ್ನಲ್ಲೋ ಕೆಂಚಣ್ಣ. ಇಷ್ಟೊತ್ತಿನ್ತನಕಾ ಸುಮ್ನೇನೇ ಇದ್ರಾ!

(ಬರ್ನಾರ್ಡ್ ಗಿಲ್ಬರ್ಟರ "The old Bull" ಎಂಬ ಏಕಾಂಕವನ್ನು ಅನುಸರಿಸಲಾಗಿದೆ)

ಕೆಂ:—ನಾವೇನು ಮಾಡಾನಾ ತಾಯಿ, ರಾತ್ರಿಯೆಲ್ಲಾ ಕುಂತು ಯಂತ್ರಾ ತಂತ್ರಾ ಮಾಡಿದ್ವು—ಏನು ಜಪ್ಪಯ್ಯಾ ಅನ್ಲಿಲ್ಲ—ದೊಡ್ಡ ಬುದ್ಯೋರು ಓದ್ದೇ ಬಂತಮ್ಮಣ್ಣೀ ಗೂಳೀಗೂನು – ಅಲ್ಲಾ ಮೂಕಜೀವಾ ಅದಕ್ಕೆ ಬುದ್ಯೋರ ಸಾವು ಅಂಗೆ ಬಡ್ಯೋದಾ—ಏನು ಚೋಜಿಗಾ ಅಮ್ಮಣ್ಣಿ—ಏನು ಚೋಜಿಗ!

ಗೌ:—ಹೌದಪ್ಪಾ—ರಾಯುರ್ರುನೂ ಹಾಗೇನೆ ಆ ದನಾ ಕಂಡ್ರೆ ಪ್ರಾಣ ಬಿಡ್ತಿದ್ರು. ಹೊಟ್ಟೇಲಿ ಹುಟ್ಟಿದ್ದ ಮಕ್ಕಳ್ನ ನೋಡ್ಕೊಳ್ಳೋ ಹಾಗೆ ನೋಡ್ಕೋತಿರ್ಲಿಲ್ವೇ? ಹಾಸನದ ಜಾತ್ರೇಲಿ ಆ ಗೂಳಿ ತಮ್ಮಕಡೇನೆ ನೋಡ್ತೂಂತ ಪರಮಾಯ್ಸಿ ಮಾಡಿ ಅದರ ಗೌಡ ಕೇಳ್ದಷ್ಟು ಕೊಟ್ಟು ತರ್ಲಿಲ್ವೇ?

ಕೆಂ:—ಅದೆಂತಾ ಕೊಡಾಟಾ ಬುಡ್ರವ್ವಾ. ಒಳ್ಳೇ ಜಾತಿ ಪಡಸು—ಇವತ್ತು ಸೀದುಬುಟ್ರೂ ಕೊಟ್ಟ ಅಣಕ್ಕೇನ್ಮೋಸವಿಲ್ಲ – ನೋಡ ಬೇಕೀಗ ಯಾರ ಪಾಲಾಗತ್ತೋ—ಅಬ್ರವ್ವಾ, ದೊಡ್ಡ ಬುದ್ಯೋರು ಉಯಿಲೇನಾದ್ರೂ ಮಾಡವ್ರೋ?

ಗೌ:—ಇಲ್ಲಾಂತ ಕಾಣತ್ತಪ್ಪ. ಯಾವುದೂ ರಾಮಯ್ನೋರು ಬಂದ್ಮೇಲೆ ಗೊತ್ತಾಗ್ಬೇಕು. ಪಾಪ! ರಾಯರ್ಗೆ ಉಯಿಲು ಮಾಡೋಕೆ ಪುರುಸೊತ್ತೆಲ್ಲಿತ್ತು ಹೇಳು? ಅವರು ಇಷ್ಟು ಬೇಗ ತೀರ್ಕೊಳ್ತಾರೇಂತ ಯಾರಿದ್ರು. ಒಳ್ಳೇ ಜಟ್ಟಿಯಿದ್ದಾಗಿದ್ದ ಮನುಷ್ಯರ್ನಾ...

ಕೆಂ:—ಔದು ತಾಯಿ—ಜವರಾಯ ಬರೋ ಕಾಲಕ್ಕೆ ಅಂಗೇ ಕಣ್ರವ್ವಾ—ಮನುಸನ್ಕಡೇ – ಅವನೆಂಡ್ರೂ – ಮಕ್ಳಕಡೇ ನೋಡ್ತಾನ್ಯಾ ಆ ಮಾರಾಯ. ನಮ್ಮ ಎಂಕಟ—ಎಂತಾ ಪಡಸು ಐಕಳ—ಎಂಗೆ ತೀರ್ಕೊಂಡ ನೋಡಿ—

ಗೌ:—ಹೌದಪ್ಪಾ ಹೌದು! ವೆಂಕಟನಂಥಾ ತಮ್ಮ ಹೋದ್ದು ನಿಂಗೆ ಬಲಗೈಯೇ ಮುರಿದ್ಹಾಗಾಯ್ತಲ್ವೇ?

ಕೆಂ:—ಯಾಕ್ಕೇಳ್ತೀರಿ ತಾಯಿ ಆ ಸಂಕಟ – ಆ ನಮ್ಮಪ್ಪ ಮುಕ್ಕಣ್ಣೇ ಬಲ್ಲ!—ಅದ್ನರೀ ತಾಯಿ ಉಯ್ಲಿಲ್ದೇಯಿದ್ರೆ ನಮ್ಮ ತಮ್ಮಯ್ನೋರ ಗತಿ ಏನಾತ್ತಾಯಿ—ಆ ಸುಬ್ಬಪ್ನೋ ಸುದ್ದಾ ರಾವಣಪ್ನೇ ಆಗವ್ನೆ!

ಗೌ:—ಪಾಪ ! ತಮ್ಮಯ್ಯನ್ನ ದೇವ್ರೇ ಕಾಪಾಡಬೇಕಪ್ಪಾ.

ಕೆಂ:—ಸುಬ್ಬಪ್ನೋರು ಆಗ್ಲೇ ದರ್ಬಾರು ಸುರುಮಾಡ್ಬಿಟ್ಟವ್ರವ್ವಾಂದ್ರೆ. ಆಸ್ತಿಯೆಲ್ಲಾ ತಮದ್ದೇಂತ ಊರೆಲ್ಲಾ ಸಾರ್ಕೊಂಡು ಬರ್ತವ್ರೆ.

ಗೌ:—ನಂಗ್ಯಾಕೋ ಇದೆಲ್ಲಾ ಚೆನ್ನಾಗ್ಕಾಣಲ್ಲಪ್ಪ. ನೋಡೋಣ ಏನಾಗತ್ತೋ. ದೇವರ ಮೇಲೆ ಭಾರ ಹಾಕಿ ಸುಮ್ಮನಿರೋದೇ ಉತ್ತಮ–ಬೆಳಗ್ನಿಂದ ತಮ್ಮಯ್ಯನ್ನೋಡಿದ್ಯೇನು ?

ಕೆಂ:—ತೋಟದ್ಕಡೀಕೇಸೋ ಬಂದಿದ್ರು.... ಆದರೆ ತುಟಿ ಪಿಟಕ್ಕನ್ನಿಲ್ಲ ವ್ವಾಂದ್ರೆ.

ಗೌ:—ಅಯ್ಯೋ ಪಾಪ ! ಅಪ್ಪಾವ್ರ ಸಾವ್ನ ಮನಸ್ಗೆ ತುಂಬಾ ಹಚ್ಕೊಂಡು ಬಿಟ್ಟಿದ್ದಾನೆ. ಯಾವಾಗ್ಲೂ ತಂದೆ ಅಂದ್ರೆ ಒದ್ದೋಗ್ತಿದ್ದೋನು ಅವ ನೊಬ್ಬನೇ, ಅದೇ ಆ ಧಾಂಡಿಗ ಇದ್ದಾನ್ನೋಡು—

ಕೆಂ:—ಸುಬ್ಬಪ್ನೋರೆನಾದ್ರೂ ದಣ್ಯೋರಾದ್ರೆ ನಾನೆಲ್ಲಾದ್ರೂ ಓಗ್ಬಿಡ್ತೀ ನ್ರವ್ವಾ–ಅವರ್ತಾವ ಗಾಸಾರಪಡೋಕೆ ನನ್ಕಯ್ಯಲಾಯಕ್ಕಿಲ್ಲ. (ಗೌರಕ್ಕನು ಸುಮ್ಮನಿರೆಂದು ತುಟಿಯ ಮೇಲೆ ಬೆರಳಿಟ್ಟು ಸೂಚಿಸುವಳು) ಕೇಳ್ಲಿ ಬಿಡ್ರವ್ವಾ, ನಂಗೇನು ಭಯ. ಯಾವಾಗ್ನೋಡ್ಲಿ ಪುಂಡರ ಜೊತೆ ಸೇರ್ಕೊಂಡು, ದಣ್ಯೋರು ಗೇದದ್ನೆಲ್ಲಾ ಆಳು ಮಾಡ್ಕೊಂಡು, ಅಪೀಮು ಗಾಂಜಾ ಕುಡ್ಕೊಂಡು ಮೂರೇಲೆ ಆಟ ಆಡ್ಕೊಂಡು ಇರೋದ್ಯಾವ ನ್ಯಾಯ. ನಂಗೆ ಅಂತಾ ಅಣ್ಣಾ ಇದ್ದಿದ್ರೆ ಮಚ್ಚು ತೊಗೊಂಡು ಬುಲ್ಡೇ ಆರ್ಸಿಬಿಡ್ತಿದ್ದೆ–ಮುಖ್ಯ ತಮ್ಮಯ್ಯ ಒಳ್ಳೇ ಮಾರಾಯ; ದವರ್ಾ ಕವರ್ಾ ನೋಡ್ತಾನೆ; ಆರಕೆೊ್ಕೇಗಲ್ಲ ಮೂರಕ್ಕೇರಾಕಿಲ್ಲ; ಅದಕ್ಕೇ ಸುಬ್ಬಪ್ಪ ಈಸೊಂದು ಕೊಬ್ಕೊಂಡಿ ರೋದು ಯಾವೂರ ನಾಯ್ಯಾನ್ರವ್ವಾ ಅವನ್ನಡತೆ !!

ಗೌ:—ನಿಜ ಕೆಂಚಣ್ಣಾ. ಏನ ಮಾಡೋದು ಹೇಳು— ಎಳೇ ಹುಡುಗರೇ. ಕಿವೀ ಹಿಂಡಿ ಬುದ್ಧಿ ಕಲ್ಸೋಣಾ ಅನ್ನೋದಿಕ್ಕೆ ? ಅವರೇ ಎಲ್ಲಾ ತಿಳ್ಕೋಬೇಕಪ್ಪಾ.

ಕೆಂ:—ಸುಬ್ಬಪ್ನೋರ ಕಿರುಕುಳ ನಂಗಂತೂ ಸಯಿಸೋಕಾಗಕಿಲ್ರವ್ವಾ ಏನು ! ಏಸುಗೆಯ್ದ್ರೂ ಆ ಮಾರಾಯಂಗೆ ಸಂತೋಸಾನೇ

ಆಗ್ಬೈಡ್ತಾ! ಒತ್ತು ಉಟ್ಟೋ ಒತ್ಗೆ ಗದ್ದೇಗ್ನೀರು ಬುಟ್ಟು, ದನಾ ಅಟ್ಕೊಂಡೋಗಿ ಮನೇ ಕೆಲ್ಸಾ ಮಾಡ್ಕೊಂಡು, ಬಟ್ಟೇಬರೆ ತೊಳ್ಕೊಟ್ಟು, ಸಂಜೇಹೊತ್ಗೆ ದನಾಕರಾ ನೋಡ್ಕೊಂಡು–ಇಷ್ಟು ಮಾಡಿದ್ರೂ ಪಾಠಾಯ ಅನ್ನೋದೂ ಚೀಮಾರಿ ಮಾಡೋದೂ ಬಿಡಾದೇ ಬ್ಯಾಡ್ತಾ. ಎಂದಿದ್ರೂ ಅವನ ಬಾಳು ಅಂಗೇ ಆಗೋಯ್ತು! ದೊಡ್ಡ ಬುದ್ಯೋರಿದ್ದಾಗ ಒಂದಿನ ಒಂದ್ಮಾತು ಕೇಳಿದ್ರಗಾ ಅಲ್ರವ್ವಾ ನಾನು.

ಗೌ:—ಹೋಗಲಿ ಬಿಡಪ್ಪಾ. ಏನ್ಮಾಡೋದು. ದೇವರು ಯಾವಯಾವ ಕಾಲಕ್ಕೆ ಹಣೇಲಿ ಏನೇನು ಬರೀತಾನೋ! ಸದ್ಯ ಈಗ ಏನೇನಾ ಗತ್ತೋ ನೋಡ್ಬೇಕು.

ಕೆಂ:—ನಾನೊಂಟೋದ್ರೆ ದೊಡ್ಡ ಗೂಳಿ, ದನಾಕರಾ ನೋಡ್ಕೊಳ್ಳೋರು ಯಾರು?– ಆಗ ತಿಳಿತೈತೆ ಕೆಂಚಯ್ಯನ ಕೈ!

ಗೌ:—ಎಳೇಮಗೂನಿಂದ ಸುಬ್ಬಣ್ಣನ ನೋಡ್ಕೊಂಡು ಬಂದೋಳು ನಾನು, ನಂಗೇ ಚಳ್ಳೇಹಣ್ಣು ತಿನ್ನಸ್ತಾನೆ–ಅವನಿಗೆ ತನ್ನ ಪಾಡು ಒಂದ್ಬಿಟ್ಟು ಬೇರೆ ಏನೂ ಬೇಡಾ ನೋಡು—

ಕೆಂ:—ಒಬ್ರೇ ಇಲ್ಲಿ ಬುಡ್ರವ್ಮಾ—ಒಂಟ್ಬುಡಕ ಸುಂಟರಗಾಳಿ ಅಂಗೆ, ಯಾರು ಬೇಡಾ ಅಂದೋರು—ಪಾಪ! ದೊಡ್ಡಬುದ್ಯೋರು ಪ್ರಾಣ ಬುಡೋವಾಗ ನನ್ನ ಕೈ ಇಡ್ಕೊಂಡು "ಕೆಂಚಾ, ಗೂಳೀ ಮರೀ-ಬೇಡ–ನಿನ್ನ ಪ್ರಾಣಕ್ಕಿಂತ ಎಚ್ಚಾಂತ ತಿಳ್ಕೊ" ಅಂತ ಏಳಿ ಓದ್ರೂ, ಅದಕ್ಕೇ ನಾನೀಸೊಂದು ಒದ್ಗೊಳ್ಳೋದು ತಾಯಿ!

ಗೌ:—ದೊಡ್ಡ ಯಜಮಾನ್ರು ನಿಂಗೆ ಹೇಳಿ ಹೋದ್ರೆ ಏನಾದ್ಹಾಗಾಯ್ತಪ್ಪ. ಸುಬ್ಬೂಗೆ ಹೇಳಿ ಹೋಗಬೇಕಾಗಿತ್ತು–ಒಂದು ಉಯಿಲು ಮಾಡಿ ಹೋಗಿದ್ರೆ ಎಲ್ಲಾ ಸರಿಹೋಗ್ತಿತ್ತು.

ಕೆಂ:—ನೀವು ಒಸಿ ಗ್ಯಾಪಣ ಕೊಟ್ಟಿದ್ರೆ.

ಗೌ:—ಕೊಟ್ಟೆ ಕೆಂಚಣ್ಣ—ಆದ್ರೆ ನಾಳೆ ನಾಳೆ ಅಂತಾಲೇ ಮುಂದಕ್ಕೆ ತಳ್ಳಿದ್ರು—ಅಗೋ ತಮ್ಮಯ್ಯ ಬರ್ತಾ ಇದ್ದಾನೆ.

(ತಮ್ಮಯ್ಯನು ಬರುವನು)

ತ:—ಗೂಳೀಗ್ಹೋಗಿದೆ ಕೆಂಚಾ?

ಕೆಂ:—ಬಿಸ್ನೀರು ಕಾಪಟಾ ಕೊಡ್ತಿದ್ದೀವಿ ಬುದ್ಧೀ—ಈಗೊಂದು ಕೊಡ್ತೀನಿ.

ತ:—ಸಂಜೆ ಹೊತ್ತಿಗೆ ಹುಷಾರಾಗದಿದ್ರೆ ಪಟ್ಣಕ್ಕೆ ಹೇಳಿ ಕಳ್ಸೋಣ. ಹಾಸಸದ ಪರಿಶೆ ಮುಂದಿಟ್ಕೊಂಡು—

ಕೆಂ:—ನಮ್ಮ ಗೂಳೀಗೇ ಬರ್ತಿತ್ತು ಬುದ್ಧಿ ಭೌಮಾನ—

ತ:—(ಕುಳಿತುಕೊಂಡು) ಈ ವರ್ಷವೇನೂ ಆ ಯೋಚನೆ ಸುಖವಿಲ್ಲಾ ಕೆಂಚಣ್ಣ. ಪಾಪ ಬಡಪ್ರಾಣಿ—ಹ್ಯಾಗೆ ನಡೆದೀತು ಅಷ್ಟು ದೂರ—ಮುಂದಿನ ಸಲ ನೋಡೋಣ.

ಕೆಂ:—ನಾನ್ಹೋಗಿ ಗೂಳೀನ ನೋಡ್ತೀನಿ ಬುದ್ಧಿ (ತಲೆಯಲ್ಲಾಡಿಸುತ್ತಾ) ನಮ್ಮ ಗೂಳೀಗೇ ಬರ್ತಿತ್ತು ಭೌಮಾನ, ನಂಗೊತ್ತು—ಊ (ಹೋಗುವನು)

ಗೌ:—(ತಮ್ಮಯ್ಯನ ಬಳಿಗೆ ಹೋಗಿ) ಉಯಿಲೇನಾದ್ರೂ ಸಿಕ್ತೇ ತಮ್ಮಯ್ಯಾ?

ತ:—ಮನೇನೆಲ್ಲಾ ಮೂರ್ನಾಲ್ಕು ಸಲ ಹುಡುಕ್ಬಿಟ್ಟೆವಮ್ಮಾ, ಏನೂ ಸಿಕ್ಲಿಲ್ಲ. ಅಪ್ಪಾ ಮರೆತುಬಿಟ್ಟ್ರಾಂತ ಕಾಣತ್ತೆ.

ಗೌ:—ಆದ್ರೆ ಹಾಗವರು ಮಾಡೋರಲ್ಲ. ಭಾಳ ಜೋಕೆ ಮಾರಾಯರು.

ತ:—ನಂಗೂ ಅದೇ ಆಶ್ಚರ್ಯ. ಸಾಯೋವಾಗ ನನ್ನಕಡೇ ನೋಡಿ "ಎಲ್ಲಾ ಸರಿಹೋಗತ್ತೆ ಮಗೂ, ಹೆದರಬೇಡ" ಅಂದಾಗ ನಂಗೆ ದಿಕ್ಕೇ ತೋರದಾಯ್ತು.

ಗೌ:—ಲಾಯರ್ ಶಾಮಣ್ಣೋರ್ನ ನೋಡಿದ್ಯೇನು? ಅಪ್ಪಾವ್ರು ಯಾವಾಗಲೂ ಅವರ ಹತ್ರ ಹೋಗ್ತಿದ್ರು.

ತ:—ಅವರಲ್ಲಿದ್ದಿದ್ರೆ ಈ ವೇಳೆಗೇ ಗೊತ್ತಾಗ್ತಿತ್ತು.

ಗೌ:—(ಮೆಲ್ಲನೆ) ಗೊತ್ತಾಗ್ತಿತ್ತೋ—ಅದು ಅಲ್ಲಲ್ಲೇ ಸರಿಯಾಗಿಬಿಡ್ತೋ?

(ತಮ್ಮಯ್ಯ "ಇಲ್ಲ"ವೆಂದು ತಲೆಯಲ್ಲಾಡಿಸುವನು)

ತ:—(ಮೆಲ್ಲನೆ) ಗೌರಕ್ಕ ಆಗೋ—ಸುಬ್ಬಣ್ಣ—ನೀನು ಕೊಂಚ ನಾಲಗೆ ಬಿಗಿ ಹಿಡ್ಕೋ—

[ಸುಬ್ಬಣ್ಣನು ಬರುವನು]

ಸು:—[ತಮ್ಮಯ್ಯನನ್ನುದ್ದೇಶಿಸಿ ತಿರಸ್ಕಾರದಿಂದ] ಏ! ಇಲ್ಲೇನು ಕಡೀತಿದ್ದೀಯೋ ದೊಣ್ಣೆ.

ತ:—(ಮೆಲ್ಲನೆ) ಅಪ್ಪನ ಜ್ಞಾಪಕ ಬರ್‍ತಿತ್ತು...ಯೋಚಸ್ತಿದ್ದೆ.

ಸು:—ಸುಮ್ಮನೆ ಯೋಚಿಸಿದ್ರೇನು ಫಲ? ಸತ್ತುಹೋದೋನು ಹಿಂದ-ಕ್ಬರ್‍ತಾನೇನು?

ತ:—ಅಂಥಾ ತಂದೆ ಈ ಲೋಕದಲ್ಲಿ ಸಿಕ್ಕೋದು ಕಷ್ಟಾ ಅಣ್ಣಯ್ಯಾ!

ಸು:—ಇರಬಹುದು–ಈಗವನ ಸುದ್ದೀ ಬೇಡ-ನೀನು ಒಳ್ಳೇ ತಮ್ಮನಾಗಿ ಇರೋಕೆ ಪ್ರಯತ್ನಪಡು–ನಿಂಗೇ ಮೈಗೊಳ್ಳೋದು.

ತ:—(ಎದ್ದು) ಯಾತಕ್ಕಿರಬೇಕು?

ಸು:—ಯಾತಕ್ಕೇ! ನಿಂಗೇ ಗೊತ್ತಾಗತ್ತೆ!! ನಾನ್ಯಾಕೆ ಹೇಳಲಿ!!!

ತ:—ನೀನು ಹೀಗೆ ಮಾತನಾಡೋದ್ರು ಅರ್ಥ ನಂಗೊತ್ತಾಗಲ್ಲಪ್ಪಾ. ನಂಗೇನೇರ್ಪಾಟು ಮಾಡಿದಿ? ಅಪ್ಪಾ ಸಾಯೋವಾಗ ಹಾಗೆ ಭರವಸೆ ಕೊಟ್ಟು ಹೋದ್ನಲ್ಲಾ.

ಸು:—(ನಕ್ಕು) ಬೇರೆ ಏರ್ಪಾಟು! ಕೇಳು ಈ ಏರ್ಪಾಟೆಲ್ಲಾ ಶುದ್ಧ ಸುಳ್ಳು-ಮಾತು. ಆಸ್ತಿ ವಿಭಾಗಮಾಡೋದು ನನ್ಕಯ್ಯಲ್ಲಿದೆ....ಅಪ್ಪಾ ಅದೇನೆ ನಿಂಗೆ ಹೇಳಿರ್‍ಬೇಕು.

ತ:—ನಂಗೆ ಬೇರೆ ಏರ್ಪಾಟು ಅಂತಾಲೇ ಹೇಳಿದ್ದಾನೆ.

ಸು:—ಹೌದು ಹೌದು! ಆ ಏರ್ಪಾಟು ಮಾಡೋದ್ನ ನಂಗೆ ಬಿಟ್ಟು ಹೋಗಿದ್ದಾನೆ.

ತ:—ಇರಲಿ ಮಾವ ಏನು ಹೇಳ್ತಾನ್ಯೋ ನೋಡೋಣ.

ಸು:—(ಧಿಃಕಾರದಿಂದ) ಮಾವ! ಎಲ್ಲಾದಕ್ಕೂ ತಲೇ ಇಡೋದಿಕ್ಕೆ ಅವನೊಬ್ಬ ಹುಟ್ಟಿಗೊಂಡ–ಈಗಲೇ ಬರ್‍ತಾನಂತೆ ನಮ್ಮ ಹತ್ರ ಏನೋ ಮಾತ್ನಾಡೋದಿಕ್ಕೆ-ಬರಲಿ, ಏನು ವದರ್‍ತಾನೋ ನೋಡೋಣ. ವದರೋದು ವದರ್‍ಕೊಂಡು ಹೋಗಲಿ.

ತ:—ನೀನು ಹೇಳೋದೊಂದೂ ನಂಗೆ ಅರ್ಥವೇ ಆಗಲ್ಲಣ್ಣ.

ಸು:—ಜಮೀನು ಹಂಚಿಕೊಡಬೇಕು–ಒಂದು ತೋಟದ ಯಜಮಾನಿಕೇಗೆ

ನಿನ್ನ ಬಿಡಬೇಕು ಅಂತಾ ಹೇಳ್ತಾನೇನೋ. ನೋಡು, ಈಗ **ನಾನು** ಮನೇ ಯಜಮಾನ. ನಂಗೆ ಹ್ಯಾಗೆ ಬೇಕೋ ಹಾಗೆ ಮಾಡ್ತೀನಿ. ಯಾರನ್ನೇಕೋ ಅವನ್ನಿಟ್ಕೊಳ್ತೀನಿ—ಬೇಡವಾದೋರ್ನ—ಕೆಂಚ, ತನ್ಯಾ ಮುಂತಾದೋರ್ನ ಓಡಿಸ್ತೀನಿ – ತಿಳೀತೋ ?

ತ:—ಕೆಂಚನ್ನೋಡಸ್ತಿಯೇನು ? – ಅಪ್ಪ ಹೇಳಿದ್ದ ಮರ್ತೆ–ತನ್ನಬಾಳೆಲ್ಲಾ ಪಾಪ ಅವನು ಈ ಮನೆಗೆ ತೇದಿದ್ದಾನೆ....ನಮ್ಮನ್ನ ಹೊತ್ತು ಆಡಿಸಿದ್ದಾನೆ....ಅಂಥಾವನ್ನ....

ಸು:—ನನಗಿವೆಲ್ಲಾ ಕರಟ ಪುರಾಣ ಬ್ಯಾಡವಯ್ಯಾ–ಅಪ್ಪಾ ತನಗೆ ಹ್ಯಾಗೆ ಬೇಕೋ ಹಾಗೆ ಮಾಡ್ತಿದ್ದ–ಅವನ ಮಗ ನಾನು–ನನಗೆ ಹ್ಯಾಗೆ ಬೇಕೋ ಹಾಗೆ ಮಾಡ್ತೀನಿ.

ತ:—ಅಪ್ಪ ಕೆಂಚಗ ಕೊಟ್ಟಿದ್ದ ಮಾತು—

ಸು:—ಅವನ ಹಿಂದೇನೇ ಹೋಯ್ತು. ನಾನು ಹೇಳಿದ ಹಾಗೆ ಕೇಳ್ಕೊಂಡು ಬಿದ್ದಿದ್ರೆ ಮುದಿಯ, ಹಾಳಾಗಿಹೋಗಲೀಂತ ಅವನ್ನೂ ಇಟ್ಕೊಳ್ತೀನೆ—

ತ:—ನೋಡು, ಅವನ ವಯಸ್ಸು ಅರವತ್ತಾಗ್ತಾ ಬಂತು. ಈಗ ಸ್ವಭಾವ ಬದಲಾಯಿಸ್ಬೇಕೂಂದ್ರೆ ಅವನಿಗ್ತಾನೆ ಹ್ಯಾಗೆ ಸಾಧ್ಯ. ಕೊಂಚ ದುಡುಕು–ಆದರೆ ಎಂಥಾ ಆಳು–ಎಂಥಾ ಮನಸ್ಸು !

ಸು:—ಅವೆಲ್ಲಾ ನಂಗೆ ಬೇಕಿಲ್ಲ. ಈ ಸೋಮಾರಿಗಳ್ಗೆಲ್ಲಾ ಹಿಟ್ಹಾಕ್ತಾ ಕೂತ್ಕೊಂಡ್ರೆ ಪ್ರಪಂಚದಲ್ಲಿ ಬಾಳೋದು ಹ್ಯಾಗೆ ?

ತ:—ನೀನು ಹಾಗೆ ಅವನ ಮೇಲೆ ಇಲ್ಲದ್ದೆಲ್ಲಾ ಹೇಳ್ಬೇಡಪ್ಪ ! ಕೆಂಚ ಒಬ್ಬ ಮಾಡೊ ಕೆಲ್ಸಾ ಇಪ್ಪತ್ತು ಜನ ತುಂಡಾಂಡಿಗರೂ ಮಾಡಲಾರರು.

ಸು:—ಸಾಕು ಮುಚ್ಕೋ ಬಾಯಿ–ಸಾಕು ವಕೀಲಿ. ನಿನ್ನ ಕೆಲಸ ನೀನು ನೋಡಿಕೋ–ಅವರಿವರ ಸುದ್ದಿ ನಿಂಗ್ಯಾಕೆ ?

(ಗೌರಕ್ಕ ಬರುವಳು. ಸಂಭಾಷಣೆ ನಿಲ್ಲುವುದು. ಆಕೆ ಅತ್ತಿತ್ತ ನೋಡಿ ಯಾರನ್ನು ಮೊದಲು ಮಾತನಾಡಿಸಬೇಕೆಂಬ ಸಂದೇಹದಿಂದ)

ಗೌ:—ಕಬ್ಬಿನ ಗಾಣ ತೆಗೆಸ್ಕೊಂಡು ಯಾರೋ ನಾರ್ಣಪ್ನೋರಂತಲ್ಲಾ – ಅವರ ಕಡೇವರು ಬಂದಿದ್ದಾರೆ––ಈಗಲೇ ನೋಡಬೇಕಂತೆ.

ಸು:—(ದರ್ಪದಿಂದ) ಹೋಗಿ ನೋಡು ತಮ್ಮಯ್ಯಾ.

(ತಮ್ಮಯ್ಯ ಕೋಪದಿಂದ ಹೊರಟು ಹೋಗುವನು)

ಈ ಮೂದೇವಿಯಿಂದ ಏನೂ ಪ್ರಯೋಜನವಿಲ್ಲ. ಆ ರೈತರ ಜೊತೆ ಸೇರ್ಕೊಂಡು ಹೊಲ ಊಳೋದಿಕ್ಕೇ ಸರಿ ಇದು.

ಗೌ:—(ಅಡ್ಡಗೋಡೆಯ ಮೇಲೆ ದೀಪವಿಟ್ಟ ಹಾಗೆ) ಓ!

ಸು:—ಎಲ್ಲಾ **ನಂದು** ಆದ್ಮ್ಯಾಗಾಯ್ತು—ಇನ್ಮ್ಯಾದರೂ ಹೇಗೆ ಮನಸ್ಸು ಬರುತ್ತೋ ಹಾಗಿರ್ಬ್ಯೋದು—ಮೊದಲ್ನೇ ಕೆಲ್ಸಾ ಮದ್ವೇ ಮಾಡಿ ಕೊಳ್ಳೋದು.

ಗೌ:—ತಂದೆ ತೀರಿ ಹೋದ ವರ್ಷ ಮಾಡ್ಕೋಬಾರದಪ್ಪಾ.

ಸು:—(ಅಣಕಿಸುತ್ತಾ) ಯಾಕಪ್ಪಾ!

ಗೌ:—ಯಾಕೇಂದ್ರೆ ಏನು ಹೇಳಲೋ ಸುಬ್ಬಣ್ಣ!

ಸು:—ನೀನು ತಮ್ಮಯ್ಯನ ಜೊತೆ ನಾಳೆ ರಾಮೋಹಳ್ಳಿಗೆ ದಯಮಾಡಿಸು—ನಿನ್ನ ಉಪದೇಶ ಬುದ್ಧಿವಾದ ನಂಗೆ ಬೇಕಿಲ್ಲ.

ಗೌ:—ಆಗಬಹುದಪ್ಪಾ ಆಗಬಹುದು—ಆದರೆ(ಸ್ವಲ್ಪ ಯೋಚಿಸಿಕೊಂಡು)ಸುಬ್ಬೂ! ಆ ಅರಳೀಮರ ಕಡಿಯೋದಕ್ಕೆ ಯಾತಕ್ಕೆ ಹೇಳಿದ್ದಿ. ಅದಿದ್ದದ್ದು ನಿಂಗೇನು ಭಾರವಾಗಿತ್ತಪ್ಪಾ. ಜನ್ಮಜನ್ಮಾಂತರದ ಮರ. ನಿಮ್ಮ ಅಪ್ಪಾವರು ಎಷ್ಟು ಭಕ್ತಿಯಿಂದ ಕಾಣ್ತಿದ್ರು—ಚೆನ್ನಾಗಿದೆಯಪ್ಪಾ ಚೆನ್ನಾಗಿದೆ.

ಸು:—ಬೆಂಕಿ ಹಾಕ್ತು ನಿನ್ನ ಮರಕ್ಕೆ. ಕಿಟಿಕಿ ಬಾಗಿಲೆಲ್ಲಾ ಮುಚ್ಚತ್ತೆ ಹಾಳ್ಮರ—ಸಾಲದ್ದಕ್ಕೆ ಪೊಟ್ರೆಲೆಲ್ಲಾ ಹಾವುಗಳು.

ಗೌ:—ಹಾವೇನು ಬಂತು ಹಾವು—ಇಟ್ಟಿಗೇ ಗೂಡಿಗೆ ಸೌದೆಯಿತ್ತಿಲ್ಲ ಅದಕ್ಕೋಸ್ಕರ ಕಡಿಸ್ದೇ ಅಂತ ಹೇಳು—

ಸು:—(ಕೆರಳಿ) ಹೂ ಕಡಿಸ್ದೇ—ಏನು ಮಾಡ್ತಿ—ನನ್ನ ತಲೆ ಕಡೀತೀಯೇನು? ಏನು—ಏನು ಹಾಗೆ ನೋಡ್ತೀ—ಆ....

(ಕೆಂಚನು ದುಗುಡದಿಂದ ಬರುವನು)

ಕೆಂ:—ಗೂಳಿ ಹಾಸ್ನಕ್ಕೆ ಓಗಾಕೆ ಆಯ್ಕಿಲ್ಲ ಸುಬ್ಬಪ್ಪ....ಇದೇನ್ಮಾತು....

ಸು:—ಕತ್ತೇ, ಧಣೀನ ಮಾತಾಡ್ಸೋವಾಗ 'ಬುದ್ದೀ' ಅನ್ನು.

ಕೆಂ:—ಊ--ಅಂಗೇನು— ! ಯಾಕನ್ಬೇಕು ಸುಬ್ಬಪ್ಪಾ....

ಸು:—ಯಾಕೇಂದ್ರೆ....ನಾನು ನಿನ್ನ ಧಣಿ ಅನ್ನೋದ್ನ ಮರೆತ್ಯೋ.

ಕೆಂ:—ಸರಿಬಿಯ್ತಪ್ಪ! ಇಂಗಾದ್ರೆ....

ಸು:—(ಕುಳಿತು, ತನ್ನ ತಂದೆಯನ್ನನುಕರಿಸುತ್ತಾ) ಸರಿ ! ಈಗೇನಾಗ್ಬೇಕು.

ಕೆಂ:—ಗೂಳಿ ಹಾಸನಕ್ಕೆ ಓಗ್ಲೇಬೇಕೂಂತ ಸುಬ್ಬಪ್ನೋರು ಏಳವ್ರೇಂತ ತಿಮ್ಮಾ ಅಂದ...ಅದ ಏಸಾರ್ಸೋಕೆ ಬಂದೆ ಕಣಪ್ಪಾ....ಅದಕ್ಯಾಕೆ ಈಸೊಂದು ಮುನಿಸು.

ಸು:—ಕತ್ತೇ– 'ಬುದ್ದಿ' ಅನ್ಬೇಕು ಮಾತಾಡ್ಸೋವಾಗ ಅಂತಾ ಹೇಳಲಿಲ್ಲಾ !

ಕೆಂ:—ಹಾಸಸಕ್ಕೆ ಓಗಾಕೆ ಅದರ ಕಯ್ಲಾಗಲ್ಲಪ್ಪಾ ಅಂದ್ರೆ....

ಸು:—ಅದನ್ನ ಹೇಳೋನು ನೀನಲ್ಲ–ನಾನು.

ಕೆಂ:—ತಮ್ಮಯ್ಯಪ್ನೋರ್ನೇ ಕೇಳ್ನೋಡಿ–ಎಂಗಿದ್ಯೋ ಬಡ ದನಾಂತ–ಓಗೋ ದಾರೀಲೆ ಅದು ಸತ್ತೋದ್ರೆ ಆ ಮ್ಯಾಗೆ....

ಸು:—(ರೇಗಿ) ನಿಮ್ಮಪ್ಪನ ಮನೆ ಗಂಟೇನು ಹೋಯ್ತು. ಅದು ಹೊರಡಲೇಬೇಕು ತಿಳೀತೋ–ಮೊನ್ನೆ ಡಿಪ್ಟಿ ಕಮಿಷನರ್ ಸಾಹೇಬ್ರು ನಮ್ದನಾ ಪರಶೇಗೆ ಬರತ್ತೋ ಇಲ್ವೋಂತ ಕೇಳಿದ್ರು, 'ಹೂ ಬರತ್ತೆ' ಅಂತ ನಾನು ಹೇಳಿದ್ದೀನಿ–ಈಗ ಕಳಸ್ದೇಯಿದ್ರೆ ಅವರೇನಂದುಕೊಳ್ತಾರೆ.

ಕೆಂ:—ಸಾರ್ಸರಿ! ನಿಮಗೆಲ್ಲೋ ಪಿತ್ಥಾ ಆಗೈತಪ್ಪ—ಅದಕ್ಕೇ ಇಂಗೆ ಇಚಿತ್ರ ಆಡ್ತಾ ಇವ್ರಿ.

ಸು:—ಸಡೆಯೋ ಆಚೆ. ತಲೇ ಹರಟೆ. ಹೇಳಿದ್ಕೆಲಸಾ ಮಾಡ್ಕೊಂಡು ಬಿದ್ದಿರ್ಬೋಗು, ನಿಂಗೆ ಯಾಕೆ ಹೆಚ್ಚು ಮಾತು.

ಕೆಂ:—ಇವೆಲ್ಲಾ ಕಂಡಿವ್ನಿ ಸುಬ್ಬಪ್ಪಾ. ನಿಂಗೇನ್ಗೊತ್ತು ದನಾಕರಾ ಏಸಾರ–ಸಾಕೀ ಸಲ್ಹಿಗೆಯ್ತಿವಲ್ಲಾ ಅಂತಾ ಸಮ್ಯಾಗೆ ದರ್ಪ–ಕೂತು ದಿಮಾಕು ಮಾಡೋ ನಿಮಗ್ಹ್ಯಾಂಗಪ್ಪಾ ಗೊತ್ತು ನಮ್ಮ ಕಷ್ಟ ಸುಖ.

ಸು:—ಮುದಿಗೊಡ್ಡೇ! ಮುಚ್ಚೋ ಬಾಯಿ!! ಸಿಗಿದು ಹಾಕ್ಬಿಡ್ತೀನಿ ನೋಡು—

ಕೆಂ:—ಆಕಪ್ಪಾ ನೋಡೋಣ....ಆಕ್ಬಿಡು. ಸಾಕಿ,ಸಲ್ವಿ ಎಲ್ಲಾ ಕಷ್ಟಾನೂ ಒಟ್ಟೀಗ್ಹಾಕ್ಕೊಂಡು ಇದ್ದದ್ದಕ್ಕೆ ಒಳ್ಳೇ ಮರ್ಯಾದೆ ಕೊಡ್ತೀ ಸುಬ್ಬಪ್ಪಾ! ಚಂದ್ವಲ್ಲ ಇದು–ಏನೂ ಚಂದ್ವಲ್ಲ ನೋಡು. ನಂಗಿಂತ ರಾಸಿನ ವಿಸಾರ ಬಲ್ಲ ಬೊಡ್ಡೀಮುಗ ಯಾವನವನೆ ತೋರು ಮತ್ತೆ ನೋಡಾನ. ಇನ್ನೂ ಪಾಪ–ಹಾಲು ಕುಡ್ಯೋ ಹೈಕ್ಳಾ–ನೀನು ಈಗ್ಲೇ ಈಸೊಂದು ಹಾರಾಡ್ತೀಯಲ್ಲಪ್ಪಾ....

ಸು:—(ಹಲ್ಲುಕಡಿಯುತ್ತಾ) ಏ! ಉಣ್ಣೋ ಬುತ್ತೀಗೆ ಮಣ್ಣುಬೀಳ್ದೇ ಇರ ಬೇಕಾದ್ರೆ ಬಾಯಿಮುಚ್ಕೊಂಡು....

(ಒಂದು ಮರ ಬಿದ್ದ ಶಬ್ದವಾಗುವುದು)

ಕೆಂ:—ಅದೇನು ಶಬ್ದ!

(ಸುಬ್ಬಣ್ಣ ಮಾರುತ್ತರ ಹೇಳುವುದಕ್ಕೆ ಮುಂಚೆಯೇ ಗೌರಕ್ಕ ದುಗುಡದಿಂದ ಪ್ರವೇಶಿಸಿ)

ಗೌ:—ಮರ....ಬಿತ್ತು....ಕಡಿದೇ ಹಾಕ್ಬಿಟ್ರು!!

ಸು:—ಹೂ....ಬಿತ್ತು....ಎಲ್ಲಾರ್ಗೂ ಕೇಳಸ್ತು....

ಗೌ:—ಬರೆದಿಟ್ಕೋ ಸುಬ್ಬೂ, ಇದ್ರಿಂದ ನಿಂಗೇನೂ ಒಳ್ಳೇದಾಗಲ್ಲ........ ತುಂಬಾ ಕೇಡು....ಅದೂ ಅರಳೀಮರ....ರಾಮರಾಮ!!

ಕೆಂ:—ಅರಳೀಮರನೇನ್ರವ್ವಾ!

ಸು:—ಹೂ! ಅರಳೀಮರ–**ಅರಳೀಮರ.** ಇಬ್ಬರೂ ಈಗಲೇ ತಿಳ್ಕೊಳ್ಳಿ. ಇಲ್ಲಿಗೆ ನಾನು ಯಜಮಾನ.ಕೆಲಸಾ ಮಾಡ್ಕೊಂಡು ಬಿದ್ದಿರೋರೆಲ್ಲಾ ನಂಗೆ ಬುದ್ಧಿ ಹೇಳಬೇಕಾದ್ದಿಲ್ಲ. ನಂಗೆ ಹ್ಯಾಗೆ ಮನಸ್ಸು ಬರತ್ತೊ ಹಾಗೆ ಮಾಡ್ತೀನಿ. ಬೇಕಾದೋರು ಇರಿ–ಸಾಕಾದೋರು ಹೊರಟು ಹೋಗಿ. ತಿಳೀತೋ?

ಗೌ:—(ಕುಪಿತಳಾಗಿ) ಸಾಕು ಸುಮ್ಮನಿರು ಸುಬ್ಬಣ್ಣಾ! ಎಂದಿದ್ರೂ ನಿನ್ನ ಯೋಗ್ತೆ ಇಷ್ಟೇ! ಹಾಳು ಹೀನ ಚಾಳಿ ಹೋಗೂಂದ್ರೆ ಹೋಗತ್ಯೇ?

ಸು:—ಸಾಕು–ಸಾಕು–ಸಾಕು ಅಂದೆ!!!

ಗೌ:—ಅಲ್ಲಿ ಕೂತ್ಕೊಂಡು ದೊಡ್ಡರಾಯ್ರು ಹಾಗೆ ಯಜಮಾನಿಕೆ ಮಾಡ್ತಾ ನಿವನು. ನವಿಲು ರೆಕ್ಕೆ ತೆಕ್ಕೊಂಡು ಕುಣೀತೂಂದ್ರೆ ಕೆಂಬೂತ ಪುಕ್ಕ ತೆಕ್ಕೊಂಡು ಕುಣೀತಂತೆ!

ಸು:—(ರೇಗಿ) ಸಾಕು. ನಡೀ ಮನೇಬಿಟ್ಟು – ನಡೀ ನೀನು ಗಯ್ಯಾಳಿ – ಹೊರಡು – ಊ – ಈಗಲೇ ಹೊರಡು.

ಗೌ:—ಏನು ! ನನ್ನ ಓಡಿಸ್ತೀಯಾ ? ಎಳೇ ಮಗೂನಿಂದ ನಿನ್ನ ನೋಡ್ಕೊಂಡ ದಕ್ಕೆ ಇದೇಯೋ ಲಾಭ – ಇರಲಿ. . . .

ಕೆಂ:—ಹಾಗನ್ಬಾರದು ಬುದ್ದಿ – ಇಂಗಾಂದ್ರೆ ಕಾರ್‍ಬಾರು ಮೂರ್‍ದಿವಸ ದಲ್ಲೇ ಮುಗ್ಯತ್ತೆ.

ಸು:—(ಗಟ್ಟಿಯಾಗಿ ಅರಚುತ್ತಾ) ಮುಚ್ಚು ಬಾಯಿ ! ತೊಲಗು – ನೀನೂ ತೊಲಗು – ಇಬ್ಬರೂ ತೊಲಗಿ.

(ರಾಮಯ್ಯ ತಮ್ಮಯ್ಯ, ಇಬ್ಬರೂ ಬರುಬರು.)

ರಾ:—ಏನಿದು ಗಲಾಟೆ ! ಸುಬ್ಬೂ ಏನಪ್ಪಾ ಇದೆಲ್ಲಾ ಹಾವಳಿ ?

ಗೌ:—ಏನೂ ಇಲ್ಲಾಂದ್ರೆ . . ಹೊಸ ರಾಯರು ನಮ್ಮನ್ನೆಲ್ಲಾ ಕೆಲಸದಿಂದ ತೆಗೆದುಹಾಕಿ ತಮ್ಮ ದರ್ಪ ತೋರಿಸ್ತಾ ಇದ್ದಾರೆ ಅಷ್ಟೇ.

ಸು:—ಹೌದು ತಲೇ ಹರಟೇ ಹರಟೋ, ಈ ಕೆಲಸಕ್ಕೆ ಬಾರದೇ ಇರೋ ರ್‍ನೆಲ್ಲಾ ಇಟ್ಕೊಂಡು ಏನು ಮಾಡೋದು ?

ರಾ:—(ಕುಳಿತುಕೊಂಡು) ಗಲಭೆಮಾಡಬೇಡಿ. ಹೇಳಿ ಏನಾಯಿತು. ಸಾವ ಕಾಶವಾಗಿ ಎಲ್ಲಾ ವಿಚಾರಮಾಡೋಣ.

ಸು:—ಈ ಮನೇಗೆ ನಾನು ಯಜಮಾನ. ನಾನು ಹೇಳಿದ ಹಾಗೆ ಎಲ್ಲಾರೂ ಕೇಳಬೇಕು. ಹಾಗಿಲ್ದೇ ಇದ್ರೇ....

ಗೌ:—ನನ್ನ ಮನೇ ಬಿಟ್ಟು ಹೋಗೂಂತಾನಲ್ಲಾ ಈ ಪೊರ, ಇವನ ಚೋಟುದ್ದ ದೇಹಾನ ಬೆಳೆಸಿ, ಈ ತೆಂಗಿನ ಮರದುದ್ದಾ ಮಾಡ್ದೋಳು ನಾನು—ನನ್ನ ....

ಕೆಂ:—ದುಡ್ಯೋದು ದುಡಿತಾ ಈ ಮಾರಾಯ್ನು ತಾವ ಇಂಗೆ ಛೀಮಾರಿ ಮಾಡ್ನಿಸ್ಕಳ್ಳೋಕೆ ಯಾರ ಕೈಲಿ—ಆಗ್ತೈತಿ ಬುದ್ದಿ. ನಾವೇನು ಮನುಸ್ರಲ್ಲಾ – ನಮ್ಗೇನು ಮಾನ ಮರ್‍ವಾದೆ ಇಲ್ವಾ !

ತ:—(ಗೌರಕ್ಕನಿಗೆ) ಸ್ವಲ್ಪ ಸುಮ್ನಿರು ಗೌರಕ್ಕಾ – ಎಲ್ಲಾ ಸರಿಹೋಗತ್ತೆ ! (ಕೆಂಚನಿಗೆ) ಕೆಂಚಣ್ಣಾ, ಸ್ವಲ್ಪ ಸುದಾರಿಸಿಕೋ—

ರಾ:—(ಗಂಟಲು ಕಿತ್ತುಹೋಗುವಷ್ಟು ಘಟ್ಟಿಯಾಗಿ) ಎಲ್ಲಾರೂ ಒಂದೇ ಉಸಿರ್ನಲ್ಲಿ ಅರಚಿಕೊಂಡ್ರೆ ಯಾರ್ನಾಂತ ಕೇಳಲ್ರಯ್ಯಾ, ಸಾವಕಾಶವಾಗಿ ಒಬ್ಬೊಬ್ಬರಾಗಿ ಹೇಳಿ.

ಸು:—ಈ ಮನೇಗೆ ನಾನು ಯಜಮಾನ. ನನಗೆ ಯಾರ ಅಡ್ಡಿ–ಆತಂಕಾನೂ ಬೇಕಿಲ್ಲ.

ಗೌ:—ಎಲ್ಲಾ ವ್ಯಾಜ್ಯ ಹೂಡ್ದೋನು ನೀನೇ! ತಮ್ಮಯ್ನನ್ನ, ಕೆಂಚನ್ನ, ನನ್ನ ಮನೇ ಬಿಟ್ಟು ಹೊರಡೀ ಅಂದೋನೂ ನೀನೇ !!.. ಆ ಅರಳೀ ಮರ ಕಡಿಸೂಂತ ನಿಂಗೆ ಯಾರು ಹೇಳಿದರು ?

ಸು:—ನೀನು ಯಾರೇ ಕೇಳೊಕೆ ಮುದಿಗೊಡ್ಡೇ. ನಾನು ಬೇಕಾದ ಹಾಗೆ ಮಾಡ್ತೀನಿ. ನಾನು ಯಜಮಾನ...

ರಾ:—ನೀನು ಯಜಮಾನಾಂತ ಹ್ಯಾಗೆ ಗೊತ್ತಪ್ಪಾ ?

ಗೌ–ಕೆಂ:—ಹೂ ! ಈಗ ಅಪ್ಪಣೆಯಾಗಲಿ.

ಸು:—ಹಿರೀಮಗ ನಾನು. ನಮ್ಮಪ್ಪ ಆಸ್ತೀನೆಲ್ಲಾ ನಂಗೇ ಬಿಟ್ಟು ಹೋಗಿದ್ದಾನೆ. ಉಯಿಲಿಲ್ಲ – ಗಿಯಿಲಿಲ್ಲ, ಇದ್ದಿದ್ರೆ ಬೇರೇ ಮಾತು.

ತ:—ನನ್ನ ಗತಿ ಏನು ಮಾವಾ ?

ರಾ:—ಅದನ್ನ ಪ್ರಸ್ತಾಪಮಾಡೋಣಾಂತಲೇ ಇಲ್ಲಿಗೆ ನಾನು ಬಂದದ್ದು.

ಸು:—(ದುರಹಂಕಾರದಿಂದ) ಬೇಕಾದ ಪ್ರಸ್ತಾಪಮಾಡ್ಕೋಬಹುದು. ತಮ್ಮಾಗೆ ಆಸ್ತೀ ಕೊಡೋದೂ ಬಿಡೋದೂ ನನ್ನಿಷ್ಟ.

ರಾ:—ಸುಬ್ಬೂ! ಹೀಗೆಲ್ಲಾ ಮಾಡಬಾರದಪ್ಪಾ, ಅಣ್ಣತಮ್ಮಂದಿರಾಗಿ ಹುಟ್ಟಿ ಈ ಹಾಳು ಆಸ್ತಿಮಾತಿಗೆ ಕೊರ್ಟು–ಕಛೇರಿ ಹತ್ತಿ, ಲಾಯರ ಬಾಯಿಗೆ ಇದ್ದದ್ನೆಲ್ಲಾ ಸುರಿದು ಬೀದಿ ಭಿಕಾರಿಯಾಗಬಾರದು ನೋಡು. ನಮ್ಮ ನಮ್ಮ ವ್ಯಾಜ್ಯ ನಮ್ಮ ನಮ್ಮಲ್ಲೇ ಹರಿಸಿಕೋಬೇಕು. ಒಳ್ಳೇಮಾತ್ನಲ್ಲಿ ದಾರಿಗೆ ಬಾ. ತಮ್ಮಾ ನಿಂಗೇನು ದೂರದೋನೇ—

ಸು:—ನನಗಿವೆಲ್ಲಾ ಪುರಾಣ ಬೇಕಿಲ್ಲ. ನೀವೆಲ್ಲಾ ಮಸಲತ್ತುಮಾಡಿರೋ ಹಾಗಾಯ್ತಂತ್ತೆ. ಹೊರಡಿ – ಎಲ್ಲಾರೂ ಹೊರಡಿ – ಹೂ!

ರಾ:—ಸಾಕು ಮುಚ್ಚು ಬಾಯಿ, ಯಾರ ಮೇಲೆ ಅಧಿಕಾರಮಾಡ್ತಿ.

ಇಲ್ನೋಡು ನಿನ್ನ ಬೇಳೇಕಾಳು ಹ್ಯಾಗೆ ಬೆಂದಿದೇಂತ (ಕಿಸೆಯಿಂದ ಒಂದು ಲಕೋಟೆಯನ್ನು ತೆಗೆದು) ನಿಮ್ಮ ತಂದೆಯ ಮರಣ ಶಾಸನ—

ಸು:—ಏನದು – ಮ – ರ – ಣ – ಶಾ – ಸ – ನ.

ರಾ:—ಹೌದು— ಮ – ರ – ಣ – ಶಾ – ಸ – ನ.

ತ:—(ಸಂತೋಷದಿಂದ) ನಂಗೊತ್ತಿತ್ತು. ನಮ್ಮಪ್ಪ ಅನ್ಯಾಯಮಾಡಲ್ಲಾಂತ.

(ಕೆಂಚ, ಗೌರಕ್ಕ ಇಬ್ಬರೂ ಒಬ್ಬರನ್ನೊಬ್ಬರು ನೋಡುವರು)

ಸು:—ಇದು ನಿನ್ನ ಹತ್ರ ಹ್ಯಾಗ್ಬಂತು ?

ರಾ:—ನಾನೇ ಇದರ ಎಕ್ಸಿಕ್ಯೂಟರ್ (Executor). ನಿಮ್ಮಪ್ಪ ಇದನ್ನ ಈ ಯುಗಾದೀಗೆ ಕೊಂಚ ದಿವಸ ಮುಂಚೆ ನನ್ನ ಕೈಲಿ ಕೊಟ್ಟ.... ಸೂತಕ, ಸಂಚಯನ ಕಳ್ಯೋತನಕಾ ಯಾರ ಹತ್ತಿರ್ಲೂ ಹೇಳಕೂಡ ದೂಂತ ಕಟ್ಟುಮಾಡಿದ್ದ.... (ಸುಬ್ಬಣ್ಣನ ಕಡೆ ನೋಡಿ) ಹೆಣದ ಮುಂದೆ ಕೂತ್ಕೊಂಡು ಎಲ್ಲಿ ಜಗಳ ಷುರುಮಾಡ್ಬಿಡ್ತೀರೋಂತ ಅವನ ಭಯ ಪಾಪ !

ಸು:— ಚಿಂತಿಲ್ಲ. ಅದರಲ್ಲಿರೋದು ನಂಗೆ ಮೊದಲೇ ಗೊತ್ತು ! ನಮ್ಮಪ್ಪ ಹೇಳಿಯೇ ಇದ್ದ. (ಗೌರಕ್ಕ, ಕೆಂಚ ಇವರಿಗೆ ಹೊರಗೆ ಹೊರಡಿರೆಂದು ಸೂಚಿಸುವನು. ಅವರು ಹೊರಡಲನುವಾಗುವರು.)

ರಾ:—ನೀವಿಬ್ರೂ ಹೋಗ್ಬೇಡಿ, ಇಲ್ಲೇ ಇರಿ.

ಸು:—ಕೆಲಸಾ ಮಾಡೋರೆಲ್ಲಾ ನಮ್ಮ ಗೃಹಕೃತ್ಯ ಕೇಳಬೇಕಾದ್ದಿಲ್ಲ, ನಾಸಿದಕ್ಕೊಪ್ಪೋದಿಲ್ಲ.

ರಾ:—ವಿಲ್‌ನಲ್ಲಿ ಅವರಿಗೆ ಸಂಬಂಧಪಟ್ಟ ವಿಚಾರವೂ ಇದೆ ಕಾಣಯ್ಯಾ !

ಸು:—ಚಿಂತೆಯಿಲ್ಲ; ಅವರು ಕೇಳಬೇಕಾದ್ದಿಲ್ಲ.

ರಾ:—ಈ ವಿಲ್ ಕೇಳೋದಿಕ್ಕೆ ನಿಂಗೆಷ್ಟು ಹಕ್ಕಿದೆಯೋ ಅವರಿಗೂ ಅಷ್ಟೇ ಇದೆ ಸುಬ್ಬೂ ಸುಮ್ನೆ ಗಲಾಟೆಮಾಡಬೇಡ.

ಸು:—ಊ. ಆಗಲಿ ಓದು.

ರಾ:—(ಕನ್ನಡಕವನ್ನು ಹಾಕಿಕೊಂಡು) ಇಷ್ಟು ಅವಸರಾ ಪಡಬಾರದು ಸುಬ್ಬಣ್ಣಾ !.... ಊ, ಹೋಗಲಿ. . ಎಷ್ಟಾದರೂ ಹುಡುಗ........ (ಲಕೋಟೆಯಿಂದ ಉಯಿಲನ್ನು ಎಳೆದು) "ಸೋಮನಹಳ್ಳಿ ಜೋಡಿದಾರನಾದ

ವೆಂಕಟಕೃಷ್ಣಯ್ಯ ಎಂಬ ಹೆಸರಿನ ನನ್ನ ಮರಣಶಾಸನ ಅಥವಾ ವಿಲ್ಲು. ನನ್ನ ಸಮಸ್ತವಾದ ಆಸ್ತಿಯನ್ನೂ ಈ ಕೆಳಗೆ ಕಾಣಿಸಿರುವಂತೆ ವಿಭಾಗಿಸಲು ನನ್ನ ಹಿರಿಯ ಮಗನಾದ ಸುಬ್ಬಣ್ಣನಿಗೆ ಬಿಟ್ಟಿದ್ದೇನೆ.

೧) ಮಾರನಹಳ್ಳಿಯಲ್ಲಿ ೩೮೬ ಎಕರಗಳಷ್ಟು ಜಮೀನು, ದನಕರುಗಳು, ಒಂದು ಮನೆ.

೨) ರಾಮಸಾಗರದಲ್ಲಿ ೨೯೩ ಎಕರೆಗಳಷ್ಟು ಜಮೀನು, ದನಕರುಗಳು, ಒಂದು ಮನೆ.

೩) ಕೋ ಆಪರೇಟಿವ್ ಸೊಸೈಟಿಯಲ್ಲಿ ೧೩೦೦ ರೂಪಾಯಿ ಡಿಪಾಜಿಟ್.

೪) ದನದ ಜಾತ್ರೆಗಳಲ್ಲಿ ಬಹುಮಾನ ಪಡೆದಿರುವ ಭಾರಿಗೂಳಿ. ನನ್ನ ಮಕ್ಕಳಲ್ಲಿ ಯಾರು ಮಾರನಹಳ್ಳಿಯನ್ನು ತೆಗೆದುಕೊಳ್ಳುತ್ತಾರೆಯೋ ಅವರು ನನ್ನ ವಿಶ್ವಾಸಪಾತ್ರನಾದ ರೈತ ಕೆಂಚನನ್ನು ಕೆಲಸಕ್ಕೆ ಇಟ್ಟುಕೊಂಡು ಅವನ ಹೊಟ್ಟೆಬಟ್ಟೆಯನ್ನು ನೋಡಿಕೊಳ್ಳಬೇಕು. ಅವನು ಕೆಲಸ ಬಿಡುತ್ತೇನೆಂದಾಗ ಅವನಿಗೆ ೨೫೦ ರೂಪಾಯಿಗಳನ್ನು ಕೊಡಬೇಕು. ಹಾಗೆಯೇ ನಮ್ಮ ಮನೆಯುಪರಂತಿರುವ ಗೌರಮ್ಮನವರನ್ನು ರಾಮಸಾಗರ ತೆಗೆದುಕೊಳ್ಳುವವನು ಕಾಪಾಡಿಕೊಂಡು ಬರಬೇಕು. ಅವರು ಕೆಲಸ ಬಿಡುತ್ತೇನೆಂದಾಗಲೂ ೨೫೦ ರೂಪಾಯಿಗಳನ್ನು ಕೊಡಬೇಕು. (ತಮ್ಮಯ್ಯನು ಗೌರಕ್ಕನ ಕಡೆ ನೋಡುವನು) ಈ ಎಲ್ಲಾ ಆಸ್ತಿಯೂ ನನ್ನ ಹಿರಿಯ ಮಗನಾದ ಸುಬ್ಬಣ್ಣನಿಂದ ಎರಡು ವಿಭಾಗವಾಗಿ ಹಂಚಲ್ಪಟ್ಟು, ನನ್ನ ಎರಡನೆಯ ಮಗನಾದ ತಮ್ಮಯ್ಯನಿಂದ ಮೊದಲು ಆಯ್ದುಕೊಳ್ಳಲ್ಪಡಬೇಕು. ತಮ್ಮಯ್ಯನು ವಿಭಾಗಿಸಿದರೆ ಸುಬ್ಬಣ್ಣನು ಮೊದಲು ತನಗೆ ಬೇಕಾದ್ದನ್ನು ತೆಗೆದುಕೊಳ್ಳಬೇಕು........''

ಸು:—ಇದನ್ನು ನಾನು ನಂಬಲ್ಲ. ಒಂದಕ್ಷರಾನೂ ನಂಬಲ್ಲ. ಅಪ್ಪ ನನಗೆ ಹೇಳಿದ್ದೇ ಬೇರೆ. ನನಗೆ ಬೇಕಾದ ಹಾಗೆ ಆಸ್ತಿ ವಿಭಾಗಮಾಡ್ತೀನಿ.

ರಾ:—ಈಗಲೂ ನೀನೇ ವಿಭಾಗಮಾಡೋಣಪ್ಪಾ.. ವಿಲ್ಲೂ ಹಾಗೇ ಹೇಳಲ್ವೇ - ನೋಡು (ತೋರಿಸುವನು)

ಸು:—ಓ, ಹಾಗಾದರೆ ಸರಿ!

ರಾ:—ಮುಗಿಸಿ ಬಿಡ್ತೀನಿ, ಇನ್ನು ಕೊಂಚವೇ ಇದೆ.

"ಇದಕ್ಕೆ ನನ್ನ ಇಬ್ಬರು ಮಕ್ಕಳು ರುಜುಹಾಕಿ ನನ್ನ ಹೆಂಡತಿಯ ಅಣ್ಣಂದಿರಾದ ರಾಮಯ್ಯನವರ ಹತ್ತಿರ ಕೊಟ್ಟುಬಿಡಬೇಕು. ರಾಮಯ್ಯನವರು ಈ ವಿಲ್ಲಿನ ಎಕ್ಸಿಕ್ಯೂಟರಾಗಿ (Executor) ನಿಲ್ಲಬೇಕು. ಇದಕ್ಕಾಗಿ ಅವರಿಗೆ ನೂರು ರೂಪಾಯಿಗಳನ್ನೂ ದೇವರ ಮುಂದಿರುವ ಗಂಧದ ಮರದ ಪೆಟ್ಟಿಗೆಯನ್ನೂ ಕೊಡಲಿಚ್ಛಿಸುತ್ತೇನೆ.

ಬೆಂಗಳೂರಿನ ಲಾಯರ್ ವೆಂಕಟೇಶಯ್ಯನವರೆದುರಿಗೂ ಲಾಯರ್ ಶ್ರೀಕಂಠರಾಯರೆದುರಿಗೂ ನನ್ನ ಸ್ವಹಸ್ತದಲ್ಲಿ ಬರೆಯಲ್ಪಟ್ಟು ರುಜುಹಾಕಲ್ಪಟ್ಟಿದೆ.

—ವೆಂಕಟಕೃಷ್ಣಯ್ಯ"

ಸು:—ಯಾವ ಲಾಯರೂ ಆ ಉಯಿಲು ಬರೆದಿಲ್ಲ..ಆದ್ರಿಂದ ಅದನ್ನು ಯಾವ ಕೋರ್ಟೂ ಒಪ್ಪಲ್ಲ. ನಾನು ಖಂಡಿತಾ ನಂಬಲ್ಲ, ಹಿರೀಮಗ ನಾನು, ತಂದೆ ಹೇಳಿದ್ದು ನಂಗೆ ಚೆನ್ನಾಗಿ ಗೊತ್ತಿದೆ.... ಇದು ಶುದ್ಧ ಮೋಸ....

ರಾ:—ನಿಮ್ಮ ತಂದೆಯವರೇ ಆ ಉಯಿಲಿನ ನಕಲು ಮಾಡಿದ್ರು ಸುಬ್ಬು. ಆಮೇಲೆ ಲಾಯರ್ ವೆಂಕಟೇಶಯ್ಯನೋರು ಅದನ್ನು ನೋಡಿ ಕೋರ್ಟುಭಾಷೇಲಿ ಹಾಕಬೇಕೂಂದ್ರು.....ಅದಕ್ಕೆ ನಿಮ್ಮಪ್ಪ ಒಪ್ಲಿಲ್ಲ. ತಮ್ಮಕ್ಷರದಲ್ಲಿಯೇ ಇದ್ರೆ ವ್ಯಾಜ್ಯ ಹುಟ್ಟೋದಿಲ್ಲಾಂತ ಹೀಗೆ ಮಾಡಿದ್ದಾರೆ. ಉಯಿಲಿನಲ್ಲಿ ಏನೂ ಮೋಸ ನಡೆದಿಲ್ಲ. ಯಾವ ಭೂಪತಿ ಬಂದ್ರೂ ಅದೇನೂ ಜಗ್ಗೋಹಾಗಿಲ್ಲ.

ಕೆಂ:—ನೀವ್ಹೋಗೋಳಿ ಬುದ್ದೀ ತಮ್ಮಯ್ನೋರೆ, ಗೂಳೀನ.

ಸು:—(ರೇಗಿ ಎದ್ದು) ತೊಲಗಾಚೆ ಶನಿ. ಹೊಡೆದೋಡಿಸ್ತೀನಿ ನೋಡು.

ರಾ:—ಹಾಗಾದ್ರೆ ಮಾರನಹಳ್ಳಿ ನೀನು ತೊಗೋತೀಯೇನು?

ಸು:—ಹಾಗಂದ್ರೆ..

ರಾ:—ಮಾರಸಹಳ್ಳಿ ಜೊತೇಲಿ ಕೆಂಚ ಬರ್‍ತಾನೆ..ಆವಾಗ ಅವನ್ನ ನೀನು ಹೊಡೆದೋಡಿಸಬಹುದು..ಆದರೆ ೨೫೦ ರೂಪಾಯಿ ಮಾತ್ರ ಜೊತೆ..

ಗೌ:—ಈಗ್ತಿಳೀತೋ ಅರಳೀಮರ ಕಡ್ಸೋದಿಕ್ಕೆ ನಿಂಗೆ ಅಧಿಕಾರ ಇರ್‍ಲಿಲ್ಲಾ ಅನ್ನೋದು.

ಸು:—ನಿಸ್ವಾರ್ಯರೇ ಮಾತಾಡೂಂದೋರು ಪಿಶಾಚಿ.

ಗೌ:—ಸದ್ಯ ನಾನು ರಾಮಸಾಗರದ ಜೊತೆ ತಾನೆ. ನೀನೇನೂ ರಾಮ ಸಾಗರ ತೊಗೋಳೋ ಹಾಗಿಲ್ಲವಲ್ಲಾ.

ಸು:—ನಾನೇ ಯಜಮಾನ. ನಿನ್ನೂ ಹೊಡೆದೋಡಸ್ತೀನಿ....

ರಾ:—ಹಾಗಾದರೆ ರಾಮಸಾಗರ ತೊಗೋತೀಯೇನು? (ಸುಬ್ಬಣ್ಣ ಬೆಪ್ಪನಂತೆ ನೋಡುವನು) ರಾಮಸಾಗರ ತೊಗೊಂಡ ಹೊರ್‍ತು ಗೌರಕ್ಕನ್ನ ಹೊಡೆದೋಡಿಸೋದಿಕ್ಕಾಗೋದಿಲ್ಲ.

ಗೌ:—ಹಾಗಾದ್ರಾಗ ೨೫೦ ರೂಪಾಯಿ ದಂಡ ತೆರಬೇಕಲ್ಲ.

(ಸುಬ್ಬಣ್ಣ ಹುಚ್ಚು ಹಿಡಿದಂತಾಡುವನು. ಎಲ್ಲರೂ ನಗುವರು)

ಸು:—ಬೆಂಕೀ ಹಾಕ್ತು ಈ ವ್ಯವಸ್ಥೆಗೆ..ಇದು ಶುದ್ಧ ಅವ್ಯವಸ್ಥೆಯಾಗಿದೆ. ನನ್ನ ಕೈಲಿ ಆಗೋದಿಲ್ಲ. ಹೊರಡಿ..ಎಲ್ಲಾರೂ ಹೊರಡಿ.

ರಾ:—(ಕುಪಿತನಾಗಿ) ಸಾಕು ಸುಬ್ಬಣ್ಣ, ಸಾಕು ಈ ಹಾಳು ರೇಗಾಟ ಇನ್ನು ಸಹಿಸೋಕೆ ನನ್ನಿಂದಾಗೋದಿಲ್ಲ.

ಸು:—ಆಗ್ದೇಯಿದ್ರೆ ಹೊರಡು. ಇಲ್ಲಿನ ಯಜಮಾನಿಕೆ ನನ್ನದು. ನಾನು ಯಜಮಾನ ತಿಳೀತೋ–ನೀನಲ್ಲ....

ರಾ:— ಊಹೂ! ಸದ್ಯಕ್ಕೆ ನೀನಲ್ಲ ನಾನು.

ಸು:—ನಿಮ್ಮಾತ್ತ–ನಾನು ಅಂದರೆ **ನಾನು**.

ರಾ:—ಹಾಗೋ. ಕೊಂಚ ವಿಲ್ ನೋಡಿ....ಯಾರು....ಕಣ್ಬಿಟ್ಟು ನೋಡು ಇದರ ಎಕ್ಸಿಕ್ಯೂಟರ್ (Executor) ವಿಲ್‌ನಲ್ಲಿ ಹೇಳಿರೋದ್ನ ನಿರ್ದಾಕ್ಷಿಣ್ಯವಾಗಿ ನಡೆಸ್ಸೋದು ನನ್ನ ಕೆಲಸ. ಮುಂದಿನ ಕೆಲಸಾ ನೋಡೋಣ..ನಿಂಗೆ ಹ್ಯಾಗ್ಬೇಕೋ ಹಾಗೆ ವಿಭಾಗಿಸಿ ಎರಡು ಪಟ್ಟಿ ತಯಾರ್ಮಾಡು. ಹೊತ್ತು ಕಳೀತಾ ನಿಂತ್ರೇನೂ ಪ್ರಯೋಜನವಿಲ್ಲ.

(ತಮ್ಮಯ್ಯನು ಬರೆಯುವ ಕಾಗದ, ಮಸಿ, ಲೇಖನಿಗಳನ್ನು ತಂದು ಮುಂದೆ ಇಡುವನು)

ಸು:—ಆಗಲಿ....ಹಾಗಾದರೆ....ನಡೀಲಿ ನಿಮ್ಮ ಮಸಲತ್ತು.

ಗೌ:—ಇನ್ನು ನಾವು ಹೋಗಬಹುದೇ ರಾಮಯ್ಯನವರೇ?

ರಾ:—ಹೋಗಬಹುದಮ್ಮ.

(ತಮ್ಮಯ್ಯನು ಒಳಗೆ ಹೋಗಿ ಗಂಧದ ಮರದ ಸಣ್ಣ ಪೆಟ್ಟಿಗೆಯನ್ನು ತಂದು ರಾಮಯ್ಯನಿಗೆ ಕೊಡುವನು. ಅವನದನ್ನು ಕೃತಜ್ಞತೆಯಿಂದ ನೋಡಿ ಕಿಸೆಗೆ ಹಾಕಿಕೊಳ್ಳುವನು)

ಸು:—(ಕೆಂಚನೂ ಹೋಗುತ್ತಿರುವುದನ್ನು ಕಂಡು) ಲೇ, ಹೋಗಬೇಡ ತಡ್ಕ್ಯೋ. ನಿನ್ನ ಹತ್ತಿರ ಒಂದೆರಡು ವಿಷಯ ತಿಳ್ಕೋಬೇಕಾದ್ದಿದೆ.

(ಕೆಂಚ ಲಕ್ಷ್ಯಮಾಡದೆ ಗೂಳಿಯ ಕಾಹಿಲೆಯ ವಿಚಾರ ಗೊಣಗುಟ್ಟಿಕೊಂಡು ಹೊರಟು ಹೋಗುವನು)

ರಾ:—ಆಯ್ತೋ ಸುಬ್ಬೂ....ಎಷ್ಟು ಹೊತ್ತು?

ಸು:—ಹುಲಿಗಳ ಹಾಗೆ ನೀವಿಬ್ರೂ ದುರುಗುಟ್ಟಿಕೊಂಡು ನೋಡ್ತಾ ಇರೋವಾಗ ಹ್ಯಾಗೆ ಮುಗಿಸ್ಲಿ? (ತಲೆಯನ್ನು ಕೆರೆದುಕೊಂಡು, ಲೇಖನಿಯ ತುದಿಯನ್ನು ಕಡಿದು, ಕಾಗದದ ಮೇಲೆ ಏನನ್ನೋ ಬರೆದು) ನಿಂಗೆ ದೊಡ್ಡಮನೆ ಯಾತಕ್ಕೋ ತಮ್ಮಯ್ಯಾ (ತಮ್ಮಯ್ಯ ಸುಮ್ಮನಿರುವನು) ಎರಡು ಜಮೀನೂ ಒಂದೇ ರೀತಿ ಇದ್ದಿದ್ರೆ ಈ ಕಷ್ಟಾನೇ ಇರ್ತಾ ಇರ್ಲಿಲ್ಲ. (ತಮ್ಮಯ್ಯನ ಕಡೆ ನೋಡಿ ಕೆರಳಿ) ಏನಾದ್ರೂ ಬೊಗಳು. ಸುಮ್ನೆ ಏನು ನೋಡ್ತಾ ರಥದ ಗೊಂಬೆ ಹಾಗೆ ನಿಂತಿದ್ದೀ?

ತ:—ನಾನು ಹೇಳಬೇಕಾದ್ದೂ ಏನಿಲ್ಲ; ನೀನು ಕೇಳಬೇಕಾದ್ದೂ ಏನಿಲ್ಲ. ನಿನ್ನ ಪಟ್ಟಿ ನೀನು ಮಾಡು; ನಂಗೆ ಬೇಕಾದ್ದು ನಾನು ತೊಗೋತೀನಿ.

ರಾ:—ನಿಜ. ಬೇಗ ಪಟ್ಟೀ ಮುಗಿಸು ಸುಬ್ಬೂ.

(ಸುಬ್ಬಣ್ಣನು ಮತ್ತೆ ತಲೆ ಕೆರೆದುಕೊಂಡು, ಮಸಿಯಲ್ಲಿ ಲೇಖನಿಯನ್ನದ್ದಿ ದಿಕ್ಕು ತೋರದವನಂತೆ ಕಾಗದವನ್ನು ದಿಟ್ಟಿಸಿ ನೋಡುವನು. ಏನೂ ಹೊಳೆಯದಿರಲು ಘಟ್ಟಿಯಾಗಿ ಕೆಂಚನನ್ನು ಕೂಗುವನು. ಗೊಣಗುಟ್ಟಿಕೊಂಡೇ ಕೆಂಚ ಬರುವನು)

ಸು:—ದೊಡ್ಡ ಹಟ್ಟೀಲಿ ದನಾ ಎಷ್ಟಿದೆಯೋ?

ಕೆಂ:—೮೩ ದೊಡ್ಡ ಹಟ್ಟೀಲಿ, ೯೨ ಕೊಟ್ಟಿಗೇಲಿ ಇತ್ತು. ನಿನ್ನೆ ಒಂದು

ಪ್ರಾಣ ಬುಡ್ತು....ಇಂಗೇ ಇದ್ರೆ ಒಂದೊಂದಾಗಿ ಪ್ರಾಣಬುಡ್ತಾ ಬರತ್ವೆ.

(ಸುಬ್ಬಣ್ಣನು ಬರೆಯುತ್ತಿರಲು ಕೆಂಚನು ತಮ್ಮಯ್ಯನೊಂದಿಗೆ ಪಿಸುಗುಟ್ಟುವನು)

ಕೆಂ:—(ತಮ್ಮಯ್ಯನಿಗೆ) ನೀವ್ಹೊಗೋಳಿ ಬುದ್ಧಿ ಗೂಳೀನ-ಮನೆಗೆ ಸಿರಿಲಕ್ಷ್ಮಿ ಬಂದ್ಹಾಗೆ ಬತ್ತೈತೆ.

ತ:—(ಅವನ ಬಾಯಿ ಮುಚ್ಚುತ್ತ) ನೋಡೋಣ ತಡೀ ಕೆಂಚ.

ಕೆಂ:—(ಅದಕ್ಕೊಪ್ಪದೆ) ಉಹೂಹೂ! ಅದಾಯಾಕಾಕ್ಕಿಲ್ಲಪ್ಪಾ, ಆಯಕ್ಕಿಲ್ಲ.

ಸು:—ವೊನ್ನೆ ಖರೀದಿ ಬಂದಿದ್ದದ್ದು ಯಾವ ಜವಿಾನಿಗೋ?

ಕೆಂ:—ಎಲ್ಡಕ್ಕೂ ಬಂದಿತ್ರಪ್ಪಾ.

ಸು:—(ಲೇಖನಿಯನ್ನು ಬಿಸುಟು) ಎಲ್ಲಾನೂ ಹ್ಯಾಗೆ ಎರಡು ಪಟ್ಟೀಗೆ ತುಂಬಲಿ! (ಎಲ್ಲರನ್ನೂ ದುರುಗುಟ್ಟಿಕೊಂಡು ನೋಡಿ ಮತ್ತೆ ಬರೆಯತೊಡಗುವನು) ಇಗೋ, ಈ ಪಟ್ಟಿ ನಿಂದು ತಮ್ಮಯ್ಯಾ. ನಾನಿಲ್ಲೇ ಇದ್ದು ಕೆಂಚನ್ನಿಟ್ಟುಕೊಳ್ತೇನೆ. ನೀನು ರಾಮಸಾಗರಕ್ಕೆ ಹೊರಡು.

ರಾ:—ಅದನ್ನೂ ಪಟ್ಟೀಗೆ ಸೇರಿಸಿದ್ದೀಯಾ ಸುಬ್ಬೂ. ಎಲ್ಲಿ [ತಮ್ಮಯ್ಯ ತನ್ನ ಪಟ್ಟಿಯನ್ನು ಕೊಡುವನು. ಗೊಣಗುಟ್ಟಿಕೊಂಡು ಸುಬ್ಬಣ್ಣ ಇನ್ನೊಂದನ್ನೂ ಕೊಡುವನು; ರಾಮಯ್ಯ ಎರಡನ್ನೂ ಪರೀಕ್ಷಿಸಿ] ಸರಿ ಹಾಗಾದರೆ ...ನಿಂಗ್ಯಾವುದು ಬೇಕು ತಮ್ಮಯ್ಯ....

ಸು:—ಅದು ಸರಿಯಲ್ಲ. ನಾನು ಯಾವುದು ಕೊಡ್ತೀನಿ ಅದನ್ನ ಅವನು ತೊಗೋಬೇಕು.

ರಾ:—(ನಿರ್ಧಾರದಿಂದ) ಬೇಕಾದ್ದು ತೊಗೊಳ್ಳೋನು ನೀನಲ್ಲ–ತಮ್ಮಯ್ಯ.

ಸು:—ರಾಮಸಾಗರ, ಗೂಳಿ....ನಾನವರಿಗೆ ಖಂಡಿತ ಕೊಡಲ್ಲ.

ರಾ:—ಅವನದನ್ನೇ ತೊಗೊಂಡ್ರೆ.

ಸು:—ತೊಗೊಂಡ್ರೆ ಕೆಂಚನ್ನ ಮಾರನಹಳ್ಳಿ ಪಟ್ಟೀಗೆ ಸೇರಿಸ್ತೀನಿ.

ತ:—ಹಾಗಾದ್ರೆ ನಾನದನ್ನೇ ತೊಗೋತೀನಿ.

ಸು:—(ಎರಡು ಪಟ್ಟಿಗಳನ್ನೂ ರಾಮಯ್ಯನ ಕೈಯಿಂದ ಕಿತ್ತುಕೊಂಡು) ಹೂ! ಹೂ!!

ರಾ:—ವಿಲ್ಲು ಹೇಳೋದು ಮರೀಬೇಡ ಸುಬ್ಬಣ್ಣ. ಪಟ್ಟೀ ಮಾಡೋ ಕೆಲ್ಸಾ ನಿಂದು–ಬೇಕಾದ್ದು ತೊಗೊಳ್ಳೋದು ತಮ್ಮಯ್ಯಂದು.

ಕೆಂ:—(ತಡೆಯಲಾರದೆ ತಮ್ಮಯ್ಯನಿಗೆ) ಗೂಳಿ ನೀ ತೊಗೋ ಸಮ್ಮಪ್ಪಾ. ಬಾಳಿ ಬದುಕ್ತಿ....ಮನೇ ಲಚ್ಮಿ ಬಂದ್ಹಾಗೆ ಬತ್ತೈತೆ.

ಗೌ:—(ಸ್ವಲ್ಪ ಹೊತ್ತಿಗೆ ಮುಂಚೆ ಬಂದಿರುವಳು) ನೀನು ಸುಮ್ನಿರೋ !

ರಾ:—ಹೀಗಾದ್ರೆ ಪೂರೈಸೋದಿಕ್ಕಾಗೋದಿಲ್ಲ ಸುಬ್ಬೂ. ವಿಲ್ಲು ಹೇಳಿದ ಹಾಗೆ ಕೇಳಬೇಕು.

ಸು:—(ಜ್ಞಾನೋದಯ ಹೊಂದಿ) ಹಾಗಾದ್ರೆ ನಾನು ಹ್ಯಾಗೆ ಹ್ಯಾಗೆ ಪಟ್ಟೀ ಮಾಡಿದ್ರೂ ಅವನೇ ಮೊದಲು ತೊಗೋಬೇಕು.

ರಾ:— ಹವ್ದು.

ಸು:—ದೇವ್ರೇ ಗತಿ. [ಮತ್ತೆ ಪಟ್ಟಿಗಳನ್ನು ಸಿದ್ಧಮಾಡಲು ತೊಡಗುವನು]

ಕೆಂ:—(ತಮ್ಮಯ್ಯನಿಗೆ) ಪಾದಕ್ಬೀಳ್ತೀನಿ ಬುದ್ದೀ....ಗೂಳೀನ ಮರೀಬ್ಯಾಡಿ. ನೀತೊಗೋ ಸಮ್ಮಪ್ಪಾ....ನನ್ಮಾತು ಕೇಳು. (ಯಾರೋ ಅವನನ್ನು ಹೊರಗಿನಿಂದ ಕೂಗಲು ಹೋಗುವನು)

ಸು:—(ನಗೆಮೊಗದಿಂದ) ಊ ಆಯ್ತಪ್ಪ ಸಧ್ಯ. . ತೊಗೋಳಿ ಪಟ್ಟಿಗಳು ಸಿದ್ಧವಾಗಿವೆ.

ರಾ:—ಇನ್ನಿದರ ಮೇಲೇನೂ ತಂಟೆ ತಕರಾರು ಇಲ್ಲವಲ್ಲಾ.

ಸು:—ಇಲ್ಲ.

ರಾ:—ತಮ್ಮಯ್ಯ, ಎರಡನ್ನೂ ಚೆನ್ನಾಗಿ ಓದಿಕೊಂಡು ನಿಂಗೆ ಯಾವುದು ಬೇಕೋ ಅದನ್ನ ತೊಗೋ.

(ತಮ್ಮಯ್ಯನು ಸುಬ್ಬಣ್ಣನ ಮುಂದಿರುವ ಪಟ್ಟಿಗಳನ್ನು ನೋಡುತ್ತಿರುವನು. ಒಂದರ ಕೆಳಗಿನ ಭಾಗವನ್ನು ಊರಿ ಹಿಡಿದಿರುವನು. ತಮ್ಮಯ್ಯನು ಅದನ್ನು ತೆಗೆದುಕೊಳ್ಳಲೆತ್ನಿಸಿದಾಗ ಬಿಡದೆ ಅದುಮಿ ಹಿಡಿದುಕೊಳ್ಳುವನು)

ತ:—ಪಟ್ಟೀ ಕೆಳಗೇನಿದೆ ನಾನ್ನೋಡಬೇಕು.

ರಾ:—ತೋರ್ಸು ಸುಬ್ಬೂ.

ತ:—(ತೆಗೆದುಕೊಂಡು) ಅಹಾ! ನಂಗೊತ್ತು. ಗೂಳಿ ಹೆಸರು ಬರ್ಕೊಂಡು ನಂಗೆ ಕಾಣದ್ಹಂಗೆ ಮುಚ್ಕೊಂಡಿದ್ದ. ನಂಗಿರಲಿ ಈ ಪಟ್ಟಿ.

ಸು:—(ಅವನಿಂದ ಕಿತ್ತುಕೊಂಡು) ನಿಂಗೆ ಕೊಡೋರ್ಯಾರು?

ರಾ:—(ಜಿಗುಪ್ಸೆಯಿಂದ) ಸುಬ್ಬೂ, ನಿನ್ನ ನಡತೆ ನೋಡಿ ನಂಗೆ ನಾಚಿಕೆಯಾಗುತ್ತೆ. ಶುದ್ಧ ಎಳೇ ಮಗೂ ಆಡಿದ ಹಾಗಾಡ್ತೀ. ನಮಗೇನೂ ಬೇರೇ ಕೆಲ್ಸಾ ಇಲ್ಲಾ ಅಂದ್ಕೊಂಡ್ಯೋ? ಬೆಳಗ್ನಿಂದ ಸಂಜೇವರೆಗೆ ಹೀಗೆ ನಿನ್ನ ಹತ್ರ ಕಣ್ಣಾ-ಮುಚ್ಚಾಲೆ ಆಡ್ತಾ ಇರೋದಿಕ್ಕೆ. ನಾಚಿಕ್ಕೇಡು....

ಸು:—(ನಿರುತ್ಸಾಹದಿಂದ) ಇನ್ನು ಪಟ್ಟೀ ಮಾಡೋಕೆ ನನ್ಕೈಯ್ಯಲ್ಲಾಗಲ್ಲಪ್ಪಾ. ತಮ್ಮಯ್ಯಾ ನೀನು ರಾಮಸಾಗರ ತೊಗೋ-ಮಾರನಹಳ್ಳಿ, ಗೂಳಿ ನಾನು ತೊಗೋತೀನಿ. ಇದು ನ್ಯಾಯವಾಗಿದೆಯೋ ಇಲ್ಲವೋಪ್ಪ.

ತ:—ಸರಿ. ಒಪ್ಪಿದೆ ಅಣ್ಣಯ್ಯಾ.

ರಾ:—ಕಾಗದದ ಮೇಲೆ ಬರೆದುಬಿಟ್ಟದ್ದಾಗಲಿ.

(ಸುಬ್ಬಣ್ಣ ಬರೆದು ತಮ್ಮಯ್ಯನ ಕೈಗೆ ಕೊಡುವನು)

ತ:—(ನೋಡಿಕೊಂಡು) ಇದು ನ್ಯಾಯವಾಗಿಯೇ ಇದೆ. (ಸ್ವಲ್ಪ ಹೊತ್ತು ಯೋಚಿಸಿ ರಾಮಯ್ಯನ ಕಡೆ ತಿರುಗಿ) ನಾನಿಲ್ಲೇ ಇರ್ತೀನಿ.

ಸು:—ಹಾಗಾದ್ರೆ ಗೂಳೀನೂ ಕರ್ಕೊಂಡು ನಾನೇ ರಾಮಸಾಗರಕ್ಕೆ ಹೋಗ್ತೀನಿ.

ರಾ:—ಹೋದವರ್ಷ ಪಟೇಲ್ ಮಲ್ಲಪ್ಪ ೭೦೦ ರೂಪಾಯಿಗೆ ಗೂಳೀನ ಕೇಳಿದ್ದು ಮರ್ತುಬಿಟ್ಯಾ ತಮ್ಮಯ್ಯ ?

ತ:—ಇಲ್ಲಾ ಮಾವಯ್ಯ. ಆದ್ರೆ ಈ ಹಳೇ ಮನೇಗೂ ನನಗೂ ಏನೋ ಋಣಾನುಬಂಧ ಬಾಧಿಸತ್ತೆ.

ರಾ:—ಹಾಗಾದರೆ ಸರಿ-ಇಬ್ಬರೂ ಒಪ್ಪಿದರೇನಪ್ಪಾ?

ತ:—
ಸು:— } ಹೂ! ಒಪ್ಪಿದೆವು.

ರಾ:—ಕೋರ್ಟು ಕಛೇರಿ ಹತ್ತದೆ ನೀವಿಲ್ಲೇ ಒಪ್ಪಿದ್ದು ಚನ್ನಾಯ್ತಪ್ಪ. ನಂಗೆ ತುಂಬಾ ಸಂತೋಷವಾಯ್ತು. ನಿಮ್ಮನಿಮ್ಮ ಪಟ್ಟಿಗಳ ಕೆಳಗೆ ರುಜು ಹಾಕಿಬಿಡಿ. ನಾನೂ ಗೌರವ್ನೋರೂ ಸಾಕ್ಷಿಗಳಾಗ್ತೀವೆ.
(ಎಲ್ಲರೂ ರುಜು ಹಾಕುವರು. ಗೌರಮ್ಮ ಹೆಬ್ಬಟ್ಟಿನ ಗುರುತು ಹಾಕುವಳು. ರಾಮಯ್ಯ ಪಟ್ಟಿಗಳನ್ನು ಮಡಿಸಿ ಜೇಬಿನಲ್ಲಿಟ್ಟುಕೊಳ್ಳುವನು)

ತ:—(ಗೌರಕ್ಕನಿಗೆ) ಪಾಪ! ಕೆಂಚ ನಂಜೋತೇಲಿ ಇರಬೇಕೂಂತಿದ್ದ.

ಗೌ:—ನಿಂಗೆ ಈ ಮನೆ ಒಂದು ತುಂಬಾ ಚೆನ್ನಾಯ್ತು ತಮ್ಮಯ್ಯಾ.

ರಾ:—ಇನ್ನು ನಾನು ಹೊರಡ್ತೀನಿ–ಹೊತ್ತಾಯ್ತು.

ತ:—ಇಲ್ಲೇ ಊಟ ಮುಗಿಸ್ಕೊಂಡು ಹೋಗು ಮಾವಯ್ಯ.

ರಾ:—ಇಲ್ಲಪ್ಪಾ ಹೊತ್ತಾಯ್ತು, ಹೋಗ್ತೀನಿ. ನಾಳೆ ಜಮಾಬಂದಿ ಇದೆ, ಇನ್ನೂ ಲೆಖ್ಖಾ ಬೇರೆ ಬರಿಯೋದು ಉಳಿದಿದೆ. ಬರ್ತೀನಿ – ಯಾವಾಗ್ಲಾದ್ರೂ....

(ಬಾಗಿಲನ್ನು ಧಡಕ್ಕನೆ ತೆಗೆದುಕೊಂಡು ಕೆಂಚ ಪ್ರವೇಶಿಸುವನು)

ಕೆಂ:—ಗೂಳಿ! ಗೂಳಿ ಬುದ್ದೀ!! ಅಯ್ಯೋ ಎಂಥಾ ಗೂಳೀನಪ್ಪಾ ದೇವ್ರೇ!!!

ಎಲ್ಲರೂ:—ಏನಾಯ್ತೋ ಗೂಳೀಗೆ? ಬೇಗ ಹೇಳೋ?

ಕೆಂ:—ನಾನ್ನೋಡೋಕೆ ಓದಾಗ ಪಾಪ – ಮೂಕಜೀವ – ಒಂದು ಕೊಂಬೆತ್ತಿ–ಕಣ್ಣಗಲ್ಸಿ–ನನ್ನೇ ನೋಡಿ – ಕಣ್ಮುಚ್ಚಿಬುಡ್ತು ಬುದ್ದೀ. ಉಸಿರೇ ಆಡಾಕಿಲ್ರಪ್ಪಾ ಈಗ. ಅಯ್ಯೋ ಪಾಪ. ಅದನ್ನ ನನ್ನ ಜೀವಾಂತಿದ್ದೆ. ಓಗ್ಬಿಡ್ತು. ದೊಡ್ಡ ದಣ್ಯೋರಿದ್ರೆ...

ಸು:—(ಎದ್ದು) ಪಟ್ಟಿಗಳನ್ನು ಕೊಡಿ. ಬೇರೇ ಬರೀಬೇಕು.

(ರಾಮಯ್ಯನಿಂದ ಕಿತ್ತುಕೊಳ್ಳಹೋಗುವನು. ರಾಮಯ್ಯನು ಅವುಗಳನ್ನು ಒಳಗಿನ ಜೇಬಿನಲ್ಲಿಟ್ಟುಕೊಂಡು ಅಂಗಿಯ ಗುಂಡಿಗಳನ್ನು ಹಾಕಿಕೊಳ್ಳುತ್ತ)

ರಾ:—ಮೈಮೇಲೆ ಕೈಹಾಕೋ ಅಷ್ಟು ಧೈರ್ಯಬಂತೇ ಸುಬ್ಬೂ, ರುಜು ಹಾಕುವಾಗ ಎಲ್ಲೀಗ್ಹೋಗಿತ್ತು ಬುದ್ಧಿ. ಈಗ ಯಾವದನ್ನೂ ಬದಲಾಯಿಸೋದಿಕ್ಕಾಗೋದಿಲ್ಲ.

ಗೌ:—ಅರಳೀಮರ ಕಡಿಸ್ಬೇಡಪ್ಪಾ ಅಂದೆ. ಕಂಡ್ಯಾ ಈಗ ಏನಾಯ್ತೂಂತ!

(ಸುಬ್ಬಣ್ಣನು ನಿರ್ವಿಣ್ಣನಾಗಿ ಕುಳಿತುಕೊಳ್ಳುವನು)

ಕೆಂ:—ಎಂತಾ ಗೂಳಿ ಓಗ್ಬಿಡ್ತಪ್ಪಾ! ನಮ್ಮ ಅಣೇಬರಾ.

(ತೆರೆ ಬೀಳುವುದು)

ಕನ್ಯಾರ್ಥಿ

ಪಾತ್ರಗಳು

ಸೀತಾರಾಮಯ್ಯ	ಜೋಡೀದಾರ.
ಸೀತಮ್ಮ	ಹೆಂಡತಿ.
ಸರಸು	ಹಿರಿಯ ಮಗಳು.
ಪುಟ್ಟು	ಕಿರಿಯ ಮಗಳು.
ರಾಮು	ಮಗ.
ಕೃಷ್ಣಮೂರ್ತಿ	ಕನ್ಯಾರ್ಥಿ.
ಸಿದ್ದ	ಮನೆ ಆಳು.

ದೃಶ್ಯ ೧

(ಜೋಡೀದಾರರ ಮನೆ ಹಜಾರ. ಮನೆಗೆ ಹಿಂದಿನ ದಿನ ತಾನೆ ಸುಣ್ಣವನ್ನು ಹಚ್ಚಿ ಸಾರಣೆ ಕಾರಣೆ ಮಾಡಿದಂತಿದೆ. ನಡುಬಾಗಿಲಿಗೆ ಗಾಜಿನ ಮಣಿಗಳಲ್ಲಿ ಮಾಡಿದ ತೋರಣವನ್ನು ಕಟ್ಟಿದೆ. ಗೋಡೆಗಳಿಗೆ ರವಿವರ್ಮನ ಚಿತ್ರಪಟಗಳನ್ನು ತಗಲುಹಾಕಿವೆ. ಬಾಗಿಲ ಮೇಲ್ಭಾಗದಲ್ಲಿ ಲಕ್ಷಣವಾಗಿ ಕಾಣುವಂತೆ ಕಸೂತಿ ಪಟವನ್ನು ತಗಲುಹಾಕಲು ಜೋಡೀದಾರರ ಹಿರಿಯ ಮಗಳಾದ ಸರಸು ಗೋಡೆಯ ಬಳಿಗೆ ಸ್ಟೂಲೊಂದನ್ನು ಎಳೆದುಕೊಂಡು ಅದರ ಮೇಲೆ ಹತ್ತಿ ಗೋಡೆಗೆ ಮೊಳೆಯನ್ನು ಹೊಡೆಯುತ್ತಿರುವಳು. ಅವಳ ತಂಗಿ, ಪುಟ್ಟು, ಅವಳ ನೆರವಿಗಾಗಿ ಪಟವನ್ನು ಕೈಯಲ್ಲಿ ಹಿಡಿದುಕೊಂಡು ಅಲ್ಲಿಯೇ ನಿಂತಿರುವಳು. ಆಗ ಬೆಳಿಗ್ಗೆ ಎಂಟು ಗಂಟೆಯಾಗಿರಬಹುದು. ಪರದೆಯು ಮೇಲಕ್ಕೆ ಏಳುವುದು.

ಸರಸು ಸುತ್ತಿಗೆಯನ್ನು ಹಿಡಿದು ಎಡಗೈಯಲ್ಲಿ ಮೊಳೆಯನ್ನು ಹಿಡಿದುಕೊಂಡು ಅದಕ್ಕೆ ಹೊಡೆಯುತ್ತಿರುವಾಗ ಅದು ತಪ್ಪಿ ಅವಳ ಕೈಬೆರಳಿಗೆ ಬಿದ್ದು ಬಿಡುವುದು. ಮೊಳೆಯು ಕೆಳಕ್ಕೆ ಬಿದ್ದು ಹೋಗುವುದು. ಏಟು ತಗಲಿದ ಬೆರಳನ್ನೊಡನೆ ಬಾಯೊಳಗಿಟ್ಟುಕೊಂಡು ಚೀಪುತ್ತಾ ಪುಟ್ಟುವನ್ನು ಕುರಿತು—)

ಸ:—ಆ ಮೊಳೆ ತೆಗೆದು ಕೊಡಮ್ಮಾ, ನೋಡು, ನೋಡಲ್ಲಿ ಬಿದ್ದಿದೆ. (ಪುಟ್ಟು ಮೊಳೆಯನ್ನು ತೆಗೆದು ಕೊಡುವ ಬದಲು ಮೊಗವೆತ್ತಿ ಅವಳ ಮುಖವನ್ನೇ ದಿಟ್ಟಿಸಿ ನೋಡುತ್ತಿರುವಳು) ನನ್ನ ಬೆರಳಿಗೆ ಪಟು ಬಿದ್ದು ಬಿಟ್ಟಿತು. ನೀನು ತೆಗೆದು ಕೊಡಮ್ಮ ಅದನ್ನ. (ಬೆರಳನ್ನು ತೋರಿಸುವಳು)

ಪು:—(ಕೈಯಲ್ಲಿ ಹಿಡಿದುಕೊಂಡಿದ್ದ ಕಸೂತಿ ಪಟವನ್ನು ಕೆಳಗಿರಿಸಿ ಚಪ್ಪಾಳೆ ತಟ್ಟುತ್ತಾ) ಹಾಗೆ ಆಗಬೇಕು, ಬೆರಳು ಮುರಿಯಬೇಕು.......ಹಾಗೆ ಆಗಬೇಕು.... (ಕುಣಿಯತೊಡಗುವಳು)

ಸ:—(ಬೆರಳಿನ ನೋವು ಅಧಿಕವಾಗುತ್ತಿರಲು ಅದನ್ನು ಸಹಿಸಲಾರದೆ ಕೈಯನ್ನು ಕೊಡವುತ್ತಾ) ತೆಗೆದುಕೊಡುತ್ತೀಯೋ ಇಲ್ಲವೇ ?

ಪು:—ನಾನೇನೂ ತೆಗೆದುಕೊಡೋದಿಲ್ಲ. ಬೇಕಾದರೆ ನೀನೇ ಕೆಳಗಿಳಿದು ತೆಗೆದಿಕೊ. (ನಗುತ್ತಾ ನಿಲ್ಲುವಳು)

ಸ:—(ಅವಳ ನಗುವನ್ನು ಕಂಡುರೇಗಿ ಹೋಗಲು) ನೋಡು, ನಾನು ಇಳಿದು ಬಂದರೆ ನಿನ್ನನ್ನು ಸಿಗಿದುಬಿಡುತ್ತೀನಿ.

ಪು:—ಸಿಗಿದು ಬಿಟ್ಟೀಯಾ, ಅಮ್ಮಣ್ಣೀ, ನಿನಗೆ ಗಂಡ ಆಗೋನು ಬರುತಾನೆ ಅಂತ....ನಿನಗೆ....ಹಾಗೆ ಆಗಬೇಕು, ಬೆರಳು ಮುರಿಯಬೇಕು, ನೀನಳಬೇಕು,ನಾ ನಗಬೇಕು.(ಚಪ್ಪಾಳೆ ತಟ್ಟುತ್ತಾ ಅದಕ್ಕೆ ಸರಿಯಾಗಿ ಕುಣಿಯ ತೊಡಗುವಳು)

ಸ:—ಕತ್ತೇ......(ಕೆಳಗಿಳಿದು ಅವಳಿಗೆ ಏಟು ಕೊಡಲು ಹೋಗುವಳು. ಅವಳು ತಪ್ಪಿಸಿ ಕೊಂಡು ಓಡುವಳು. ತಾನೇ ಮೊಳೆಯನ್ನು ಹುಡುಕಿ ತೆಗೆದುಕೊಂಡು ಪುನಃ ಸ್ಟೂಲಿನ ಮೇಲೆ ಹತ್ತಿ ತನ್ನ ಕೆಲಸದಲ್ಲಿ ಉದ್ಯೋಗಿಸುವಳು. ಪುಟ್ಟು ಚಪ್ಪಾಳೆಯನ್ನು ತಟ್ಟಿ ಕೊಂಡು ಹಾಡುತ್ತಾ ಅಲ್ಲಿ ಕಾಣಿಸಿಕೊಳ್ಳಲು) ಇಲ್ಲಿ ಬಾ, ಇಲ್ಲಿ,ನಿನಗೆ ಮಾಡು-ತೀನಿ.

ಪು:—(ಹತ್ತಿರಕ್ಕೆ ಬರುತ್ತಾ) ಬಂದೆ. ಏನು ಮಾಡುತೀಯಾ ?

ಸ:—(ಮೊಳೆಯನ್ನು ಹೊಡೆಯುತ್ತಲೇ) ಅಮ್ಮನಿಗೆ ಹೇಳುತೀನಿ.

ಪು:—ಅಷ್ಟೇ ತಾನೆ. ನೀನು ಅಮ್ಮನಿಗೆ ಹೇಳಿದರೆ ನಾನು ನಿನ್ನ ನೋಡೋದಕ್ಕೆ ಬರುತ್ತಾನಲ್ಲಾ ಇವತ್ತು, ಅವನಿಗೇ ಹೇಳುತೀನಿ.

ಸ:—ಕತ್ತೆ ಲೌಡಿ, ನಿನಗೆ ಹಾಸ್ಯ....

(ಕೆಳಗಿಳಿದು ಅವಳನ್ನು ಹಾಗೇ ಹಿಡಿದುಕೊಳ್ಳಲು ಹೋಗುವಳು. ಅವಳು ಕೈಗೆ ಸಿಗದೆ ಅವಳನ್ನು ಸುಮ್ಮನೆ ಸುತ್ತಿಸುವಳು. ಆ ಗಲಾಟೆಯಲ್ಲಿ ಸರಸು ಕೆಳಗಿಟ್ಟಿದ್ದ ಪಟದ ಮೇಲೆ ಕಾಲಿಟ್ಟುಬಿಡುವಳು. ಗಾಜು ಒಡೆದು ಹೋಗುವುದು. ತಾನು ಹಾಕಿದ್ದ ಪಟ ಅದು. ಅದನ್ನು ಎತ್ತಿ ಹಿಡಿದುಕೊಂಡು ಅಳುತ್ತಾ ಕುಳಿತುಕೊಳ್ಳುವಳು. ಅವಳ ಅಳುವಿನ ದನಿಯನ್ನು ಕೇಳಿ ಅವಳ ತಾಯಿ ಒಳಗಿನಿಂದ ಬರುವಳು.)

ಸೀ:—ಏನೇ ಅದು ? ಚೆನ್ನಾಯಿತು. ಮಡಿ ಉಟ್ಕೊಂಡು ಏನಾದರೂ ಮಾಡುತ್ತಾ ಕುಳಿತುಕೊಳ್ಳೋಣ ಅಂದರೆ, ಏನಾದರೂ ಹಗರಣ ಹೂಡಿ ಬಿಡುತ್ತೀರಿ. ಏನಾಯ್ತು ಈಗ ? ಅವರು ಬರುವ ಹೊತ್ತಿಗೆ ಹೀಗೆ ಅಳುತ್ತಾ ಕೂತುಕೊ ನೀನು, ಚೆನ್ನಾಗಿರುತ್ತೆ.

ಪು:—ಅಮ್ಮಾ, ಅಕ್ಕ ಪಟದ ಮೇಲೆ ಕಾಲಿಟ್ಟು ಅದರ ಗಾಜನ್ನು ಒಡೆದು ಹಾಕಿ ಬಿಟ್ಟಳು.

ಸೀ:—ಹೌದೇನೇ ? ಅದರ ಗಾಜಿಗೀಗ ಎಲ್ಲಿಗೆ ಕಳಿಸೋದು ! ಅಲ್ಲಿ ಇಲ್ಲಿ ಕೂಡಿಟ್ಕೊಂಡಿದ್ದ ಕಾಸೆಲ್ಲಾ ನಿಮ್ಮ ಕಸೂತೀಗೆ ಖರ್ಚು ಮಾಡುತ್ತಾ ಬಂದು ಬಿಟ್ಟರೆ. ಯಾರಾದರೂ ಮುತ್ತೈದೆಯವರು ಮನೆಗೆ ಬಂದಾಗ ವೀಳೆದೆಲೆ ತರಿಸಿ ಕೊಡುವುದಕ್ಕೆ ಮೂರು ಕಾಸು ಕೂಡ ಕೈಲಿ ಉಳಿದಿರೋದಿಲ್ಲ. ಏನು ಮಾಡಿ ಬಿಟ್ಟೆ ಅದನ್ನ ?

ಸ:—ನಾನಲ್ಲಮ್ಮ, ಅವಳೇ ಮಾಡಿದ್ದು.

ಪು:—ನಾನಲ್ಲಮ್ಮ.

ಸೀ:—ನೀನಲ್ಲ, ನೀನಲ್ಲ, ಇನ್ನು ಅವನು. ಅವನೆಲ್ಲಿಗೆ ಹೋದ ?

ಸ:—ಎಲ್ಲಿಗೆ ಹೋದನೋ !

ಪು:—ಅವನ ಸ್ನೇಹಿತರು ಬಂದಿದ್ದರು....

ಸೀ:—ಆ ಹಳ್ಳಿ ಹುಡುಗರನ್ನು ಕಟ್ಕೊಂಡು ಹೋದನೇನೋ ! ಪಟ್ಟಣ ಬಿಟ್ಟು ಬರೋವಾಗ ಓದೂನೂ ಪಟ್ಟಣಕ್ಕೇ ಬಿಟ್ಟು ಬಿಟ್ಟು ಬಂದು ಬಿಟ್ಟ. ಅಲ್ಲಿ ಇದ್ದು ಹುಡುಗರಿಗೆ ವಿದ್ಯೆ ಹೇಳಿಸೋಣ ಅಂದ್ರೆ ಇವರು ಕೇಳುತಾರಾ ! ಪೆನ್‌ಷನ್ ಆದಿದ್ದೇ ತಡ, ಇನ್‌ಸ್ಯೂರೆನ್ಸಿನಲ್ಲಿ ಬಂದ ಆ ಹಣದಲ್ಲಿ ಈ ಜೋಡೀಗ್ರಾಮವನ್ನು ಕೊಂಡುಕೊಂಡಿದ್ದೆ ಎಲ್ಲರನ್ನೂ ಕರೆದುಕೊಂಡು ಇಲ್ಲಿಗೆ ಬಂದುಬಿಟ್ಟರು, ಮಗನಿಗೆ ಆಸ್ತಿಮಾಡಿ

ಇಡುತೀನಿ ಅಂತ. ಈ ಆಸ್ತೀನ! ನನ್ನ ಮಾತು ಕೇಳುತಾರೆಯಾ! ನಮ್ಮ ಯಾರ ಹೆಸರಿನಲ್ಲಾದರೂ ಅದನ್ನ ಬ್ಯಾಂಕಿನಲ್ಲಿಡಿ, ಬಡ್ಡಿ ಬರುತ್ತಿರುತ್ತೆ; ಬರೋ ಪೆನ್‌ಷನ್ನಿನಲ್ಲಿ ಸುಖವಾಗಿರೋಣ ಅಂದ್ರೆ ಅದು ಬಿಟ್ಟರು; ಇತರರ ಮಾತು ಕೇಳಿ ಚೆನ್ನಾಗಿ ಮೋಸ ಹೋದರು. ದುಡ್ಡೂ ಹೋಯಿತು. ದುಡಿಯೋದೂ ಆಯಿತು. ಕೈಲಿದ್ದ ಚಿಲ್ಲರೆ ಪಲ್ಲರೆಯನ್ನೂ ಇತರ ಲಾಗೋಡುಗಳಿಗೆ ಇಕ್ಕಿ, ಈ ನಾಲ್ಕೈದು ವರ್ಷಗಳೂ ಹೆಣಗಿ,ಈಗ ಮಾರಬೇಕು ಅಂತ ಪ್ರಯತ್ನ ಪಡುತ್ತಿದ್ದಾರೆ. ಅದೇನೋ ಹೇಳುತಾರಲ್ಲ, ಕೆಟ್ಟ ಮೇಲೆ ಬುದ್ಧಿ ಬಂತು; ಅಟ್ಟ ಮೇಲೆ ಒಲೆ ಉರಿಯಿತು, ಅಂತ. ಈಗ ಇದನ್ನ ಸೀಯೋರು ಯಾರಿದ್ದಾರೋ ಕಾಣೆ. ಕಂದಾಯ ಕಟ್ಟೋ ಅಷ್ಟು ಕೂಡ ಹುಟ್ಟೋದಿಲ್ಲ ಇದರ ಫಸಲಿನಲ್ಲಿ. ಅನುಭವಿಸಲಿ! ಬಂದ ಮಗರಾಯ....ಅವರ ತದ್ರೂಪು, ಎಲ್ಲಿದ್ದಾರೇ ಎಂದು ಹೇಳೋಹಾಗಿಲ್ಲ.

ರಾ:—(ಮೇಲಕ್ಕೆ ಎತ್ತಿ ಕಟ್ಟಿದ್ದ ದಟ್ಟಿಯನ್ನು ಸರಿಮಾಡಿಕೊಂಡು ತಲೆಗೆ ಸುತ್ತಿದ್ದ ಟವಲನ್ನು ತೆಗೆದು ಹೆಗಲ ಮೇಲೆ ಹಾಕಿಕೊಳ್ಳುತ್ತಾ ಒಳಕ್ಕೆ ಪ್ರವೇಶಿಸಿ) ಅಮ್ಮಾ, ಯಾರಮ್ಮ ಇವತ್ತು ಬರೋದು ?

ಸೀ:—ಕೇಳೋದು ನೋಡು, ಯಾರು ಬರುತಾರೆ ಅಂತ. ಮನೆಯಲ್ಲಿದ್ದು ಮನೆ ಕೆಲಸಗಳನ್ನ ನೋಡಿಕೊಂಡು ಹೋಗೋದನ್ನು ಬಿಟ್ಟು, ಪೋಲಿ ಅಲೆಯೋದಕ್ಕೆ ಹೋಗಿದ್ದು ಈಗ ಯಾರಮ್ಮ ಬರೋದೂ ಅಂತ ಕೇಳೋದಕ್ಕೆ ಬಂದ. ಆ ಪಟಗಳನ್ನೆಲ್ಲಾ ಸರಿಯಾಗಿ ಕಟ್ಟಿಕೊಂಡಿದ್ದರೆ ಆಗುತ್ತಿರಲಿಲ್ಲವೇನೋ ! ಎಲ್ಲಾ ಪಾಪ,ಆ ಹುಡುಗೀನೆ ಮಾಡಿಕೋಬೇಕು.

ಪು:—ಅಣ್ಣ, ಅಕ್ಕನಿಗೆ ಗಂಡ ಬರುತಾನೆ.

ರಾ:—ಓಹೋ, ಅದರಿಂದಲೇ ಅವಳು ಅಷ್ಟು ಅರಳರಳುತಾ ಕೆಲಸ ಮಾಡಿಕೊತಿರೋದು ! ಅಲ್ಲವಾ ?

ಸ:—ನೋಡಮ್ಮ ಇವನನ್ನ.

ಸೀ:—ಅವನಿಗೆ ನಾಚಿಕೆ–ಹೇಚಿಕೆ ಇದ್ದರೆ ಸರಿ !

ರಾ:—ಯಾರವ್ವಾ, ಅವತ್ತು ಬಂದಿದ್ದನಲ್ಲಾ ಅವನೇನು ಬರೋದು? ಮದುವೆ ಗೊತ್ತಾಯಿತೇನವ್ವ ?

ಸೀ:—ಅವರೇನೂ ಅಲ್ಲ. ಬೇರೆ ಹೊಸಬರು ಬರುತಾರೆ. ಹಿಂದೆ ಅವರು ಬಂದಿದ್ದಾಗ ಮಾಡಿದೆ ನೋಡು, ಹುಚ್ಚು ಹುಚ್ಚಾಗಿ ಆಡಿ ಅವರನ್ನು ಓಡಿಹೋಗೋ ಹಾಗೆ ಮಾಡಿದೆಯಲ್ಲಾ, ಹಾಗೆ ಈಸಲವೂ ಮಾಡೀಯಾ !

ರಾ:—ನಾನೇನವ್ವ ಆಗ ಮಾಡಿದ್ದು ? ಅವನನ್ನು ನೋಡಿದರೆ ಹಾಸ್ಯ ಮಾಡಬೇಕು ಅನ್ನಿಸಿತು. ಸದ್ಯಕ್ಕೆ ಅವನೇನು ಆಗೋದಿಲ್ಲವಲ್ಲ ನನ್ನ ಭಾವ ?

ಪು:—ಈಗ ನಿನ್ನ ಭಾವ ಆಗೋರು ಬಿ. ಎ. ಪ್ಯಾಸು ಮಾಡಿದ್ದಾರಂತೆ.

ರಾ:—ಹೌದೇನವ್ವ ?

ಸೀ:—ನಿನಗೆ ಯಾರೆ ಎಲ್ಲಾ ಹೇಳಿದ್ದು ?

ಪು:—ಶಾನುಭೋಗರ ಸೊಸೆ ನನ್ನ ಕೇಳಿದಳು ಹಾಗೆನ್ನುತ್ತ.

ಸೀ:—ಏನು,ಊರಿಗೆಲ್ಲಾ ಆಗಲೇ ಗೊತ್ತಾಗಿಬಿಟ್ಟಿದೆಯೋ! ಪಾಪ, ಇನ್ನೂ ಅವರಿಗೇ ಗೊತ್ತಿಲ್ಲ. ಅವರು ಬರೋದು ನಮ್ಮ ಗ್ರಾಮಾನ ನೋಡಿಕೊಂಡು ಹೋಗೋದಕ್ಕೆ. ಓದಿದ್ದಾದ ಮೇಲೆ ಸರ್ಕಾರಿ ಕೆಲಸಕ್ಕೆ ಸೇರಕೂಡದು ಅಂತ ಮಾಡಿಕೊಂಡು, ಯಾವದಾದರೂ ಜೋಡಿಗ್ರಾಮ ನೋಡಿ, ಅಲ್ಲಿ ನೆಲಸಬೇಕು ಅಂತ ಇದ್ದಾರಂತೆ. ಬೇಕಾದಷ್ಟು ದುಡ್ಡಿದೆಯಂತೆ ಅವರಿಗೆ. ಅವರು ನಮ್ಮ ಜನ ಅಂತ ಗೊತ್ತಾಯಿತು; ಇನ್ನೂ ಮದುವೆ ಆಗಿಲ್ಲವಂತೆ; ಸಾಧ್ಯವಾದರೆ ಸರಸೂಗೆ ಅನುಕೂಲವಾಗುತ್ತೆಯೇನೋ ಅಂದುಕೊಂಡಿರೋದಾಗಿದೆ. ಆಗಲೇ ಅದನ್ನೆಲ್ಲಾ ಎಲ್ಲರಿಗೂ ಬಿತ್ತಿದ್ದಾರೆ. ಯಾರು ಹೇಳೋದಕ್ಕೆ ಹೋದರೋ !

ಪು:—ನೀನೇ ಅವರ ಮನೇಲಿ ಅಂದೆಯಂತೆ.

ಸೀ:—ನಾನೇನು ಅನ್ನೋದಕ್ಕೆ ಹೋದೆ. ಒಂದು ಹೆಣ್ಣು ಅಂತ ಅಂದ ಮೇಲೆ ನೂರೆಂಟು ಜನ ಬರುತಾರೆ; ಒಂದು ಗಂಡಿರೋ ಕಡೆಗೆ

ಸಾವಿರ ಜನ ನಾನು ಕೊಡುತೀನಿ ತಾನು ಕೊಡುತೀನಿ ಅಂತ ಬರು ತಾರೆ ಅಂದೆ. ಇನ್ನೇನು ಹೇಳೋದಿಕ್ಕೆ ಹೋಗಿದ್ದೆ ನಾನವರಿಗೆ.

ರಾ:—ಹಾಗಾದರೆ ಅವರೇನೂ ಇಲ್ಲಿ ಸರಸು ಅಂತ ಒಬ್ಬಳಿದ್ದಾಳೆ,ಅವಳನ್ನು ಮದುವೆಯಾಗೋಣ ಅಂತ ಬರುತ್ತಿಲ್ಲ?

ಸೀ:—ನಿನಗೆ ಯಾಕೋ ಅವೆಲ್ಲಾ, ದೊಡ್ಡವರ ಮಾತು ಕಟ್ಟಿಕೊಂಡು. ಹುಡುಗರು ಯಾವಾಗಲೂ ಹುಡುಗರಾಗಿರೋದೇ ಚೆನ್ನ. ದೊಡ್ಡೋರು ಏನಾದರೂ ಮಾಡಿಕೊಳ್ಳಿ. ಇನ್ನು ಯಾವದಾದರೂ ಕಟ್ಟು ತೆಗೆದು ಆ ಪಟಕ್ಕೆ ಅದನ್ನು ಹಾಕಿ ಅಲ್ಲಿ ತಗಲುಹಾಕು, ಅವರು ಬರುವ ಹೊತ್ತಿಗೆ. ಇಲ್ಲದೆ ಇದ್ದರೆ ಅವರು ಬಂದು ನಿನ್ನ ಸುಲಿ ಹುಯ್ದು ಬಿಡುತಾರೆ ಕಂಡ್ಯಾ. ನೋಡು ಅಲ್ಲಿ ಬರುತಿರೋ ಹಾಗಿದೆ. ನಾನೂ ನಿನ್ನೊಂದಿಗೆ ಇಲ್ಲೇ ನಿಂತಿದ್ದರೆ ಸರಿಹೋಗೋ ದಿಲ್ಲ.

(ಸೀತಮ್ಮ ಒಳಕ್ಕೆ ಹೊರಟುಹೋಗುವಳು.ರಾಮು ಆ ಪಟವನ್ನು ಬೇಗನೆ ತೆಗೆದು ಹೋಗು ವನು. ಸರಸು ಬಿದ್ದಿದ್ದ ಗಾಜುಗಳನ್ನು ಒಂದೊಂದಾಗಿ ಆರಿಸಿ ತೆಗೆದುಕೊಂಡು ಹೋಗುವಳು. ಪುಟ್ಟು ಮಟ್ಟಿಗೆ "ಅಪ್ಪ ಬಂದ, ಕಬ್ಬು ತಂದ ನೋಡು ಏನೋ ಹೊರಿಸಿಕೊಂಡು ಬರುತ್ತಿದ್ದಾನೆ" ಎಂದು ಕೇಕೆ ಹಾಕುತ್ತಾ ಕುಣಿದುಕೊಂಡು ಕುಣಿದುಕೊಂಡು ಹೊರಬಾಗಿಲ ಕಡೆಗೆ ಹೋಗುವಳು.

ಸೀತಾರಾಮಯ್ಯ ಸುಸ್ತಾಗಿ ಒಳಕ್ಕೆ ದಯಮಾಡಿಸಿ ಹೊದ್ದಿದ್ದ ವಸ್ತ್ರದಲ್ಲೇ ಕಾಲಿನ ಧೂಳನ್ನು ಹೊಡೆದುಕೊಳ್ಳುತ್ತಾ ಅಲ್ಲಿದ್ದ ಸ್ಟೂಲನ್ನು ಎಳೆದುಕೊಂಡು ಅದರ ಮೇಲೆ ಕುಳಿತುಕೊಳ್ಳು ವನು. ಸಿದ್ದ ತಲೆಯ ಮೇಲೆ ಹೊತ್ತುಕೊಂಡು ಬಂದಿದ್ದ ಮಕ್ಕರಿಯನ್ನು ಕೆಳಗಿರಿಸಿ ಆ ಕಡೆಗೆ ನಿಲ್ಲುವನು. ಅದರಲ್ಲಿ ಕಬ್ಬು ಜೊಕ್ಕತ್ತ್ರನೆಹಣ್ಣು, ತರಕಾರಿ ಕಾಣಿಸುತ್ತಿರುವುದು.)

ಪು:—ಸಿದ್ದ, ಏನೇನು ತಂದಿದ್ದೀಯೋ ಎಲ್ಲಾ ತೆಗದಿಡೊ.

ಸೀ ರಾ:—ಎಲ್ಲೇ, ನಿಮ್ಮ ಅಮ್ಮ ಎಲ್ಲಿ? ಒಳಗೆ ಏನು ಮಾಡುತ್ತಿದ್ದಾಳೆ? ಕರಿ ಇಲ್ಲಿ.

ಪು:—ಅಮ್ಮಾ, ಅಪ್ಪ ಕರೀತಾನೆ. ಜೊಕ್ಕೋತನೆ ಹಣ್ಣು ಎಲ್ಲಾ ತಂದಿ ದ್ದಾನೆ ಬಾ ಇಲ್ಲಿ.

ಸೀ:—(ಒಳಗಿನಿಂದಲೆ) ಬಂದೆ ತಾಳೇ.

ಪು:—(ಸಿದ್ದ ಕಾಯಿಪಲ್ಯಗಳನ್ನು ತೆಗೆದು ಕೆಳಗಿಡುತ್ತಿರಲು ಅವಳದಕ್ಕೆ ಕೈ ಹಾಕುತ್ತಾ) ಬಂದೇನಮ್ಮಾ?

ಸೀ:—ಏನು, ಹಾಗೆ ಆರಚಿಕೊಳ್ಳುತೀಯೋ! ಮಾಡುತಾ ಇರೋ ಕೆಲಸಾನ ಹಾಗೇ ಬಿಟ್ಟು ಬಿಟ್ಟು ಓಡುಬಿಡೋದಕ್ಕೆ ಆಗುತ್ತೆಯೇನು? (ಪ್ರವೇಶಿಸುವಳು)

ಸೀ ರಾ:—ಏನೇ, ಏನೇನು ಮಾಡಿಕೊಂಡಿದ್ದೀಯಾ? ಅವರು ಈ ರೈಲಿನಲ್ಲೇ ಬರುತಾರಂತೆ. ನಾನು ಗಾಡಿ ಕಟ್ಟಿಸಿಕೊಂಡು ಸ್ಟೇಷನ್ನಿಗೆ ಹೋಗಿ ಬರುತ್ತೇನೆ. ಕ್ರಿಷ್ಣಪ್ಪ ಏನೂ ಅವರ ಜೊತೆಯಲ್ಲಿ ಬರೋದಿಲ್ಲವಂತೆ. ಆತ ಒಬ್ಬರೇ ಬರುತಾರಂತೆ; ಹಾಗೆಂತ ಕ್ರಿಷ್ಣಪ್ಪನಿಂದ ಕಾಗದ ಬಂದಿದೆ. ಏ, ಸಿದ್ಧ, ನೀನು ಹೋಗಿ ಆ ಪಟೇಲರ ಗಾಡಿ ಸರಿಯಾಗಿ ಇದೆಯೇನು ನೋಡಿಕೊಂಡು ಬಾ. (ಸಿದ್ಧ ಹೋಗುವನು)

ಸೀ:—ಯಾರು ಅಂದ್ರೆ ಆ ಕ್ರಿಷ್ಣಪ್ಪ, ನಿಮಗೆ ಗೊತ್ತಾಯಿತೇನು?

ಸೀ ರಾ:—ಯಾರೋ ಏನೋ ನಾನೆಷ್ಟು ಯೋಚಿಸಿದರೂ ಹೊಳೆದಿಲ್ಲ. ಯಾರಾದರೂ ಆಗಲಿ ಆತ ಅಂತೂ ಹಿಂದಿನಿಂದ ನನಗೆ ಚೆನ್ನಾಗಿ ತಿಳಿದಿದ್ದವನೇ ಆಗಿರಬೇಕು. ಇಲ್ಲದೆ ಹೋದರೆ ಅಷ್ಟು ಸಲಿಗೆಯಲ್ಲಿ ಹೇಗೆ ಬರೀತಿದ್ದ? ಅದು ಹೋಗಲಿ, ನಾನು ಸ್ಟೇಷನ್ನಿಗೆ ಹೋಗಿ ಬರುತ್ತೇನೆ. ನೀನು ಇವುಗಳನ್ನೆಲ್ಲಾ ತೆಗಿಸಿ ಒಳಗಿಡು. ನೋಡು, ಅವಳು ಆಗಲೇ ಆ ಹಣ್ಣನ್ನು ಎತ್ತಿಕೊಂಡು ಹೋದಳು.

ಸೀ:—ಅದನ್ನೇನು ರಾಮಯ್ಯನ ತೋಟದಿಂದತಂದಿರಾ?

ಸೀ ರಾ:—ಅವರು ಬಂದಾಗ ಹಾಗೆಲ್ಲಾ ಅಂದು-ಗಿಂದೀಯಾ! ಅವೆಲ್ಲಾ ನಮ್ಮ ತೋಟದ್ದೇ ಅಂತ ಹೇಳಬೇಕು ತಿಳೀತೋ! ಆ ಹುಡುಗರನ್ನೆಲ್ಲಾ ಕರೀ ಇಲ್ಲಿ, ಎಲ್ಲಾ ಎಚ್ಚರಿಕೆಯಾಗಿರಬೇಕು. ಏ, ಪುಟ್ಟು, ನೀನು ಬಹಳ ಹರಟೆಮಲ್ಲಿ, ಅವರ ಮೇಲೆ ಬಿದ್ದು ಗೋಳು ಹುಯ್ದು ಕೊಂಡೀಯಾ, ತಿಳೀತೇನೇ. ಅವರಿಬ್ಬರನ್ನೂ ಕರೀ ಇಲ್ಲಿ.

ಪು:—ಅಕ್ಕಾ, ಅಣ್ಣಾ, ಅಪ್ಪ ಕರೀತಿದ್ದಾನೆ ಬನ್ನಿ ಇಲ್ಲಿ. (ಅವರು ಬರುವರು)

ಸೀ ರಾ:—ಏನೋ, ನೀನು ಅಗಸರ ಮನೆಯಿಂದ ಮಡಿಮಾಡಿ ಬಂದಿರೋ ಬಟ್ಟೆಗಳನ್ನು ಹಾಕ್ಕೋಬಾರದೇನು? ನಮಗೆ ಎಷ್ಟು ಅವಮಾನ ಆಗಬೇಕೋ ಅಷ್ಟನ್ನೂ ಮಾಡುತ್ತಿದ್ದೀರಿ ನೋಡಿ, ಬಟ್ಟೆಗಳನ್ನು ಲಕ್ಷಣವಾಗಿ ಹಾಕಿಕೊಂಡು ಅವರು ಬಂದ ಕಾಲದಲ್ಲಿ ನೀನ್ನ ಪಾಡಿಗ

ನೀನು ಓದುತ್ತಾ ಕುಳಿತಿರಬೇಕು ತಿಳೀತೋ. ಸರಸು, ಅವರ ಮನೆ ಯಿಂದ ಹಾರ್ಮೋನಿಯಂ ತೆಗೆದುಕೊಂಡು ಬಂದೆಯೋನು ? ತಂಪು ಅದರ ಜೊತೆಗೆ ನಿನ್ನ ಸ್ವರಾನ ಸರಿಮಾಡಿಕೊಬಾರದಾ ? ನೋಡಿಲ್ಲಿ ಆ ಸ್ಕೂಲು ಮೇಸ್ಟರಿಗೆ ಹೇಳಿ ಬಂದಿದ್ದೇನೆ. ಸ್ಕೂಲಿನಿಂದ ಮೇಜನ್ನೂ ಎರಡು ಕುರ್ಚಿಗಳನ್ನೂ ತರಿಸಿ ಇಲ್ಲಿ ಹಾಕಿಸಿರು. ಮೇಜಿನ ಮೇಲೆ ಏನೇ ಸರಸು, ನೀನು ಹಾಕಿದ್ದಿ ನೋಡು, ಚೌಕ, ಅದನ್ನ ಹೊದ್ದಿಸಿ ಯಾವದಾದರೂ ಒಂದು ಗ್ಲಾಸಿನಲ್ಲಿ ಅಕ್ಕಿ ಹಾಕಿ, ಅದರಲ್ಲಿ ಊದನ ಕಡ್ಡಿ ಸಿಕ್ಕಿಸಿ ಇಡು. ಓ! ಮರತಿದ್ದೆ, ನನ್ನ ಅಂಗಿ ಜೋಬಿನಲ್ಲಿ–ಪೇಟೆಗೆ ಹಾಕಿಕೊಂಡು ಹೋಗಿರಲಿಲ್ಲವೇ, ಆ ಅಂಗಿ ಜೋಬಿನಲ್ಲಿ–ಗಂಧದ ಬಿಲ್ಲೆ, ಊದನಕಡ್ಡಿ ಎಲ್ಲಾ ಇದೆ. ತೆಗೆದಿಕೊ. ಅದನ್ನ ತೆಗೆಯೋ ವಾಗ ಇತರ ಕಾಗದಗಳೇನಾದರೂ ಕೆಳಗೆ ಬಿದ್ದು ಹೋದಾವು! ಏನೇ, ನಾನಿನ್ನು ಹೋಗಿ ಬರುತ್ತೀನಿ. ಇನ್ನು ಆ ಗಾಡೀನ ಕಟ್ಟಿಸಿಕೊಂಡು ಹೋಗಿ ಬರಬೇಕು.

ಸೀ:—ನಿಮ್ಮ ಧರ್ಮಕ್ಕೆ ಇಲ್ಲಿನಗೊಬ್ಬರದ ಗಾಡೀನೇನೂ ಕಟ್ಟಿಸಿಕೊಂಡು ಹೋಗ ಬೇಡಿ ಅಂದ್ರೆ.

ಸೀ ರಾ:—ಇನ್ನು ಈ ಹಳ್ಳೀಲಿ ಮೋಟರನ್ನೆಲ್ಲಿಂದ ತರೋದಕ್ಕೆ ಆಗುತ್ತೆ ?

ಸೀ:—ಬೇಕಾದರೆ ಅವರನ್ನ ನಡಿಸಿಕೊಂಡು ಬನ್ನಿ, ಅವಮಾನವೇನು ಇಲ್ಲ. ಸ್ಟೇಷನ್ನೂ ಒಂದು ಮೈಲಿ ಕೂಡ ಆಗೋದಿಲ್ಲ ಇಲ್ಲಿಗೆ. ಗಾಡಿ ಏನೂ ಬೇಡ. ಕೊಡೆಯನ್ನು ತೆಗೆದುಕೊಂಡು ಹೋಗಿ. ರಾಮು, ಕೊಡೆಯನ್ನ ತಂದುಕೊಡೊ.

ಸೀ ರಾ:—ಇನ್ನು ಆ ಕೊಡೆಯನ್ನು ತೆಗೆದುಕೊಂಡು ಹೋಗಬೇಕು. ಚೆನ್ನಾಗಿದೆ! ಇಲಿಗಳ ಕೈಗೆ ಸಿಕ್ಕಿ ಅದು ಎಲ್ಲಾ ತೂತುತೂತಾಗಿದೆ. ಹೋಗಲಿ, ಹೋಗುತಾ ದಾರೀಲಿ ಮೇಸ್ಟರ ಕೊಡೆಯನ್ನು ತೆಗೆದು ಕೊಂಡು ಹೋಗುತ್ತೀನಿ. ಸಿದ್ದನನ್ನ ಕರೆದುಕೊಂಡು ಹೋದರೆ ಅವರ ಸಾಮಾನುಗಳನ್ನೆಲ್ಲಾ ಹೊತ್ತುಕೊಂಡು ಬರುತ್ತಾನೆ.

ಇನ್ನು ನಾನು ಹೋಗಿಬರಲೋ ? ನೀನು ಎಲ್ಲಾ ನೋಡಿಕೊಳ್ಳುತ್ತಿ ತಾನೆ ? ನಾನು ಬರುತ್ತೇನಿ ಇನ್ನು.

(ಹೊರಡುವನು. ಅವನನ್ನು ಕಳುಹಿಸಿಕೊಡಲು ಎಲ್ಲರೂ ಹೊರಬಾಗಿಲವರಿಗೆ ಹೋಗುವರು.)

(ಪರದೆ ಬೀಳುವುದು.)

ದೃಶ್ಯ ೨

(ಅದೇ ಹಜಾರ. ಆಗ ಒಡೆದು ಹೋದ ಕಸೂತಿ ಪಟವನ್ನು ಸರಿಮಾಡಿ ಅದೇ ಸ್ಥಾನದಲ್ಲಿ ತಗಲುಹಾಕಿದೆ. ಅದರಲ್ಲಿ ಕಸೂತಿ ಹಾಕಿದವರ ಹೆಸರು 'ಸರಸಮ್ಮ' ಎಂದು ಲಕ್ಷಣವಾಗಿ ಕಾಣಿಸು ತ್ತಿದೆ. ಸೀತಾರಾಮಯ್ಯನವರು ಹೇಳಿಹೋಗಿದ್ದಂತೆ ಮೇಜು ಕುರ್ಚಿಗಳನ್ನು ತರಿಸಿ ಹಾಕಿಸಿ ಅದರ ಮೇಲೆ ಕೈಲಿ ಹಾಕಿದ್ದ ಚೌಕವನ್ನು ಹೊದ್ದಿಸಿ, ಒಂದು ಗ್ಲಾಸಿನಲ್ಲಿ ಊದನಕಡ್ಡಿಗಳನ್ನು ಸಿಕ್ಕಿಸಿ ಸರಸು ಅವನ್ನು ಹತ್ತಿಸಿ ಇಡುತ್ತಿದ್ದಾಳೆ. ಚೆನ್ನಾಗಿ ಬಾಚಿ ಹೆರಳುಹಾಕಿಕೊಂಡು ಹೊಸ ಸೀರೆ ಯುನ್ನುಟ್ಟಿರುವಳು. ಇನ್ನೊಂದೆಡೆ ಚಾಪೆಯನ್ನು ಹಾಸಿದೆ. ಪರದೆಯು ಮೇಲಕ್ಕೇಳುವುದು.)

ಪು:—(ಒಳಗಿನಿಂದ ವೀಳೆಯದೆಲೆಯ ತಟ್ಟೆಯನ್ನು ತಂದು ಮೇಲೆ ಅದನ್ನಿಡುತ್ತಾ ಅಕ್ಕನನ್ನು ಹಾಗೇ ದೃಷ್ಟಿಸಿ ನೋಡುತ್ತಿದ್ದು ಅಣಕಿಸುವ ದನಿಯಲ್ಲಿ) ಅಹಹ........

ಸ:—ಏನು ಅಹಹ........? ಏನದು ಹಾಗೆ ನೋಡುತಾ ನಿಂತಿರೋದು ? ಒಳಗೆ ಹೋಗಿ ಹಣ್ಣನ್ನು ಬಿಡಿಸಿಟ್ಟಿರುವ ಆ ತಟ್ಟೆಯನ್ನು ತೆಗೆದು ಕೊಂಡು ಬಾ.

ಪು:—ಊಂ. . . . ಆಗಲಿ (ಕಟ್ಟಿಕದಲದೆ ಹಾಗೆ ಅವಳನ್ನು ನೋಡುತ್ತಾ ನಿಂತಿರುವಳು.)

ಸ:—ಏನು 'ಆಗಲಿ' ಅಂದುಕೊಂಡು ಹಾಗೇ ನಿಂತಿದ್ದೀಯಾ ? ಅವರದೆಲ್ಲಾ ಊಟ ಆಯಿತು ಅಂತ ಕಾಣುತ್ತೆ, ಇನ್ನು ಇಲ್ಲಿಗೆ ಬಂದುಬಿಡು- ತ್ತಾರೆ. ನೀನು ಹೋಗಿ ತೆಗೆದುಕೊಂಡು ಬಾ ಹೋಗು...... ಏನದು ಹಾಗೆ ನೋಡುತ್ತಾ ಇದ್ದಿ ?

ಪು:—ನೀನು ಇವತ್ತು ತೆಗೆದುಕೊಂಡಿರೋ ಈ ಸೊಟ್ಟ ಬೈತಲೆ ಚೆನ್ನಾಗಿ

ಚೆನ್ನಾಗಿದೆಯೋ, ಇಲ್ಲಾ–ಇವತ್ತು ಬಂದಿದ್ದಾರಲ್ಲ–ಅವರ ಬೈತಲೆ ಚೆನ್ನಾಗಿದೆಯೋ ಅಂತ ನೋಡುತಾ ಇದ್ದೀನಿ.

ಸ:—ನೀನು ನನ್ನ ಸುಮ್ಮನೆ ಹಾಸ್ಯಮಾಡಬೇಡ. ನನಗೆ ಕೋಪ ಬಂದು ಬಿಡುತ್ತೆ. ನಡಿ ಒಳಕ್ಕೆ. ಹೊರಟು ಹೋಗು.

ಪು:—ನಾನು ಹೋಗೇ ಹೋಗುತ್ತೀನಿ. ನೀನೇ ಇರಿವಂತೆ ನಿನ್ನ ಗಂಡನ ಹತ್ತಿರ.

ಸ:—ಇದ್ದೇ ಇರುತ್ತೀನಿ. ನೀನೇನು ಕೇಳೋದಕ್ಕೆ ಅದನ್ನೆಲ್ಲಾ.

ಪು:—ಆ....ಅಮ್ಮನಿಗೆ, ಅಣ್ಣನಿಗೆ, ಎಲ್ಲಾ ಹೇಳುತ್ತೀನಮ್ಮ. ಹಿಂದೆ ಬಂದಿದ್ದೋರನ್ನೆಲ್ಲಾ ಅಕ್ಕ ಹಾಸ್ಯಮಾಡುತ್ತಿದ್ದಳು; ಹೀಗಿದ್ದಾರೆ ಹಾಗಿದ್ದಾರೆ ಅಂತ ಅಣಕಿಸುತ್ತಾ ಓಡಿ ಹೋಗುತ್ತಿದ್ದಳು. ಇವರನ್ನ ಮಟ್ಟಿಗೆ ಒಪ್ಪಿಕೊಂಡುಬಿಟ್ಟಿದ್ದಾಳೆ ಅಂತ.

ಸ:—ಕತ್ತೇ, ನೀನೊಬ್ಬ ಹಳ್ಳಿಗೌಡನ ಕೈಹಿಡೀವಂತೆ. ಒಳಗೆ ಹೋಗಿ ಆ ತಟ್ಟೇನ ತರುತ್ತೀಯೋ ಇಲ್ಲವೋ ?

ಪು:—ನಾನೇನೂ ತರೋದಿಲ್ಲ. ನಿನ್ನಗಂಡನ ಉಪಚಾರನ ನೀನೇ ಮಾಡು. ನೀನೇ ಬೇಕಾದರೆ ತಂದಿಡು. (ಹೊರಗಡೆಗೆ ಹೊರಟು ಹೋಗುವಳು.)

ಸ:—ಎಲ್ಲಿಯ ಹುಡುಗಿ ಇವಳು ! ಕೋಪಿಸಿಕೊಂಡು ಹೊರಟೇ ಹೋಗಿ ಬಿಟ್ಟಳೇ ! ಅವರೂ ಕೈತೊಳೆದುಕೊಂಡು ಈ ಕಡೆಗೆ ಬರುತಿರೋ ಹಾಗಿದೆ. ಊಟ ಆಗಿಬಿಟ್ಟಿತು ಅಂತ ಕಾಣುತ್ತೆ. ಎಲ್ಲಾ ಸರಿಮಾಡಿ ಇಡೋದರೊಳಗಾಗಿ ಬಂದೇಬಿಟ್ಟರಲ್ಲಾ. (ಬಾಗಿಲ ಕಡೆ ದೃಷ್ಟಿಸಿ ನೋಡುತ್ತಿದ್ದು ಇನ್ನೊಂದು ಕಡೆಯಿಂದ ಒಳಕ್ಕೆ ಚಿಮ್ಮುವಳು)

(ಹೆಗಲಿನ ಮೇಲೆ ಹೊದ್ದುಕೊಂಡಿದ್ದ ಟವಲಿನಿಂದ ಕೈಗಳನ್ನು ಒರಿಸಿಕೊಳ್ಳುತ್ತಾ ಕೃಷ್ಣಮೂರ್ತಿಯು ನಡುಬಾಗಿಲಿನಿಂದ ಒಳಕ್ಕೆಪ್ರವೇಶಿಸಿ ಷರಟಿನ ತೋಳುಗಳನ್ನು ಸರಿಪಡಿಸಿಕೊಳ್ಳುತ್ತಾ ಬಾಗಿಲ ಮೇಲ್ಭಾಗದಲ್ಲಿ ತಗಲುಹಾಕಿದ್ದ ಕಸೂತಿ ಪಟವನ್ನು ನೋಡಿ ಆ ನೋಟದಲ್ಲೇ ತಲ್ಲೀನನಾಗಿ ನಿಲ್ಲುವನು. ಮೊಗುಟವನ್ನು ಉಟ್ಟುಕೊಂಡಿದ್ದ ಸೀತಾರಾಮಯ್ಯನವರು ಹಾಗೆಯೇ ಕೈಯಲ್ಲಿ ಚೊಕ್ಕೋತನೆಯ ಹಣ್ಣನ್ನು ಸುಲಿದಿಟ್ಟಿದ್ದ ತಟ್ಟೆಯನ್ನು ಹಿಡಿದುಕೊಂಡು ಒಳಕ್ಕೆ ಪ್ರವೇಶಿಸಿ ಅದನ್ನು ಮೇಜಿನ ಮೇಲಿಡುವರು. ಕೃಷ್ಣಮೂರ್ತಿಯು ಅವರಿಗೆ ದಾರಿ ಸರಿದು ಆಕಡೆಗೆ ಹೋಗಿ ನಿಂತಿರುವನು)

ಸೀ ರಾ:—ತಾವು ಈ ಕಡೆ ದಯಮಾಡಿಸಬೇಕು.. ಬನ್ನಿ, ಇಲ್ಲಿ ಕುರ್ಚಿಯ ಮೇಲೆ ಕುಳಿತುಕೊಳ್ಳುವಿರಂತೆ.

ಕೃ:—(ಕುರ್ಚಿಯ ಬಳಿಗೆ ಬಂದು ಅದರಲ್ಲಿ ಕುಳಿತು) ತಾವೂ ಕುಳಿತುಕೊಳ್ಳಬಹುದಲ್ಲಾ..ಮಡಿಯನ್ನು ಬಿಚ್ಚಿರಿಸಿ ಬರಬೇಕೇನೋ ?

ಸೀ ರಾ:—ಅದೇನೂ ಇಲ್ಲ.

ಕೃ:—ಚಾಪೆಯ ಮೇಲೇ ಕುಳಿತುಬಿಡೋಣ. ಅದಕ್ಕೇನು—

ಸೀ ರಾ:–(ಇನ್ನೊಂದು ಕುರ್ಚಿಯನ್ನೆಳೆದು ಅದರ ಮೇಲೆ ಕುಳಿತುಕೊಂಡು) ಕಷ್ಟವೊಂದೇನೂ ಇಲ್ಲ ಅಂದ್ರೆ. ಇಲ್ಲೇ ಕುಳಿತರೇ ಆಯಿತು. ಆದರೆ ಹಿಂದಿನಿಂದ ನಡೆದು ಬಂದಿದ್ದು ನೋಡಿ,ಮಡಿ, ಆಚಾರ. ಸಂಧ್ಯಾವಂದನೇನೂ.... ಊಟ ಮಾಡುವ ಕಾಲದಲ್ಲಿ ಮಡಿ ಉಟ್ಟಿರದಿದ್ದರೆ ಮನಸ್ಸಿಗೆ ಹೇಗೆ ಹೇಗೋ ಇರುತ್ತೆ.

ಕೃ:—ಹಾಗಾದರೆ ನಾನು ಹೀಗೇ ಊಟಕ್ಕೆ ಕುಳಿತುಬಿಟ್ಟದ್ದು ತಮಗೆ ಅಸಮಾಧಾನವಾಯಿತೇನೋ ?

ಸೀ ರಾ:—ಅಯ್ಯೋ ನಾನು ಹಾಗೆ ಅಂದನೇ ? ಎಂದಿಗೂ ಇಲ್ಲ. ತಾವು ದೊಡ್ಡದೊಡ್ಡ ಸ್ಥಳಗಳಲ್ಲಿ ಓಡಾಡತಕ್ಕವರು. ತಾವು ಹೀಗಿರದಿದ್ದರೆ ಆಗುತ್ತದೆಯೇ. ನಮಗೆ ಹೇಳಿದೆ ಅಷ್ಟೆ. ಏನೋ ನಮ್ಮ ಕಾಲ ಹಾಗೇ ತಳ್ಳಿಹೋಯಿತು. ನಾನು ಕೆಲಸದಲ್ಲಿದ್ದ ಪರಿಯಂತರವೂ ನನ್ನ ಸ್ನೇಹಿತರು ನನಗೆ ಹೋಟೆಲಿನಲ್ಲಿ ತಿಂಡಿ ತಿನ್ನಿಸಲು ಎಷ್ಟೆಷ್ಟೋ ಪ್ರಯತ್ನಪಟ್ಟರು. ಕೊನೆಗೆ ನಮ್ಮ ಸಾಹೇಬರು 'ಅವರೊಂದಿಗೆ ಕಾಫಿ ತೆಗೆದುಕೊಳ್ಳಿ' ಎಂದು ಎಷ್ಟೆಷ್ಟೋ ಹೇಳಿದರು; ಬಲವಂತಪಡಿಸಿದರು. ಸರ್ಕೀಟು ಹೋಗುತ್ತಿದ್ದಾಗಲೂ ಕೈಕಾಲು ತೊಳೆದುಕೊಂಡ ಹೊರತು ಹಣ್ಣು–ಹಂಪಲಗಳನ್ನೂ ಬಾಯಿಗೆ ಸೋಕಿಸುತ್ತಿರಲಿಲ್ಲ.

ಕೃ:— ಈಗ ಈ ಹಣ್ಣು ತಂದಿಟ್ಟಿರುವುದು ಯಾರಿಗೆ ? ತಾವು ತೆಗೆದುಕೊಳ್ಳುವುದಿಲ್ಲವೇನು ?

ಸೀ ರಾ:—ಈಗ ಹಾಗೆಲ್ಲಾ ಅಂದುಕೊಂಡು ಕುಳಿತುಕೊಂಡರೆ

ಆಗುತ್ತದೆಯೇ. ಅದೊಂದು ಕಾಲ. ತಕ್ಕೊಳ್ಳಿ ಅಂದ್ರೆ. ನಾನೂ ತೆಗೆದುಕೊಳ್ಳುತ್ತೇನೆ. ನಮ್ಮ ತೋಟದ್ದು ಇದು.

ಕೃ:—(ಕುಸುಮಗಳನ್ನು ಬಾಯೊಳಕ್ಕೆ ಎಸೆದುಕೊಳ್ಳುತ್ತಾ ಸ್ವಲ್ಪ ಹುಳಿ ತೋರುತ್ತಿದ್ದರೂ ಅದನ್ನು ತೋರಿಸಿಕೊಳ್ಳದೆ ಚಪ್ಪರಿಸುತ್ತಾ) ಎಷ್ಟು ಗಿಡಗಳನ್ನು ಹಾಕಿಸಿದ್ದೀರಿ ತೋಟದಲ್ಲಿ?

ಸೀ ರಾ:—ಇವೆ, ಸುಮಾರು ಒಂದು ಇಪ್ಪತ್ತು ಇವೆ ಸಿಂಬೆ, ಕಿತ್ತಳೆ ಎಲ್ಲಾ ಸೇರಿ.

ಕೃ:—ಏನು ಇಲ್ಲಿ ಕಿತ್ತಳೆ ಆಗುತ್ತದೆಯೇನು?

ಸೀ ರಾ:—ಆಗಬಹುದು. ಇನ್ನುಮೇಲೆ ನೀವು ಪ್ರಯತ್ನಪಡಬೇಕು.

ಕೃ:—ಈಗ ತಾನೆ ಇದೆ ಅಂದಿರಲ್ಲಾ?

ಸೀ ರಾ:—ನಾನು ಹೇಳಿದ್ದು ನಾಡಕಿತ್ತಳೆ. ಬನ್ನಿ ತೋಟಕ್ಕೆ ಹೋಗಿ ಬರೋಣ.

ಕೃ:—ಹೊರಡೋಣವೇನು ಹಾಗಾದರೆ?

ಸೀ ರಾ:—ಬಿಸಿಲು ತಂಪಲಿ. ಸಂಜೆಗೆ ಹೋದರಾಯಿತು. ನೀವು ಹೇಗಿದ್ದರೂ ತೆಗೆದುಕೊಳ್ಳುತ್ತೀರಿ ಎನ್ನುವುದು ಗೊತ್ತಾಗಿದೆಯಲ್ಲ. ಸಿಧಾನವಾಗಿ ನೋಡೋದು ಮಾಡೋದು ಮಾಡೋಣ.

ಕೃ:—ಅದಕ್ಕೇನು ಹಾಗೇ ಆಗಲಿ. ತಾವು ಎಷ್ಟಾದರೂ ಹಿರಿಯರು. ನಮ್ಮ ಜನಗಳಲ್ಲಿ ಹಿರಿಯ ತಲೆ ಇರುವುದು ಏನು ಬೆರಳಿನಲ್ಲಿ ಎಣಿಸೋ ಅಷ್ಟಿದೆ. ತಮ್ಮ ಮಾತಿಗೆ ನಾವು ಎದುರು ಹೇಳಲು ಆಗುತ್ತದೆಯೇ.

ಸೀ ರಾ:—ಇನ್ನೆಲ್ಲಾ ನಿಮ್ಮಗಳದೇ ಸ್ವಾಮಿ. ಓದಿದ್ದೀರಿ, ಮುಂದಕ್ಕೆ ಬಂದಿದ್ದೀರಿ. ಆಸ್ತಿಯಿದೆ. ಐಶ್ವರ್ಯವಿದೆ. ದೇವರ ಕೃಪೆಯೊಂದು ಇದ್ದರೆ ಶೀಘ್ರವಾಗಿ ಮದುವೆಯೂ ಆಗಬಹುದು.

ಕೃ:—ಏನಂದಿರಿ? ಮದುವೆ! ಯಾರಿಗೆ ಮದುವೆ? ನನಗೆ ಆ ಯೋಚನೆಯೇ ಇಲ್ಲ ಸ್ವಾಮಿ.

ಸೀ ರಾ:—ಹಾಗಂದರೆ ಆಗುತ್ತದೆಯೇ? ಇನ್ನು ಎಷ್ಟು ದಿವಸ ತಾವು ಹೀಗೇ ಇರೋದಕ್ಕೆ ಆಗುತ್ತದೆ. ನಿಮ್ಮ ಜನ ಅನ್ನಿಸಿಕೊಂಡಿರೋ ನಾವು ನಿಮ್ಮನ್ನ ಸುಮ್ಮನೆ ಬಿಟ್ಟುಬಿಡೋದಕ್ಕೆ ಆಗುತ್ತದೆಯೇ?

ಕೃ:—ಏನಾದರೂ ಮಾಡಿ ಸ್ವಾಮಿ, ಈಗ ಯಾತಕ್ಕೆ ಆ ವಿಚಾರವೆಲ್ಲಾ. ಆ ಮಾತು ಬಂದಾಗ ಆ ಮಾತು.

(ಸಿದ್ದನು ಹಾರ್ಮೋನಿಯಂ ಪೆಟ್ಟಿಗೆಯನ್ನು ಹೊತ್ತು ತಂದು ಚಾಪೆಯ ಮೇಲೆ ಅದನ್ನು ಇಡುವನು)

ಪು:—(ಒಳಗಿನಿಂದ ಓಡಿ ಬಂದು) ಏನೋ, ಎಷ್ಟು ಹೊತ್ತು ಹೋಗಿಬಿಟ್ಟಿದ್ದೆ! ಇಷ್ಟು ಹೊತ್ತು ಆಗಬೇಕೆ ಇಸುಕೊಂಡು ಬರೋದಕ್ಕೆ?

ಸಿದ್ದ:—ಅವರು ಎಷ್ಟು ಹೊತ್ತಾದರೂ ಕೊಡಲಿಲ್ಲಮ್ಮ.

ಸೀ ರಾ:—ಇರಲಿ ನೀನು ಹೊರಕ್ಕೆ ಹೊರಡು. (ಸಿದ್ದನು ಹೊರಟು ಹೋಗುವನು) ಹಾರ್ಮೋನಿಯಂ ಸರಿಮಾಡಿಸುವುದುಕ್ಕೆ ಕೊಟ್ಟಿದ್ದೆ; ಹೋಗಿ ತೆಗೆದು ಕೊಂಡು ಬಂದ. ಸರಸೂ, ಸರಿಯಾಗಿದೆಯೋನೋ ಹಾರ್ಮೋನಿಯಂ ನೋಡು ಬಾರೇ ಇಲ್ಲಿ. ನೀವು ನನ್ನ ದೊಡ್ಡ ಮಗಳನ್ನು ನೋಡಿಲ್ಲ ಎಂದು ಕಾಣುತ್ತೆ. ಬಹಳ ಬುದ್ಧಿವಂತೆ. ಇವಳಿಗಿಂತ ನಾಲ್ಕು ವರ್ಷ ದೊಡ್ಡವಳಷ್ಟೆ ವಯಸ್ಸಿನಲ್ಲಿ.

ಪು:—ಹೌದು, ವಯಸ್ಸಿನಲ್ಲಿ ನನಗಿಂತ ದೊಡ್ಡವಳೇ. ಬುದ್ಧಿಯಲ್ಲಿ ಮಟ್ಟಿಗೆ ನನಗಿಂತ ಚಿಕ್ಕವಳು.

ಸೀ ರಾ:—ನಿನ್ನ ಯಾರೇ ಇಲ್ಲಿ ಕರೆಸಿದೋರು ಕೇಳೋದಕ್ಕೆ? ತುಂಟು ಹುಡುಗಿ!

ಕೃ:—(ಅವಳನ್ನು ಹಿಡಿದುಕೊಳ್ಳಲು ಹೋಗಿ ಅವಳು ಕೈಗೆ ಸಿಗದೆ ಓಡಿ ಹೋಗಲು) ತುಂಟು ಹುಡುಗೀನೇ ಸರಿ. ಗಂಡನನ್ನ ಕುಣಿಸಿಬಿಡುತ್ತಾಳೆ ಅಂತ ಕಾಣುತ್ತೆ.

ಸೀ ರಾ:—ನಮ್ಮ ದೊಡ್ಡ ಹುಡುಗಿ ಇದ್ದಾಳೆ ನೋಡಿ, ಅಪರಂಜಿ ಚಿನ್ನ. ಸರಸೂ, ಬಾಮ್ಮ ಇಲ್ಲಿ ಇವರೇನೂ ಹೊರಗಿನವರಲ್ಲ, ಬಾ. (ಸರಸು ನಾಚಿಕೆಯನ್ನು ಸೂಸುತ್ತ ಒಳಗಿನಿಂದ ಬಂದು ಬಾಗಿಲ ಬಳಿ ನಿಲ್ಲಲು) ಬಾ, ಪುಟ್ಟು, ಅವಳನ್ನು ಕರೆದುಕೊಂಡು ಬಾ ಇಲ್ಲಿ.

ಪು:—ಬಂದು ನಿಂತಿದ್ದಾಳೆ; ನಾನಿನ್ನೇನು ಕರೆದುಕೊಂಡು ಬರೋದು.

ಸೀ ರಾ:—ಹಾರ್ಮೋನಿಯಂ ತೆಗೆದುಕೊಡು ಅವಳಿಗೆ.

ಕೃ:—(ತನ್ನನ್ನೇ ಕದ್ದು ನೋಡುತ್ತಿರುವ ಸರಸೂನ ತಾನೂ ನೆಟ್ಟದೃಷ್ಟಿಯಲ್ಲಿ ನೋಡುತ್ತಾ). ಏನು, ಸಂಗೀತ ಚೆನ್ನಾಗಿ ಅಭ್ಯಾಸ ಆಗಿದೆಯೇ?

ಸೀ ರಾ:—ಪಟ್ಟಣದಲ್ಲಿದ್ದಾಗ ಪಾಠ ಸರಿಯಾಗಿ ನಡೀತಿತ್ತು. ಇಲ್ಲಿಗೆ ಬಂದ ಮೇಲೆ,ಇಲ್ಲಿ ಎಲ್ಲಿ ಮೇಷ್ಟರನ್ನ ತರುವುದಕ್ಕಾಗುತ್ತೆ ? ಏನೋ ಅಲ್ಲೇ ವರ್ಣಗಳು ಕೀರ್ತನೆ ವರಿಗೆ ಬಂದಿದ್ದಳು.

ಕೃ:—ಹಾಡಿದರೆ ಕೇಳಬಹುದಲ್ಲಾ.

ಸೀ ರಾ:—ಅದಕ್ಕೇನು,ಹಾಡುತ್ತಾಳೆ. ಸರಸು, ಎಷ್ಟೊಂದು ನಾಚಿಕೆಯೇ ನಿಂದು! ಎಲ್ಲಿ ಒಂದೆರಡು ಕೀರ್ತನೆಗಳನ್ನು ಬಾರಿಸು ಬಾ. ಪುಟ್ಟೂನೂ ನಿನ್ನ ಜೊತೆಯಲ್ಲಿ ಹಾಡುತ್ತಾಳೆ.

(ಸೀತಮ್ಮ ಹಿಂದಿನಿಂದ ಸರಸೂನ ತಟ್ಟಿ ಹಿಂದಕ್ಕೆ ಸರಿದು ನಿಲ್ಲುವಳು. ಸರಸು ಬಲವಂತ ಕ್ಕೋಸ್ಕರ ಬಂದವಳಂತೆ ಬಂದು ಹಾರ್ಮೋನಿಯಂ ತೆಗೆದುಕೊಂಡು ಶ್ರುತಿ ಮಾಡುವಳು.)

ಕೃ:—ವಯಸ್ಸು! ನಾಚಿಕೆ! ನೀನೂ ಹೋಗಮ್ಮ, ಅಕ್ಕನ ಜೊತೆಯಲ್ಲಿ ಹಾಡು ಹೋಗು.

ಪು:—ಅವಳ ಕಂಠ ನನ್ನ ಕಂಠದೊಂದಿಗೆ ಬೆರೆಯೋದಿಲ್ಲ.

ಸೀ ರಾ:—(ಸರಸು ನೊಂದುಕೊಂಡು ಅವಳನ್ನು ದುರುಗುಟ್ಟಿಕೊಂಡು ನೋಡುತ್ತಿರುವುದನ್ನು ನೋಡಿ) ಸಾಕು ಸುಮ್ಮನಿರೆ. ನಿನ್ನದು ಮಹಾ ಕೋಗಿಲೆಯ ಕಂಠ!

ಪು:—ಹೌದು, ನಂದು ಕೋಗಿಲೆ ಕಂಠಾನೇ. ಅವಳು ನಮ್ಮ ಅಕ್ಕ ತಾನೆ, ಕಾಗೆ ಕಂಠ ಅವಳದು.

ಸೀ ರಾ:—(ಅವಳ ಕಿವಿಯನ್ನು ಚಿಗುಟಲು ಹೋಗಿ ಅವಳು ತಪ್ಪಿಸಿಕೊಂಡು ಹೋಗಲು) ಮಹಾ ಪಟಿಂಗಳು ನೋಡಿ ಇವಳು. ಆದರೆ ಬಹಳ ಚುರುಕು. ಸರಸು, ನೀನು ಬಾರಿಸಮ್ಮ. ಎಲ್ಲಿ, "ನನ್ನು ಬ್ರೋಚುಟ ಕೆವರು ನ್ನಾರು। ನನ್ನುತಾಂಗ ಶ್ರೀ ಸೀತಾರಾಮ॥" ಬಾರಿಸು ಅದನ್ನ. (ಸರಸು ಬಾರಿಸತೊಡಗಲು) ಹಾಡುತ್ತಾ ಬಾರಿಸಬೇಕು. (ಸರಸು ಹಾಡಲು ಯತ್ನಿಸುವಳು. ಗಂಟಲು ಹಿಡಿದುಬರುವುದು."ನನಗೆ ಆಗೋದಿಲ್ಲ"ಎಂದು ನಿಲ್ಲಿಸಿಬಿಡುವಳು) "ಕೊಲುವೆಯುನ್ನಾಡೆ ಕೋದಂಡಪಾಣಿ" ಅದನ್ನ ಹೇಳು. (ಸರಸು ಅದೂ ಬರುವುದಿಲ್ಲವೆಂದು ತಲೆಯನ್ನಲ್ಲಾಡಿಸುವಳು) ಹಾಗಾದರೆ ನಿನಗೆ ಯಾವುದು ಬರುತ್ತದೋ ಅದನ್ನೇ ಹೇಳು.

ಸೀ:—(ಬಾಗಿಲ ಹಿಂದೆ ನಿಂತು) "ಭುವನಿ ದಾಸುಡಾನಿ ಪೇರಾಸಚೇ," ಹೇಳೇ. (ಸಂಜ್ಞೆಮಾಡುವಳು)

ಸ:—ಪುಟ್ಟೂನೂ ನನ್ನ ಜೊತೆಯಲ್ಲಿ ಹಾಡೋದಕ್ಕೆ ಬಂದರೆ ಹೇಳುತ್ತೀನಿ.

ಸೀ ರಾ:—ಬಾರೆ ಪುಟ್ಟು, ಲೇ, ಪುಟ್ಟೂನ ಕಳಿಸೇ ಇಲ್ಲಿ.

ಸೀ:—ಬರುತಾಳೆ ಅಂದ್ರೇ. ಪುಟ್ಟು, ಹೋಗಿ ಸರಿಯಾಗಿ ಕುಳಿತುಕೊಂಡು ತಾಳ ಹಾಕುತ್ತ ಅಕ್ಕನೊಡನೆ ಸರಿಯಾಗಿ ಹಾಡಬೇಕು, ತಿಳೀತೇ? ಹೋಗು. (ಕಳುಹಿಸಿಕೊಟ್ಟು ಬಾಗಿಲಿನಲ್ಲಿ ವಾರೆಗೆ ನಿಲ್ಲುವಳು. ಪುಟ್ಟು ಧರ್ಪದಿಂದ ಬಂದು ಕುಳಿತು ಹಾಡಲು ತೊಡಗುವಳು. ಸರಸು ಬಾರಿಸುವಳು)

ಸರಸು, ಪುಟ್ಟು:—

ಭುವನಿದಾಸುಡಾನೀ। ಪೇರಾಸಚೇ।
ಬೊಂಕುಲಾಡುತೀವಿ। ಬುಧಮನೋಹರ ॥ ಪ ॥
ಅವಿವೇಕ ಮಾನವುಲು ಕೋರಿ ಕೋರಿ।
ಅಡ್ಡದ್ರೋವದ್ರೋಕ್ಕಿತಿನಿ ಬ್ರೋವವೇ ॥ ಅ ಪ ॥

ಕೃ:—ಬಹಳ ಚೆನ್ನಾಗಿ ಹಾಡುತ್ತಾರೆ ಅಂದ್ರೆ. ನೋಡಿ, ಸಂಗೀತ ಸಂಗೀತ ಅಂದರೆ ನಮಗೆ ತ್ಯಾಗರಾಜಕೃತಿಗಳ ವಿನಹ ಬೇರೆ ಇಲ್ಲ ಅಂತ ಆಗಿದೆ. ನಮ್ಮಲ್ಲೇನು ಕನಕದಾಸರದು ಪುರಂದರದಾಸರದು ಕೃತಿಗಳಿಲ್ಲವೇ?

ಸೀ ರಾ:—ಮೇಸ್ಟರು ಹೇಳಿಕೊಟ್ಟಿರೋದನ್ನ ಹೇಳುತ್ತಾರೆ. ಆ ಮೇಸ್ಟರುಗಳಿಗೆ ನಿಮ್ಮ ಹಾಗೆ ಕನ್ನಡದಲ್ಲಿ ಅಭಿಮಾನ ಇರಬೇಕಲ್ಲ.

ಕೃ:—ಅದು ನಿಶ್ಚಯ ಎನ್ನಿ. ಕೂಪಮಂಡೂಕದ ಹಾಗೆ ಅವರ ದೃಷ್ಟಿ ಹೊರಗೆಲ್ಲಿ ಚಲಿಸುತ್ತೆ. ಹಿಂದೂಸ್ತಾನಿ ಯಾವದಾದರೂ ಹೇಳಿ ಕೊಟ್ಟಿದ್ದಾರಾ?

ಸೀ ರಾ:—ಬರುತ್ತದೆಯೇನಮ್ಮ?

(ಸರಸು ತಲೆಯನ್ನಲ್ಲಾಡಿಸುವಳು. ಪುಟ್ಟು ಯಾವುದನ್ನೊ ಹಾಡಲು ಹೋಗುವಳು. ಸರಸು ಅವಳನ್ನು ಸುಮ್ಮನಿರಿಸುವಳು. ಪುಟ್ಟು ಸಿಡುಗುಟ್ಟಿಕೊಂಡು ಅಲ್ಲಿಂದ ಎದ್ದುಬಿಡುವಳು. ಸರಸು ತಲೆ ತಗ್ಗಿಸಿಕೊಂಡು ಕುಳಿತುಕೊಳ್ಳುವಳು.)

ಕೃ:—ಹಿಂದೂಸ್ತಾನಿಗೂ ಕರ್ಣಾಟಕ ರಾಗಕ್ಕೂ ಹೆಚ್ಚೇನೂ ವ್ಯತ್ಯಾಸ ವಿಲ್ಲ. ಈಗ ಇವರು ಹೇಳಿದ್ದು ಶ್ರೀರಂಜನಿ ಅಲ್ಲವೆ? ಹಿಂದೂಸ್ತಾನಿಯಲ್ಲಿ ಇದನ್ನೇ ಭಾಗೇಶ್ವರಿ ಅಂತಾರೆ. ನೀವು ಇದನ್ನು ಕೇಳಿಲ್ಲವೇನು? ಪ್ಲೇಟುಗಳಲ್ಲೆಲ್ಲಾ ಬಂದಿದೆ. "ಈ ಘನ ಪ್ರೇಮಕೆ ನಾ

ಋಣಿಯಾದೆ'' (ಹಾಡತೊಡಗುವನು. ಸೀತಮ್ಮನು ಬಾಗಿಲಿನಲ್ಲಿ ಇಣಿಕಿಹಾಕುತ್ತಾ ನೋಡುತ್ತಿರುವಳು. ತನ್ನ ಅಳಿಯ ಆಗತಕ್ಕವನಿಗೆ ಸಂಗೀತ ಅಷ್ಟರ ಮಟ್ಟಿಗೆ ಬರುವುದಲ್ಲ ಎಂಬ ಹೆಮ್ಮೆ ಮುಖದಲ್ಲಿ ತೋರುತ್ತಿರುವುದು. ಕೃಷ್ಣಮೂರ್ತಿ ಎಲ್ಲೋ ಷುರು ಮಾಡಿ ಎಲ್ಲಿಗೋ ಹೋಗುತ್ತಿರುವನು. ಪುಟ್ಟು ಸರಸು ಬಳಿಗೆ ಹೋಗಿ ಅವಳನ್ನು ಅಣಕಿಸುತ್ತಿರುವಳು.)

ಸೀ ರಾ:—ನನಗೆ ಅಷ್ಟು ವಿಷಯ ಗೊತ್ತಿಲ್ಲ. ಗೊತ್ತಿಲ್ಲದೇ ಇರೋದನ್ನ ಗೊತ್ತಿಲ್ಲ ಅಂತ ಒಪ್ಪಿಕೊಳ್ಳುವುದರಲ್ಲಿ ಏನು ಅವಮಾನ.

ರಾ:—[ಹೊರಗಿನಿಂದ ಕುಣಕೊಂಡು ಬರುತ್ತಾ] ಯಾರು ಇಷ್ಟರ ಮಟ್ಟಿಗೆ ಹಾಡುತ್ತಿರುವವರು! ಸರಸೂಗಾದರೂ ಇಷ್ಟರ ಮಟ್ಟಿಗೆ ಬಂದಿದ್ರೆ ಇನ್ನೇನು ಇಲ್ಲ. (ಅಲ್ಲಿ ಅಪ್ಪನ ಬಿರುಗಣ್ಣಿನ ನೋಟಕ್ಕೆ ತುತ್ತಾಗಿ ಹಾಗೆ ಅವಕ್ಕಾಗಿ ನಿಲ್ಲುವನು)

ಕೃ:—(ಹಾಡುವುದನ್ನು ನಿಲ್ಲಿಸಿ) ಈತ ಯಾರು ?

ಸೀ ರಾ:—ಇವನೇ ನನ್ನ ಹಿರಿಯ ಮಗ. ಹಿರಿಯನೂ ಇವನೇ ಕಿರಿಯನೂ ಇವನೇ ಅನ್ನಿ. ಮೊದಲು ಸರಸು, ಆಮೇಲೆ ಇವನು, ಆಮೇಲೆ ಪುಟ್ಟು.

ಕೃ:—ಇವನು ಯಾವ ಕ್ಲಾಸಿನಲ್ಲಿ ಓದುತ್ತಿದ್ದಾನೆ ?

ಸೀ ರಾ:—ಈಗಿನ ಕಾಲದಲ್ಲಿ ಬ್ರಾಹ್ಮಣರಿಗೆ ಎಷ್ಟು ಓದಿದರೂ ಏನೂ ಪ್ರಯೋಜನ ಆಗೋದಿಲ್ಲ ಅಂತ ಎಲ್ಲಾ ನಿಲ್ಲಿಸಿ ಬಿಟ್ಟಿದ್ದೇನೆ. ನಾಲ್ಕು ಮಾತು ಆಡುವಷ್ಟಾದರೂ ಬರಲಿ ಅಂದು ಮನೇಲಿ ಮಟ್ಟಿಗೆ ಹೇಳಿಕೊಡುತ್ತಿದ್ದೀನಿ. ಓದೋದು, ಪಾಸುಮಾಡೋದು, ಡಿಗ್ರಿಗಳನ್ನು ಹಾಕಿಕೊಳ್ಳೋದು ಎಲ್ಲ ನಿಮ್ಮಂತೋರಿಗೆ ಬಿಟ್ಟಿದೆ ಸ್ವಾಮಿ ದುಡ್ಡಿರೋರಿಗೆ.

ಕೃ:—ನಾವು ಓದಿ ಕಡಿದಿದ್ದೂ ಅಷ್ಟರಲ್ಲೇ ಇದೆ.

ಸೀ ರಾ:—ನಾನೂ ಅವನನ್ನ ಈ ಜಮೀನಲ್ಲಿ ನಿಲ್ಲಿಸಬೇಕು ಅಂತ ಇದನ್ನ ತೆಗೆದುಕೊಂಡೆ. ಅವನಿಗೆ ನೋಡಿದರೆ ವ್ಯವಸಾಯಕ್ಕಿಂತ ವ್ಯಾಪಾರದಲ್ಲಿ ಹೆಚ್ಚು ಆಸಕ್ತಿ ಇರೋ ಹಾಗೆ ತೋರುತ್ತಿದೆ. ಯಾರು ಯಾರಿಗೆ ಯಾವ ಯಾವುದರಲ್ಲಿ ಆಸಕ್ತಿ ಇದೆಯೋ ಅದರಲ್ಲಿ ನಿಲ್ಲಿಸೋದು ತಾನೆ ತಂದೆಯಾದವನ ಕರ್ತವ್ಯ! ಆದರಿಂದಲೇ ಈಗ ಈ ಗ್ರಾಮಾನ ಮಾರ-

ಬೇಕು ಅಂತ ಮಾಡಿಕೊಂಡಿರೋದು. ಇಲ್ಲದೆ ಇದ್ದರೆ ಇದನ್ನಯಾರು ಕೊಡುತಾ ಇದ್ದರು. ಸದ್ಯಕ್ಕೆ ಸರಸೂಗೆ ಒಂದು ಮದುವೆ ಮಾಡಿಬಿಟ್ಟರೆ ಆಮೇಲೆ ನೋಡಿಕೊಳ್ಳೋಣ. ಇನ್ನೂ ಐದಾರು ವರ್ಷ ಖರ್ಚುಗಳೊಂದೂ ಇರೋದಿಲ್ಲ. ಎಲ್ಲಾ ಒಂದು ಸ್ಥಿತಿಗೆ ತರಬಹುದು. ತಾವು ದೊಡ್ಡ ಮನಸ್ಸು ಮಾಡಿದರೆ ನಮ್ಮ ಮನೆಯನ್ನು ಉದ್ಧಾರಮಾಡಿದ ಹಾಗಾಗುತ್ತೆ.

ಕೃ:—ಜಮೀನು ವಿಷಯದಲ್ಲಿ ಆಗಲೇ ಹೇಳಿದೆನಲ್ಲಾ, ನನಗೇನೋ ಇದರಲ್ಲಿ ಕಾಯಿಷ್ಟು ಇದೆ. ಮುಂದೆ ನೋಡೋಣ.

ಸೀ ರಾ:--ಅದು ಇರಲಿ. ಆಗಲೇ ಅದು ಇತ್ಯರ್ಥವಾದ ಹಾಗೇ ಆಯಿತಲ್ಲ. ರಾಮು, ನೀನು ಒದಿಕೊ ಹೋಗು ನಡಿ ಒಳಗೆ. ಇನ್ನು ನೀವು ಜಡೆ ಹಾಕಿಕೊಳ್ಳಬೇಕೋ ಏನು ಮಾಡಿಕೊಬೇಕೋ ಹೋಗಿ ನೋಡಿರಮ್ಮ (ಅವರ ಗಳೆಲ್ಲಾ ಒಳಕ್ಕೆ ಹೋಗಲು) ನಮ್ಮ ಹುಡುಗಿ ವಿಷಯದಲ್ಲಿ ತಾವು ದೊಡ್ಡಮನಸ್ಸು ಮಾಡಬೇಕು ಅಂದೆ.

ಕೃ:--(ಹುಸುನಗೆಯನ್ನು ಸೂಸುತ್ತಾ) ನಾನು ಹಿಂದೇನೇ ಹೇಳಿದೆನಲ್ಲಾ, ನಿಮಗೆ ನಕ್ಷತ್ರ ಎಲ್ಲಾ ಸರಿಹೋಗಬೇಕು ತಾನೆ.

ಸೀ ರಾ:--ನನಗೆ ಆ ಹುಚ್ಚೊಂದೂ ಇಲ್ಲ ಸ್ವಾಮಿ. ಮನೋನಿಶ್ಚಯವೇ ನಿಶ್ಚಯ.

ಕೃ:—ನನಗಾದರೂ ಯೋಚಿಸುವುದಕ್ಕೆ ಸ್ವಲ್ಪ ಅವಕಾಶ ಕೊಡಿ. ರಾತ್ರಿ ಆ ವಿಚಾರವನ್ನು ಕುರಿತು ಆಲೋಚನೆ ಮಾಡೋಣ.

ಸೀ ರಾ:—ಹಾಗೇ ಆಗಲಿ, ತಾವು ಇಲ್ಲಿ ರಾತ್ರಿ ನಿಲ್ಲುತ್ತೇನೆ ಅಂದಿದ್ದು ನಮಗೆ ಬಹಳ ಸಂತೋಷ ಆಯಿತು. ಅಷ್ಟರ ಮಟ್ಟಿಗೆ ದೊಡ್ಡ ಮನಸ್ಸು ಮಾಡಿದರಲ್ಲ. ಸಂಜೆ ರೈಲಿಗೆ ಎಲ್ಲಿ ಹೊರಟು ಬಿಡುತ್ತಿರೋ ಅಂತಿದ್ದೆ.

ಕೃ:—ಹಾಗಾದರೆ ಸಂಜೆ ರೈಲಿಗೆ ಹೋಗುವ ವಿಷಯದಲ್ಲಿ ತಮ್ಮ ಅಭ್ಯಂತರವೇನೂ ಇರಲಿಲ್ಲವಲ್ಲ ? ಈಗಲೂ ಹೊರಟುಬಿಟ್ಟರೂ ಹೊರಟು ಬಿಡುವುದೇ.

ಸೀ ರಾ:—ಇಲ್ಲ ಇಲ್ಲ. ಅದೆಂದಿಗೂ ಆಗದು. ನಾನು ಒಳಗೆ ಹೋಗಿ ಹೇಳಿ ಬರುತ್ತೇನೆ. ತಾವು ಮಧ್ಯಾಹ್ನದ ಹೊತ್ತೇನು ಕಾಫೀನೋ, ಟೀನೋ ತೆಗೆದುಕೊಳ್ಳುವುದು ?

ಕೃ:—ಯಾವದಾದರೂ ಸರಿಯೇ. ನನಗೇನು ಅಚ್ಚ ಮೈಸೂರಿನವರ ಹಾಗೆ ಕಾಫೀನೇ ಆಗಬೇಕು ಅಂತಿಲ್ಲ. ಉತ್ತರಕರ್ಣಾಟಕದ ಗೆಳೆಯರು ನನಗೆ ಅನೇಕರು ಇರುವುದರಿಂದ ಚಹಾನೂ ಚೆನ್ನಾಗಿ ರೂಢಿಯಾಗಿದೆ.

ಸೀ ರಾ:—ಸಂತೋಷ. ಬಂದೆ. ಒಳಗೆ ಹೋಗಿ ಹೇಳಿಬಿಟ್ಟು ಬಂದುಬಿಡುತ್ತೇನೆ. (ಒಳಕ್ಕೆ ಹೋಗುವನು)

ಕೃ:—(ಗೆಲುಮುಖವನ್ನು ಹಾಕಿಕೊಂಡು ಎದ್ದು ಶತಪತ ತಿರುಗುತ್ತ) ಒಲೆ ಚೆನ್ನಾಗಿಯೇ ಬಿಸಿದ್ದಾಯಿತು !

ರಾ:—(ಒಳಹೊಕ್ಕು ಅವರನ್ನು ಕುರಿತು) ಬನ್ನಿ, ಇಲ್ಲಿ ಬನ್ನಿ ಇಲ್ಲಿ.

ಪು:—(ಬಾಗಿಲಿನಲ್ಲಿ ನಿಂತುಕೊಂಡು ಸಂಜ್ಞೆ ಮಾಡುತ್ತಾ) ಒಂದು ತಮಾಷೆ ಇದೆ ಬನ್ನಿ ಇಲ್ಲಿ.

(ಕೃಷ್ಣಮೂರ್ತಿ ರಾಮು ಜೊತೆಯಲ್ಲಿ ಹೋಗುವನು. ಪುಟ್ಟು ಅವರನ್ನು ಹಿಂಬಾಲಿಸುವಳು)

(ಪರದೆ ಬೀಳುವುದು.

ದೃಶ್ಯ ೩

(ಒಂದು ತಿಂಗಳಿನ ನಂತರ. ಅದೇ ಹಜಾರ. ಮೇಜು ಕುರ್ಚಿಗಳಾವವೂ ಇಲ್ಲ. ಮುರಿದ ಸ್ಟೂಲು ಮಟ್ಟಿಗೆ ಮೂಲೆಯಲ್ಲಿದೆ. ಸೀತಮ್ಮ ಮಡಿಯ ಸೀರೆಯಲ್ಲಿಯೇ ಕುಳಿತು ಅಕ್ಕಿಯನ್ನು ಮರದಲ್ಲಿಟ್ಟುಕೊಂಡು ಕೇರುತ್ತಾ ಕಲ್ಲುಗಳನ್ನು ಆರಿಸುತ್ತಿರುವಳು. ಬಾಯಿಯಲ್ಲಿ « ಮಂಗಳ ಜಯವೆನ್ನಿ! ಮಂಗಳ ಶುಭವೆನ್ನಿ! ಮಂಗಳಾಂಗನೆ, ಮಹಲಕ್ಷ್ಮಿ 'ಎಂದು ಸಂಪತ್ತು ಶುಕ್ರವಾರದ ಹಾಡನ್ನು ಹೇಳುತ್ತಿರುವಳು. ಪರದೆಯು ಮೇಲಕ್ಕೇಳುವುದು.)

ಸೀ:—(ಹಾಡುತ್ತಿದ್ದವನ್ನು ನಿಲ್ಲಿಸಿ) ಪುಟ್ಟು, ಪುಟ್ಟು ಹೋಗಿಬಿಟ್ಟು ಬಂದೆ ಯೇನೇ ಶಾನುಭೋಗರ ಮನೆಗೆ? ಇನ್ನೂ ಏನು ಮಾಡುತ್ತಿದ್ದಿ ಒಳಗಡೇನೇ?

ಪು:—ತಂಗಳಿಗೆ ಮೊಸರು ಹಾಕಿಕೆಂಡು ತಿನ್ನುತ್ತಾ ಇದ್ದೆ. (ಕೈಯಲ್ಲಿ ತಟ್ಟೆ ಯನ್ನು ಹಿಡಿದು ಹೊರಗೆ ಬರುವಳು)

ಸೀ:—ಏನು ಎಲ್ಲಾ ಮುಗಿಸಿಬಿಟ್ಟೆಯೋ; ಅವನಿಗೂ ಇಟ್ಟಿದ್ದೀಯೋ? ಇನ್ನು ಅಡಿಗೆ ಆಗಬೇಕಾದರೆ ಎರಡು ಗಂಟೆಯಾಗುತ್ತೆಯೋ, ಮೂರು ಗಂಟೇನೇ ಆಗುತ್ತೆಯೋ! ಅವರು ಹೋಗುವಾಗ ಸಾಮಾನು ಗಳನ್ನೆಲ್ಲಾ ತಂದುಕೊಟ್ಟು ಬಿಟ್ಟು ಹೋಗಿ ಅಂತ ಹೇಳಿದ್ದೆ. ಅವರಿ ಗೇನು ಗೊತ್ತು ನಾವು ಅಗಚಾಟಲು ಪಡವುದು! ಅವಸರ ಅಂತ ಹಾಗೇ ಎದ್ದುಬಿಟ್ಟರು. ಪೇಟೆ ಬಿಟ್ಟು ಹಳ್ಳೀಗೆ ಬಂದರೂ ಕೊಳ್ಳೋದು ಮುಟ್ಟಿಗೆ ತಪ್ಪಲಿಲ್ಲ. ಅದೇನೋ ಹೇಳುತಾರಲ್ಲ: ಪಾಪಿ ಸಮುದ್ರ ದಲ್ಲಿ ಇಳಿದರೂ ಮೊಳಕಾಲುದ್ದಾನೇ ನೀರು ಅಂತ. ಈ ಬಡತನವನ್ನ ನೀಗೋದು ಒಂದೇ ಸಲಕ್ಕೆ ಅಂತ ಕಾಣುತ್ತೆ. ಪೇಟೇಲಿ ಇದ್ದಾಗಲೇ ಸರಿಯಾಗಿತ್ತು. ಯಾವುದು ಬೇಕಾಗಿದ್ದರೂ ತಟಕ್ಕನೆ ಸಿಕ್ಕೋದು. ನೆನಸಿಕೊಂಡಾಗ ಮದುವೇನೇ ಮಾಡಿಬಿಡಬಹುದು. ದುಡ್ಡೊಂದು ಇರಬೇಕಾಗಿತ್ತು ಮುಖ್ಯ. ಇಲ್ಲಿ ಎಲ್ಲಾದಕ್ಕೂ ಅವರನ್ನ ಇವರನ್ನ ಅನುಸರಿಸಬೇಕು. ಏನೋ ಆ ಶಾನುಭೋಗರ ಮನೆಯವರು ಒಳ್ಳೆ ಯವರಾಗಿರುವುದರಿಂದ ಇಲ್ಲಾ ಅಂದಾಗ ಸಾಲ ಸಿಕ್ಕುತ್ತಿದೆ. ಏನು ಹಾಗೆ ನಿಂತುಕೊಂಡೆ. ಊಟಕ್ಕೆ ಅವಸರ ಆಗಿತ್ತು ನಿಂಗೆ. ತಟ್ಟೇನ ತೊಳದಿಟ್ಟು ಅವರ ಮನೆಗೆ ಹೋಗಿ ಒಂದು ಎರಡು ಸೇರು ಅಕ್ಕಿ ಇಸುಕೊಂಡು ಬಾ. ಅವರು ಬರುತ್ತಲೂ ತರಿಸಿಕೊಟ್ಟು ಬಿಡೋಣ. ನಿನಗೆ ನಾನು ಹೇಳಿ ಆಗಲೇ ಎರಡು ಗಂಟೆ ಆಯಿತು. ನಾನು ಮೈ ತೊಳೆದುಕೊಂಡು ತುಳಸಿ ಪೂಜೆಗೆ ಕುಳಿತಾಗಲೇ ಹೇಳಿದೆ.

ಪು:—ಅಕ್ಕ ಅಲ್ಲಿಗೆ ಹೋಗಿದ್ದಾಳಮ್ಮ.

ಸೀ:—(ಗಾಭರಿಗೊಂಡು) ಅವಳನ್ನು ಯಾರು ಹೋಗು ಅಂದರು?

ಪು:—ನಾನು ತಂಗಳು ತಿಂದು ಹೋಗುತ್ತೀನಿ ಅಂದೆ. ಅವಳು ನನ್ನ ಬೈದು

ಅಮ್ಮ ಇನ್ನು ಸ್ನಾನ ತೀರಿಸಿಕೊಂಡು ಹೊರಗೆ ಬಂದು ನಾವು ಹಾಗೆ ಕುಳಿತಿರುವುದನ್ನು ಕಂಡರೆ ಇಬ್ಬರಿಗೂ ಆಗುತ್ತೆ, ಇನ್ನು ರೇಗಿಕೊಳ್ಳು ತ್ತಾಳೆ ಅಂತ ನಾನೇ ಇಸುಕೊಂಡು ಬರುತೀನಿ ಅಂತ ಹೋದಳು.

ಸೀ:—ಸಾಕು, ಸಾಕು ಸುಮ್ಮನಿರು. ಈ ಪಾಳಾದ ಹುಡುಗೀರನ್ನ ಕಟ್ಟಿಕೊಂಡು ಹೆಣಗೋದೊಳ್ಳೇ ಚೆನ್ನಾಗಿ ಬಂತಲ್ಲಾ ನನಗೆ! ಇನ್ನು ಮೇಲೆ ಮನೆಬಿಟ್ಟು ಹೊರಗೆ ತಲೆಹಾಕಬೇಡ ಅಂತ ಹೇಳಿದೆ. ಏನೇನು ಅವಮಾನ ಸಹಿಸಬೇಕಾದ್ದಿದೆಯೋ! ಇನ್ನು ಹೊರಗಿನ ವರಿಗೆಲ್ಲಾ ವಿಷಯ ತಿಳಿದುಬಿಟ್ಟರೆ ನಮ್ಮ ಪಾಡು ಬೇಡ. ಅವಳಿಗೆ ಬಾಯಿಬಿಟ್ಟು ಹೇಳುವುದಕ್ಕಾಗುತ್ತೆಯೇ? ಇಷ್ಟು ದಿನ ತಡೆದಿದ್ದದ್ದು ಇನ್ನು ಅವಳ ಮದುವೆ ಆಗುವವರಿಗಾದರೂ ದೇವರು ಕೃಪೆಮಾಡ ಬಾರದಾಗಿತ್ತೆ! ಅವರಂತೂ ಇಲ್ಲಿಯವರಿಗೂ ಕಣ್ಣುಮುಚ್ಚಿಕೊಂಡು ಕಿವಿಯ ಮೇಲೆ ಹಾಕಿಕೊಳ್ಳದೆ ಇದ್ದುಬಿಟ್ಟಿದ್ದರು. ಈಗ ಬಂದು ನೋಡಲಿ, ಏನು ಆಗಿ ಹೋಗಿ ಬಿಟ್ಟಿದೆಯಂತ.

ಪು:—ಏನಮ್ಮ ಆಯಿತು ಈಗ?

ಸೀ:—ನೀನು ತಟ್ಟೆ ತೊಳಿದಿಟ್ಟು ಹೋಗಿ ಅವಳನ್ನ ಕರೆದುಕೊಂಡು ಬಾ. (ಪುಟ್ಟು ಹೋಗುವಳು) ಈ ಹುಡುಗಿಯಿಂದಲೇ ಇಷ್ಟು ಆಗಿದ್ದು. ಸುಮ್ಮನೆ ಅವಳನ್ನ ನಿನ್ನ ಗಂಡ, ನಿನ್ನ ಗಂಡ, ನಿನಗೆ ಮದುವೆ, ಅಂತ ಹಾಸ್ಯಮಾಡಿ ಈ ರೀತಿ ಆಗೋಹಾಗೆ ಮಾಡಿಬಿಟ್ಟಳು. ಅಲ್ಲಾ ನನಗೆ ಆಶ್ಚರ್ಯವಾಗುತ್ತೆ. ಇನ್ನೂ ಹನ್ನೆರಡು ಕೂಡ ತುಂಬುವುದ ಕ್ಕಿಲ್ಲ; ಆಗಲೇ ದೊಡ್ಡವಳಾಗಿಬಿಟ್ಟಳು ಅಂದ್ರೆ! ನಮ್ಮ ಕಾಲದಲ್ಲಿ ಹೀಗಿರಲಿಲ್ಲ. ಕಲಿ ಹೆಚ್ಚಿಕೊಂಡಿತು. ಇನ್ನು ಅವಳ ಮದುವೆಯಾ ಗುವವರಿಗೂ ಎಚ್ಚರಿಕೆಯಿಂದ ಇರಬೇಕಷ್ಟೆ. ಬಾಯಿ ಬಿಡಬಾರದು. ಅವರು ಮದುವೆ ನಿಷ್ಕರ್ಷೆಮಾಡಿಕೊಂಡು ಬರುವುದಕ್ಕೆ ಹೋದ ವರು ಯಾತಕ್ಕಿನ್ನೂ ಹಿಂತಿರುಗಿ ಬರಲಿಲ್ಲವೋ ಕಾಣೆ. ಯಾವ ದಿನಕ್ಕೆ ಲಗ್ನ ಇಟ್ಟುಕೊಂಡು ಬರುತ್ತಾರೆಯೋ? ಅವರು ಹೇಳಿದ್ದ ಹಾಗೇ ಇನ್ನು ಹದಿನೈದು ದಿವಸಕ್ಕೇ ಲಗ್ನ ಇಟ್ಟುಕೊಂಡು ಬಂದುಬಿಟ್ಟರೆ, ಹಪ್ಪಳ ಸೊಂಡಿಗೆ ಮಾಡಿಕೊಳ್ಳುವುದು ಯಾವಾಗ? ಆ ಮಹ-

ರಾಯರು ಇಲ್ಲಿಂದ ಹೋದ ತಕ್ಷಣವೇ ಎಲ್ಲಾದಕ್ಕೂ ಇವರಿಗೆ ಬರೀ ತೀನಿ ಅಂತ ಹೇಳಿ ಹೋಗಿದ್ದವರು, ಹೋಗಿ ಹದಿನೈದು ದಿನಗಳಾ ದರೂ ವಿಚಾರ ಹೀಗಿದೆ ಅಂತ ಇವರಿಗೆ ಬರೀಬಾರದಾಗಿತ್ತೆ? ಅವರ ತಾಪತ್ರಯ ಏನಿದೆಯೋ? ಇವರು ಇನ್ನೂ ಎಂಟು ದಿವಸಗಳು ಕಾದು ಕೊನೆಗೆ ತಾವೇ ಗೊತ್ತುಮಾಡಿಕೊಂಡು ಬಂದು ಬಿಡುತ್ತೀನಿ ಅಂತ ಹೋದರು. ಅವರು ಮೊದಲೇ ಬರೆದು ಬಿಟ್ಟಿದ್ದರೆ ಇವರನ್ನ ಸಾಮಾ ನುಗಳನ್ನೆಲ್ಲಾ ತಂದುಕೊಟ್ಟು ಬಿಟ್ಟು ಆಮೇಲೆ ಹೋಗಿ ದಿನ ಗೊತ್ತುಮಾಡಿಕೊಂಡು ಬನ್ನಿ ಅಂತ ಹೇಳುತ್ತಿದ್ದೆ. ಅಂತೂ ಆತ ಒಪ್ಪಿಕೊಂಡಿದ್ದಾನಲ್ಲಾ. ಮದುವೆ ಆಗೋ ಗಂಡೇ ಒಪ್ಪಿಟ್ಟಿರುವಾಗ ನಡುವೆ ಯಾರೂ ಅಡ್ಡಿಬರಲಾರರು ಅಂತ ಕಾಣುತ್ತೆ. ರಾಮು ಎಲ್ಲಿಗೆ ಹೋದ? ಆ ಸಿದ್ದನಂತೂ ತೋಟದಲ್ಲೇ ಹೋಗಿ ಕೂತು ಬಿಟ್ಟಿದಾನೆ. ಅವರು ಹಿಂತಿರುಗಿ ಬರುವವರಿಗೂ ಅವನೂ ಹಿಂತಿರುಗೋ ಹಾಗಿಲ್ಲ. [ರಾಮು ಜುಬ್ಬ ಹರಿದುಕೊಂಡು ಟವಲಿನಲ್ಲಿ ಮಾವಿನ ಕಾಯಿಗಳನ್ನು ಕಟ್ಟಿಕೊಂಡು ಬಂದು ಅವಳ ಮುಂದೆ ಸುರಿಯುವನು] ನೆನಿಸಿಕೊಳ್ಳುವ ಹೊತ್ತಿಗೆ ಬಂದನಲ್ಲಾ. ಸಹಸ್ರಾಯುಸ್ಸು ಅವನಿಗೆ. ಅಲ್ಲವೋ, ಎಲ್ಲಿಗೋ ಹೋಗಿದ್ದಿದ್ದು? ಬೆಳಿಗ್ಗೆ ಎದ್ದೋನು ಹಾಸಿಗೆ ಬಿಟ್ಟು ಹಾಗೆ ಎದ್ದುಬಿಡೋದೇ? ಮನೇಲಿ ಹೇಳಿ ಹೋಗಬೇಕು ಅಂಬೋದೇ ಇಲ್ಲವೇ. ನಿನಗೆ ಶಿಕ್ಷೆಮಾಡೋರು ಒಬ್ಬರಿರಬೇಕು. ಓದೋದು-ಗೀದೋದೆಲ್ಲಾ ಹೋಯಿತು. ಜುಬ್ಬಾನೇನು ಅಷ್ಟು ಹರಿದುಕೊಂಡು ಬಂದಿದ್ದಿ? ಯಾರು ತಂದು ಕೊಟ್ಟಾರು ನಿನಗೆ?

ರಾ:—ಮದುವೇಗೆ ತರುವುದಿಲ್ಲವೇನೋ. ಮದುವೆ ಆದಮೇಲೆ ನಾನೂ ಭಾವನ ಜೊತೆಯಲ್ಲೇ ಹೊರಟು ಹೋಗುತ್ತೀನಿ. ಅವರೇ ನನಗೆ ಓದಿಸುತ್ತಾರಂತೆ. ಅವರ ಊರಿನಲ್ಲಿ ಸಿನೀಮಾ ಟಾಕಿ ಎಲ್ಲಾ ಇದೆ ಯಂತೆ. ಮದುವೆಗೆ ಬರುವಾಗ ನನಗೆ ಫೌಂಟನ್ ಪೆನ್ನೂ, ಪುಟ್ಟೂಗೆ ಬ್ರೋಚು ಎಲ್ಲಾ ತಂದುಕೊಡುತ್ತೀನಿ ಅಂತ ಹೇಳಿ ಹೋಗಿದ್ದಾರೆ.

ಸೀ:—ಆಗಲೇ ಅವರನ್ನ ಅದನ್ನೆಲ್ಲಾ ಕೇಳಿದಿರೋ?

ರಾ:—ನಾನೇನೂ ಕೇಳಲಿಲ್ಲ. ಅವರ ಫೌಂಟನ್ ಪೆನ್ನನ್ನ ಅವರು

ಹೋಗುವವರಿಗೂ ನನ್ನ ಜೋಬಿನಲ್ಲೇ ತೆಗೆದು ಇಟ್ಟುಕೊಂಡಿದ್ದೆ. ಅವರು ಹೋಗುವಾಗ 'ಇದನ್ನ ಕೊಟ್ಟುಬಿಡು. ನಿನಗೆ ಹೊಸಾ ದೊಂದನ್ನು ತಂದುಕೊಡುತ್ತೀನಿ' ಎಂದು ಅದನ್ನು ತೆಗೆದುಕೊಂಡು ಹೋದರು. ಪುಟ್ಟೂನೇ 'ನನಗೆ ಬ್ರೋಚು ತಂದುಕೊಡಿ' ಎಂದು ಕೇಳಿದಳು. ಅಕ್ಕನಿಗೆ ಚೌಕ ಹಾಕೋ ದಾರದ ಲಡಿಗಳನ್ನು ತಂದು ಕೊಡಬೇಕು ಅಂತ ಹೇಳಿದಳು. ಅವರು ಅದಕ್ಕೂ ಒಪ್ಪಿಕೊಂಡು ಹೋಗಿದ್ದಾರೆ.

ಸೀ:—(ನಿಟ್ಟುಸಿರನ್ನಿಟ್ಟ) ಚೆನ್ನಾಯಿತು. ಅವಗು ಏನು ಅಂತ ತಿಳಿದುಕೊಳ್ಳುತ್ತಾರೆ. ನಿಮ್ಮಪ್ಪನ್ನ ಹೆತ್ತಿದ್ದಕ್ಕೆ ಸಾರ್ಥಕವಾಯಿತು. ಹೋಗು, ಹೋಗಿ ಸರಸೂನ ಪುಟ್ಟೂನು ಕರೆದುಕೊಂಡು ಬಾ. ಶಾನುಭೋಗರ ಮನೆಗೆ ಹೋಗಿದ್ದಾರೆ. ಇಷ್ಟೊತ್ತಾದರೂ ಬಂದಿಲ್ಲ. ಶಾನುಭೋಗರ ಸೊಸೆ ಸಂಗಡ ಇನ್ನವಳು ಮಾತಿಗೆ ಕುಳಿತುಬಿಟ್ಟಿದ್ದರೆ ಎಲ್ಲಾ ರಟ್ಟಾಗಿ ಹೋಗುವುದೇ. ಅವಳೇನೂ ಸಾಮಾನ್ಯದ ಹುಡುಗಿಯಲ್ಲ.

ರಾ:—ಅಮ್ಮ, ಅವರ ಮನೆಗೆ ಬೆಳಿಗ್ಗೆ ಹೋಗಿದ್ದಾಗ ಅವಳು ನನ್ನ ಏನೋ ಕೇಳೊದಕ್ಕೆ ಬಂದಳು.

ಸೀ:—ನೀನು ಹೋಗಿಬಿಟ್ಟು ಬೇಗ ಅವರನ್ನು ಕರೆದುಕೊಂಡು ಬಾ. ನಿನ್ನ ಧರ್ಮಕ್ಕೆ ನೀನು ಅಲ್ಲೇ ನಿಂತುಬಿಟ್ಟೀಯಾ? (ರಾಮೂನ ಕಳುಹಿಸಿಕೊಟ್ಟು ಪುನಃ ಅಕ್ಕಿಯಲ್ಲಿ ಕಲ್ಲುಗಳನ್ನು ಆರಿಸುತ್ತಾ ಕುಳಿತುಕೊಂಡು) ಇವರೇನು ಇವತ್ತೇ ಬರುತ್ತಾರೆಯೋ ಯಾವಾಗ ಬರುತ್ತಾರೆಯೋ? (ನಿಲ್ಲಿಸಿದ್ದ ಸಂಪತ್ತು ಶುಕ್ರವಾರದ ಹಾಡನ್ನು ಮೊದಲುಮಾಡುವಳು. ಸೀತಾರಾಮಯ್ಯ ಅಷ್ಟುಹೊತ್ತಿಗೆ ಸರಿಯಾಗಿ ಪ್ರವೇಶಿಸಲು ಹಾಡನ್ನು ನಿಲ್ಲಿಸಿ ಅಕ್ಕಿಯ ಮೊರವನ್ನು ಒತ್ತೊಟ್ಟಿಗಿಟ್ಟು ನಡುಬಾಗಿಲ ಬಳಿಗೆ ಸರಿದು ಅಲ್ಲಿ ನಿಂತುಕೊಂಡು) ಇನ್ನು ಎಷ್ಟು ದಿವಸಕ್ಕೆ ಅಂತ ಗೊತ್ತು ಮಾಡಿಕೊಂಡು ಬಂದಿರಿ?

ಸೀ ರಾ:—(ತಲೆಯ ಮೇಲಿದ್ದ ರೂಮಾಲನ್ನು ತೆಗೆದು ಗೂಟಕ್ಕೆ ತಗಲುಹಾಕಿ ಅಂಗಿಯ ಗುಂಡಿಗಳನ್ನು ಬಿಚ್ಚಿ, ಸ್ಟೂಲನ್ನು ಎಳೆದು ಅದರ ಮೇಲೆ ಕುಳಿತು ಹೊದ್ದಿದ್ದ ಧೋತರದಿಂದ ಗಾಳಿಹಾಕಿಕೊಳ್ಳುತ್ತಾ) ಏನು ಗೊತ್ತುಮಾಡಿಕೊಂಡು ಬರುವುದು?

ಸೀ:—ಲಗ್ನ ಯಾವ ದಿನಕ್ಕೆ ಇಡಿಸಿದಿರಿ ಅಂತ ಕೇಳಿದೆ.

ಸೀ ರಾ:—ಯಾರಿಗೆ ಲಗ್ನ?

ಸೀ:—ಇದು ಯಾಕೆ ಇಷ್ಟು ಸಿಟ್ಟು? ಇನ್ನುಮೇಲೆ ನಾನೇನೂ ನಿಮ್ಮನ್ನ ಕೇಳೋದೂ ಇಲ್ಲ. ನೀವು ಹೇಳಬೇಕಾದ್ದೂ ಇಲ್ಲ. ಅರವತ್ತು ವರುಷಕ್ಕೆ ಅರಳು-ಮರಳು ಅಂತ ಈ ಸಿಟ್ಟು, ಈ ಆಟೋಪ, ಎಲ್ಲಾ ಎಲ್ಲಿಂದಲೋ ಬಂದು ಸೇರಿಕೊಳ್ಳುತ್ತಿದೆ.

ಸೀ ರಾ:—ಅರಳು-ಮರಳೂ ಇಲ್ಲ; ಮರಳಿ ಅರಳೋದೂ ಇಲ್ಲ. ಎಲ್ಲಾ ಅಂದಿಗೇ ಆಗಿಹೋಯಿತು. (ನಿಟ್ಟುಸಿರಿಡುವನು)

ಸೀ:—ಈಗ ಏನು ಮಾಡಿಕೊಂಡು ಬಂದಿರಿ, ಹೇಳಿ?

ಸೀ ರಾ:—ಏನೂ ಇಲ್ಲ. ಹೊದ್ದಿದ್ದ ಹಚ್ಚಡಾನ ಹೆಗಲ ಮೇಲೆ ಹಾಕಿಕೊಂಡು ಹಿಂತಿರುಗಿ ಬಂದೆ.

ಸೀ:—ಯಾಕೆ ಸದ್ಯದಲ್ಲಿ ಆಗೋದಿಲ್ಲ ಅಂತ ಹೇಳಿದರೇನು?

ಸೀ ರಾ:—ಯಾರೆ ಆಗಬೇಕಾದೋರು?

ಸೀ:—ಬಂದಿರಲಿಲ್ಲವೇ ಅವರು?

ಸೀ ರಾ:—ಅವರು! ಅವನೂ ಅನ್ನು. ಬಹುವಚನ ಒಂದು ಕೇಡು ಅವನಿಗೆ.

ಸೀ:—ಇಲ್ಲಿ ಎಂಟು ದಿನಗಳೂ ಇದ್ದು ಎಲ್ಲಾದಕ್ಕೂ ಒಪ್ಪಿಕೊಂಡು ಅಲ್ಲಿಗೆ ಹೋಗಿ ಬರೀತೀನಿ ಅಂತ ಹೇಳಿ ಹೋಗಿದ್ದರಲ್ಲ?

ಸೀ ರಾ:—ಅದರ ಮುಖ ಬರೆಯುತ್ತಂತೆ. ಹೋಗಲಿ ಅವನನ್ನಂದೇನು ಪ್ರಯೋಜನ. ಎಲ್ಲಾ ನಮ್ಮ ಕರ್ಮ.

ಸೀ:—ಕರ್ಮ ಕರ್ಮ ಅಂತಾನೆ ಕರ್ಮಸಾಧನೆಯಿಲ್ಲದೆ ಕಾಲ ಕಳೆದು ಈಗ ಹೆಣಗೋದು ಬಂದಿದೆ. ಏನಾಯಿತು ಅಲ್ಲಿ, ಎಲ್ಲಾ ನಿಧಾನವಾಗಿ ಹೇಳಿ.

ಸೀ ರಾ:—ಏನಾಗೋದು? ನಾನು ಇಲ್ಲಿಂದ ಹೋಗಿ ಅವರು ಹೇಳಿದ್ದ ಊರಿನಲ್ಲಿ ಕೃಷ್ಣಪ್ಪ ಎಂಬೋರು ಯಾರು ಅಂತ ವಿಚಾರಿಸಿದೆ. ಆ ಹೆಸರಿನೋರೇ ಅಲ್ಲಿ ಒಬ್ಬರೂ ಇರಲಿಲ್ಲ. ಆಮೇಲೆ ಅಲ್ಲಿ ಇಲ್ಲಿ

ವಿಚಾರಿಸಿದ್ದಾಯಿತು. ಸುತ್ತಿದ್ದಾಯಿತು. ಕೃಷ್ಣಮೂರ್ತಿ ಯಾರು ಅನ್ನುವುದು ತಿಳೀತು.

ಸೀ:—ಯಾರಂತೆ?

ಸೀ ರಾ:—ಅವನೊಬ್ಬ ಕನ್ಯಾರ್ಥಿ.

ಸೀ:—ಹಾಗೆಂದರೆ?

ಸೀ ರಾ:—ಹಾಗೆಂದರೇ, ಮದುವೆ ಆಗೋ ಹುಡುಗೀರನ್ನು ಹುಡುಕಿಕೊಂಡು ಹೋಗೋದು ಅಂತ.

ಸೀ:—ಅಂದರೆ ಅವರಿಗೆ ಬೇರೆ ಕೆಲಸವೇ ಇಲ್ಲವೇ?

ಸೀ ರಾ:—ಅದೇ ಅವನ ಕೆಲಸ.

ಸೀ:—ಎಂ. ಎ. ಪಾಸು ಮಾಡಿದ್ದಾರೆ, ಐಶ್ವರ್ಯವಂತರು ಅಂದಿದ್ದು!

ಸೀ ರಾ:—ಎಂ. ಎ. ಪಾಸೇನೋ ಮಾಡಿದ್ದಾನೆ. ಐಶ್ವರ್ಯ–ಗೈಶ್ವರ್ಯ ಇದೆ ಎಂಬೋದೆಲ್ಲಾ ಡೋಂಗು. ಅವನು ಎಂ. ಎ. ಪಾಸುಮಾಡದೆ ಇದ್ದರೆ ಆ ಬುದ್ಧಿ ಎಲ್ಲಿಂದ ಬರೋದು. ಕೆಲಸ ಸಿಕ್ಕಲಿಲ್ಲ. ಅಲೆದಲೆದೂ ಸಾಕಾಯಿತು. ಹೊಟ್ಟೆಗೆ ಇಲ್ಲದೆ ಹೋಯಿತು. ಕೊನೆಗೆ ಇದನ್ನೇ ಒಂದು ಉದ್ಯೋಗ ಅಂತ ಮಾಡಿಕೊಂಡ. ಹೋದ ಕಡೆ ಒಳ್ಳೆ ಉಪಚಾರ ಆಗುತ್ತೆ. ಗಿಟ್ಟಿಸೋಕಡ–ಇಲ್ಲಿ ಗಿಟ್ಟಿಸಿದ ಹಾಗೆ–ಗಿಟ್ಟಿಸಿಕೊಳ್ಳುತ್ತಾನೆ. ಮುಂದಕ್ಕೆ ನಡೀತಾನೆ.

ಸೀ:—ಇಲ್ಲೇನು ಗಿಟ್ಟಿಸಿದ?

ಸೀ ರಾ:—ಇಪ್ಪತ್ತೈದು ರೂಪಾಯಿ! ಕೇಳಿ ಇಸುಕೊಂಡು ಹೋದ ಅಷ್ಟೆ. ಕೃಷ್ಣಪ್ಪನ ಹೆಸರಿನಲ್ಲಿ ಕಾಗದ ಬರೆದವನೂ ಅವನೇ ಇರಬೇಕು.

ಸೀ:—ಇಪ್ಪತ್ತೈದು ರೂಪಾಯಿಗಳು ತಾನೆ. ಹೋದರೆ ಹೋಯಿತು. ಇನ್ನು ನಮ್ಮ ಗತಿ ಏನಾಗಬೇಕು; ಸರಸು ಪಾಡೇನಾಗಬೇಕು!

ಸೀ ರಾ:—ಇನ್ನು ಎಲ್ಲಾದರೂ ಹುಡುಕೋದಾಗುತ್ತೆ. ಕಾಲ ಒದಗಿ ಬಂದರೆ ಎಲ್ಲಾ ತಾನಾಗಿಯೇ ಕೂಡಿಬರುತ್ತೆ.

ಸೀ:—ನೀವು ಲೋಕಾಭಿರಾಮನ ಹಾಗೆ ಹಾಗೇ ಮಾತನಾಡುತ್ತ ಕುಳಿತು

ಕೊಳ್ಳಿ. ಇಲ್ಲಿ ಏನಾಗಿದೆ ಎನ್ನುವುದು ನಿಮಗೇನಾದರೂ ಗೊತ್ತಾಗಿದ್ದಿದ್ದರೇ?

ಸೀ ರಾ:—(ಗಾಭರಿಯಿಂದ) ಏನು?

ಸೀ:—ಸರಸು....

ಸೀ ರಾ:—ಸರಸು?

ಸೀ:—ಎಲ್ಲಾ ಸರಿಯಾಗಿ ನಡೆದು, ಅವಳ ಮದುವೆಯೂ ಇಷ್ಟರಲ್ಲೇ ಆಗಿ ಹೋಗಿದ್ದರೆ ಇವತ್ತು ಅವಳಿಗೆ ಹೂಸಗೆ ಹಾಕಿ, ನೀರಾಗಬೇಕಾಗಿತ್ತು. (ಸೀತಾರಾಮಯ್ಯ ಮೇಲಕ್ಕೆ ಎದ್ದವನು ಹಾಗೆ ತಲೆಯ ಮೇಲೆ ಕೈಯಿಟ್ಟುಕೊಂಡು ಕುಳಿತುಕೊಳ್ಳುವನು) ಅವರೆಲ್ಲಾ ಶಾನುಭೋಗರ ಮನೆಗೆ ಹೋಗಿದ್ದವರು ಇನ್ನೂ ಹಿಂತಿರುಗಿ ಬರಲೇ ಇಲ್ಲ. ಇನ್ನೆಲ್ಲಿಗೆ ಹಾಳಾಗಿ ಹೋದರೊ! (ನೋಡಲು ಹೊರಬಾಗಿಲ ಕಡೆಗೆ ಹೋಗುವಳು)

ಸೀ ರಾ:—ಊರಿನವರಿಗೆಲ್ಲಾ ತಿಳಿದುಹೋಗಿದೆಯೋ?

ಸೀ:—ಏನು ನನಗೇನು ಅಷ್ಟು ಬುದ್ಧಿ ಇಲ್ಲ ಅಂತ ತಿಳದುಕೊಂಡಿರೇನು?

ಸೀ ರಾ:— ಇದೆ. ಇದೆ. (ಯೋಚನೆಯಲ್ಲಿ ಮಗ್ನನಾಗಿ ತಿರಗಾಡುತ್ತಿರುವನು. ಸೀತಮ್ಮ ಬಾಗಿಲ ಬಳಿಗೆ ಹೋಗಿ ಅಲ್ಲಿ ಅವರಿಗೆ ಕಾಯುತ್ತಾ ನಿಂತಿರುವಳು)

ಸೀ:—ಕೊನೆಗೆ ಬಂದರು.

ಸೀ ರಾ:—ಅವಳಿಗೆ ಗೊತ್ತಾಗಿದೆಯೋ?

ಸೀ:— ಅದೆಲ್ಲಾ ನಿಮಗೆ ಹೇಳುವುದಕ್ಕೆ ಆಗುತ್ತೆಯೇನು.

(ಮೂವರು ಮಕ್ಕಳೂ ಪ್ರವೇಶಿಸುವರು. ರಾಮು ಅಕ್ಕಿಯ ಚೀಲವನ್ನಲ್ಲಿಡುವನು)

ಸೀ ರಾ:—ಸರಸೂ.

(ಅವಳು ಆತನ ಹತ್ತಿರಕ್ಕೆ ಬರಲು ಅವಳ ತಲೆಯನ್ನು ನೇವರಿಸುತ್ತ ನಿಲ್ಲುವನು)

ಪು:—ಎಂದಪ್ಪ ಮದುವೆ? ಅವರೂನೂ ಬಂದರೇನು?

ರಾ:—ಯಾವತ್ತಪ್ಪ ಬರುತ್ತಾರೆ ಅವರೆಲ್ಲ?

ಸೀ:—ಬರುತಾರೆ, ಬರುತಾರೆ. ಅವರ ಹಿಂದಿನ ಕೂಳಿಡುವಾಗ....

(ಒಳಕ್ಕೆ ಹೋಗುವಳು)

ಪು:—ಹಾಗಾದರೆ ನನಗೆ ಬ್ರೋಚಿಲ್ಲವೇ?

ರಾ:—ಫೌನ್‌ಟನ್‌ಪೆನ್ನು?

ಸ:—........(ತಲೆಯೆತ್ತಿ ತಂದೆಯ ಮುಖವನ್ನೇ ನೋಡುವಳು)

ಸೀ ರಾ:--(ಜೋಬಿನಿಂದ ಪೊಟ್ಟಣವನ್ನು ತೆಗೆಯುತ್ತಾ) ಅಲ್ಲಿಂದತಿಂಡಿನಾದರೂ ಕಟ್ಟಿಸಿಕೊಂಡು ಬಂದಿದ್ದೀನಿ. ಅವಳು ಹಂಚಿಕೊಡುತ್ತಾಳೆ ಬನ್ನಿ. ಕನ್ಯಾರ್ಥಿಯುಸರಸಿದ ಫಲ ನನಗೀಗ ಕಾಲಿನಲ್ಲಿ ಕಾಣಹತ್ತಿದೆ. ಒಳಗೆ ಹೋಗಿ ಬಿಸಿನೀರನ್ನಾದರೂ ಹಾಕಿಕೊಳ್ಳೋಣ.

(ಒಳಗೆ ಹೋಗುವನು. ಅವರೂ ಹಿಂಬಾಲಿಸುವರು. ಸರಸು ಮಟ್ಟಿಗೆ ಚಿಂತೆಯಲ್ಲಿ ತಲ್ಲೀನಳಾಗಿ ಹಾಗೆ ನಿಂತಿರುವಳು)

ಪು:—(ಕೈಯಲ್ಲಿ ತಿಂಡಿಯನ್ನು ಹಿಡಿದು ಬಾಗಿಲಲ್ಲಿ ತಲೆಹಾಕಿ) ಅಕ್ಕಾ, ನಿನಗೆ ಇಲ್ಲಿವೇ ಇಲ್ಲ—ನಿನಗೆ ಇಲ್ಲವೇ ಇಲ್ಲ.

ಸ:--(ಕಂಗಳಲ್ಲಿ ತಳಿದಿದ್ದ ಕಂಬನಿಯನ್ನು ಒರಸಿಕೊಳ್ಳುತ್ತಾ) ಹೌದು ಇಲ್ಲವೇ ಇಲ್ಲ. ನಿನ್ನ ಯಾರು ಅಣಕಿಸಲು ಬಾ ಅಂದೋರು?

(ಅವಳನ್ನು ಹಿಡಿದುಕೊಂಡು ಹೊಡೆಯಲು ಹೋಗುವಳು. ಅವಳು ಒಳಕ್ಕೆ ಓಡುವಳು. ಸರಸು ಹೊಸ್ತಿಲಿನಿಂದ ಒಳಕ್ಕೆ ಹೆಜ್ಜೆಯನ್ನಿಡುವಾಗ ಮುಗ್ಗರಿಸುವಳು.)

(ಪರದೆಯು ನಿಧಾನವಾಗಿ ಕೆಳಕ್ಕಿಳಿಯುವುದು)

ಅತಿಥಿದೇವರು

ಪಾತ್ರಗಳು

ನಾನಾಚಾರು	ಹಳ್ಳಿಯ ಸಾಲೀ ಮಾಸ್ತರು
ರಾಮರಾಯ	ಕಚೇರಿ ಕಾರಕೂನರು
ಶ್ಯಾಮಸುಂದರ	ರಾಮರಾಯರ ಮಗ (ನಿರುದ್ಯೋಗಿ ಪದವೀಧರ)

ದೃಶ್ಯ ೧

(ಒಂದು ಇಳಿಹೊತ್ತು. ಬಾಗಿಲ ಮುಂದಿನ ಸಣ್ಣ ಪಡಸಾಲಿಯಲ್ಲಿ ಕಾರಕೂನ ರಾಮರಾಯರು ಅತ್ತಿಂದಿತ್ತ ತಿರುಗುತ್ತಿರುವರು.)

ರಾ:—(ತನ್ನಷ್ಟಕ್ಕೆ) ಒಂದು ಹುರುಪು, ಈ ಹೋಗಿ-ಬರುವವರ ಹಾವಳಿ ಮುಗೀತು ಅನಬೇಕು.' ಊಟಾ ಹೊಡದು ಚಿಟಗುಮುಳ್ಳಾಡಿಸಿ, ಜನ್ಮಾಂತರದ ಸಾಲದ ಬಡ್ಡಿ ಮುಟ್ಟಿಸಿಗೊಳಿಕ್ಕೆ ಬಂದಹಂಗ ಬರ-ತಾರ, ಈ ನೂರಾಎಂಟು ಮಂದಿ! ನಮ್ಮಷ್ಟಕ್ಕ ನಾವು ಸಂಸಾರ ಮಾಡಿದರ ಇವರ ಹೊಟ್ಟಿ ಯಾಕ ಕಡೀಬೇಕು? ಈ ಆಚಾರ ಜಾತಿ ಬಂದರಂದರ ಆಗಿಹೋತು, ಚ್ಯಾ-ಮ್ಯಾ ಎಲ್ಲಾ ಕರಕೊಂಡS ಬರ-ತಾರ. (ನೆಲ ನೋಡಿ) ಥೇ, ಏನು ಹೊಲಸುಮಾಡ್ಯಾರ ಪಡಸಾಲೀ! ಇವರ ಮಡಿಯೆಲ್ಲ ಮಂದಿ ಮನಿ, ಕಸದ ತಿಪ್ಪಿ ಮಾಡೋದರಾಗS ಖರ್ಚಾಗತದ. (ಶ್ಯಾಮಸುಂದರನು ನಡುಮನೆಯ ಬಾಗಿಲಿಂದ ಹಣಿಕೆಹಾಕುವನು) ಯಾಕೋ ಶ್ಯಾಮೂ, ಹೆಂಗದ ಆಕೀಗೆ?

ಶ್ಯಾ:—ಜ್ವರ ಅವ ಇನ್ನೂ. ಸ್ವಲ್ಪ ಜಂಪು ಹತ್ತೇದ.

ರಾ:—ಮಲಗಲಿ ಬಾ. ಈ ಮಂದಿ-ಮಕ್ಕಳ ಕಾಲಾಗ ದುಡಿದು ದುಡಿದು

ಜಡ್ಡಿಗೆ ಬಿದ್ದಾಳ, ಒಂದಿಷ್ಟು ವಿಶ್ರಾಂತಿ ತಗೋಳ್ಳಿ. (ಶ್ಯಾಮನು ಪಡಸಾಲೆಗೆ ಬರುವನು) ಈನ್ನೋಡು ಶ್ಯಾಮಾ, ಒಂದ್ಮಾತು ಹೇಳತೀನಿ. ಈ ತಲೆಬಾಗಲ ಒಳಗೆ ಒಬ್ಬಾನೊಬ್ಬರನ್ನೂ ಬಿಡಬಾರದು. ಮನಸ್ಯಾರಾಗಿ ಬಂದ್ರು ಬಿಡಲಿಕ್ಕಿಲ್ಲ ಅಂತ ಹೇಳಿ ಹುಳ ಆಗಿ ಬಂದಾರು, ಏನಾದರೂ ಹೊರಗ ಹಾಕು. ಈ ಮನ್ಯಾಗ ನಾನು, ನೀನು, ಆಕಿ-ಇನ್ನೊಬ್ಬರು ಕಾಲಿಡುಹಂಗಿಲ್ಲ.

ಶ್ಯಾ:—ಅಂದರ ನನಗ ಮದವಿ ಇಲ್ಲೇನು ಅಣ್ಣಾ?

ರಾ:—ಅದು ನಿನಗ ನೌಕರಿ ಸಿಕ್ಕಾಗ. ಈಗಂತೂ ಕೆಲಸಿಲ್ಲದ ಕೂತೀ ಅಲ್ಲ ತಲಿತುಂಬ ಕೂದಲಾ ಬೆಳಿಸಿಗೋತ! ಇದೊಂದು ಕೆಲಸ ಮಾಡು; ಆ ಈ ಮಂದಿಗೆ ಊಟಕ್ಕ ಹಾಕೋದs, ನಿನಗs ನಾ ಪಗಾರ ಕೊಡತೀನಿ. ಈವತ್ತಿನಿಂದ ಕೆಲಸಕ್ಕ ಹಾಜರಾಗು.

ಶ್ಯಾ:—ಅಣ್ಣಾ, ಹಗಲೆಲ್ಲ ಮಂದಿ ಯಾಕ ಬರತಾರ ಇನ್ನೊಬ್ಬರ ಮನಿಗೆ? ಈಗೇನೊ ಹೆಸರಾದ ಜಾತ್ರಿ, ಉತ್ಸವ ಇತ್ತಂತ ನಾಕುದಿನ ಬಂದಿದ್ದರು.

ರಾ:—ನಿನಗ ತಿಳಿಯೋದಿಲ್ಲೊ ಶ್ಯಾಮಾ. ಇವತ್ತ ಜಾತ್ರಿ, ನಾಳೆ ಮದವಿ, ನಾಡ್ದ ಶ್ರಾದ್ಧ!..ಈ ಬರೋ ಮಂದಿಗೆ ನೆವ ಏನು ಕಡಿಮಿ? ಹಂಗs ತಿನಲಿಕ್ಕೆ ಹಾಕತೀವಿ ಅಂತ ನೋಟೀಸ ಹಚ್ಚು, ಮನೀ ಮುಂದ, ದಿನಾ ನೂರು ಮಂದಿ ಹೆಗಲಿಗೆ ಪಂಜಾ ಹಕ್ಕೊಂಡು ಬರತಾರ. ಇವರಿಗೆ ತಿಥಿಯಿಲ್ಲ, ಮಿತಿಯಿಲ್ಲ.

ಶ್ಯಾ:—ನೀ ಹೇಳೂಹಂಗ ಆಗಲಿ, ಅಣ್ಣಾ.

ರಾ:—ಅಂದರ? ನೋಟೀಸ ಹಚ್ಚಿಬಿಡುವವನೋ ಏನು? ನೀವು ಕಾಲೇಜದ ಮಂದಿ ಬಲೆ ಹುಚ್ಚ ಜಾತಿ! ಎಲ್ಲಾರಿಗೂ ಬಾ ಅಂಬುವವರೇ ನೀವು! ಅದೆಲ್ಲಾ ಬಿಡು, ಒಂದು ಪಿಳ್ಳಿನ್ನ ಬಿಟ್ಟೀ ನೋಡು ಮನ್ಯಾಗ!

ಶ್ಯಾ:—ಅದೆಲ್ಲಾ ಮಾಡತೀನಿ; ಆದರ ಇವತ್ತ ರಾತ್ರಿ ಅಡಿಗಿ, ಅಣ್ಣಾ?

ರಾ:—ನಾ ನೋಡಿಕೊತೀನಿ. ಒಳಗ ಆಕಿ ನೆಳ್ಳತಾಳ ಕಾಣಸ್ತದ. ನಾ ಅಲ್ಲೆ ಹೋಗತೀನಿ, ನೀ ಇಲ್ಲೆ ಅಚ್ಚಗಾವಲಾಗಿ ಕೂಡು. ಈ ಕಾಗದದ ಚೂರು..ಅವು ತಗದು ಹಾಕು. (ಹೋಗುವನು)

ಶ್ಯಾ:—(ಕಾಗದದ ಚೂರುಗಳನ್ನು ಕೂಡಿಸುತ್ತ ತನ್ನಲ್ಲಿ) ಅಂತೂ ಅಣ್ಣಾ ನಸಗೊಂದು ಕೆಲಸ ಹಚ್ಚಿಕೊಟ್ಟಂಗಾತು. ಅದೂ ಆ ಊರಿಂದ ಒಂದವರ ಪುಣ್ಯಾನೇ ಅನಬೇಕು. ಇನ್ನುಮ್ಯಾಲೆ ಯಾರಸ್ನೂ ಬರಗೊಡಸು ವಂತಿಲ್ಲ. ಇದೇನು ಕೆಟ್ಟ ಕೆಲಸ ಅಂತೀನಿ ? ಮೊದಲು ಮದುವ್ಯಾಗಿ— ಅಲ್ಲಿಂದ ಅವ್ವನ ಜೋಡಿ ಹೇಣ್ತಿ ಬಡಿದಾಡಿ–ಬ್ಯಾರೆ ಮನಿ ಮಾಡಿ ದ್ದರ ಭಾಪೀ ಹಾರಿಕೋತೀಸಿ ಅಂಬಾಗ--ಪಗಾರ ಇಲ್ಲದ ಉಮೇದ ವಾರ ಆಗಿರೋದಕ್ಕಿಂತ ಇದೇನು ಕೆಟ್ಟದು? ಇಲ್ಲೇ ಇದ್ದರಾತು, ಮಗ–ಸೊಸಿ ಎಲ್ಲಾ ನಾವs ಆಗಿ! (ಒಂದು ಸ್ಟೂಲನ್ನು ಎಳೆದು ತಂದು ಬಾಗಿಲ ಹತ್ತಿರ ಕೂಡುವನು.)

(ನಾನಾಚಾರು ಕಿವಿಗೆ ಜನಿವಾರ ಸುತ್ತಿ ಬಾಗಿಲಲ್ಲಿ ಬಂದು ನಿಲ್ಲುತ್ತಾರೆ. ಮೈಯಲ್ಲಿ ಒಂದು ಪಳ್ಳೀಹೊಲಿಗೆಯ ಖಾದೀ ಪೈರಣಿದೆ. ಹಣೆಯಲ್ಲಿ ದಪ್ಪ ಅಂಗಾರದ ಗೆರೆ, ದೊಡ್ಡ ಅಕ್ಷತೆ ಇವೆ. ತಲೆಗೆ ಸುತ್ತಿದ ರುಮಾಲು ಹಣೆಯ ಅಲಂಕಾರಕ್ಕೆ ಅಂಜಿದಂತೆ ಅರ್ಧ ಹಿಂದೆ ಸರಿದಿದೆ. ದೊಡ್ಡ ಕಣ್ಣು, ಮೂಗು, ಬಾಯಿಗಳಿಂದ ತುಂಬಿದ ಮುಖದಲ್ಲಿ ಆರೋಗ್ಯದ ರಕ್ತ ಚಿಮ್ಮುತ್ತಿದೆ.)

ನಾ:—(ತನ್ನಷ್ಟಕ್ಕೆ ಗಟ್ಟಿಸಿ) ಏನು ಸುಡುಗಾಡ! ಈ ಊರಾಗ ನೀರಿನ ಫಜೀತಿ ಭಾಳ ಕಾಣಸ್ತದ. ಕೈಕಾಲಿಗೆ ತಂಬಗಿ ನೀರಿಲ್ಲ ನಮಗ. (ಆಕಾಶದ ಕಡೆಗೆ ನೋಡಿ) ಈಗೊಂದು ಮಳಿ ಆರ ಆದರ....ಮನೀ ಬಿದ್ದು ಪ್ರಾಣಾ ಹೋಗೊ ಆಟ........ಸಂಜಿ ಆದರೂ ಕಪಾಳಕ್ಕ ಹೊಡೆಯುಹಂಗ ಬಿಸಲು ಆದ....ಬ್ಯಾಸಗಿ ಪ್ರಭಾವ....ಕಲಿಯುಗದಾಗ ಹಿಂಗs.... ಪಾಪ ಹೆಚ್ಚಾತು....ದೇವರಾಟ.

ಶ್ಯಾ:—(ಸ್ವಗತ) ಇವರ್‍ಯಾರೊ ಕಪ್ಪುಹಣೇಬರಹದವರು ಬಂದು ನಿಂತರಲ್ಲ ನಮ್ಮ ಬಾಗಲ ಮುಂದ! ನನ್ನ ಪರೀಕ್ಷಾದ ವಾಳ್ಯಾ ಇದು. (ಎದ್ದು ಕನ್ನಡ ಪತ್ರಿಕೆಯೊಂದನ್ನು ಮಾಡದಿಂದ ತಂದು) ಓದಿಕೋತ ಕೂತರಾತು ನೋಡದವರಹಂಗ. (ಮೋರೆಯನ್ನು ಅದರಿಂದ ಇಡಿಮರೆಯಾಗಿಸುವನು)

ನಾ:—(ತಮ್ಮಷ್ಟಕ್ಕೆ ಮನೆಯನ್ನು ಹಣಿಕಿ ನೋಡುತ್ತ) ಏನು ಮಹಾರಾಯನಂಥಾ ಮನಿ ! ಪುಣ್ಯಾತ್ಮರು ಕಟ್ಟಿಸ್ಯಾರ....ಎಷ್ಟು ದಿವಸದ್ದೊ ಏನೊ.. ಹಳೇಕಾಲದ ಗಟ್ಟಿ–ಮುಟ್ಟಿ ಕಟ್ಟಡ...ಈ ಮನ್ಯಾಗ ಬ್ಯಾಸಗೀ ಹೆಂಗ ಕಳಿಯೋದು ಅಂತೀನಿ. ಓಹೊ, ರಾಯರು ಇದರಿಗೇ ಕೂತಾರಲ್ಲ.... (ಮನೆಯೊಳಗೆ ಹೆಜ್ಜೆಯಿಡುತ್ತಾ)ಏನ್ರಪಾ.......

ಶ್ಯಾ:—(ಮುಖವೆತ್ತದೆ) ಹೂಂ, ಒಳಗ ಯಾರೂ ಬರೂ ಹಂಗಿಲ್ಲ.

ನಾ:—(ತಮ್ಮಷ್ಟಕ್ಕೆ) ಅದೇನೊ, ಘಟ್ಟಿಸಿ ಓದತಾರ ಪಾಪ ! ನಮ್ಮಾತು ಕೇಳಿಸ ಲಿಲ್ಲೇನೊ (ಮನೆಯೊಳಗೆ ಬಂದು) ನಮಸ್ಕಾರ, ರಾಯರ, ಮನ್ಯಾಗ ಎಲ್ಲಾ ಕ್ಷೇಮs ?

ಶ್ಯಾ:—(ಪತ್ರಿಕೆ ಮುಚ್ಚಿ,ಕೆರಳಿ) ಏನದು ? ನಡೀರಿ ಹೊರಗ.... ಒಳಗ ಬರೂ-ಹಂಗಿಲ್ಲ ಈ ಮನ್ಯಾಗ. .

ನಾ:—ಹೌದು ರಾಯರs,ಹೊರಗs....ನಿಲ್ಲತೀನಿ....ನಾನೂ ಒಳಗ ಬರೂ-ಹಂಗಿಲ್ಲ. .ಕೈಕಾಲು . ತೊಳಕೋಬೇಕಾಗೇದ. ತಾವು....ಮನೀ ಯಜಮಾನರ ಮಕ್ಕಳು ಕಾಣತದ.ಕಾಲೇಜದಾಗ ಕಲೀತೀರಿ ಅಲ್ಲs ? ಧಾರವಾಡದಾಗೇನೂ ? ಅಲ್ಲಿ ಕನ್ನಡ ಟ್ರೇಕಾ,ನಮ್ಮದು,ಅದ ಏನ್ರಿ ?

ಶ್ಯಾ:—ಅದನ್ನ ತಗೊಂಡು ಏನು ಮಾಡತೀರಿ ? ಕಾಲ್ತೆಗೀರಿ ಇಲ್ಲಿಂದ.

ನಾ:—ತಗೀತಿನಿ. .ಆದರ ಏನ್ರೆಪಾ....ಮಗ್ಗಲಿನ ಮನ್ಯಾಗ ಯಜಮಾನತಿ ಮತ್ತ. .ಪಟ್ಟಕ್ಕ ಕೂತಾರ.... ನಾಕು ದಿನ ಒಳಗ ಬರೂದುಲ್ಲ.... ಭಾವಿ ಭಾಳ ದೂರಂತ....ನೀರು ತಂದಿಲ್ಲ....

ಶ್ಯಾ:—ಅದಕ್ಕೇನು, ನನಗ ತಂದುಕೊಡು ಅಂತೀರಾ ?

ನಾ:—ಛೇ, ತಾವು ಕಲಿತವರು. .ನಾಜೂಕ ದೇಹ. .ನಮ್ಮದೂ ಎರಡು ವರ್ಷ ಟ್ರೇಕಾ ಆಗೇದ ಅನ್ರಿ. . ಒಂದು ತಂಬಿಗಿ ನೀರು ಕೊಟ್ಟು ಬಿಟ್ಟರ ತಂಪುಹೊತ್ತಿನಾಗ ನೆನಸತೀವಿ.

ಶ್ಯಾ:—ಯಾರು ನೀವು ?

ನಾ:—ನಾವು ಇಲ್ಲೇ ಕರೀಕೆರಿಯು ಕನ್ನಡಸಾಲಿ ಮಾಸ್ತರರು. ನಾನಾ-ಚಾರು ಅಂತ ಹೆಸರು...ಸ್ವಾಮಿಗಳ ಪ್ರೀತಿ ನಮ್ಮ ಮ್ಯಾಲೆ... ಜಾತ್ರಿಗೆ ಬಂದಿದ್ದೆ. .ನೆರೆಮನಿಯಲ್ಲಿ ಇಳದೀವಿ. .ಅಲ್ಲಿ ಮಂದಿ ಗಿಜಗುಳಕಿ ಏನ್ರೆಪಾ. .

ಶ್ಯಾ:—(ಅರ್ಧಕ್ಕೆ ತಡೆದು) ಸಾಕು ನಿಲ್ಲಿಸಿರಿ ನಿಮ್ಮ ಲೆಕ್ಚರು. ನೀರು ಕೊಡ ತೀನಿ, ಹೊರಗಿಂದ ಹೊರಗs ಹೋಗರಿ.

ನಾ:—ಅಷ್ಟುಮಾಡು ಮಾರಾಯ (ಶ್ಯಾಮನು ನೀರು ತರಲಿಕ್ಕೆ ಒಳಗೆ ಹೋಗಿ ಹೊರಗೆ

ಬರುವವರೆಗೆ ಪತ್ರಿಕೆಯನ್ನು ಕೈಯಲ್ಲಿ ಹಿಡಿದು ಪಾನು ತಿರುವಿ) ಏನು ಕಾಲ ಬದಲಾ ದವು ರಾಯರ! ಎಷ್ಟು ಛಾಪಖಾನಿ..ಎಷ್ಟು ವರ್ತಮಾನಪತ್ರ.... ಮರಾಠಿಯೊಳಗ ಕೇಸರಿ ಛಲೋ ನೋಡಿರಿ, ರಾಯರ. (ತೆರೆಯಲ್ಲಿ ರಾಮ ರಾಯರು "ಶ್ಯಾಮಾ" ಎಂದು ಕೂಗುತ್ತಾರೆ)

ಶ್ಯಾ:—ಬಂದೆ, ಅಣ್ಣಾ (ನಾನಾಚಾರನ್ನ ಕುರಿತು) ಹರಟಿ ಸಾಕು, ಆಚಾರ, ಕಾಲು ತೊಳಕೊಂಡು ಹೊರಡಿರಿನ್ನ (ನಾನಾಚಾರು ಕಾಲುತೊಳೆಯುಲು ಹೊರಗೆ ತಂಬಿಗೆ ಯೊಡನೆ ಹೋಗುತ್ತಾರೆ)

ರಾ:—(ತೆರೆಯಲ್ಲಿ) ಶ್ಯಾಮಾ, ಮತ್ಯಾರರs ಬಂದರೇನೊ ಗಾಡಿಗೆ, ಲಗೂ ಬರವೊಲ್ಲಿ?

ಶ್ಯಾ:—ಇಲ್ಲ, ಅಣ್ಣಾ, ಯಾರೂ ಇಲ್ಲ.

ನಾ:—(ತಿರುಗಿ ಬಂದು ತಂಬಿಗಿಯಿಟ್ಟು) ನಿಮ್ಮ ಪರೀಕ್ಷಾ ಪಾಸಾಗಲಿ.... ದೊಡ್ಡ ಕೆಲಸ ಆಗಲೆಪ್ಪ-ನಿಮ್ಮ ಹೊಟ್ಟಿ ತಣ್ಣಗಾಗಲಿ....

ಶ್ಯಾ:—ತಣ್ಣಗಾಗತದ ಅಣ್ಣಾನ ಕಣ್ಣಿಗೆ ಬಿದ್ದರ! ನಡೀರಿ, ಆಚಾರ; ತಿರಿಗಿ ಬಂದಗಿಂದೀರಿ.

ನಾ:—ಇಲ್ಲ, ಮಾರಾಯಾ....

(ತೆರೆ ಬೀಳುವದು.)

ದೃಶ್ಯ ೨

(ಮರುದಿನ ಬೆಳಿಗ್ಗೆ, ಸ್ನಾನದ ನಂತರ ಕ್ರಾಪು ಹಿಕ್ಕಿಕೊಳ್ಳುತ್ತ ಶ್ಯಾಮನು ಮೆಲ್ಲಗೆ ಪಡಸಾಲೆ ಯಲ್ಲಿ ಅಲೆಯುತ್ತಿರುವನು.)

ಶ್ಯಾ:—(ಸ್ವಗತ)ಒಂದು ದಿನದ ಪಗಾರಕ್ಕೆ ಅಂತೂ ಲಾಯಖ ಆಧಂಗಾತು- ಅಣ್ಣಾನ ಕೈಕೆಳಗಿನ ನೌಕರಿಯಲ್ಲಿ! ನಿನ್ನೇ ದಿವಸ ಒಬ್ಬ ಅತಿಥಿ ಅರ ಬಂದನs?- ಆ ನಾನಾಚಾರ್ರನ್ನ ಬಿಟ್ಟರ?... ಅದೊಂದು ವಿಚಿತ್ರ ಪ್ರಾಣಿ! ಇಳಿದದ್ದು ಒಂದುಕಡೆ, ಕಾಲಿಗೆ ನೀರು ಬೇಡಿದ್ದು

ಇನ್ನೊಂದುಕಡೆ ! ಇನ್ನು ಉಣ್ಣೋದು........ ಮಲಗೋದು ಮತ್ತೆಲ್ಲ್ಯೊ! ಬಾಯಿಗೆ ಥಾಕs ಇಲ್ಲ, ಹೋಗಲಿ, ಒಮ್ಮೆ ಮುಂದೀ ಕಾಟ ತಪ್ಪಿತು, ಅವ್ವನ ಜಡ್ಡೂ ಹೋತು.... ಇನ್ನು ಮ್ಯಾಲೆ ನನ್ನ ಕತಿ–ಕಾದಂಬರಿ ಓದೋದನ್ನ ಸುರುಮಾಡತೀನಿ. (ನಾಲ್ಕೈದು ಪುಸ್ತಕಗಳನ್ನು ಸ್ಟೂಲಿನ ಮೇಲಿಟ್ಟುಕೊಂಡು ಆರಾಮು ಖುರ್ಚಿಯಲ್ಲಿ ಒರಗಿ ಒಂದನ್ನು ಓದತೊಡಗುವನು.)

(ನಾನಾಚಾರು ಕೋಟು–ರುಮಾಲು ಎಲ್ಲ ಹಾಕಿಕೊಂಡು ಹೆಗಲಿಗೆ ಹಸಿಬೆ ಸಿಗಸಿ ಹೊಗುತ್ತಾರೆ.)

ನಾ:–ಎದ್ದಿರ್ಯಾ ರಾಯರ ?

ಶ್ಯಾ:—ಎದ್ದಿಲ್ಲ, ಮಲಗೀವಿ ! ಮತ್ತ ಯಾಕ ಬಂದಿರಿ ತಾವು ?

ನಾ:—ಸುಮ್ಮನೆ. . ನಿಮ್ಮ ಭೆಟ್ಟಿಗೆ. ಪುಸ್ತಕ–ಗಿಸ್ತಕದ ಹುಚ್ಚು ಸ್ವಲ್ಪ ನಮಗೂ....ಹಳ್ಳ್ಯಾಗ ಸಿಗೂದುಲ್ಲ.

ಶ್ಯಾ:—ಹಿಂಗೇನು ? ಅದೇನು ಹಸಿಬಿ ಯಾಕ ಹೆಗಲಿಗೆ– ಹಿಂದೊಂದು ಮುಂದೊಂದು ಗಂಡಮಾಲಿ ಗಂಟು ಆಧಂಗ !

ನಾ:—ಇದs? ನಮ್ಮ ಜನ್ಮದ ಗಂಟು ರಾಯರs....ಊರಿಗೆ ಹೊರಟಿದ್ದಿವಿ. ತಮ್ಮ ದರ್ಶನ ತಗೊಂಡು ಮಾತಾಡಿ ಹೋಗಬೇಕೂ ಅಂತ....

ಶ್ಯಾ:—ನನ್ನದs ? ನಿಮಗ ದೇಶಾವರಿ ನಮ್ಮಿಂದ ಸಿಗೋದುಲ್ಲ. ನಾವು ಬಿ. ಎ. ಆದ ಬಾವಾಗೋಳು !

ನಾ:—ಛೇ, ಅದೆಲ್ಲಾ ಬೇಡೊ ಪೈಕಿ ಅಲ್ಲ ನಾವು ರಾಯರ. ಶಾಸ್ತ್ರದಾಗ ದ್ವೈತ ಖರೇನೊ, ಅದ್ವೈತೊ ? ಕಲಿತವರು ನೀವೇನಂತೀರಿ ?

ಶ್ಯಾ:—ಸಾಕು, ನಮಸ್ಕಾರ, ನಡೀರಿ. ಹೌರಗೆ ಕಾಲುಚಾಚತೀರೇನು?

ನಾ:—ಇದೆಂಥಾ ಮಾತು ರಾಯರs! ಅದೇನೊ ಅಂತಾರಲ್ಲ 'ವಾದೇವಾದೇ ಜಾಯತೆ ತತ್ವಬೋಧಃ' –ಆತು ಹೋಗಿ ಬರತೀನಿ.

ಶ್ಯಾ:––ಹೂಂ. ಹೋಗಿ ಬರ್ರಿ (ತುಟಿಕಚ್ಚಿ) ಅಲ್ಲ, ಹೋಗ್ರಿ, ತಿರಗಿ ಬರಬ್ಯಾಡ್ರಿ!

ನಾ:—(ಹೊರಗೆ ನಾಲ್ಕುಹೆಜ್ಜೆ ಹೋಗಿ ಮತ್ತೆ ತಿರುಗಿ ಬಂದು) ಅಲ್ಲ, ನಾನು ಹೋಗೋದು ರೇಲ್ವೆ ಅಲ್ಲ, ಮೋಟಾರ ಅಲ್ಲ.

ಶ್ಯಾ:––ಮತ್ತೇನು ಕಾಲಗಾಡಿಯೇನು ?

ನಾ:––ಛಕ್ಕಡಿಗಾಡಿ ರಾಯರs. ಈವತ್ತ ಸಂತಿದಿನ. ನಮ್ಮ ಹಳ್ಳೀ ಗಾಡಿ

ಬಂದಾವೇನು ನೋಡಿ ಬರತೀನಿ. ಹಂಗs ಹಾದ್ಯಾಗ ನೋಡಲಿಕ್ಕೆ ಒಂದು ಪುಸ್ತಕ ಕೊಡತೀರೇನು ?

ಶ್ಯಾ:--ಅದೇನು ಇಲ್ಲ. ಅವು ಮಂದೀವು- ಹೊರಡಿರಿ.

ನಾ:--ಹೊರಡತೀನಿ. ಆಲ್ರೈಪಾ, ಮತ್ತ ಅಲ್ಲೀತನಕ ಈ ಹಸಿಬೀ ಸ್ವಲ್ಪ ಇಲ್ಲೇ ಮೂಲ್ಯಾಗ ಇಟ್ಟು ಹೋಗಿರತೀನಿ. ಸುಮ್ಮನೆ ಒಯ್ಯೋ ಧಾವತಿ. . ಮುದುಕಾದೆ, ತ್ರಾಣ ಇಲ್ಲ.

ಶ್ಯಾ:--ಅದೆಲ್ಲಾ ಸುಳ್ಳು. ನಿಮ್ಮ ಪ್ರಪಂಚ ನಿಮ್ಮ ಬೆನ್ನಿಗಿರಲಿ.

ನಾ:--ಇಲ್ಲ ರಾಯರ. ಇದೊಂದು ಉಪಕಾರದ ಕೆಲಸ. (ಒಂದು ಮೂಲೆಗೆ ಹೋಗಿ) ಇಲ್ಲಿ ಇಡತೀನಿ.

ಶ್ಯಾ:--ನಮಗ ಗೊತ್ತಿಲ್ಲ. ನೀವು ಇಳಕೊಂಡ ಮನ್ಯಾಗ ಇಡ್ರಿ.

ನಾ:--ಅದು ಚೂರುಮನಿ, ರಾಯರ, ಮ್ಯಾಲೆ ನೂರುಮಂದಿ, ಒಬ್ಬಿಬ್ಬ ಕಡಿಗ್ಯಾದವರು....

ಶ್ಯಾ:--ನಾಕಾತು, ಇಟ್ಟುಹೋಗಿ ಒಂದು ಕ್ಷಣದಾಗ ತಿರುಗಿ ಬರಬೇಕು ನೋಡ್ರಿ. ಇಲ್ಲಾಂದರ ಆ ಬೀದ್ಯಾಗಿನ ಕತ್ತೀ ಕೊರಳಿಗೆ ಹಾಕಿ....

ನಾ:--ಛೇ ಮಾರಾಯ, ಹಾಗನಬ್ಯಾಡ. ದೇವರ ಪೆಟ್ಗಿ, ಪಾರಾಯಣದ ಪುಸ್ತಕ ಅವ ಒಳಗ. ಈಗ ಬರತೀನಿ. (ಹಸಿಬೆಯನ್ನು ಮೂಲೆಗಿಟ್ಟು ಹೊರಡುವನು)

ಶ್ಯಾ:--(ಸ್ವಗತ) ಈ ಪ್ರಾಣಿ-ಬ್ಯಾಡಾದ ಹೆಣ್ತೀಹಂಗ-ಕೊಳ್ಳಿಗೆ ಬೀಳಲಿಕ್ಕೆ ಬಂದಾನ ! ನನ್ನ ಓದೋದಕ್ಕ ಮುಹೂರ್ತ ಇದ್ದಂಗಿಲ್ಲೇನೊ ! ಇನ್ನ ಯಾರ ಬಂದು ಜಪ್ಪಂದರೂ ಏಳೋದುಲ್ಲ (ಪುಸ್ತಕ ತೆರೆದು ಒಂದು ನಿಮಿಷ ಓದುವನು)

ರಾ:--(ಲಗುಬಗೆಯಿಂದ ಹೊಕ್ಕು) ಶ್ಯಾಮಾ, ಈಕಿ ಎದ್ದು ಓಡಾಡತಾಳs ?

ಶ್ಯಾ:--(ಖುರ್ಚಿಯಿಂದೆದ್ದು) ಅಡಿಗ್ಗಿ ಮೈತೊಳಕೊಂಡಾಳ ಅಣ್ಣಾ. ಯಾಕ ಈವತ್ತ ಕಚೇರಿಂದ ಲಗೂ ಬಂದಿ ?

ರಾ:--ಕೊಳಕುಚ್ಚಲಿಕ್ಕೆ. ಮತ್ತ ಆಕಿ ಎದ್ದಿದ್ದರ ಬೇಸ್ಯಾತು ಬಿಡು. (ಹಸಿಬೆಯನ್ನು ನೋಡಿ ಗಾಬರಿಯಿಂದ) ಇದೇನೊ ಶ್ಯಾಮಾ, ಇದ್ಯಾರದು ಪ್ಲೇಗಿನ ಗಂಟು ?

ಶ್ಯಾ:-(ಸ್ವಗತ) ಯಮರಾಯನಂದು. ನಮ್ಮ ಸುತ್ತು ಬಂತಿನ್ನು.(ಪ್ರಕಟ)ಇದು ಹಸಿಬಿ ಅಣ್ಣಾ.

ರಾ:--ಹೌದಪಾ ಕಾಣಸ್ತದ. ಯಾರದು ಹಸಿಬಿ? ಮತ್ತ್ಯಾರು ಬಂದಾರ?

ಶ್ಯಾ:--ಯಾರೂ ಇಲ್ಲ ಏಳು. ನಿನ್ನ ಕಡಿಂದ ಐನೂರು ಸಾಲಾ ಇಸಗೊಂಡಿದ್ದನಲ್ಲ ಹಿಂದ, ಆ ಜೋಯಿಸ ತಿರಗಿ ಬಡ್ಡೀಸ್ಕೈತ ಕೊಡಲಿಕ್ಕೆ ಬಂದಾನ.

ರಾ:--ಹಿಂಗS? ಊಟಕ್ಕ ಬಾ ಅಂದೇನು?

ಶ್ಯಾ:--ಇಲ್ಲಪ. ತನ್ನ ಬೀಗರ ಮನೀಗೆ ಹೋದ.

ರಾ:--ಹೋಗಲಿ. ನಾನೂ ಇವತ್ತ ಮಾಮಲೇದಾರ್ರಿಗೆ ಮೇಜವಾನಿ ಅದ, ಊಟಕ್ಕ ಹೋಗಬೇಕು. ಸ್ನಾನ ಇಷ್ಟು ತೀರಸತೇನಿ. (ಒಳಗೆ ಹೋಗುವನು)

ಶ್ಯಾ:--(ಸ್ವಗತ) ಆ ಬಾಯ್‌ಬಡಕ ಆಚಾರೀ ಕಾಲಾಗ ಸುಳ್ಳುಹೇಳೋ ಹೊತ್ತು ಬಂತು. ಇನ್ನು ಅದು ದಕ್ಕಿಸೋದ ಹೆಂಗS ಅಂತೀನಿ? ಮೊದಲ ಅಂವ ಬಂದನಂದ್ರ ಎರಡನೇ ಕೆಲಸಿಲ್ಲ, ಹಸಿಬಿ ಹೊರಿಸಿ ಹೊಸ್ತಲಾ ದಾಟಿಸಿಬಿಡತೀನಿ. (ಮತ್ತೆ ಸ್ವಲ್ಪ ಓದುವನು)

ನಾ:--(ಒಳಗೆ ಬಂದು) ಏನು, ರಾಯರ, ಪುಸ್ತಕದಾಗ ಗರ್ಕಾಗೀರಿ? ಅದೇನು 'ಮುದ್ರಾಮಂಜೂಷ' ಏನು? ಏನು ಸ್ವಾರಸ್ಯರೀ ಆ ಕಥಿ!

ಶ್ಯಾ--ಏನಾರ ಇರಲಿ. ನಿಮ್ಮ ಹಸಿಬಿ ಎತ್ತರಿನ್ನು, ಹಾದಿ ಹಿಡಿರಿ.

ನಾ:--ಹಂಗS ಆಗಲಿ.ನಮ್ಮೂರ ಬಂಡೀನೇ ಬಂದಿಲ್ಲ ಖೋಡಿ ಈ ಸಂತಿಗೆ. ನಡಕೋತS ಹೋಗಬೇಕು.... ಬಂದ ಹಾದಿಗೆ ಸುಂಕ ಇಲ್ಲ.

ಶ್ಯಾ:--ಹೆಂಗರ ಹೋಗರಿ. ಇಲ್ಲಿಂದ ತಳಕಿತ್ತರಿ. ಹೂಂ. ಲಗೂ.

ನಾ:--ಆಗಲಿ ಹೊರಡೋಣ (ಹಸಿಬೆ ಹತ್ತಿರ ಹೋಗಿ ಬಾಗಿ, ಎತ್ತಿಟ್ಟು ತಲೆಬಾಗಿಲ ಕಡೆಗೆ ಹೋಗಿ ಹೊತ್ತು ನೋಡಿ) ಈಗೆಷ್ಟು ಬಡದಿದ್ದೀತಂತೀರಿ?

ಶ್ಯಾ:--ಹತ್ತು. ಇನ್ನು ಹೆಚ್ಚು ನಿಂತರ ಹನ್ನೊಂದು ಬಡದೀತು.

ನಾ:--ಹಂಗಾರ ಬಿಸಲು ಏರಲಿಕ್ಕೆ ಹತ್ತಿತನ್ನಿರಿ.. ಹನ್ನೆರಡು ಮೈಲು.... ಬಲ್ತೆ ಕೆಟ್ಟ ಉಸುಗು ರಾಯರ..ಹಳ್ಳೀ ಊರಿಗೆ ಎಲ್ಲೀ ರಸ್ತೆ?

ಶ್ಯಾ:--ಮುಂದೇನು?

ನಾ:— ಒಂದೋ ಎರಡೊ ಇವತ್ತ ಊಟಾ ಕಾಣೋದು..ಅಷ್ಟರಾಗಽ ನಮ್ಮ ಪ್ರಾಣೋತ್ಕ್ರಮಣ ಆದರೂ ಆತಽ..ನಮ್ಮೂರಿಗೆ ಮೋಟರ ಮಾಡಿಸಬೇಕು ರಾಯರಽ?

ಶ್ಯಾ:—ಅದಕ್ಕೇನು ಮಾಡೋದು ನಾವು? ಏಳ್ರಿ, ನಿಮ್ಮ ಹಾದಿ ಹಿಡಿರಿ.

ನಾ:—ಆಗಲ್ರಿಪಾ (ಹಸಿಬಿಯಿತ್ತಿ) ಊಟಾಮಾಡಿ ಇಷ್ಟು ತಂಪು ಹೊತ್ತಿನಾಗ ಹಾದಿ ಸಾಗಿದ್ದರ, ನಕ್ಷತ್ರ ಮೂಡೋದರಾಗಽ ಊರ ಮುಟ್ಟತಿದ್ದಿವಿ. ನಿಮಗ ಖಗೋಲ ಕಲಿಸತಾರೇನು ರಾಯರ?

ರಾ:—(ತೆರೆಯಲ್ಲಿ) ಶ್ಯಾಮಾ, ಆ ಜೊಯ್ಸ ಬಂದನೇನೊ? ಈಗ ಬಂದೆಂತ ಹೇಳಿ ಕೂಡಿಸು.

ಶ್ಯಾ:—ಇನ್ನೂ ಬಂದಿಲ್ಲ. (ನಾನಾಚಾರಿಗೆ) ಹೊರಡರಿ, ಪುಣ್ಯಾತ್ಮರಽ ಲಗೂ ಹೊರಡರಿ.

ನಾ:—ಹೊರಡತೀನಿ. ಜೊಯ್ಸರು ಯಾರು ಭೀಮಭಟ್ಟರೇನು? ಭಾಳ ವಿದ್ವಾಂಸರು. ನಿಮ್ಮ ತೀರ್ಥರೂಪರು ಒಳಗ ಇದ್ದಾರ ಕಾಣಸ್ತದ. ಭೆಟ್ಟಿ ಆಗೇ ಹೋಗತೀನಿ.

ಶ್ಯಾ:—(ಕೈಮುಗಿದು) ಅದು ಮಾತ್ರ ಬ್ಯಾಡ ಸ್ವಾಮೀ. ನಿಮಗೇನು ಬೇಕು ಇಲ್ಲೇ ಹೇಳರಿ.

ನಾ:—ಏನೂ ಇಲ್ಲ, ಹೊರಟೆ....ಊಟಾ ಊರಾಗ ಮಾಡಬೇಕಾತು?

ರಾ:—(ತೆರೆಯಲ್ಲಿ) ಜೊಯ್ಸನ ಮಾತು ಕೇಳತಾವ ಅಲ್ಲೋ ಶ್ಯಾಮಾ. ಧೋತರಾ ಉಟಗೋತೀನಿ, ಬಂದೆ, ಮುಗೀತು.

ಶ್ಯಾ:—(ನಾನಾಚಾರಿಗೆ) ಆಚಾರ, ಊಟಾ ಒಂದು ಇಲ್ಲೇ ಮಾಡೀರಂತ. ಈ ಕ್ಷಣ ಹೊರಡಿರಿ, ಹಸಿಬಿ ಇಲ್ಲಿಡಿರಿ. ಕೆರ್ಯಾಗ ಸ್ನಾನ ಮಾಡಿ ಬರ್ರಿ. ಹೂಂ.

ನಾ:—ಈಗ ಬಂದೆ. (ಹಸಿಬಿಯಿಟ್ಟು ಪಂಚೆ ತಂಬಿಗೆ ತಕ್ಕೊಂಡು ಹೋಗುವನು)

ರಾ:—(ಬಂದು) ಯಾಕೋ ಎಲ್ಲಿ ಮಾಯಾದ ಜೊಯ್ಸ?

ಶ್ಯಾ:—ಜೊಯ್ಸ ಬಂದಿಲ್ಲ ಅಣ್ಣಾ. ನಿನ್ನ ಕರೀಲಿಕ್ಕ ಸಿಪಾಯಿ ರುಸ್ತುಂ ಬಂದಿದ್ದ.

ರಾ:—ಹಿಂಗs? ನಾ ಊಟಾ ಮಾಡಿ ಬರತೀನಿ. ಜೊಯ್ಸ್ ಬಂದರ ಇರನ್ನು. ಮತ್ಯಾರಸ್ನೂ....

ಶ್ಯಾ:—ನಿಸ್ನಂಗ ಆಗಲಿ, ಅಣ್ಣಾ.

(ತೆರೆ ಬೀಳುವದು)

ದೃಶ್ಯ ೩

[ಮೂರನೆಯ ದಿನ ಮುಂಜಾವು. ನಾನಾಚಾರು ಹಸಿಬೆಯನ್ನು ತಲೆಗಿಂಬಾಗಿಟ್ಟುಕೊಂಡು ತುಂಬ ಹೊತ್ತುಕೊಂಡು ಒಂದು ಮೂಲೆಯ ಕಂಬಳಿಯ ಮೇಲೆ ಮಲಗಿದ್ದಾರೆ.)

ರಾ:—(ಪಂಜೆಯಿಂದ ಮೋರೆಯೊರಸಿಕೊಳ್ಳುತ್ತ ತನ್ನಲ್ಲಿ) ಏನು ದುಂದಾತು ನಿನ್ನಿನ ಮೇಜವಾನಿ! ಸಂಜೀಮುಂದಿನ ಆ ಗಾನಾ-ಬಜಾನಾ ಕಿವ್ಯಾಗ ಕಟ್ಟಿ ಹೋಗೇದ. ರಾತ್ರಿ ಹನ್ನೊಂದೊ ಹನ್ನೆರಡೊ ನಾ ಮನೀಗೆ ಬಂದು ಮಲಗಿದ್ದು! ಆದರ ಆ ಜೊಯ್ಸ್ ನಿನ್ನೆ ಬಂದವ ಹಂಗs ಗಚ್ಚ ಹೊಡಿಸಿದನೋ ಏನೊ, ಗಂಟು ಮುಟ್ಟಿಸದ? ಕಳ್ಳ ಜಾತಿ ಅದು. (ಪಡಸಾಲೆಯನ್ನು ಸುತ್ತುಮುತ್ತ ಸಹಜವಾಗಿ ನೋಡಿ) ಎಲ, ಇಲ್ಲೇ ಮಲ ಕೊಂಡಾನಲ್ಲ! ಹಂಗ ಹೇಳಪ ಹೊಗವ ಅಲ್ಲ ಜೊಯ್ಸ್, ನಮ್ಮ ವಿಶ್ವಾಸಿಕ ಮನಸ್ಯಾ! [ಗಟ್ಟಿಸಿ] ಜೊಯ್ಸಾ, ಎಷ್ಟು ನಿದ್ದಿ, ಏಳೋ. (ನಾನಾಚಾರಿಯ ಗೊರಕೆ ಜೋರಾಗಿ ಕೇಳುತ್ತದೆ)ಅಬ್ಬಬ್ಬ ಗೊರಕೆ! ಇಸಗೊಂಡ ಗಂಟು ತಿರಗಿ ಕೊಡಬೇಕಾತಲ್ಲ ಅಂತ ಹೇಳಿ ನಿದ್ದ್ಯಾಗ ಸುದ್ದಾ ಗುರು ಗುರು ಮಾಡತಾನ ಜಿಬಟ ಜೊಯ್ಸ್! ಏಳೇಳು, ನಮ್ಮಗನ ಮದವಿ ಮುಹೂರ್ತ ತಗದು ಕೊಡಬೇಕು.

ಶ್ಯಾ:—(ತನ್ನ ಕೋಣೆಯಿಂದ ಧಾವಿಸಿ ಬಂದು)ಆದೇನು ಅಣ್ಣಾ ನನ್ನಮದವಿ ಮಾತು? ಕನ್ಯಾ ನೋಡಿದೇನು ?

ರಾ:—ದಿನಾ ನೋಡತೀನಿ, ಊರಾಗ ಕೇರ್ಯಾಗ ಸಂದ್ಯಾಗ ಗೊಂದ್ಯಾಗ—ಸಪ್ಪನ್ನ ಮೂರಿ ಮಾಡಿಕೊಂಡು ತಿರಗ್ಯಾಡತಾವಲ್ಲ ಹದಿನೆಂಟು ವರ್ಷದ ಕೊಡಗೂಸು!

ಶ್ಯಾ:—ಅಣ್ಣಾ, ಅದರಾಗ ಒಂದು ಗೊತ್ತುಮಾಡಿ ನನಗ....

ರಾ:—ನಿನಗ? ನಿನಗ ಮದಿವಿ ಎಂದ ಹೇಳಲ್ಯಾ? ಈ ತಲಿಕೂದಲಾ ಬೆಳಸೀಯಲ್ಲಾ, ಇವು ಬೆಳದು ಬೆಳದು ನೀ ಹೆಣ್ಣಿನಹಂಗ ಆಗಬೇಕು, ಕೆಲಸಗಿಲಸ ಇಲ್ಲದ. ಆಗ ನಿನ್ನ ಕೂಡಿಸಿ, ಕೆಲಸ ಹಿಡಿದು ಬಾಳುವಿ ಮಾಡೊ ಗಂಡರಾಮಿಯೊಬ್ಬಾಕಿಗೆ ತೋರಿಸಿ, ನಿನಗ ಮಂಗಳಸೂತ್ರ ಕಟ್ಟ್ಯೋದು!

ಶ್ಯಾ:—(ತಲೆತಗ್ಗಿಸಿ) ಇದು ಚಾಷ್ಟಿ ಆತು ಅಣ್ಣಾ. ಖರೆ ಇದ್ದದ್ದು ಹೇಳು.

ರಾ:—ಖರೇ ಹೇಳತೀನಿ. ಮೊದಲ ಆ ಜೊಯ್ಸನ್ನ ಎಬ್ಬಿಸು.

[ಶ್ಯಾಮನು ಮೂಲೆಯಲ್ಲಿಯ ಅವತಾರವನ್ನು ನೋಡಿ ಗಾಬರಿಗಾಬರಿಯಾಗುವನು.]

ಶ್ಯಾ:—(ತಡವರಿಸುತ್ತ) ಈಗ....ಏಳತಾರ....ತಾವs........(ತನ್ನಲ್ಲಿ) ಈ ದೆವ್ವ ಯಾವಾಗ ಹೊಕ್ಕಿತೊ ರಾತ್ರಿ ಮನೀನ! ನನ್ನ ಫಜೀತಿಯು ಹೊತ್ತs ಬಂತೀಗ.

ರಾ:—ಅವರೇನು ಏಳತಾರ ತಾವs! ಅವರು ಕೊಡೋ ರುಪಾಯಿ ತಗೊಂಡು ನಾ ಕಚೇರಿಗೆ ಹೊರಡಬೇಕು ಲಗೂ. (ಹತ್ತಿರ ಹೋಗಿ) ಜೊಯ್ಸಾ, ಏ ಜೊಯ್ಸಾ. (ಉತ್ತರ ಬರುವದಿಲ್ಲ)

ಶ್ಯಾ:—ಅಣ್ಣಾ, ನೀ ಕೋಟು – ರುಮಾಲ ಹಕ್ಕೊಂಡು ಬಾ. ನಾ ಎಬ್ಬಿಸತೀನಿ. ಹೊತ್ತಾಗಿ ಮಲಗಿದ್ದಾರು.

ರಾ:—ಎಲ್ಲಾ ಇಲ್ಲೆ ಗೂಟಕ್ಕ ಅವ. ಅಗಳ್ಯಾಡಿಸಿ ಎಬ್ಬಿಸು ಕುಂಭಕರ್ಣನ್ನ. (ಗದ್ದರಿಸುತ್ತ) ಎಲೇ, ಏ ಜೊಯ್ಸಾs.

[ನಾನಾಚಾರು ಮುಸುಕು ತೆಗೆದು ಎದ್ದು ಕುಳಿತು ಕೈತಿಕ್ಕಿ ನೋಡಿಕೊಂಡು ಆಕಳಿಸುತ್ತಾರೆ]

ರಾ:—(ಚಕಿತನಾಗಿ) ಹಾಂ. ಇವ ಯಾರು?

ನಾ:—ನಾ ಜೊಯ್ಸ ಅಲ್ಲ ರಾಯರ. ನಾನಾಚಾರು ಅಂತ ನಮ್ಮ ಹೆಸರು. ಉತ್ತರಾದಿ ಮಠ ನಮ್ಮದು....

ರಾ:—ಸಾಕು ತಿಳೀತು. ಏ ಶ್ಯಾಮಾ, ಇವರ್ನ ಹೆಂಗ ಬಿಟ್ಯೊ ಮನಿ ಒಳಗ? ನಿನಗ ಏನ ಹೇಳಿದ್ದೆ?

ನಾ:—ಅವರದೇನು ತಪ್ಪಿಲ್ಲ ರಾಯರ. ನಾವs ನಿಮ್ಮ ದರ್ಶನ ತಗೋಬೇಕಂತಿದ್ದಿವಿ ನಿನ್ನಿನ ಹಿಡಿದು.

ರಾ:—ಏನು? ನಿನ್ನಿನ ಹಿಡಿದು? ಶ್ಯಾಮಾ, ಏನು ಲುಚ್ಚ್ಯಾನೊ ನೀನು! ಹಸಿಬಿ ಜೊಯ್ನ್ಯಂದು ಅಂತ ಸುಳ್ಳು ಹೇಳಿ ಈ ಆಚಾರಿನ್ನ ಮೋಯು ಲಿಕ್ಕೆ ಬಿಟ್ಟಿದ್ಯಾ ಮನ್ಯಾಗ?

ಶ್ಯಾ:—ನನಗ ಗೊತ್ತಿಲ್ಲ ಅಣ್ಣಾ. ಜೊಯ್ಸ್ಯ ಬಂದು ಹೋದ. ಇಂವ ಯಾವಾಗ ಬಂದನೊ ಏನೋ!

ನಾ:—ನಾ ಬಂದು ಯೋಳೆಂಟು ದಿನ ಆತು ರಾಯರ. ನೆರಿಮನ್ಯಾಗ ಇದ್ದೆ. ಅವರ ಮನ್ಯಾಗ ಮುಟ್ಟ್ಯಾದರು....

ಶ್ಯಾ:—(ಹತ್ತಿರ ಹೋಗಿ ಜಬರಿಸಿ) ಬಾಯಿ ಮುಚ್ಕೋ ರಿಪಿಗೇಡಿ.

ರಾ:—ಹೇಳಲಿ ಸುಮ್ಮರೊ ಶ್ಯಾಮಾ.

ನಾ:—ತಮ್ಮ ಚಿರಂಜೀವರು ನೊನ್ನೆ ಬಹಳ ಪುಣ್ಯಾಕಟ್ಟಿಕೊಂಡರು— ಕಾಲಿಗೆ ನೀರು ಕೊಟ್ಟು. ನಿನ್ನೆ ತಾವು ಇದ್ದಿಲ್ಲ ಮಧ್ಯಾನ್ಹಕ್ಕ— ಮಾಮಲೇದಾರ ಮೋಜವಾಸಿಗೆ ಹೋಗಿದ್ದಿರಂತ....

ಶ್ಯಾ:—ಏ ಆಚಾರ್ರೇ ನಿನ್ನ ನಾಲಿಗಿ ಅರ ಹರೀಲ್ಯಾ?

ನಾ:—ರಾಯರ, ನೀವು, ನಿಮ್ಮ ಪುತ್ರರು,ನಿಮ್ಮ ಟುಕುಂಬ, ಬಹಳದೊಡ್ಡ ಮಂದಿ. ನಿಮ್ಮಲ್ಲೆ ನಿನ್ನೆ ಊಟ ಆತು.

ರಾ:—ಇಲ್ಲಿ!.ನಮ್ಮನ್ಯಾಗ? ಆಂ! ಶ್ಯಾಮಾ, ಏನು ಘಾತಾ ಮಾಡಿದ್ಯೋ? ನಿನ್ನsಗಲ್ಲಿಗೆ ಹಾಕತೀನಿ ಮೊದಲು.

ಶ್ಯಾ:—ಸುಳ್ಳು ಹೇಳತಾರ ಅಣ್ಣಾ.

ರಾ:—ಅದು ಹೋಗಲಿ. ರಾತ್ರಿ ಇಲ್ಲಿ ಹೆಂಗ ಮಲಗಿದಿರಿ? ಯಾರನ್ನ ಕೇಳಿ ಒಳಗ ಬಂದಿರಿ?

ನಾ:—ನಿಮ್ಮದು ಪುಣ್ಯಾದ ಮನಿ ರಾಯರ. ಇನ್ನೊಬ್ಬರ್ಹಂಗ ಚಿಲಕ, ಅಗಳಿ ಏನೂ ಬೇಕಾಗಿಲ್ಲ. ನನ್ನ ಹಸಿಬಿ ತಗೊಳ್ಳಿಕ್ಕೆ ರಾತ್ರ್ಯಾಗ ಬಂದೆ. ಬಾಗಲ ಮುಂದಕ ಆಗಿತ್ತು, ನುಗಿಸಿ ಒಳಗ ಬಂದೆ.

ಶ್ಯಾ:—ಎಲಾ ಕಳ್ಳ! ಅಣ್ಣಾ, ನೀ ಬರತೀ ಅಂತ ಹೇಳಿ ಮುಂದಕ ಮಾಡಿ ಮಲಗಿದ್ದೆ.

ರಾ:—ಆತು,ಆಗಬಾರದ್ದೆಲ್ಲಾ ಆತು! ಹಸಿಬಿ ತಗೊಂಡು ಹಾಳಾಗಿ ಹೋಗ ಲಿಲ್ಲ ಯಾಕ ತಾವು?

ನಾ:—ಹೊರಟಿದ್ದೆ,ರಾಯರ. ತಲಿ ತಿರಗಲಿಕ್ಕೆ ಹತ್ತ್ಯು,ಕಾಲು ಏಳಲೇ ಇಲ್ಲ, ಸ್ವಲ್ಪ ಅಡ್ಡಾಗಿ ಎದ್ದೆ. ಅವ್ವಾ ಅವರು ಭಾಳ ಒಳ್ಳೆಯವರು,ದೇವರು ಬ್ರಾಹ್ಮಣರ ಮೇಲೆ ಪ್ರೀತಿ, ಒಳಗ್ಹೋಗಿ ಕೇಳಿದೆ, ಒಂದಿಷ್ಟು ಅಳ್ಳಿಟ್ಟು ಕಲಿಸಿ ಕೊಟ್ಟರು, ತಿಂದು ಮಲಗಿದೆ.

ರಾ:—ಹಾಂ! ಅವೂ ಆತs!! ಆಕಿಗೂ ನಾಚಿಕಿಲ್ಲ! ನನ್ನ ಮನ್ಯಾಗ ಸಂದs ನಡಿಯೋಹಂಗಿಲ್ಲ. ಕಿತ್ತರಿ ಬಿಡಾರ.

ನಾ:—ಹೊರಟೆ. ಈ ವರ್ತಮಾನಪತ್ರ ಇಷ್ಟು ಒಯ್ದು ಓದಿ ಕಳಿಸತೀನಿ ಶ್ಯಾಮರಾಯರ.

ಶ್ಯಾ:—ಹಾಳಾಗಿ ಹೋಗಿರಿ.

ನಾ:—(ಪಸಿಬೆಯಲ್ಲಿ ಅರಿವೆ, ತಂಬಿಗೆ, ಪತ್ರಿಕೆ ತುರುಕಿ ಹೆಗಲಿಗೆ ಹಾಕಿ ರಾಮರಾಯರನ್ನು ಕುರಿತು) ನಮಸ್ಕಾರ, ನಿಮಗ ಇಂಥಾ ನೂರು ಮಕ್ಕಳಾಗಲಿ.

ರಾ:—ಸಾಕು ನಿಮ್ಮ ಆಶೀರ್ವಾದ. ಒಬ್ಬವ ಇದ್ದದ್ದಕ್ಕ ಮೂರುದಿಸ ಹೊಡದಿರಿ, ನೂರು ಮಂದಿನ್ನ ಮಾಡಿ ಪರ್ಶೆಲ್ಲ ಇಲ್ಲೇ ಬಸ್ತಾನ ಹಾಕಬೇಕಂತೀರೇನೊ! ನಡೀರಿ ನಮಸ್ಕಾರ. (ನಾನಾಚಾರಿಯು ಹಿಂದು ಮುಂದೆ ನೋಡುತ್ತ ಹೋಗುವನು) ಶ್ಯಾಮಾ, ಮೊನ್ನೆ ಏನು ಹೇಳಿದ್ದೆನೊ ನಿನಗ?

ಶ್ಯಾ:—ಈ ತಲಬಾಗಲ ಒಳಗ ಒಬ್ಬಾನೊಬ್ಬನ್ನ ಬಿಡಬಾರದು ಅಂತ.

ರಾ:—(ದನಿಯೆತ್ತರಿಸಿ) ಹಂಗಾರ ಯಾಕ ಬಿಟ್ಟಿ ಈ ಆಚಾರರನ್ನ?

ಶ್ಯಾ:—ತೀಳೀದs ಬಂದರು. ನಾ ಏನು ಮಾಡಲಿ ಅಣ್ಣಾ?

ರಾ:—ಹೌದು, **ಅತಿಥಿದೇವರು, ಇವರು ಅತಿಥಿದೇವರು!!**


PEARLITE
VANISHING CREAM
PEARLITE VANISHING CREAM
The magic beauty of this Cream is its invisibility to the naked-eye and the Natural tone imparted to the skin.
Manufactured by the makers of the Famous Mysore Sandal Soap
AVAILABLE EVERYWHERE
GOVT. SOAP FACTORY
BANGALORE

ಸಹಾಯಕರು ಮತ್ತು ಪೋಷಕರು.

ನಮ್ಮ ಗ್ರಂಥಮಾಲೆಗೆ ಪೋಷಕರಾಗಿಯೂ ಸಹಾಯಕರಾಗಿಯೂ ಈ ವರ್ಷವೂ ಸೇರಿಸುತ್ತ ಪ್ರೋತ್ಸಾಹಿಸಿದ ಮಹನೀಯರಿಗೆ ನಾವು ತುಂಬ ಕೃತಜ್ಞರಾಗಿದ್ದೇವೆ. ಇದರಂತೆ ಕನ್ನಡಿಗರೆಲ್ಲರೂ ನಮ್ಮನ್ನು ಸಹಾಯಕರಾಗಿಯಾಗಲಿ, ಚಂದಾದಾರರಾಗಿಯಾಗಲಿ ಪೋಷಕರಾಗಿಯಾಗಲಿ ಪ್ರೋತ್ಸಾಹಿಸಬೇಕೆಂದು ಬೇಡುತ್ತೇವೆ.

ಪೋಷಕರು:—

ಶ್ರೀಮಂತ ವೆಂಕಟಾದ್ರಿ ಶ್ರೀನಿವಾಸ ಬಹದ್ದೂರ ದೇಸಾಯಿ ಸೊರಟೂರ ೧೦-೦-೦

ಶ್ರೀ. ರಾಘವೇಂದ್ರರಾವ ಮನಸಬ್ದಾರ. ಹೈದ್ರಾಬಾದ ೧೦-೦-೦

ಶ್ರೀ. ಬಿ. ಜಿ. ಚಿನ್ಮುಲಗಿ ಹೈದ್ರಾಬಾದ ೧೦-೦-೦

ಶ್ರೀ. ಎನ್. ಎಸ್. ರಾಮಚಂದ್ರರಾಯರು ನಾಪೊಕ್ಲು ೬-೦-೦

ಸಹಾಯಕರು:—

೧. ಶ್ರೀಮಂತ ಸರದಾರ ಬಾಳಾಸಾಹೇಬ, ಭೀಮಪ್ಪ ಗಿರಿಯಪ್ಪ ದೇಸಾಯಿ—ಕೌಜಲಗಿ ೫-೦-೦

೨. ಶ್ರೀ. ಚಂದರಗಿ ಗೋವಿಂದರಡ್ಡಿ ಧಾರವಾಡ ೫-೦-೦

೩. ,, ಕಲ್ಲಪ್ಪಾ ಸೋಮಪ್ಪಾ ಗುಂಜಾಳ ಧಾರವಾಡ ೫-೦-೦

೪. ,, ಎಸ್. ಎಸ್. ಕೊಯಿಮತ್ತೂರ ರಿಟೈಯರ್ಡ ಕಲೆಕ್ಟರ ಧಾರವಾಡ ೫-೦-೦

೫. ,, ಗುಂಜೀಕರ ಧಿರೇಂದ್ರರಾಯರು ಬಿ. ಕಾಮ್ ಧಾರವಾಡ ೫-೦-೦

೬. ,, ಮಧ್ವರಾವ ಕಬ್ಬೂರ ವಕೀಲರು B. A. LL. B. ಧಾರವಾಡ ೫-೦-೦

೭. ,, ಎಸ್. ಎಸ್. ಸಕ್ರಿ ಬಿ. ಎ. ಮುಂಬಯಿ ೫-೦-೦

೮. ,, ಎಸ್. ಎ. ಗಿಡ್ನವರ ಬಿ. ಎ. ಗುಳೇದಗುಡ್ಡ ೫-೦-೦

೯. ಶ್ರೀ. ಆರ್. ಜಿ. ದೇಶಪಾಂಡೆ ಎಂ. ಎ. ಇನ್‌ಕಮ್ ಟ್ಯಾಕ್ಸ ಆಫೀಸರ ಸಾತಾರಾ ೫-೦-೦

೧೦. ಶ್ರೀಮಂತ ಕೆ. ಎಸ್. ಸರದೇಸಾಯಿ ಬಿಜಾಪುರ ೫-೦-೦

೧೧. ಶ್ರೀ. ಸಿ. ಸಿ. ಅಬಕಾರ ವರ್ತಕರು ಬನಹಟ್ಟಿ ೫-೦-೦

೧೨. ,, ಆರ್. ಎ. ಜಹಗಿರದಾರ ಎಂ. ಎ. ಎಲೆಲ್. ಬಿ. ಮುಂಬೈ ೫-೦-೦

೧೩. ಶ್ರೀ. ಜಿ. ಎಸ್. ಮಂಜುನಾಥಯ್ಯ ಕಾಫೀ ಪ್ಲಾಂಟರು ಸುಂಟಿಕೊಪ್ಪ ೫-೦-೦

೧೪. ,, ಆರ್. ಬಿ. ಪೋತದಾರ ಬಿ. ಎ. ಕಾರವಾರ ೫-೦-೦

೧೫. ,, ಜಿ. ವಿ. ಬೇವೂರು ಆಯ್. ಸಿ. ಎಸ್ ಡಾಯರೆಕ್ಟರ ಜನರಲ್ ಆಫ್ ಪೋಸ್ಟ್ಸ್ ಡಿಲ್ಲಿ ೫-೦-೦

೧೬. ,, ಜಿ. ಜಿ. ಬಿಳ್ಗೀಕರ ಭುಸಾವಳ ೫-೦-೦

೧೭. ,, ಎಚ್. ವರದಾಚಾರ್ಯ ಗೊರೂರು ೫-೦-೦

೧೮. ,, ಅಶ್ವಥರಾವ ಮಹಿಷಿ ವಕೀಲರು ಶಿರಹಟ್ಟಿ ೫-೦-೦

೧೯. ಡಾ. ಎಸ್. ಸಿ. ಸಂದೀಮಠ ಎಮ್. ಎ. ಪಿ. ಎಚ್. ಡಿ. ಬೆಳಗಾಂವಿ ೫-೦-೦

೨೦. ಶ್ರೀ. ಪ್ರದ್ಯುಮ್ನಾಚಾರ್ಯ, ಬಿ. ಗುಡಿ ಗದಗ ೫-೦-೦

೨೧. ,, ಎಂ. ಪಿ. ವಾಲಿ. ಎಂ. ಎ. ಬೆಳಗಾಂವಿ ೫-೦-೦

೨೨. ,, ಅಪ್ಪಣ್ಣಾ ರಿತ್ತಿ. ಕುಲಕರ್ಣಿ ನರಗುಂದ ೫-೦-೦

೨೩. ,, ಮನೋಹರರಾವ ದೇಶಪಾಂಡೆ ಬಿ. ಎ. ಅಥಣಿ ೫-೦-೦

೨೪. ,, ಬಿ. ಎನ್. ಕುಲಕರ್ಣಿ ಮುಗದ ೫-೦-೦

೨೫. ಪ್ರೊ. ರಂಗನಾಥ ಮುಗುಳಿ ಎಮ್. ಎ. ಬಿ. ಟಿ. ಸಾಂಗ್ಲಿ ೫-೦-೦

೨೬. ,, ವಿ. ಕೆ. ಗೋಕಾಕ ಎಮ್. ಎ. ಪುಣೆ ೫-೦-೦

೨೭ ಶ್ರೀ. ಮೋಹನರಾವ ಕರೀಕಟ್ಟಿ ಬಿ. ಎ. ಬೆಳಗಾವಿ ೫-೦-೦

೨೮. ,, ಎಚ್. ಬಿ. ಕೊಣ್ಣೂರ ಎಮ್. ಎ. ಬಿಜಾಪುರ ೫-೦-೦

೨೯. ,, ಆರ್. ಬಿ. ಅಭ್ಯಂಕರ ಬಿ. ಎ. ಎಲೆಲ್. ಬಿ. ಮಿರಜಿ ೫-೦-೦

೩೦. ಶ್ರೀ. ವ್ಹಿ. ಎನ್. ಅಡವಿ ಅಸಿಸ್ಟಂಟ ಅಕೌಂಟಟ್
ಜನರಲ್ ಲಾಹೋರ ೫-೦-೦

೩೧. ,, ಗುರುರಾವ ಜೋರಾಪೂರ ಬಿ. ಎ. ಎಲೆಲ್ ಬಿ.
ಬಾಗಿಲುಕೋಟೆ ೫-೦-೦

೩೨. ,, ಬಿ. ಡಿ. ಅಕ್ಕಿ ಬಿ. ಎ. ಎಲೆಲ್ ಬಿ. ವಕೀಲರು
ಬಿಜಾಪೂರ ೫-೦-೦

೩೩. ,, ಕೃಷ್ಣರಾವ ಆರ್ ಕುಲಕರ್ಣಿ ಗದಗ ೫-೦-೦

೩೪. ವ್ಹೈ. ವ್ಹಿ. ಜಿ. ಪರ್ವತಿ ಬಾಗಲಕೋಟೆ ೫-೦-೦

೩೫. ಗ. ಬಾ. ಸೀತಾಬಾಯಿ ಪರ್ವತೀಕರ ಬಾಗಲಕೋಟೆ ೫-೦-೦

೩೬. ಶ್ರೀ ಗುರುರಾಜ ಭೀ. ಜೋಶಿ ಬಿ. ಎ. ಬಿ.ಟಿ. ಗದಗ ೫-೦-೦

೩೭. ,, ವ್ಹಿ. ಜಿ. ಜೀರೆ ಬಿ. ಎ. ಬಿ. ಟಿ. ಅಥಣಿ ೫-೦-೦

೩೮. ರಾ. ಬಾ. ವೆಂಕಟೇಶ ವಿಷ್ಣು ಯುರಗೊಪ್ಪ
ದಿವಾನರು ಬುಧಗಾಂವ ಮಿರಜಿ ೫-೦-೦

೩೯. ಶ್ರೀ. ಎಲ್. ಜಿ. ಬಿಜಾಪುರ ವರ್ತಕರು ಬಾಗಲಕೋಟೆ ೫-೦-೦

೪೦. ,, ಎಸ್ ಬಿ. ಸಾಸನೂರ ಬಿ. ಎ. ಎಲ್ಎಲ್ ಬಿ.
ವಕೀಲರು ಬಾಗಲಕೋಟೆ ೫-೦-೦

೪೧ ,, ನಾರಾಯಣರಾವ ಜೋಶಿ B. A. LL. B
ಬೆಳಗಾಂವಿ ೫-೦-೦

೪೨ ,, ಎಸ್. ಆರ್. ಅಸುಂಡಿ ಹುಬ್ಬಳ್ಳಿ. ೫-೦-೦